ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 14
ಸಂಚಿಕೆ 1
ಜನವರಿ-ಮಾರ್ಚ್-1985

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 14. No. 1, January–March 1985

ವಾರ್ಷಿಕ ಚಂದಾ : ರೂ 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ. 100–00

ಪ್ರಕಾಶಕರು : ಡಾ॥ ಕೆ. ಮರುಳಸಿದ್ದಪ್ಪ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ನಡುದಾರಿಯ ವೃತ್ತಾಂತ (ಕವನ) 1
ವೇಣುಗೋಪಾಲ ಸೊರಬ

ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ 5
ಎಚ್. ಎಸ್. ಅನಂತನಾರಾಯಣ

ಶ್ರವಣ ಬೆಳ್ಗೊಳಕ್ಕೂ ಮೂಲ ಹಳೆಯ ಬೆಳ್ಗೊಳ 11
ಎಂ. ಚಿದಾನಂದಮೂರ್ತಿ

ಸೂಚ್ಯಾರ್ಥ ಸೂಚನೆಯ ಲಿಂಗಗಳು/ಮುದ್ರೆಗಳು 42
ಚಂದ್ರಶೇಖರ ವಿ. ನಂಗಲಿ

ರಸ್ತೆ (ಕವನ) 52
ಎಚ್. ಎಚ್. ಗಂಗಾಧರಾಚಾರ್

ಭಾರತೀಯ ಆಂಗ್ಲ ನಾಟಕಗಳು 54
ಎಸ್. ಕೃಷ್ಣಭಟ್ಟ

ಮಂಗರಸನ ಜಯ ನೃಪ ಕಾವ್ಯ ಮತ್ತು ಚೆಂಗಾಳ್ವ ವಿಕ್ರಮರಾಯ 63
ದಿ. ಸುಧಾ ವೆಂ. ಮನಸೂರ

ಶಾಸನದಲ್ಲೊಂದು ಪಟ್ಟದಿ 67
ಬಿ. ರಾಜಶೇಖರಪ್ಪ

ಇಂದ್ರಗೋಪ 73
ಎಂ. ಮಾಧವ ಪೈ

ಎಲ್ಲಮ್ಮನನ್ನು ಕುರಿತ ಪೌರಾಣಿಕ ಮತ್ತಿತರ ಸಂಗತಿಗಳು :
ಒಂದು ವಿವೇಚನೆ 78
ದೇವೇಂದ್ರ ಕುಮಾರ ಹಕಾರಿ

'ಅಲ್' ಪ್ರತ್ಯಯ 113
ಉಪ್ಪಂಗಳ ರಾಮಭಟ್ಟ

ಕೇಶಿರಾಜ ದಣಾಯಕರ ಕಂದ 118
(ಸಂ) ಎಸ್. ಶಿವಣ್ಣ

ಮಂಥನ

ಚಂದ್ರಮಾನ ಗಣಿತ ವಿಳಾಸ : ಒಂದು ವಿವರಣೆ 138
ಎ. ಸಿ. ಕೋರಗಲ್

ಈ ಸಂಚಿಕೆಯ ಲೇಖಕರು 141

ನಡು ದಾರಿಯ ವೃತ್ತಾಂತ

ವೇಣುಗೋಪಾಲ ಸೊರಬ

೧. ಕೊನೆಯ ನಿಲ್ದಾಣದವರೆಗೂ

ಕೊನೆಯ ನಿಲ್ದಾಣದವರೆಗೂ ನಾನೊಬ್ಬನೇ
ಹೋಗಬೇಕಾದದ್ದಿದೆ ; ನೀನು
ಇಲ್ಲಿಯೇ ಇಳಿಯುವುದು ನನಗೆ
ಗೊತ್ತೇಗೊತ್ತು : ಮತ್ತೆ ಭೇಟಿಯಾಗುವ
ಎಂದು ಹೇಳುತ್ತಲೇ ಇದೇ
ಕೊನೆಯ ಭೇಟಿಯಲ್ಲದಃದ ಖಚಿತ
ಪಡಿಸಿಕೊಳ್ಳುತ್ತ ಹೇಳಿದರೆ
ಎರಡೇ ಮಾತು :

ಕಡಿದ ಮರಗಳ ಲೆಕ್ಕ
ಹತ್ತುದಿದ್ದರೂ ಕಾಡು ಬೆಳೆಸುವುದಕ್ಕೆ
ಸಸಿಗಳ ಲೆಕ್ಕ ಕೇಳಿಯೇ ಅನಿಸಿತು–
ಈ ಮನುಷ್ಯ ಬುದ್ಧಿ ಇಷ್ಟೇ–
ಯಾವಾಗಲೂ ಹಾಳು ಮಾಡುವುದಕ್ಕೇ
ಯೋಜನೆಯ ರೂಪಿಸಲುಂಟೆ ?
(ಐ ಬಾಂಬು) ಹೆಚ್ ಬಾಂಬು ನ್ಯೂಟ್ರಾನ್
ಬಾಂಬು ನಾಪಾಮ್ ಬಾಂಬುಗಳ
ಮರೆತು ಬಿಟ್ಟಿದ್ದೇನೆ–ಕ್ಷಮಿಸು)
ಹೊಳೆಕೊರೆದು ಹಾಳುಗೆಡವಿದ ದಡಕ್ಕೆ
ಎಷ್ಟೆಷ್ಟು ರಿಪೇರಿ ಕೈಗೊಂಡರೂ ಏನು ?
ಬೇಡ ! ಅಣೆಕಟ್ಟುಗಳ ನುಂಗಿ ನಿಂತ
ಕಲ್ಲಿನ ಗುಡ್ಡಗಳ ಪಾಡೇನು ? ಏನು
ತಾನೇ ಮಾಡಬಲ್ಲನು ಕಣ್ಣೀರ ನೊರೆಸದ
ಪ್ರಾಣಿ ? ಪ್ರಾಣಿ ಸಂಗ್ರಹಾಲಯಕ್ಕೇ
ತಂದಿದಾನಲ್ಲ—ಕುಲನಾಶನಕ್ಕಲ್ಲದೆಯೆ
ಮತ್ತಿನ್ನೇನು ?

ನೀನು ಇಳಿಯುವುದಕ್ಕೆ
ನನ್ನದೂ ಬೇಕೆ ಸಹಾಯ ? ಕಿಟಕಿ
ಯಿಂದಲೇ ಇಳಿದು ಬಿಡು : ಗಾಡಿ ನಿಲ್ಲುವ
ಮೊದಲೆ ಒಬ್ಬರ ಮೇಲೆ ಒಬ್ಬರು ಬಿದ್ದು
ಬಾಳೆಯ ಹಣ್ಣು ಒತ್ತೆ ಹಾಕಿದ ಹಾಗೆ, ಕಾಲು
ಮುರಿದುಕೊಂಡರೂ ದೊಡ್ಡದೇನಲ್ಲ
ಲಾಗಾಯ್ತಿನಿಂದ ಬಂದದ್ದೆ ; ನೀನಿಳಿದು
ಮೈವದರಿ ಸುಧಾರಿಸಿಕೊಳುವ
ವೇಳೆಗೆ ನಾನೂ ಅರ್ಧದಾರಿ ಸವೆಸಿ
ಬಿಟ್ಟಿರತೀನಿ—ಹೇಳು ಹೆಂಡತಿಗೆ
ಮಾವ ವಾಪಸ್ಸು ಬರುವಾಗ
ಇಳಿಯುತ್ತಾರೆಂದು : ಆ ಜೀವಕ್ಕೆ
ನನ್ನ ಕಂಡರೆ ಏನೋ ಪ್ರೀತಿ–
ನೀನು ಕಾಣದ್ದೇನು ? ಕೊನೆಯ
ನಿಲ್ದಾಣದವರೆಗೂ ಒಮ್ಮೆ ಬರುವೆಯಾದರೆ
ಆಗ ನೋಡೀಯಂತೆ, ನನ್ನ ಜಬರ್ !

ಆಳು ಮಂದಿಯ ಬುದ್ಧಿಯೆಲ್ಲಾ ಇಷ್ಟೇ
ನಡು ದಾರಿಯಲ್ಲೇ ಕೈ ಬಿಡುವ ಹಾಗಾದರೆ
ಬೆಣಚುಕಲ್ಲಿನ ಕಿಡಿಹಾರಿ ಕಣ್ಣಿಗೇ ಬಡಿದಂತೆ
ಈ ಕತೆಯ ತಾರತಮ್ಯದ ಮಾತು ಹೊತ್ತಿಕೊಂಡಂತೆ !

೨. ಚಲಿಸದ ಗಾಡಿ

ಚಲಿಸದೆ ಇರುವ ಆ ಗಾಡಿಯಲ್ಲಿ ಕಾಲಿಟ್ಟದ್ದು
ನನಗೇ ಗೊತ್ತಿರಲಿಲ್ಲ ; ನಿನ್ನ ಮುಖ
ಕಂಡಾಗಲೇ ನಾನೆಲ್ಲಿ ಇದ್ದೇನೆಂಬ ನವೆತ
ಆರಂಭವಾಗಿ, ನಾನೆಂದೆ : ಚಲಿಸದೆ
ಇರುವ ಈ ಗಾಡಿಯಲ್ಲೇನು ನಿನ್ನ ಪಯಣ ?

ನಿನಗೆ ಹಾವು ಕಡಿದಂತಾಗಿಯೊ ಏನೋ
ಚುಕ್ಕಿಗಳ ಸಾಕ್ಷಿಯಲ್ಲಿ ಹೊರಳಿ ಒದ್ದಾಡಿದೆ
ನಕ್ಷತ್ರಗಳ ಈ ಸಂತೆಗೇಕೀ ಸಿಡುಸಿಡುಕು

ಎಂದು ಗಾಬರಿಗೊಂಡೆ ; ನಿನ್ನ ಪ್ರಪಂಚದ
ಚಲನೆ ಅರ್ಥವಾಗದ ನಾನು ಮೂಲೆಗೆ ತಗಲಿಕೊಂಡೆ

ಆದರೂ ನಿನಗೆ ಗಲಿಬಿಲಿಗೊಳಿಸುವಂಥ
ಅಕ್ಕ ಪಕ್ಕದಲ್ಲೇ ಟ್ರೈನುಗಳ ಓಡಾಟ—
ಗೋಂಡಾರಣ್ಯ ಕೂಡ ಬಿಟ್ಟು ಕೊಡಲೇ ಬೇಕು
ಒಮ್ಮೆಯಲ್ಲ ಒಮ್ಮೆ ತನ್ನದಲ್ಲದ ಇತಿಹಾಸ
ಎಂಬ ಜೀರುಗುಣಿಕೆಯ ಜಾರು ಜೋರು—

ಈ ಗಾಡಿ ನಿನ್ನದೇ ಅಧಿಪತ್ಯವೆಂಬ ನಟನೆಗೆ
ನಾನೂ ತಾಳ ಕುಟ್ಟಿ ಕುಟ್ಟಿ ಹವಾಮಾನಕ್ಕೆ
ಬೆರಗಾಗುವುದು ನಿನ್ನ ಅಸ್ತಿತ್ವವನ್ನೇ
ಕಲಕಿ ಹಾಕಿದಂತಲ್ಲವೇ ? ಎನಿಸಿ ಎದೆಮೇಲೆ
ಕೈಯಿಟ್ಟು ನಿನಗೆ ಗೌರವಿಸುವೆಡೆಯಲ್ಲಿ

ಎಲ್ಲವೂ ಅಂತರ್ಧಾನ ! ನಿನಗೊ ನಿಶ್ಚಲನ !

೩. ರಾತ್ರಿ ಹಗರಣದ ನಿಲ್ದಾಣ

ಈ ಕಾಡಡವಿಯಲ್ಲಿ ಯಾವ ಸ್ಟೇಷನಿದ್ದೀತು ?
ಅದೂ ಈ ನಡುರಾತ್ರಿಯಲ್ಲಿ ? ಎಂದು ಸಂಕಟ
ಪಡಬೇಡ : ರೈಲು ನಿಲ್ಲುವುದು ಎರಡೇ ಮಿನಿಟು—

ಊರೆಲ್ಲಿ ? ಎಂದು ಗಾಬರಿಗೊಳ್ಳಬೇಡ—
ಆಚೆಗುಡ್ಡ ಬಳಸಿ ಹೋದರೆ ಉಂಟು ಅವಳಿ
ನಗರಗಳು : ಜಗಳ ಬರಬಾರದೆಂದೇ ಇಲ್ಲಿ ನಿಲ್ದಾಣ

ಬಹುಶಃ ಕರೆಂಟಿಲ್ಲದೆಯೆ ನಿನಗೆ ಈ ನಿಲ್ದಾಣದಲ್ಲ
ಚೆಲುವು ಕಣ್ಣಿಗೆ ಬೀಳುತ್ತಿಲ್ಲ ; ಹೊರಗೆ ವಾಹನಗಳ
ಪರಿಷೆಯ ಗಲಿಬಿಲಿ ಸದ್ದು ನಿನಗೆ ಕೇಳುತ್ತಿಲ್ಲ ?

ಈ ನಡುರಾತ್ರಿಯಲ್ಲೇ ಇಲ್ಲಿ ಇಳಿಯುವವರ ಸಂಖ್ಯೆ
ಅಪಾರ ; ಹಗಲು ಹೊತ್ತಿನಲ್ಲಿ ಇಲ್ಲಿ ಟ್ರೈನು ನಿಲ್ಲುವುದೆ
ಅಷ್ಟೊಂದು ಪರಿಚಿತವಲ್ಲ ; ಆಗ ಮಾತ್ರ ಇದೇ ಏನು

ರಾತ್ರಿ ಹಗರಣದ ನಿಲ್ದಾಣ ? ಎಂಬೊಂದು ಸಂಶಯವೂ
ಬಾರದಿರುವಷ್ಟು ನಿದ್ದೆಯಲ್ಲೇ ಅದ್ದಿ ಹೋಗಿರುತ್ತದೆ
ಎನ್ನುವುದು ಈ ಕಡೆಯ ಪ್ರಯಾಣಿಕರಿಗೆಲ್ಲ ಗೊತ್ತುಂಟು-

ನೋಡು ದೊಪ ದೊಪ ಇಳಿದು ಓಡುತ್ತಿರುವಷ್ಟೇ ಜನ
ಮತ್ತೆ ಹತ್ತುತ್ತಿದ್ದಾರೆ ಕಪ್ಪು ಬಟ್ಟೆಯ ಕಪ್ಪು ಕನ್ನಡಕದ
ಕಪ್ಪು ನೋಟದ ಮಂದಿ : ಯಾಕೆ ಗಾಬರಿಗೊಳ್ಳುತ್ತೀಯ,

ಏನು ? ಏನಂದಿ ? ಧಡಧಡ ಮಗುಚಿತು ರೈಲು ಎಂದೆ ?
ನಿನಗೆಲ್ಲೊ ಈ ಕಡೆ ಪಯಣಿಸಿಯೆ ಗೊತ್ತಿಲ್ಲವಯ್ಯ—
ಹೀಗೆ ಮಗುಚಿ ಧಡಧಡಿಸಿಯೆ ವಾಸ್ತವವ ಮುಟ್ಟುವುದೆಂದು ರೈಲು !

ಕನ್ನಡ ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ

ಎಚ್. ಎಸ್. ಅನಂತನಾರಾಯಣ

ಭಿನ್ನ ಭಾಷೆಗಳನ್ನಾಡುವ ಯಾವುದೇ ಎರಡು ಜನಾಂಗಗಳ ನಡುವೆ ವಿಶಿಷ್ಟ ರೀತಿಯ ಸಂಪರ್ಕವೇರ್ಪಟ್ಟಾಗ ಆ ಭಾಷೆಗಳ ಸ್ವರೂಪದಲ್ಲಿ ಮಾರ್ಪಾಡು ಕಂಡು ಬರುತ್ತದೆ, ಪರಸ್ಪರ ವ್ಯವಹಾರ ಮಾಡುವ ಅವಶ್ಯಕತೆ ತೋರಿಬಂದಾಗ ಪರಸ್ಪರರ ಭಾಷೆಗಳಿಂದ ತಮಗೆ ಬೇಕೆನಿಸಿದ ಪದಗಳನ್ನು ಎರವಲು ಪಡೆಯುತ್ತಾರೆ. ಇತರ ಬಗೆಯ ಎರವಲಿನಂತೆ ಭಾಷೆಗಳ ನಡುವಣ ಎರವಲಿನಿಂದ ಕೊಡುವ ಭಾಷೆಗೆ ಯಾವುದೇ ರೀತಿಯ ನಷ್ಟವೂ ಉಂಟಾಗುವುದಿಲ್ಲ. ಕೆಲವೊಮ್ಮೆ ಸ್ವೀಕರಿಸಿದ ಭಾಷೆಯಿಂದ ಕಾಲಕ್ರಮದಲ್ಲಿ ಎರವಲಾಗಿ ಬಂದ ಪದಗಳು ಮೂಲಭಾಷೆಗೆ ವಾಪಸ್ಸಾಗುವ ಸಂಭವವೂ ಇಲ್ಲದಿಲ್ಲ. ರಾಜಕೀಯ ಅಥವಾ ಸಾಂಸ್ಕೃತಿಕ ಕಾರಣಗಳಿಂದ ಒಂದು ಭಾಷೆಯನ್ನಾಡುವವರು ತಮ್ಮ ಭಾಷೆಗಿಂತ ಬೇರೆಯವರ ಭಾಷೆ ಶ್ರೇಷ್ಠವೆಂದಾಗಲೀ ಅಥವಾ ಪ್ರಯೋಜನಕಾರಿ ಎಂದಾಗಲೀ ತಿಳಿದರೆ ಆ ಭಾಷೆಯನ್ನು ಕಲಿಯುವುದೂ ತನ್ಮೂಲಕ ಎರಡೂ ಭಾಷೆಗಳನ್ನು ತಿಳಿದವರ ಸಂಖ್ಯೆ ಹೆಚ್ಚುವುದೂ ಕಂಡುಬರುತ್ತದೆ. ದ್ರಾವಿಡ ಭಾಷೆಗಳನ್ನಾಡುವವರು ಸಂಸ್ಕೃತದ ಅಭ್ಯಾಸಮಾಡಿದ್ದೂ, ಇಂದು ಹಿಂದೀ ಭಾಷೆಯ ಅಧ್ಯಯನ ಮಾಡುತ್ತಿರುವುದೂ ಇದೇ ಕಾರಣದಿಂದೆನ್ನಬಹುದು. ಸಾಮಾನ್ಯವಾಗಿ, ಸುಲಭರೂಪದ ಸಮಾಸಪದಗಳಲ್ಲದ ಶಬ್ದಗಳ ಸ್ವೀಕರಣೆ ಹೆಚ್ಚಾಗಿನಡೆಯುತ್ತದೆ, ಸ್ವತಂತ್ರ ರೂಪಗಳಲ್ಲದ ಪ್ರತ್ಯಯಗಳು ಹಾಗೂ ವ್ಯಾಕರಣ ಪ್ರಕ್ರಿಯೆಗಳು ಎರವಲಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಬರುವುದಿಲ್ಲವೆಂದಲ್ಲ; ಅಪರೂಪವೆಂದು ಬೇಕಾದರೆ ಹೇಳಬಹುದು. ಅಂದರೆ, ಸಂಸ್ಕೃತದ ಸ್ತ್ರೀ, ಪುರುಷ, ಇತ್ಯಾದಿ ಪ್ರಾತಿಪದಿಕ ರೂಪಗಳನ್ನು ಕನ್ನಡದಲ್ಲಿ ಕಾಣಬಹುದೇ ಹೊರತು, ಅವುಗಳ ಬಹುವಚನ ರೂಪಗಳನ್ನಾಗಲೀ, ಬಹುವಚನ ಪ್ರತ್ಯಯಗಳನ್ನಾಗಲೀ, ಕಾಣಲಾಗುವುದಿಲ್ಲ, ಎರವಲಾಗಿ ಬಂದು ಸೇರಿದ ಸಂಸ್ಕೃತದ ಈ ಪದಗಳು ಇತರ ಕನ್ನಡ ಪದಗಳಂತೆಯೇ ಕನ್ನಡದ ಬಹುವಚನ ಪ್ರತ್ಯಯವನ್ನು ಪಡೆದು ಸ್ತ್ರೀಯರು, ಪುರುಷರು ಎಂದಾಗುತ್ತವೆ.

ಪದಗಳು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಎರವಲಾಗಿ ಬರುತ್ತವೆಯೇ ಹೊರತು ವರ್ಣಗಳು ಆ ರೀತಿ ಸ್ವತಂತ್ರವಾಗಿ ಬರಲಾರವು, ಆದರೆ ಸ್ವೀಕೃತ ಪದಗಳ ಮೂಲಕ ಕೆಲವೊಮ್ಮೆ ಭಾಷೆಯಲ್ಲಿ ಮೊದಲಿಗಿರದ ವರ್ಣಗಳು ಬಂದು ಸೇರಬಹುದು.

ಕನ್ನಡದಲ್ಲಿ ಇಂದು ಕಂಡುಬರುವ ಮಹಾಪ್ರಾಣ ವ್ಯಂಜನಗಳು ಈ ರೀತಿಯಲ್ಲಿ ಸಂಸ್ಕೃತದಿಂದ ಪಡೆದ ಪದಗಳ ಮೂಲಕ ಬಂದು ಸೇರಿದವೆನ್ನಬಹುದು. ಸ್ವೀಕೃತ ಪದಗಳ ಅಧ್ಯಯನದಿಂದ ಭಾಷೆಗಳೆರಡರ ನಡುವಣ ಸಂಬಂಧ ಹಾಗೂ ಆ ಭಾಷೆಗಳನ್ನಾಡುವ ಜನರ ನಡುವಣ ಸಂಬಂಧ ಯಾವರೀತಿಯದ್ದಾಗಿದ್ದಿತೆನ್ನುವುದನ್ನು ತಿಳಿಯಬಹುದು. ಒಂದು ಭಾಷೆಯನ್ನಾಡುವ ಜನರ ಸಂಪರ್ಕ ಪಡೆದ ಎರಡು ಬೇರೆ ಭಾಷೆಗಳಲ್ಲಿನ ಸ್ವೀಕೃತ ಪದಗಳು ಒಂದೇ ಆಗಿರಬೇಕೆಂಬ ನಿಯಮವಿಲ್ಲ. ಕನ್ನಡದಲ್ಲಿ ಕಂಡುಬರುವಷ್ಟು ಸಂಸ್ಕೃತ ಪದಗಳು ತಮಿಳು ಭಾಷೆಯಲ್ಲಿ ಕಂಡುಬರುವುದಿಲ್ಲ. ಸ್ವೀಕರಿಸುವ ಭಾಷೆಯ ಅವಶ್ಯಕತೆಯನ್ನನುಸರಿಸಿ ಹಾಗೂ ಸ್ವೀಕರಿಸುವ ಮತ್ತು ಕೊಡುವ ಭಾಷೆಗಳ ನಡುವಣ ಸಂಬಂಧವನ್ನವಲಂಬಿಸಿ ಈ ಸ್ವೀಕರಣ ಕಾರ್ಯ ನಡೆಯುತ್ತದೆ. ಎರವಲಾಗಿ ಭಾಷೆಗೆ ಬಂದು ಸೇರಿದ ಪದಗಳು ಆ ಭಾಷೆಯ ಕಟ್ಟುಪಾಡುಗಳಿಗೊಳಪಡುತ್ತವೆ. ಆ ಭಾಷೆಯಲ್ಲಿ ನಂತರ ಉಂಟಾಗುವ ಬದಲಾವಣೆಗಳು ಬೇರೆ ಭಾಷೆಯಿಂದ ಬಂದು ಸೇರಿದ ಪದಗಳಿಗೂ ಸಮಾನ ರೀತಿಯಲ್ಲಿ ಅನ್ವಯವಾಗುತ್ತವೆ.

ಆರ್ಯರು ಭಾರತಕ್ಕೆ ಬರುವ ವೇಳೆಗೇ ಇಲ್ಲಿ ದ್ರಾವಿಡ ಭಾಷೆಗಳನ್ನಾಡುವ ಜನರಿದ್ದರೆಂದು ನಂಬಲಾಗಿದೆ. ಯುದ್ಧಕಲೆಯಲ್ಲಿ ಮುಂದುವರಿದಿದ್ದ ಆರ್ಯರು ದ್ರಾವಿಡರನ್ನು ಸೋಲಿಸಿ, ನಂತರ ಇಲ್ಲೇ ನೆಲಸಿ, ಇಲ್ಲಿಯವರೊಡನೆ ಬೆರೆತು ಹೋದರು. ಆರ್ಯರಾಡುತ್ತಿದ್ದ ಸಂಸ್ಕೃತ ರಾಜಭಾಷೆಯ ಸ್ಥಾನ ಮಾನವನ್ನು ಪಡೆದಿದ್ದರಿಂದ ದ್ರಾವಿಡ ಭಾಷೆಗಳನ್ನಾಡುತ್ತಿದ್ದ ಪ್ರಜೆಗಳೂ ಸಂಸ್ಕೃತವನ್ನು ಕಲಿತರು; ಚೆನ್ನಾಗಿಯೇ ಕಲಿತರು. ತಮ್ಮ ಭಾಷೆಯ ಪದಗಳನ್ನು ಸಂಸ್ಕೃತದಲ್ಲೂ, ಸಂಸ್ಕೃತದ ಪದಗಳನ್ನು ತಮ್ಮ ಭಾಷೆಗಳಲ್ಲೂ ಉಪಯೋಗಿಸಲು ಪ್ರಾರಂಭಿಸಿದರು. ದೀರ್ಘ ಕಾಲದ ಸಂಪರ್ಕದಿಂದ ಈ ಎರಡೂ ಭಾಷೆಗಳ ನಡುವೆ ಸಾಕಷ್ಟು ಪ್ರಭಾವವುಂಟಾಗಿರುವುದನ್ನು ಗಮನಿಸಬಹುದು. ಸಂಸ್ಕೃತದಿಂದ ದ್ರಾವಿಡ ಭಾಷೆಗಳಿಗೆ, ದ್ರಾವಿಡ ಭಾಷೆಗಳಿಂದ ಸಂಸ್ಕೃತಕ್ಕೆ ಎರವಲಾಗಿ ಬಂದಿರುವ ಪದಗಳು ಅನೇಕ. ಅವುಗಳದೊಂದು ದೊಡ್ಡ ಪಟ್ಟಿಯೇ ಆಗುತ್ತದೆ.[1]

ಸಂಸ್ಕೃತದಿಂದ ಕನ್ನಡ ಭಾಷೆಗೆ ಎರವಲಾಗಿ ಬಂದು ಸೇರಿರುವ ಪದಗಳನ್ನು ಮೂರು ಗುಂಪುಗಳಲ್ಲಿ ವಿಂಗಡಿಸಬಹುದು. ಕನ್ನಡದ ನಿಯಮಕ್ಕನುಗುಣವಾಗಿ ಕೇವಲ ರೂಪದಲ್ಲಿ ಮಾರ್ಪಾಡಾಗಿರುವ ಪದಗಳು, ರೂಪವ್ಯತ್ಯಾಸದೊಡನೆ ಅರ್ಥ ವ್ಯತ್ಯಾಸವೂ ಆಗಿರುವ ಪದಗಳು, ಇವೆರಡಕ್ಕೂ ಭಿನ್ನವಾದ ಕೆಲವು ಬೆಳವಣಿಗೆಗಳು.

(i) ರೂಪದಲ್ಲಿ ಮಾತ್ರ ಬದಲಾವಣೆ ತೋರಿಬರುವ ಪದಗಳು (ಉದಾಹರಣೆಗೆಂದು ಕೆಲವೇ ಪದಗಳನ್ನು ಕೊಡಲಾಗಿದೆ).

ಅಕ್ಷರ, ಅತಿವೃಷ್ಟಿ, ಅನಾಥ, ಅನುಚಿತ, ಆಕಾರ, ಆಕಾಶ, ಆಚಾರ, ಆಹಾರ ಆಸ್ತಿ, ಆಯಾಸ, ಇಂಗಿತ, ಉದ್ಯೋಗ, ಉಪಯೋಗ, ಉಪದೇಶ, ಉಪವಾಸ, ಏಕಾಂತ, ಐಶ್ವರ್ಯ, ಐಕಮತ್ಯ, ಔಷಧ, ಔಚಿತ್ಯ, ಕರ್ತವ್ಯ, ಕಲಹ, ಕಾರಣ, ಖ್ಯಾತಿ, ಗಾಯಕ, ಗೋಚರ, ಚೂರ್ಣ, ಜಂತು, ಜಯ, ದಾಸ, ಧ್ಯಾನ, ದೋಷ, ನಿಯಮ, ಪಂಡಿತ, ಪಾಕ, ಯಂತ್ರ, ಜ್ಞಾನ.

ಈ ಪದಗಳನ್ನು ಗಮನಿಸಿದರೆ ಪ್ರತ್ಯಯರಹಿತ ಪ್ರಕೃತಿ ರೂಪದಲ್ಲಿ ಸಂಸ್ಕೃತ ಶಬ್ದಗಳನ್ನು ಕನ್ನಡ ಸ್ವೀಕರಿಸಿದೆಯೆನ್ನಬಹುದು, ಸಂಸ್ಕೃತದಲ್ಲಿ ವರಃ, ದೋಷಃ, ಎಂದು ಪುಲ್ಲಿಂಗ ರೂಪಗಳೂ, ದಾಸಂ, ನಕ್ಷತ್ರಂ, ಎಂದು ನಪುಂಸಕ ರೂಪಗಳೂ ಕಂಡು ಬಂದರೂ, ಅವೆಲ್ಲವನ್ನೂ ಕೇವಲ ಸ್ವರಾಂತ ರೂಪವಾಗಿ ಕನ್ನಡದಲ್ಲಿ ಕಾಣುತ್ತೇವೆ. ಪುಲ್ಲಿಂಗ-ನಪುಂಸಕ ಲಿಂಗಭೇದ ಕನ್ನಡದಲ್ಲಿ ಸಹ ಇದೆ, ಪಂಡಿತನು ಎಂದಾಗ ಪುಲ್ಲಿಂಗ, ಪಾಕ ಎಂದಾಗ ನಪುಂಸಕಲಿಂಗ ಎಂಬ ಸೂಚನೆಯಾಗುತ್ತದೆ. ಸಂಸ್ಕೃತದಲ್ಲಿ ಪುಲ್ಲಿಂಗ ರೂಪದಲ್ಲಿ ಕಂಡುಬರುವ ಪದಗಳು ಕನ್ನಡದಲ್ಲಿ ನಪುಂಸಕ ರೂಪವಾಗಬಹುದು. (ಉದಾ : ಪರ್ವತ, ತರು, ಇತ್ಯಾದಿ),

(ii) ರೂಪ ಬದಲಾವಣೆಯೊಂದಿಗೆ ಅರ್ಥದಲ್ಲಿ ಕೂಡ ಬದಲಾವಣೆ ತೋರಿ ಬರುವ ಪದಗಳು.

ಸಂಸ್ಕೃತ	ಕನ್ನಡ
ನಿಜ 'ತನ್ನ'	ನಿಜ 'ಸತ್ಯ'
ಭದ್ರ 'ಮಂಗಳ'	ಭದ್ರ 'ಜೋಪಾನ'
ಮಂದ 'ನಿಧಾನ'	ಮಂದ 'ಗಟ್ಟಿ'
ಲಗ್ನ 'ಒಳ್ಳೆಯ ಸಮಯ'	ಲಗ್ನ 'ಮದುವೆ'
ತಿಥಿ 'ದಿವಸ'	ತಿಥಿ 'ಹಿರಿಯರ ದಿನ'
ತೀರ್ಥ 'ಸ್ನಾನಮಾಡುವಸ್ಥಳ'	ತೀರ್ಥ 'ಕುಡಿಯುವ ನೀರು'
ಗ್ರಹಚಾರ 'ಗ್ರಹಗಳಚಲನೆ'	ಗ್ರಹಚಾರ 'ದುರದೃಷ್ಟ'
ಪಾರಾವಾರ 'ಸಮುದ್ರ'	ಪಾರಾವಾರ 'ಎಲ್ಲೆ'
ನಗ 'ಬೆಟ್ಟ'	ನಗ 'ಒಡವೆ'
ಉಪಾದಾನ 'ತೆಗೆದುಕೊಳ್ಳುವುದು'	ಉಪಾದಾನ 'ಬೇಡಿಕೆ'
ಬಲವಂತ 'ಶಕ್ತ'	ಬಲವಂತ 'ಬಲಾತ್ಕಾರ'

(iii) ಕೇವಲ ಪದಾಂತ್ಯದಲ್ಲಿ ಅಲ್ಲದೆ, ಪದಮಧ್ಯದಲ್ಲಿ ಕೂಡ ಲೋಪತೋರಿ ಪದಗಳಲ್ಲಿ ರೂಪ ಬದಲಾವಣೆಯಾಗಿರುವುದನ್ನು ಕಾಣಬಹುದು.

ಸಂಸ್ಕೃತ	ಕನ್ನಡ
ಯೋಗಕ್ಷೇಮ	ಯೋಕ್ಷೇಮ
ಪರಿಷೇಚನ	ಪರ್‌ಷೇಷ್ಣೆ
ಸಂಧ್ಯಾವಂದನ	ಸಂಧ್ಯಾವನೆ
ಆಪೋಶಾನ	ಆಪೋಷಣೆ
ಬಿಲ್ವಪತ್ರ	ಬಿಲ್‌ಪತ್ರೆ
ಪಂಚಪಾತ್ರ	ಪಂಚತ್ರೆ
ಮಾಧ್ಯಾಹ್ನಿಕ	ಮಾಧ್ಯಾಂಕ
ಉಕ್ತಲೇಖನ	ಉತ್ಲೇಖನ

ಪದಮಧ್ಯದಲ್ಲಿ ಲೋಪವಾಗುವುದರಿಂದ ಕೆಲವೊಮ್ಮೆ ಕನ್ನಡದ ರೂಪದಲ್ಲಿ ಮಹಾಪ್ರಾಣ ತೋರಿಬರುತ್ತದೆ.

ಫಲಾಹಾರ	ಪಲ್ಹಾರ
ಗಹನ	ಘನ
ಗ್ರಹಚಾರ	ಘ್ರಾಚಾರ
ಗೃಹಸ್ಥ	ಘ್ರಾಸ್ತ
ಗ್ರಹಣ	ಘ್ರಾಣ

ಕನ್ನಡದಲ್ಲಿ ಮೊದಲಿಗಿಲ್ಲದ ಮಹಾಪ್ರಾಣ ಸಂಸ್ಕೃತ ಪದಗಳ ಮೂಲಕ ಕನ್ನಡ ವರ್ಣ ಸಮಾಮ್ನಾಯಕ್ಕೆ ಬಂದು ಸೇರಿದಮೇಲೆ ದ್ರಾವಿಡ ಪದಗಳೇ ಆದರೂ ಅವುಗಳ ಉಚ್ಚಾರಣೆಯಲ್ಲಿ ಇಂದು ಮಹಾಪ್ರಾಣ ಕಂಡುಬರುತ್ತದೆ, ಉದಾಹರಣೆಗೆ, ಖಾರ, ಪಿತ್ಥ, ಧಾರ, ಥೊರೆ, ಭಾವಿ, ಧಡ್ಡ, ಘಾಳಿ, ಇತ್ಯಾದಿ.

ಸಂಸ್ಕೃತ ಪದಗಳು ಕನ್ನಡದಲ್ಲಿ ಎಷ್ಟುಮಟ್ಟಿಗೆ ಬೆಳೆದುಹೋಗಿವೆಯೆಂದರೆ ಅವು ಮೊದಲಿಗೆ ಸಂಸ್ಕೃತ ಶಬ್ದಗಳೆನ್ನುವುದು ಕೂಡ ಕನ್ನಡ ಮಾತನಾಡುವ ಅನೇಕರಿಗೆ ತಿಳಿದಿಲ್ಲ, ಒಂದು ಭಾಗ ಕನ್ನಡ, ಇನ್ನೊಂದು ಭಾಗ ಸಂಸ್ಕೃತ-ಹೀಗಿರುವ ಹೊಸ ಬಗೆಯ ಸಮಾಸ ಪದಗಳು ಸಹ ಕಂಡು ಬರುತ್ತವೆ, ಉದಾಹರಣೆಗೆ, ಕಲ್ಲುಮಯ (ಕನ್ನಡ ಕಲ್ಲು + ಸಂಸ್ಕೃತ ಮಯ), ದೊಡ್ಡಾಪತ್ತು (ಕನ್ನಡ ದೊಡ್ಡ + ಸಂಸ್ಕೃತ ಆಪತ್ತು), ಜಲಕಣ್ಣು (ಸಂಸ್ಕೃತ ಜಲ + ಕನ್ನಡ ಕಣ್ಣು), ಮತ್ತು ತಲೆಮಾಸಿಕ (ಕನ್ನಡ ತಲೆ + ಸಂಸ್ಕೃತ ಮಾಸಿಕ).

ಸ್ವತಂತ್ರವಾಗಿ ಉಪಯೋಗವಾಗುವ ಪದಗಳಂತೆಯೇ, ಕೆಲವೊಮ್ಮೆ ಎರಡೂ ಭಾಷೆಗಳನ್ನಾಡುವ ಜನರಿಂದಾಗಿ, ಬದ್ಧರೂಪಗಳಾದ ಪ್ರತ್ಯಯಗಳು ಕೂಡ ಎರವ

ಲಾಗಿ ಬಂದು ಸೇರಬಹುದು. ಮೊದಲಿಗೆ ಆ ಪ್ರತ್ಯಯಗಳಿಂದ ಕೂಡಿದ ಪದಗಳ ಎರವಲಿಂದಾಗಿ ಕಾಲಕ್ರಮದಲ್ಲಿ ಮಾತೃಭಾಷೆಯ ಪದಗಳೊಡನೆ ಕೂಡ ಆ ಪ್ರತ್ಯಯ ಗಳ ಉಪಯೋಗ ಕಂಡುಬರುತ್ತದೆ.[2]

ಸಂಸ್ಕೃತದಿಂದ ಹೀಗೆ ಕನ್ನಡಕ್ಕೆ ಬಂದಿರುವ ಪ್ರತ್ಯಯಗಳು ತದ್ಧಿತ ಪ್ರತ್ಯಯ ಗಳು, ವಿಭಕ್ತಿ ಪ್ರತ್ಯಯಗಳಲ್ಲ; ಅಂದರೆ, ನಾಮಪದಗಳಿಗೆ ಈ ಪ್ರತ್ಯಯಗಳನ್ನು ಸೇರಿಸಿದಾಗ ಉಂಟಾಗುವುವು ನಾಮಪದಗಳೇ.

ಸಂಸ್ಕೃತದ ವೈದಿಕ, ಲೌಕಿಕ, ಧಾರ್ಮಿಕ ಮುಂತಾದ ಪದಗಳಲ್ಲಿ ಕಾಣಬರುವ ಇಕ ಪ್ರತ್ಯಯ ಕನ್ನಡ ಪದಗಳಾದ ಕಬ್ಬಿಗ, ಕನ್ನಡಿಗ ಎಂಬಲ್ಲಿ ಉಪಯೋಗವಾಗಿದೆ. ಹಾಗಿಯೇ, ಸಂಸ್ಕೃತದ ಕುಂಭಕಾರ, ಸ್ವರ್ಣಕಾರ ಇತ್ಯಾದಿ ಪದಗಳಲ್ಲಿನ 'ಮಾಡುವ' ಎಂದರ್ಥದ – ಕಾರ ಪ್ರತ್ಯಯ ಕೋಲುಕಾರ, ಓಲೆಕಾರ ರೂಪಗಳಲ್ಲಿ ಕಂಡುಬರು ತ್ತದೆ. ಸಂಸ್ಕೃತದಲ್ಲಿ – ಕಾರ ಪ್ರತ್ಯಯವಾಗಿರಲಿಲ್ಲವಾದರೂ, ಅದನ್ನು ಪ್ರತ್ಯಯ ವೆಂದು ಭಾವಿಸಿ ಕನ್ನಡದಲ್ಲಿ ಉಪಯೋಗಿಸಿಕೊಂಡಂತಿದೆ. ನಂತರ ಇದು – ಗಾರ ರೂಪದಲ್ಲಿ ಬಳೆಗಾರ, ಕೊಲೆಗಾರ, ಮೋಸಗಾರ ಎಂಬ ಪದಗಳಲ್ಲಿ ಉಪಯೋಗ ವಾಗಿದೆ. ಹೀಗೆಯೇ, ಕನ್ನಡದ ಬಡತನ, ಮನೆತನ, ಜಾಣತನಗಳಲ್ಲಿ ಸಂಸ್ಕೃತದ– ತ್ವನ ಪ್ರತ್ಯಯವೂ, ಕಲ್ಲುಮಯ, ಹೆಸರು ಮಯಗಳಲ್ಲಿ – ಮಯ ಪ್ರತ್ಯಯವೂ, ಮಡಿವಂತ, ಹಣವಂತ ಇತ್ಯಾದಿ ಪದಗಳಲ್ಲಿ – ವಂತ ಎಂಬ ಪ್ರತ್ಯಯವೂ ಉಪ ಯೋಗವಾಗಿರುವುದು ಕಂಡಬರುತ್ತದೆ.

ಸಾಮಾನ್ಯವಾಗಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಪ್ರತ್ಯಯಗಳು ಸುಲಭವಾಗಿ ಬಂದು ಸೇರುವುದಿಲ್ಲವಾದರೂ, ಸುಮಾರು 3000 ವರ್ಷಗಳ ಸಂಪರ್ಕ ಹೊಂದಿರುವ ಸಂಸ್ಕೃತ ಮತ್ತು ಕನ್ನಡ ಭಾಷೆಗಳ ಮಧ್ಯೆ ಅದೂ ಕೂಡ ಸಾಧ್ಯವೆಂದು ಹೇಳಬಹುದೇನೋ. ಆದರೆ, ಪ್ರತ್ಯಯವನ್ನೇ ನೇರವಾಗಿ ಎರವಲು ಪಡೆಯುವುದಿಲ್ಲವೆಂದು ಮಾತ್ರ ಹೇಳಬಹುದು. ಎರವಲಾಗಿ ಪಡೆದ ಪದಗಳಲ್ಲಿ ಈ ಪ್ರತ್ಯಯಗಳಿರುವಿಕೆಯನ್ನು ಗುರುತಿಸುವುದರಿಂದಾಗಿ, ಹಾಗೂ ಮೂಲಭಾಷೆ ಯಲ್ಲಿ ಅವು ಪ್ರತ್ಯಯಗಳೆಂಬ ತಿಳುವಳಿಕೆಯಿಂದಾಗಿ, ಕ್ರಮೇಣ ತಮ್ಮ ಭಾಷೆಯ ಪದಗಳೊಡನೆ ಕೂಡ ಅನ್ಯಭಾಷೆಯ ಪ್ರತ್ಯಯದ ಉಪಯೋಗ ಪ್ರಾರಂಭ ವಾಗುತ್ತದೆ.

ತನ್ನದೇ ಆದ ಪದಗಳಿದ್ದರೂ ಬೇರೆ ಭಾಷೆಯಿಂದ ಎರವಲಾಗಿ ಅದೇ ಅರ್ಥ ಸೂಚಕ ಪದಗಳನ್ನು ಏಕೆ ಪಡೆಯಬೇಕೋ ತಿಳಿಯದು. 10ನೆಯ ಶತಮಾನದಲ್ಲಿ ಉಪಯೋಗದಲ್ಲಿದ್ದ ಕೆಳಗಿನ ಕನ್ನಡ ಪದಗಳು ನಂತರ ಸಂಸ್ಕೃತ ಪದಗಳಿಗೆ ಅವಕಾಶ ಮಾಡಿಕೊಟ್ಟು ಲೋಪ ಹೊಂದಿರುವುದನ್ನು ಗಮನಿಸಬಹುದು.

ಕನ್ನಡ	ಸಂಸ್ಕೃತ
ಪಲವು	ಬಹಳ, ಅನೇಕ
ಬಿತ್ತು	ಬೀಜ
ತೊವಲ್	ಚರ್ಮ
ಅಡಗು	ಮಾಂಸ
ನೆತ್ತರ್	ರಕ್ತ
ನೇಸರ್	ಸೂರ್ಯ
ಪೆರೆ	ಚಂದ್ರ
ಅರಿಲ್	ನಕ್ಷತ್ರ
ಪೊಂ (ಬಣ್ಣ)	ಹಳದಿ
ಇರುಳ್	ರಾತ್ರಿ

ಕನ್ನಡ--ಸಂಸ್ಕೃತ ಎರಡೂ ಭಾಷೆಗಳನ್ನು ತಿಳಿದವರು ಕನ್ನಡ ಪದಗಳೇ ಇದ್ದಾಗಲೂ ತಮ್ಮ ಸಂಸ್ಕೃತ ಜ್ಞಾನವನ್ನು ತೋರ್ಪಡಿಸಲೋಸುಗ ಸಂಸ್ಕೃತ ಪದಗಳನ್ನು ಉಪಯೋಗಿಸಿದರೋ ಏನೋ ತಿಳಿಯದು.

ಎರಡು ಭಾಷೆಗಳ ನಡುವೆ ಎರವಲು ಪಡೆಯುವಷ್ಟು ಸಂಪರ್ಕ ಬೆಳೆದಾಗ ಎರವಲು ಏಕಮುಖವಾಗಿಯೇ ಇರುತ್ತದೆಂದು ಹೇಳಲಾಗುವುದಿಲ್ಲ; ಎರಡೂ ಮುಖದಲ್ಲಿ ನಡೆಯಲು ಸಾಧ್ಯವಿರುತ್ತವೆ. ಈ ಸಂದರ್ಭದಲ್ಲಿ ಕೂಡ ಹಾಗೆಯೇ. ಕೇವಲ ಸಂಸ್ಕೃತದಿಂದ ಕನ್ನಡಕ್ಕೆ ಹೆಚ್ಚಿನ ಕೊಡುಗೆಯಾಗಿದೆ ಎಂದು ತಿಳಿದರೆ ಅದು ತಪ್ಪಾದೀತು. ಕನ್ನಡದಿಂದ (ಅಥವಾ, ದ್ರಾವಿಡ ಭಾಷೆಗಳಿಂದ) ಕೂಡ ಸಂಸ್ಕೃತಕ್ಕೆ ಅನೇಕ ಶಬ್ದಗಳು ಬಂದು ಸೇರಿಕೊಂಡಿವೆ. ದ್ರಾವಿಡ ಭಾಷೆಗಳ ಸಂಪರ್ಕದಿಂದ ಸಂಸ್ಕೃತದ ಮೊದಲಿನ ರೂಪವೇ ಬದಲಾಯಿಸಿ ಹೋಯಿತೆಂದರೆ ಅತಿಶಯೋಕ್ತಿಯೇನಿಲ್ಲ. ವಾಕ್ಯ ರಚನಾ ಕ್ರಮಕೂಡ ಇಂದು ಸಂಸ್ಕೃತದಲ್ಲಿ ದ್ರಾವಿಡ ಭಾಷೆಗಳಂತೆ ಇದೆ. ಇದೇ ಕುಟುಂಬಕ್ಕೆ ಸೇರಿದ ಇಂಗ್ಲೀಷಿನಲ್ಲಿ ಬೇರೆ ಕ್ರಮಕಂಡು ಬರುತ್ತದೆ. ಸಂಸ್ಕೃತದ ಮೇಲೆ ಕನ್ನಡದ ಪ್ರಭಾವ ಈ ಪ್ರಸಂಗಕ್ಕೆ ಹೊರತಾದ ಕಾರಣ ಇಲ್ಲಿ ಅದರ ಬಗ್ಗೆ ಏನೂ ಹೇಳಲಾಗಿಲ್ಲ.

ಅಡಿ ಟಿಪ್ಪಣಿಗಳು

1 Burrow, Thomas, 1955. The Sanskrit Language, London: Faber and Faber, Chapter VIII
Emeneau M. B. and Burrow T. 1962. Dravidian Borrowings from Indo-Aayan. Berkeley & Los Angeles : univ, of california Press.

2 Ananthanarayana H. S. 1976. "ಕನ್ನಡದಲ್ಲಿ ಸಂಸ್ಕೃತದ ಕೆಲವು ಪ್ರತ್ಯಯಗಳು" in ಶ್ರೀಕಂಠತೀರ್ಥ (ತೀ. ನಂ. ಶ್ರೀ. ಸ್ಮಾರಕ ಗ್ರಂಥ) ಬೆಂಗಳೂರು 550–54.

ಶ್ರವಣ ಬೆಳ್ಗೊಳಕ್ಕೆ ಮೂಲ "ಹಳೆಯ ಬೆಳ್ಗೊಳ"

ಎಂ. ಚಿದಾನಂದ ಮೂರ್ತಿ

"ಹಳೆಯ ಬೆಳ್ಗೊಳ" ಊರು—ಯಾರೂ ಗಮನಿಸಿಲ್ಲ

1966ರಷ್ಟು ಹಿಂದೆಯೇ ನಾನು "ಶ್ರವಣ ಬೆಳಗೊಳ–ಬೇರೆ ಬೇರೆ ಯುಗಗಳಲ್ಲಿ"ಎಂಬ ಸಂಪ್ರಬಂಧವೊಂದರಲ್ಲಿ[1] ಸಮಸ್ಯೆಯನ್ನು ಹೀಗೆ ಪ್ರಸ್ತಾಪಿಸಿದ್ದೆ:

> "ಶ್ರವಣ ಬೆಳ್ಗೊಳ ಸಮೀಪದಲ್ಲಿ 'ಹಳೆಯ ಬೆಳ್ಗೊಳ' ಎಂಬ ಊರಿದೆ. ಆ ಹೆಸರು ಬರಲು ಕಾರಣವೇನು? ಹಾಗಾದರೆ ಈಚಿನ ಬೆಳ್ಗೊಳ ಯಾವುದು? ಅದು ಈಗಿನ ಶ್ರವಣ ಬೆಳ್ಗೊಳವೇ? ಸಾವಿರ ವರ್ಷಗಳ ಹಿಂದಿನ ಶಾಸನಗಳಲ್ಲಿ ಕಂಡು ಬರುವ ಬೆಳ್ಗೊಳವು ಈಗಿನ 'ಹಳೆಯ ಬೆಳ್ಗೊಳ'ದ ಸಮೀಪದಲ್ಲಿದ್ದು ಕ್ರಮೇಣ ಅಲ್ಲಿಂದ ಬಂದ ಜನ ಈಗಿನ ಶ್ರವಣ ಬೆಳ್ಗೊಳದ ಬಳಿ ಊರು ಕಟ್ಟಿಕೊಂಡು ನೆಲಸಿದರೇ? ಇತ್ಯಾದಿ ಪ್ರಶ್ನೆಗಳ ತರಂಗವನ್ನೇಳಿಸುತ್ತದೆ, ಹಳೆಯ ಬೆಳ್ಗೊಳ ಎಂಬ ಹೆಸರು"

ಈ ಹೇಳಿಕೆಯನ್ನು ಯಾವ ವಿದ್ವಾಂಸರೂ ಗಂಭೀರವಾಗಿ ತೆಗೆದುಕೊಳ್ಳದಿದ್ದುದು ದುರದೃಷ್ಟಕರ. ಕೆಲವು ವರ್ಷಗಳ ಹಿಂದೆ ನಾನು ಸ್ಥಳನಾಮ ವಿಜ್ಞಾನದ (Toponymy or Onomastics) ಅಧ್ಯಯನಕ್ಕೆ ತೊಡಗಿದಾಗ ಒಂದು ಹೇಳಿಕೆ ನನ್ನ ಗಮನಕ್ಕೆ ಬಂತು– "ಇತರ ದಾಖಲೆಗಳು ಮೌನ ವಹಿಸಿದಾಗ ಸ್ಥಳನಾಮಗಳು ಮಾತನಾಡುತ್ತವೆ." ನನ್ನ ಮೊದಲ ಹೇಳಿಕೆಯ ಬಗ್ಗೆ ನನ್ನ ಆಸಕ್ತಿ ಹೆಚ್ಚು ದೃಢವಾಯಿತು. 'ಹಳೆಯ ಬೆಳ್ಗೊಳ'ವು ಈಗಿನ ಶ್ರವಣ ಬೆಳ್ಗೊಳಕ್ಕೆ ಸುಮಾರು ಮೂರು ಮೈಲಿ ದೂರವಿದ್ದು ತನ್ನ ಹೆಸರಿನಲ್ಲಿ ಐತಿಹಾಸಿಕ ಮಹತ್ವದ ಸಂಗತಿಯನ್ನು ಹುದುಗಿಸಿಕೊಂಡಿದೆಯೆಂಬ ನನ್ನ ಊಹೆಯ ಬಗ್ಗೆ ವಿಶ್ವಾಸ ಹೆಚ್ಚಾಯಿತು. ಈ ನನ್ನ ವಿಶ್ವಾಸಕ್ಕೆ ಹೆಚ್ಚಿನ ಗಟ್ಟಿ ಬುನಾದಿ ದೊರಕಲು ಮೈಸೂರು ಗೆಜೆಟಿಯರ್‌ನಲ್ಲಿದ್ದ ಒಂದು ಹೇಳಿಕೆ ಕಾರಣವಾಯಿತು.[2] ಹಳೆಯ ಬೆಳ್ಗೊಳದ ಮಧ್ಯೆ ಒಂದು ಕೊಳ, ಅದರ ದಡದ ಮೇಲೆ ಜಿನವಿಗ್ರಹಗಳಿದ್ದ ಸಂಗತಿಯನ್ನು ಗೆಜೆಟಿಯರ್ ಗ್ರಂಥವು ಎಪಿಗ್ರಾಫಿಯಾಕರ್ನಾಟಕದ (II. 1923) ಆರ್. ನರಸಿಂಹಾಚಾರ್ಯರ ಮುನ್ನುಡಿಯಿಂದ ತೆಗೆದುಕೊಂಡಿದೆ. ಆರ್. ನರಸಿಂಹಾಚಾರ್ಯರ ಮಾತುಗಳು ಹೀಗಿವೆ:

---

1. ಚಿದಾನಂದ ಮೂರ್ತಿ ಎಂ: ಸಂಶೋಧನ ತರಂಗ ಮೈಸೂರು. 1966. ಪುಟ. 79
2. Hayavadana Rao C. Mysore Gazetteer, V. pp. 1066–67

"It (ಹಳೆಯ ಬೆಳ್ಗೊಳ) has a ruined Jaina temple in the Hoysala Style of architecture Consisting of a ಗರ್ಭಗೃಹ, an open ಸುಖನಾಸಿ and ನವರಂಗ. The ಗರ್ಭಗೃಹ contains standing ಜಿನ figure, about $2\frac{1}{2}$ ft-high. Against the wall of the ಸುಖನಾಸಿ leans a mutilated standing figure of ಪಾರ್ಶ್ವನಾಥ, about 5 ft high with a seven-hooded canopy and Serpent-coil behind. The central ceiling of the ನವರಂಗ which is beautifully carved, has figures of the ಅಷ್ಟದಿಕ್ಪಾಲಕರು or regents of the eight directions, seated in their vehicles with their wives, the middle panel being Occupied by a standing figure of ಧರಣೇಂದ್ರ, with a five hooded Canopy holding on the left hand and what looks like a conch-shell in the right...... The outer walls have here and there Pilasters and niches...The village appears to have had several more temples at one time as evidenced by the outlet of the tank close by, which is mostly built of architectural mebers of temples such as beams, pillars, Capitals etc. There is also a mutilated Jaina figure near the Pond in the middle of the village with the head of the headless image in the ruined ಬಸ್ತಿ noticed above lying on its side......

ಹಳೆಯ ಬೆಳ್ಗೊಳದ ಮಧ್ಯೆ ಕೊಳವಿದ್ದುದು ಮತ್ತು ಅದರ ಸುತ್ತ ಮುತ್ತ ಜೈನ ವಿಗ್ರಹಗಳಿರುವುದು ನನಗೆ ಮಹತ್ವದ ವಿಷಯವಾಯಿತು. ಶ್ರವಣಬೆಳ್ಗೊಳದ ಶಾಸನಗಳನ್ನು ಮತ್ತೊಮ್ಮೆ ವಿಶ್ಲೇಷಿಸಿದಾಗ ಮತ್ತು ನಾನು ಹಳೆಯ ಬೆಳ್ಗೊಳಕ್ಕೆ ಎರಡು ಬಾರಿ ಹೋಗಿ ಆ ಊರನ್ನು ವಿವರವಾಗಿ ಪ್ರತ್ಯಕ್ಷವಾಗಿ ಪರಿಶೀಲಿಸಿ ಅಲ್ಲಿಯ ಬಸದಿ, ಕೊಳಗಳನ್ನು ಪರಿಶೀಲಿಸಿದ್ದಲ್ಲದೆ ಜಾನಪದ ಸಾಮಗ್ರಿಯನ್ನು ಸಂಗ್ರಹಿಸಿದಾಗ, ಹಳೆಯ ಬೆಳ್ಗೊಳವೇ ಹತ್ತು—ಹನ್ನೊಂದನೇ ಶತಮಾನದವರೆಗೆ ಶಾಸನಗಳಲ್ಲಿ ಕಂಡುಬರುವ ಮೂಲ ಬೆಳ್ಗೊಳ ಊರು ಎಂಬುದು ಖಚಿತವಾಯಿತು.

ಬಿಳಿಯ ಕೊಳ ಯಾವುದು

ಒಟ್ಟು ಈ ಸಮಸ್ಯೆಯಲ್ಲಿ ಬಹು ಮುಖ್ಯವಾದ ಅಂಶವೆಂದರೆ 'ವೆಳ್ಗೊಳ' ಅಥವಾ 'ಬೆಳ್ಗೊಳ'. 'ಬೆಳ್ಗೊಳ' ಎಂದರೆ ಬಿಳಿಯಕೊಳ, ಶುಭ್ರಜಲವಿರುವ ಕೊಳ ಎಂದರ್ಥ. ಆ ಕೊಳದಿಂದ ಊರಿಗೆ ಹೆಸರು ಬಂದಿದೆ. ಇಲ್ಲಿಯವರೆಗೆ ಬಹುತೇಕ ಎಲ್ಲ ವಿದ್ವಾಂಸರೂ ಶ್ರವಣಬೆಳಗೊಳದಲ್ಲಿರುವ ದೊಡ್ಡ ಕೊಳದಿಂದ ಆ ಊರಿನ ಹೆಸರು ಬಂದಿದೆಯೆಂದು ಭಾವಿಸುತ್ತಾ ಬಂದಿದ್ದಾರೆ. ರೈಸ್ ಅವರು 1889ರಲ್ಲಿ 'ಬೆಳ್ಗೊಳ'ವೆಂದರೆ ಊರೊಳಗಿನ ಭವ್ಯ ಕೊಳವೇ ಎಂದು ಹೇಳಿದರು. ಆದರೆ, ವಾಸ್ತವವಾಗಿ ಬೆಳ್ಗೊಳ ಎಂಬ ಸ್ಥಳನಾಮವು ಕೊನೆಯ ಪಕ್ಷ ಏಳನೇ ಶತಮಾನದಷ್ಟು ಹಳೆಯದಾಗಿದ್ದು, ಶ್ರವಣಬೆಳಗೊಳದ ಕೊಳವು ಅದರ ಬಳಿಯ ಸಮೀಪದ ಶಾಸನವೊಂದರ ಪ್ರಕಾರ ಹದಿನೇಳನೇ ಶತಮಾನದಷ್ಟು ಈಚಿನದು. ಕೊಳವನ್ನು ಚಿಕ್ಕದೇವರಾಜ ಒಡೆಯರು ಮಾಡಿಸಿದ್ದು ಎಂಬರ್ಥವನ್ನು ಆ ಶಾಸನವು ಕೊಡುತ್ತದೆ. ("ಶ್ರೀ ಚಿಕ್ಕದೇವರಾಜೇಂದ್ರ ಮಹಾಸ್ವಾಮಿಯವರ ಕಲ್ಯಾಣಿ")[3]. ಅನಂತಕವಿಯೂ ತನ್ನ ಗೊಮ್ಮಟೇಶ್ವರ ಚರಿತೆಯಲ್ಲಿ ಅಣ್ಣಯ್ಯ ಎಂಬುವನ ಕೋರಿಕೆ ಪ್ರಕಾರ ಚಿಕ್ಕದೇವರಾಜ ಒಡೆಯರು ಕೊಳವನ್ನು ಅಗೆಸುತ್ತಿರುವಾಗಲೇ ತೀರಿಕೊಂಡರೆಂದೂ ಆ ಬಳಿಕ ಮೊದಲ ಕೃಷ್ಣದೇವರಾಜ ಒಡೆಯರು ಅದರ ನಿರ್ಮಾಣ ಕಾರ್ಯವನ್ನು ಪೂರೈಸಿದರೆಂದೂ ಜೊತೆಗೆ ಕೊಳದ ಗೋಪುರ ಮತ್ತು ಮಂಟಪಗಳನ್ನು ಅವರೇ ಮಾಡಿಸಿದರೆಂದೂ ಹೇಳಿದ್ದಾನೆ. ಇಡೀ ಕೊಳದ ವಾಸ್ತುರಚನೆ ಮೈಸೂರರಸರ ಕಾಲದ್ದಾಗಿದೆ, ಮತ್ತು ಆ ಕೊಳವನ್ನು ಚಿಕ್ಕದೇವರಾಜ ಒಡೆಯರು ಹೊಸದಾಗಿ ಮಾಡಿಸಿದರೆಂದೂ ಹೇಳಲವಕಾಶವಿದೆ. ಕ್ರಿ.ಶ. 1699ರ ಶಾಸನದಲ್ಲಿ (ಸಂ. 351) ಕೊಳವನ್ನು "ಚಿಗದೇವರಾಜ ಕಲ್ಯಾಣಿ" ಎಂದು ವರ್ಣಿಸಿರುವುದೂ ಗಮನಾರ್ಹ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಆರ್. ನರಸಿಂಹಾಚಾರ್ಯರು (EP. Carn. II. 1923. P. 32) ಎಚ್ಚರಿಕೆಯಿಂದ ಹೀಗೆ ಹೇಳಿದರು :

> "We have therefore to conclude that either this pond which had been in existence in a dilapidated condition was renovated by order of ಚಿಕ್ಕದೇವರಾಜ or that the pond which gave the name to the village was one quite different from this"

---

3. Ep. Carn. II No. 50 (Mysore Edition) ಮುಂದಿನ ಶಾಸನದ ಉಲ್ಲೇಖಗಳೆಲ್ಲ 1973ರ ಮೈಸೂರು ಆವೃತ್ತಿಯಿಂದ.

ಶ್ರವಣ ಬೆಳ್ಗೊಳ ಊರು – ಈಚಿನದು

ಅವರಿಗೆ ಕೊಳದ ಬಗ್ಗೆ ಅನುಮಾನವಿದೆಯೇ ಹೊರತು ಈಗಿನ ಶ್ರವಣಬೆಳಗೊಳವೇ ಪ್ರಾಚೀನ ಶಾಸನಗಳ ಬೆಳ್ಗೊಳವೆನ್ನುವ ಬಗ್ಗೆ ಅನುಮಾನಗಳಿಲ್ಲ. ಎಪಿಗ್ರಾಫಿಯ ಕರ್ನಾಟಕದ ಮೈಸೂರು ಆವೃತ್ತಿಯ (1973) ಸಂಪಾದಕ ಡಾ. ಬಾ.ರ. ಗೋಪಾಲ್ ಅವರೂ ಡಾ. ಬಿ. ವಿ. ಸಿರೂರ್ ಅವರೂ[4] ಮೇಲಿನ ವಿದ್ವಾಂಸರ ಅಭಿಪ್ರಾಯವನ್ನೇ ಅನುಮೋದಿಸಿದ್ದಾರೆ. ಶೆಟ್ಟರ್ ಅವರು ಕೊಳದ ಬಗ್ಗೆ ಮತ್ತು ಶ್ರವಣಬೆಳಗೊಳ ಊರಿನ ಬಗ್ಗೆ ಸ್ವಲ್ಪ ಬೇರೆ ಅಭಿಪ್ರಾಯವನ್ನು ಹೊಂದಿದ್ದಾರೆ.[5]

> "The name 'Belgola' is consistently used between C. 650 and 1889, testifying to its popularity over the rest of the names. During the early centuries (7th to 12th), it probably indicated only a pond, but in course time it began to refer more to the settlement which grew up in the valley than the pond. The settlement probably began to emerge in the beginning of the 12th cent."

ಶ್ರವಣಬೆಳಗೊಳ ಊರು ಹನ್ನೆರಡನೇ ಶತಮಾನದಲ್ಲಿ ಆರಂಭವಾಯಿತು ಎಂಬ ಅವರ ನಿಲುವು ಸತ್ಯದೂರವೇನೂ ಅಲ್ಲ. (ಬಹುಶಃ ಅದು ಇನ್ನೂ ಸ್ವಲ್ಪ ಹಿಂದೆ ಆರಂಭವಾಗಿರಬಹುದು.) ಆದರೆ ಬೆಳ್ಗೊಳ ಎಂಬುದು ಆರಂಭದಲ್ಲಿ ಬರಿಯ ಕೊಳವನ್ನು ಹೇಳುತ್ತಿದ್ದು ಬಳಿಕ ಅದು ಊರಿಗೆ ಹೆಸರಾಯಿತು ಎಂಬ ವಾದ ಸಮರ್ಥನೀಯವಲ್ಲ. ನಾವು ಮುಂದೆ ನೋಡುವಂತೆ ಆ ಬಿಳಿಯ ಕೊಳವು ಈಗಿನ ಶ್ರವಣಬೆಳ್ಗೊಳ ಊರಲ್ಲಿ ಇರಲಿಲ್ಲವೆಂದೂ, ಈಗಿನ ಶ್ರವಣ ಬೆಳ್ಗೊಳದ ಕೊಳದಿಂದ ಬೆಳ್ಗೊಳ ಎಂಬ ಹೆಸರು ಉದ್ಭವವಾಗಿಲ್ಲವೆಂದೂ ಸ್ಪಷ್ಟವಾಗುತ್ತದೆ.

ಈಗಿನ ಶ್ರವಣಬೆಳ್ಗೊಳ ಊರಿನ ಅತ್ಯಂತ ಪ್ರಾಚೀನ ಶಾಸನವೆಂದರೆ ಜೈನ ಮಠದ ಬಳಿ ಇರುವ ಶ್ರೀಮತಿ ಗಂತಿಯ ಕ್ರಿ. ಶ. 1119ರ ನಿಸದಿ ಶಾಸನ (ಸಂ. 484) ; ಊರೊಳಗಿನ ಅತ್ಯಂತ ಪ್ರಾಚೀನ ಕಟ್ಟಡವೆಂದರೆ ಭಂಡಾರಿ ಹುಳ್ಳ ಕ್ರಿ ಶ. 1159ರಲ್ಲಿ ಕಟ್ಟಿಸಿದ ಭಂಡಾರ ಬಸದಿ. ಆ ಕಾಲದಲ್ಲಿ ಶ್ರವಣಬೆಳ್ಗೊಳ ಊರಿಗಿದ್ದ

---

4. ಸಿರೂರ್ ಬಿ. ವಿ. ಶ್ರವಣ ಬೆಳ್ಗೊಳ : ರಾಜಕೀಯ - ಸಾಂಸ್ಕೃತಿಕ - ಸಾಹಿತ್ಯಕ ಅಧ್ಯಯನ. ಧಾರವಾಡ. 1976. ಪು. 10
5. Settar S : Sravanabelgola. Dharwar. 1981 p.59.

ಹೆಸರು 'ಗೊಮ್ಮಟಪುರ'[6]. ಈ ಶಾಸನದಲ್ಲಿ ಈಗಿನ ಶ್ರವಣಬೆಳ್ಗೊಳ ಪ್ರದೇಶವನ್ನು 'ಬೆಳ್ಗೊಳ ತೀರ್ಥ'ವೆಂದು ಕರೆದಿರುವುದು ಗಮನಾರ್ಹ. ಬಹು ಹಿಂದಿನಿಂದ ಚಿಕ್ಕ ಬೆಟ್ಟವನ್ನು 'ಬೆಳ್ಗೊಳ ಅದ್ರಿ'ಯೆಂದು ಕರೆಯುತ್ತಿದ್ದಂತೆ ಹನ್ನೆರಡನೆಯ ಶತಮಾನದಲ್ಲಿ ಇಡೀ ಪ್ರದೇಶವನ್ನು 'ಬೆಳ್ಗೊಳ ತೀರ್ಥ'ವೆಂದು ಕರೆಯುತ್ತಿದ್ದರೆಂಬುದಕ್ಕೆ ಹನ್ನೆರಡನೇ ಶತಮಾನದ 'ಗಂಗಪಯ್ಯ...... ಬೆಳುಗುಳದ ತೀರ್ಥದಲು ಜಿನನಾಥಪುರವ ಮಾಡಿ' ಎಂಬ ಶಾಸನವನ್ನೂ (ಸಂ. 538) ಗಮನಿಸಬೇಕು. ಜಿನನಾಥಪುರ ಮತ್ತು ಇತರ ಸಮೀಪದ ಊರುಗಳಲ್ಲಿಯೂ ಮತ್ತು ಹಳೆಯ ಬೆಳ್ಗೊಳದಲ್ಲಿಯೂ ಶ್ರವಣಬೆಳ್ಗೊಳ ಊರಿನಲ್ಲಿರುವುದಕ್ಕಿಂತ ಪ್ರಾಚೀನವಾದ ಶಾಸನಗಳೂ ಕಟ್ಟಡಗಳೂ ದೊರಕಿರುವುದು, ಹತ್ತನೆಯ ಶತಮಾನದ ಅಂತ್ಯ ಅಥವಾ ಹನ್ನೊಂದನೇ ಶತಮಾನದ ಆರಂಭದಲ್ಲಿ ಚಿಕ್ಕದಾಗಿ ಆರಂಭವಾದ ಶ್ರವಣ ಬೆಳ್ಗೊಳ ಊರು ಬೆಳೆಯುತ್ತ ಬಂದಿತೆಂಬುದಕ್ಕೆ ಒಂದು ಒಳ್ಳೆಯ ಆಧಾರವಾಗಿದೆ.

ಕ್ರಿ.ಪೂ. 3-2ನೇ ಶತಮಾನಗಳ ಅವಧಿಯಲ್ಲಿ ಜೈನಧರ್ಮವು ಕರ್ನಾಟಕಕ್ಕೆ ಬಂದು ಶ್ರವಣಬೆಳ್ಗೊಳ ಪ್ರದೇಶದಲ್ಲಿ ತನ್ನ ಮೊದಲ ಕೇಂದ್ರವನ್ನು ಮಾಡಿಕೊಂಡಾಗ ದೊಡ್ಡಬೆಟ್ಟ ಚಿಕ್ಕಬೆಟ್ಟಗಳ ಮಧ್ಯದ ಇಡೀ ಕಣಿವೆ ದಟ್ಟ ಕಾಡಿನಿಂದ ತುಂಬಿದ್ದಿತೆಂದು ಹತ್ತನೇ ಶತಮಾನದ 'ವಡ್ಡಾರಾಧನೆ' ಹೇಳುತ್ತದೆ. ('ಭಟ್ಟಾರಾ, ಊರಿಲ್ಲ ಕೇರಿಯಿಲ್ಲಡವಿಯೊಳೆಲ್ಲಿಗೆ ಚರಿಗೆವುಗುವುದು ಎಂದೊಡೆ ಕಾಂತಾರ ಭೈಕ್ಷಮೆಂಬುದಾಗಮದೊಳ್ ಪೇೞ್ದುದು.....'[7] ಚಿಕ್ಕಬೆಟ್ಟದ ಮೇಲೆ ದೊರಕಿರುವ ಸುಮಾರು 650ರ ಶಾಸನವೊಂದರ ಪ್ರಕಾರ (ಸಂ. 1 ಇದೇ ಶ್ರವಣಬೆಳ್ಗೊಳದ ಅತ್ಯಂತ ಪ್ರಾಚೀನ ಶಾಸನ), 'ದಕ್ಷಿಣಾಪಥವು ನಲಿಯುತ್ತಿದ್ದ ಜನರಿದ್ದ ಗ್ರಾಮಗಳಿಂದ ಜನರಿಂದ ಪಶುಗಳಿಂದ ಸಂಪತ್ತಿನಿಂದ ಕೂಡಿದ್ದರೂ 'ಕಟವಪ್ರ' ಪ್ರದೇಶವು ಮಾತ್ರ ಕಾಡು, ಕಾಡುಮೃಗಗಳಿಂದ ಆವೃತವಾಗಿದ್ದಿತೆಂದು ಹೇಳುತ್ತದೆ. (''ಜನಪದಂ ಅನೇಕ ಗ್ರಾಮ ಶತ ಸಂಖ್ಯಮುದಿತ ಜನಧನ ಕನಕ ಸಸ್ಯ ಗೋಮಹಿಷ ಅಜ ಅವಿಕುಲ ಸಮಾಕೀರ್ಣಂ.......'', ''ವಿವಿಧ ತರು ದರ ಕುಸುಮದಲಾವಲಿ ವಿರಚನಾ ಶಬಲ ಸಜಲ ಜಲದನಿವಹ ನೀಲೋಪತಲೇ ವರಾಹದ್ವೀಪಿ ವ್ಯಾಘ್ರರ್ಕ್ಷ ತರಕ್ಷು ವ್ಯಾಳ ಮೃಗಕುಲೋಪಚಿತಪತ್ಯಕ ಕಂದರದರೀ ಮಹಾಗುಹಾ ಗಹನಾ ಭೋಗವತಿ'). ಎಂದರೆ, ಕ್ರಿಸ್ತಶಕ 600–650ರ ಸುಮಾರಿನಲ್ಲಿ ಈಗಿನ

6. ಸಂ. 484. ''ಬೆಳ್ಗುಳ ತೀರ್ಥದೊಳ್ ಚತುರ್ವಿಂಶತಿ ತೀರ್ಥಕೃನ್ನಿಳಯಮಂನೆಱೆ ಮಾಡಿಸಿದಂ ದಲಿಂತಿದಂ॥ ಗೊಮ್ಮಟಪುರ ಭೂಷಣಮಿದು ಗೊಮ್ಮಟಮಾಯ್ತೆನೆ ಸಮಸ್ತ ಪರಿಕರ ಸಹಿತಂ ಸಮ್ಮದದಿಂ ಹಳ್ಳಿಚಮೂಪಂ ಮಾಡಿಸಿದಂ ಜಿನೋತ್ತಮಾಳಯಮನಿದಂ''

7. ವಡ್ಡಾರಾಧನೆ (ಸಂ : ಡಿ. ಎಲ್. ನರಸಿಂಹಾಚಾರ್). ಮೈಸೂರು. 1970 ಪು. 89

ಶ್ರವಣಬೆಳ್ಗೊಳ ಊರು ಇರುವ ಕಣಿವೆ ಪ್ರದೇಶ (ಎರಡು ಗುಡ್ಡಗಳ ಮಧ್ಯದ ಪ್ರದೇಶ) ಕಾಡಿನಿಂದ ತುಂಬಿತ್ತು ; ಜನವಸತಿ ವಿಹೀನವಾಗಿತ್ತು.

ಶಾಸನಗಳ 'ವೆಳ್ಗೊಳ'ವೇ ಹಳೆಯ ಬೆಳ್ಗೊಳ

'ವೆಳ್ಗೊಳ' ಹೆಸರಿನ ಅತ್ಯಂತ ಪ್ರಾಚೀನ ಉಲ್ಲೇಖ ಸು. 700ರಷ್ಟು ಹಿಂದಕ್ಕೆ ಹೋಗುತ್ತದೆ. ಕಳ್ವಪ್ಪು ಅಥವಾ ಚಿಕ್ಕಬೆಟ್ಟವನ್ನು 'ವೆಳ್ಗೊಳ ಅದ್ರಿ' ಎಂದು ಅಲ್ಲಿ ಕರೆದಿದೆ. (ಸಂ. 34) ಮುಂದಿನ ಉಲ್ಲೇಖ ಅದೇ ಬೆಟ್ಟದ ಮೇಲಿನ ಎಂಟನೇ ಶತಮಾನದ ಶಾಸನದಲ್ಲಿ ದೊರಕುತ್ತದೆ. (ಸಂ. 38) ರಾಷ್ಟ್ರಕೂಟರ ಈ ಶಾಸನ ಬಹು ಮುಖ್ಯವಾದುದು. ಅದರಲ್ಲಿ ಇಬ್ಬರು ಗೌಡುಗಳು 'ಗೋವಿಂದ ಪಾಡಿ' ಎಂಬ ಊರಿಗೆ ಕೊಟ್ಟ ದತ್ತಿಯ ಉಲ್ಲೇಖವಿದೆ–'ಉತ್ತಮ ಗಾಮುಂಡರುಂ ಗೋವಿಂಡಪಾಡಿಯ ಉಳ್ಳಾಮುಂದುಂ ಬೆಳ್ಗೊಳದಾ ವಟಿ ಗೋವಿಂದಪಾಡಿಗೆ ಕೊಟ್ಟುದು.'

ಇಲ್ಲಿ ಬರುವ 'ಬೆಳ್ಗೊಳ ಯಾವುದು ? 'ಗೋವಿಂದಪಾಡಿ' ಯಾವುದು ? ಚನ್ನರಾಯಪಟ್ಟಣ ತಾಲ್ಲೂಕಿನ ವಿಸ್ತೃತ ಭೂಪಟದಲ್ಲಿ (ಕರ್ನಾಟಕದ 'ಭೂದಾಖಲೆ ಮತ್ತು ಕಂದಾಯ ನಿರ್ಣಯ ವ್ಯವಸ್ಥೆ'ಯ ನಿರ್ದೇಶಕರಿಂದ ಪ್ರಕಟಿತ) ಈ ಹೆಸರಿನ ಯಾವುದೂ ಹಳ್ಳಿ ಇಲ್ಲ. ಆದರೆ 'ಗೋವಿಂದಪಾಡಿ' ಈಗಿನ ಸಾಣೇನ ಹಳ್ಳಿಯೇ ಎಂಬುದನ್ನು ತೋರಿಸುವುದು ಕಷ್ಟವೇನೂ ಅಲ್ಲ. ಸಾಣೇನಹಳ್ಳಿಯ ಕ್ರಿ.ಶ. 1119ರ ಶಾಸನದಲ್ಲಿ (ಸಂ. 547) ಗಂಗರಾಜನಿಗೆ ವಿಷ್ಣುವರ್ಧನನು 'ಗೋವಿಂದ ವಾಡಿ'ಯನ್ನು ಬಿಟ್ಟುಕೊಟ್ಟ ಉಲ್ಲೇಖವಿದೆ ; ತನಗೆ ದತ್ತಿಯಾಗಿ ಬಂದ ಆ ಊರನ್ನು ಗಂಗರಾಜ ಗೊಮ್ಮಟನ ಪೂಜೆಗಾಗಿ ದಾನ ಮಾಡುತ್ತಾನೆ. ಅಲ್ಲದೆ, ಅದೇ ಶಾಸನದಲ್ಲಿ 'ಗೋವಿಂದವಾಡಿ'ಯ ದಕ್ಷಿಣದಲ್ಲಿ 'ಅರುಹನಹಳ್ಳಿ'ಯಿಂದ 'ಹಿರಿಯ ದೇವರ ಬೆಟ್ಟ'ಕ್ಕೆ ಎಂದರೆ ದೊಡ್ಡಬೆಟ್ಟಕ್ಕೆ ಹೋಗುತ್ತಿದ್ದ 'ಹೆಬ್ಬಟ್ಟೆ'ಯ ಉಲ್ಲೇಖವಿದೆ. ಈಗಿನ ಅರುವನಹಳ್ಳಿಯಿಂದ ಶ್ರವಣಬೆಳಗೊಳಕ್ಕೆ ಹೋಗುವ ದಾರಿ ಸಾಣೇನಹಳ್ಳಿಯ ದಕ್ಷಿಣದಲ್ಲಿ ಉಂಟು ; ಮತ್ತು ಅದೇ ಸಾಣೇನಹಳ್ಳಿಯ ಇನ್ನೊಂದು ಶಾಸನದಲ್ಲಿ (ಸಂ. 550) 'ಗೋವಿಂದಪಡಿಯ (ಗೋವಿಂದ ಪಾಡಿಯ) ಕೊಳಗ'ದ ಉಲ್ಲೇಖವಿರುವುದರಿಂದಲೂ ಈಗಿನ ಸಾಣೇನಹಳ್ಳಿಯೇ ಶಾಸನಗಳ ಗೋವಿಂದಪಾಡಿ ಅಥವಾ ಗೋವಿಂದವಾಡಿ ಎಂಬಲ್ಲಿ ಅನುಮಾನಗಳಿಲ್ಲ. ಬೆಳ್ಗೊಳದ ಬಳಿಯ ಗೋವಿಂದಪಾಡಿ ಎನ್ನುವ ಶಾಸನದ ಮಾತು (ಹಳೆಯ) ಬೆಳ್ಗೊಳವನ್ನು ಕೇಂದ್ರವಾಗಿ ಹೊಂದಿದ್ದಿರಬಹುದಾದ ಬೆಳ್ಗೊಳ 12 ಎನ್ನುವ ಜಿಲ್ಲೆಗೆ ಆ ಊರು ಸೇರಿತ್ತೆಂದೂ ಮತ್ತು ಗೋವಿಂದಪಾಡಿಯು ಬೆಳ್ಗೊಳಕ್ಕೆ ಸಮೀಪದಲ್ಲಿ ಇತ್ತೆಂದೂ ('ಬೆಳ್ಗೊಳದಾವಟಿ ಗೋವಿಂದಪಾಡಿ') ಅರ್ಥವನ್ನು ಕೊಡುತ್ತವೆ. ಎಂಟನೇ ಶತಮಾನದಲ್ಲಿ ಈಗಿನ ಶ್ರವಣಬೆಳ್ಗೊಳ ಊರು ಇರುವ ಪ್ರದೇಶದಲ್ಲಿ ಬರಿಯ

ಕಾಡು ಇದ್ದುದರಿಂದ ಆ ಶಾಸನದ ಬೆಳ್ಗೊಳವು ಖಂಡಿತವಾಗಿಯೂ ಶ್ರವಣ ಬೆಳ್ಗೊಳವನ್ನಂತೂ ಹೇಳುವುದಿಲ್ಲ ; ಖಚಿತವಾಗಿ ಹಳೆಯ ಬೆಳ್ಗೊಳವನ್ನು ಹೇಳುತ್ತದೆ. ಸಾಣೇನಹಳ್ಳಿಯು ಶ್ರವಣಬೆಳ್ಗೊಳದ ಪೂರ್ವಕ್ಕೆ ಒಂದು ಮೈಲಿ ದೂರದಲ್ಲಿ ಹಳೆಯ ಬೆಳ್ಗೊಳದ ದಕ್ಷಿಣಕ್ಕೆ ಮೂರು ಮೈಲಿ ದೂರದಲ್ಲಿದೆ.

'ಬೆಳ್ಗೊಳ'ದ ಮುಂದಿನ ಉಲ್ಲೇಖವನ್ನು ಚಿಕ್ಕಬೆಟ್ಟದ ಲಕ್ಕಿದೊಣೆಯ ಸಮೀಪದ ಹತ್ತನೆಯ ಶತಮಾನದ ಶಾಸನದಲ್ಲಿ ಕಾಣುತ್ತೇವೆ. ಮುಂದಿನ ಅತ್ಯಂತ ಪ್ರಮುಖ ಉಲ್ಲೇಖವೆಂದರೆ ಚಾವುಂಡರಾಯನ ಮಗ ಜಿನದೇವನನ ಹತ್ತು-ಹನ್ನೊಂದನೆಯ ಶತಮಾನದ ಲಿಪಿಯುಳ್ಳಿರುವ ಶಾಸನಕ್ಕೆ ಸೇರಿದ್ದು. ಈ ಶಾಸನ ಚಿಕ್ಕಬೆಟ್ಟದ ಚಾಮುಂಡರಾಯ ಬಸದಿಯ ಮೇಲಣ ಮಹಡಿಯಲ್ಲಿನ ಪಾರ್ಶ್ವ ತೀರ್ಥಂಕರನ ವಿಗ್ರಹದ ಪಾದಪೀಠದ ಮೇಲಿದೆ. ಹತ್ತನೇ ಶತಮಾನದ ಲಿಪಿಯಲ್ಲಿರುವ ಶಾಸನ (ಸಂ. 150) ಹೀಗಿದೆ :

> "ಜಿನಗೃಹಮಂ ಬೆಳ್ಗೊಳದೊಳ್ ಜನಮೆಲ್ಲಂ ಪೊಗಳೆ ಮಂತ್ರಿ
> ಚಾವುಂಡ ನಂದನನೊಲವಿಂ ಮಾಡಿಸಿದಂ ಜಿನದೇವಣಾಜಿತಸೇನ
> ಮುನಿಪರ ಗುಡ್ಡಂ"

ಚಾಮುಂಡರಾಯನ ಬಸದಿಯ ಕಾಲ ಮತ್ತು ಕರ್ತೃತ್ವ ಸಮಸ್ಯಾತ್ಮಕವಾಗಿದೆ. ಈ ಬಸದಿಯ ಮುಂಭಾಗದ ಪಟ್ಟಿಯ ಮೇಲೆ "ಶ್ರೀ ಚಾಮುಂಡರಾಜಂ ಮಾಡಿಸಿದಂ" ಎಂಬ ಬರಹವಿದ್ದರೂ ಅದು 11-12ನೇ ಶತಮಾನಕ್ಕೆ ಸೇರಿದ್ದು (ಸಂ. 151) ; ಚಾಮುಂಡರಾಯನ ಕಾಲದ್ದಲ್ಲ. ಬಸದಿಯ ಗರ್ಭಗುಡಿಯಲ್ಲಿ ನೇಮೀಶ್ವರಸ್ವಾಮಿಯ ಸಿಂಹಪೀಠದ ಮೇಲೆ 12ನೇ ಶತಮಾನದ ಅಕ್ಷರಗಳಲ್ಲಿ ಅದನ್ನು ಗಂಗ ಸೇನಾಪತಿಯ ಮಗ ಎಚಣನು ಮಾಡಿಸಿದನು ಎಂದು ಸ್ಪಷ್ಟವಾಗಿದೆ[8]. ಕತ್ತಲೆ ಬಸದಿಯ ಹಿಂದೆ ಬಿದ್ದಿರುವ ಶಿಲೆಯ ಮೇಲೆ ಇರುವ 12ನೇ ಶತಮಾನದ ಶಾಸನದಲ್ಲಿ ಗಂಗರಾಜನ ಮಗ ಎಚಿರಾಜನು ಬೊಪ್ಪಣ, ತ್ರೈಲೋಕ್ಯರಂಜನ ಎಂಬ ಹೆಸರುಗಳಿದ್ದ ಜಿನಾಲಯವನ್ನು "ಬೆಳುಗೊಳ"ದಲ್ಲಿ ಕಟ್ಟಿಸಿದ ಸೂಚನೆ ಸ್ಪಷ್ಟವಾಗಿದೆ. (ಸಂ. 69) ಎಂದರೆ ಚಾಮುಂಡರಾಯ ಬಸದಿಯ ಗರ್ಭಗುಡಿಯ ನೇಮೀಶ್ವರ ಸ್ವಾಮಿಯ ವಿಗ್ರಹವು ಬಹುಶಃ ಎಚಿರಾಜ "ಬೆಳುಗೊಳ"ದಲ್ಲಿ ಕಟ್ಟಿಸಿದ ಜಿನಾಲಯದ್ದಾಗಿದ್ದು ಅದನ್ನು ಅಲ್ಲಿಂದ ತಂದು ಈಚೆಗೆ ಚಾವುಂಡರಾಯ ಬಸದಿಯಲ್ಲಿ

---

8 ಸಂ. 149-"ಗಂಗಸೇನಾಪತೇಸ್ಸೂನು ರೇಚಣೋ ಭಾರತೀ ಚಣಃ ತ್ರೈಲೋಕ್ಯರಂಜನಂ ಜೈನ ಚೈತ್ಯಾಲಯಮಚೀಕರತ್ । ಬುಧ ಬಂಧು ಸ್ಸತಾಂ ಬಂಧು ರೇಚಣಃ ಕಮಳಾಚಣಃ ಬೊಪ್ಪಣಾವರ ನಾಮಾಂಕ ಚೈತ್ಯಾಲಯಮ ಚೀಕರತ್ ॥ ರೂವಾರಿ ಹೊಯ್ಸಳಾಚಾರಿಯ ಮಗ ಗಂಗಾಚಾರಿ ವರ್ಧಮಾನಾಚಾರಿ ಬಿರುದ ರೂವಾರಿ ಮುಖ ತಿಳಕ"

ಇಟ್ಟಿರು ಎಂಬುದಂತೂ ಸ್ಪಷ್ಟ. (ಏಚಿರಾಜ ಕಟ್ಟಿಸಿರಬಹುದಾದ ಹೊಯ್ಸಳ ವಾಸ್ತು ಶೈಲಿಯ ಬಸದಿಯ ಅವಶೇಷಗಳನ್ನು ಬಹುಶಃ ಹಳೆಯ ಬೆಳ್ಗೊಳದ ಕೆರೆ ಕೋಡಿಯ ಕಲ್ಲುಗಳ ಮಧ್ಯೆ, ಕೆರೆಯ ಏರಿ ಮೇಲೆ ಗುರುತಿಸಬಹುದು.)

ಚಾವುಂಡರಾಯ ಬಸ್ತಿಯನ್ನು ಹತ್ತನೇ ಶತಮಾನದ ಚಾಮುಂಡರಾಯನೇ ಕಟ್ಟಿಸಿರಬಹುದಾದರೂ ಅದನ್ನು ಸಮರ್ಥಿಸುವ ಸಮಕಾಲೀನ ಶಾಸನ ಯಾವುದೂ ಇಲ್ಲ. ಅದು ಸದ್ಯಕ್ಕೆ ನಮಗೆ ಪ್ರಸ್ತುತವಲ್ಲ. ಆ ಬಸದಿಯ ಮೇಲಣ ಅಂತಸ್ತಿನಲ್ಲಿ ದೊರಕಿರುವ ಪಾರ್ಶ್ವನಾಥಸ್ವಾಮಿಯ ವಿಗ್ರಹ ಮೂಲತಃ ಎಲ್ಲಿಯದು? ಆ ವಿಗ್ರಹವೂ ಬೆಳ್ಗೊಳದಲ್ಲಿ ಜಿನದೇವಣ ಕಟ್ಟಿಸಿದ ಬಸದಿಗೆ ಸೇರಿದ್ದು. ಚಿಕ್ಕ ಬೆಟ್ಟಕ್ಕೆ "ಬೆಳ್ಗೊಳ" ಎಂಬ ಹೆಸರು ಇಲ್ಲವಾದ್ದರಿಂದ, ಈಗಿನ ಚಾವುಂಡರಾಯ ಬಸದಿಯೇ ಜಿನದೇವಣ ಕಟ್ಟಿಸಿದ ಜಿನಾಲಯವೆನ್ನುವ ಡಾ॥ ಸೆಟ್ಟರ್ ಅವರ ಊಹೆ[9] ನಿಲ್ಲತಕ್ಕದ್ದಲ್ಲ. ಹನ್ನೊಂದನೇ ಶತಮಾನದ ಶಾಸನ ಅದು ಚಾಮುಂಡರಾಯ ಮಾಡಿಸಿದ್ದು ಎಂದು ಸ್ಪಷ್ಟವಾಗಿ ಹೇಳುವುದನ್ನು ನಾವು ನಿರಾಕರಿಸಲು ಸಾಧ್ಯವಿಲ್ಲ. ಹತ್ತನೇ ಶತಮಾನದ ಗಂಗವಾಸ್ತು ಶೈಲಿಯ ಲಕ್ಷಣಗಳನ್ನುಳ್ಳ ಚಾವುಂಡರಾಯ ಬಸದಿ ಬಹುಶಃ ಚಾವುಂಡರಾಯನೇ ಕಟ್ಟಿಸಿದ್ದಿರಬಹುದು. ಅದರ ಗರ್ಭಗುಡಿಯ ವಿಗ್ರಹಗಳು ಮುಂದೆ ಕಾರಣಾಂತರಗಳಿಂದ ನಾಶವಾದಾಗ, 'ಬೆಳ್ಗೊಳ'ದಲ್ಲಿ ಜಿನದೇವಣ ಮತ್ತು ಏಚಣರು ಕಟ್ಟಿಸಿದ ಬಸದಿಗಳಿಂದ (ಆ ಬಸದಿಗಳೂ ಕಾಲಕ್ಕೆ ಹಾಳಾಗಿರಬೇಕು) ಕ್ರಮವಾಗಿ ಪಾರ್ಶ್ವನಾಥ ಮತ್ತು ನೇಮಿನಾಥ ವಿಗ್ರಹಗಳನ್ನು ತಂದು ಚಾವುಂಡರಾಯ ಬಸದಿಯಲ್ಲಿಟ್ಟು ಸುರಕ್ಷಿತ ಮಾಡಿರಬೇಕು. ಇದು ಕೇವಲ ಊಹೆಯಲ್ಲ. ಮುಂದಿನ ವಾದಗಳಿಂದ, ಈಗಿನ ಹಳೆಯ ಬೆಳ್ಗೊಳದಲ್ಲಿ ಇನ್ನೂ ಉಳಿದಿರುವ ಬಸದಿ ಬಹುಶಃ ಜಿನದೇವಣ ಕಟ್ಟಿಸಿದ್ದಾಗಿದ್ದು ಅಲ್ಲಿಂದ ಪಾರ್ಶ್ವನಾಥ ವಿಗ್ರಹವನ್ನು ತಂದಿರಬೇಕು. ಏಚಣ ಅದೇ ಹಳೆಯ ಬೆಳ್ಗೊಳದಲ್ಲಿ ಕಟ್ಟಿಸಿದ ಬಸದಿ ಈಗ ಪೂರ್ಣವಾಗಿ ನಾಶವಾಗಿದ್ದರೂ ಅದರ ಅವಶೇಷಗಳು ಈಗ ವಿಗ್ರಹ, ಶಿಲಾಖಂಡಗಳ ಮೂಲಕ ಹಳೆಯ ಬೆಳ್ಗೊಳದಲ್ಲಿ ಉಳಿದಿರುವಂತಿವೆ. (ಮುಂದೆ ನೋಡಿ). ಹಾಗೆ ನೋಡಿದರೆ, ಈಗಿನ ಚಾಮುಂಡರಾಯ ಬಸದಿಯ ಕರ್ತೃತ್ವವನ್ನು ಜಿನದೇವಣನಿಗೆ ಆರೋಪಿಸದ, ಜಿನದೇವಣನು "ಕಟ್ಟಿಸಿದ ಜಿನಗೃಹ ಯಾವುದು ಎಂಬುದು ತಿಳಿಯದು" ಎಂಬ ಬಾ. ರ. ಗೋಪಾಲ್ ಅವರ ಮಾತು[10] ಹೆಚ್ಚು ಮಾನ್ಯವಾದುದು. ಇಲ್ಲಿ ನಮ್ಮ ದೃಷ್ಟಿಯಲ್ಲಿ ಮುಖ್ಯವಾದುದು, "ಬೆಳ್ಗೊಳ"ವು ಈಗಿನ ಚಿಕ್ಕಬೆಟ್ಟವನ್ನಂತೂ ಹೇಳುವುದಿಲ್ಲ ಎಂಬುದು.

---

9 ಪೂರ್ವೋಕ್ತ. ಪು. 26–"It was no doubt built in the 10th Century probable by the son of Chavundaraya"

10 Ep. Carn. II. Introd. I (iv)

ಈಗಿನ "ಹಳೆಯ ಬೆಳ್ಗೊಳ" ಊರು

ಯಾವ ವಿದ್ವಾಂಸರೂ ಇಲ್ಲಿಯವರೆಗೆ ಈ ಊರಿನ ಕಡೆ ಗಂಭೀರ ಗಮನವನ್ನು ಹರಿಸಿಲ್ಲ ಮತ್ತು ಈ ಹಿಂದೆ ಅಲ್ಲಿಯ ಬಸದಿ ಕೊಳ, ವಿಗ್ರಹಗಳ ಚಿತ್ರಗಳನ್ನು ಪ್ರಕಟಿಸಿಲ್ಲ.

ಹಳೆಯ ಬೆಳ್ಗೊಳವು ಶ್ರವಣಬೆಳ್ಗೊಳದ ಉತ್ತರಕ್ಕೆ ಮೂರು ಮೈಲಿ ದೂರದಲ್ಲಿರುವ ಸುಮಾರು ನೂರಿಪ್ಪತ್ತು ಮನೆಗಳಿರುವ, ಇಕ್ಕಟ್ಟಾದ ಬೀದಿಗಳಿರುವ ಚಿಕ್ಕ ಹಳ್ಳಿ. (ಚಿತ್ರ 1) ಅಲ್ಲಿರುವುದೆಲ್ಲ ಬಹುಮಟ್ಟಿಗೆ ಒಕ್ಕಲಿಗರ ಮತ್ತು ಇತರ ಕೆಳ



ಚಿತ್ರ 1. ಹಳೆಯ ಬೆಳ್ಗೊಳದ ಬೀದಿ

ಜಾತಿಗಳವರ ಮನೆಗಳು. ಅಲ್ಲಿ ಎರಡೋ ಮೂರೋ ಬ್ರಾಹ್ಮಣರ ಮನೆಗಳಿವೆ. ಯಾದರೂ ಒಂದೂ ಜೈನ ಸಂಸಾರ ಅಲ್ಲಿಲ್ಲ. ಅಲ್ಲಿದ್ದ ಮೂವತ್ತು ನಲವತ್ತು ಮರಾಠಿ ಕುಟುಂಬಗಳು ("ಆರ್ಯೇರು") ಕೆಲವು ವರ್ಷಗಳ ಹಿಂದೆ ಬೇರೆಡೆಗೆ ವಲಸೆ ಹೋಗಿವೆ.[11] ಊರಿನ ಮಧ್ಯದಲ್ಲಿ ಒಂದು ಆಳವಾದ ದೊಡ್ಡ ಕೊಳವಿದೆ.

---

11 ಗೊಮ್ಮಟೇಶ್ವರನ ವಿಗ್ರಹದ ಪಾದ ಪೀಠದ ಬಳಿ "ಶ್ರೀ ಚಾವುಂಡ ರಾಜೆಂ ಕರವಿಯಲೆಂ" ಎಂಬ ಹತ್ತನೆಯ ಶತಮಾನದ ಮರಾಠಿ ಶಾಸನವಿದೆ (ಇದು ಮರಾಠಿ ಭಾಷೆಯಲ್ಲೇ


(ಚಿತ್ರ 2.3) ಈಗಿನ ಊರಿನ ಅಗತ್ಯಗಳನ್ನು ನೋಡಿದರೆ ಆ ಊರಿಗೆ ಅದು ದೊಡ್ಡದೆಂದೇ ಹೇಳಬೇಕು. ಜನ ಈಗಲೂ ಅದನ್ನು 'ಕೊಳ'ವೆಂದೇ ಕರೆಯುತ್ತಾರೆ; ಊರಿಗೆ ಹೆಸರು ಬಂದಿರುವುದು ಈ ಕೊಳದಿಂದಲೇ ಎಂಬಲ್ಲಿ ಅನುಮಾನವಿಲ್ಲ. ಆ ಕೊಳ ಈಗಿರುವಂತೆಯೇ ಸಾವಿರ ವರ್ಷಗಳ ಹಿಂದೆ ಇತ್ತು ಎಂದು ಹೇಳಲು ಸಾಧ್ಯ



ಚಿತ್ರ 2. ಹಳೆಯ ಬೆಳ್ಗೊಳದ "ಬಿಳಿಯ ಕೊಳ"
(ಊರಿಗೆ ಆ ಹೆಸರು ಬರಲು ಈ ಕೊಳ ಕಾರಣ)

ವಿಲ್ಲವಾದರೂ, ಆಗಾಗ್ಗೆ ಅದು ಜೀರ್ಣೋದ್ಧಾರಗೊಂಡಿರುವ ಸಾಧ್ಯತೆಗಳಿವೆಯಾದರೂ, ಪ್ರಾಚೀನ ಕಾಲದ ಶಾಸನಗಳ 'ಬೆಳ್ಗೊಳ'ವು ಇದೇ ಹಳೆಯ ಬೆಳ್ಗೊಳವೇ ಆಗಿದೆಯೆಂಬುದನ್ನು ಸಂಶಯಾತೀತವಾಗಿ ತೋರಿಸಲು ಸಾಧ್ಯವಿರುವುದರಿಂದ

ಮೊದಲ ಲಿಖಿತ ದಾಖಲೆ). ಚಾವುಂಡರಾಯ ಗೊಮ್ಮಟನನ್ನು ಕೆತ್ತಿಸಿದಾಗ ಕೆಲಸಗಾರರಾಗಿ ಮರಾಠಿ ಮಾತನಾಡುವ ಜನ ಬಂದಿದ್ದು ಅವರಿಗಾಗಿಯೋ ಅಥವಾ ಶ್ರವಣಬೆಳ್ಗೊಳದ ಪರಿಸರದಲ್ಲಿ ಮರಾಠಿ ಮಾತನಾಡುವ ಜನರ ಚಿಕ್ಕಚಿಕ್ಕ ವಸತಿಗಳಿದ್ದು ಅವರಿಗಾಗಿಯೋ ಚಾವುಂಡರಾಯ ತಾನು ಗೊಮ್ಮಟ ವಿಗ್ರಹವನ್ನು ಕೆತ್ತಿಸಿದ ವಿಷಯವನ್ನು ಮರಾಠಿಯಲ್ಲೂ ಹಾಕಿಸಿರಬೇಕು. ಆ ಊಹೆಯೇನೇ ಇರಲಿ ಶ್ರವಣಬೆಳ್ಗೊಳದ ಪಕ್ಕದಲ್ಲಿಯೇ ಮರಾಠಿ ಮಾತನಾಡುವ ಜನರಿದ್ದುದಕ್ಕೂ ಈ ಶಾಸನಕ್ಕೂ ಏನಾದರೂ ಸಂಬಂಧವಿರುವ ಸಾಧ್ಯತೆಯಿದೆ.




ಚಿತ್ರ 3. ಹಳೆಯ ಬೆಳ್ಗೊಳದ 'ಕೊಳ' (ಇನ್ನೊಂದು ದೃಶ್ಯ)



ಚಿತ್ರ 4. ಹಳೆಯ ಬೆಳ್ಗೊಳದ ಕೊಳದ ದಡದ ಮೇಲಿನ ಜೈನ ಶಿಲ್ಪಗಳು

(ಮುಂದೆ ನೋಡಿ), ಈ ಕೊಳ ಅಥವಾ ಇದಕ್ಕೆ ಮೂಲವಾಗಿದ್ದ ಕೊಳವೇ ಆ ಊರಿಗೆ ಆ ಹೆಸರನ್ನು ತಂದುಕೊಟ್ಟಿತೆಂಬಲ್ಲಿ ಅನುಮಾನಗಳಿಲ್ಲ. ಆ ಕೊಳದ ದಡದಲ್ಲಿ ಪಾರ್ಶ್ವನಾಥ, ಯಕ್ಷಯಕ್ಷಿಯರ, ಚಾಮರಧಾರಿ ಮತ್ತು ಇತರ ಜೈನ ವಿಗ್ರಹಗಳಲ್ಲದೆ (ಚಿತ್ರ 4), ಇನ್ನೊಂದು ತುದಿಯಲ್ಲಿ ಜೈನ ವಿಗ್ರಹವೊಂದರ ತಲೆಯೂ ಇದೆ[12] (ಚಿತ್ರ 5). ಕೊಳದ ಪಕ್ಕದಲ್ಲಿರುವ ಶಿವದೇವಾಲಯವು (ಚಿತ್ರ 6) ತೀರ ಈಚಿನದೆಂದು ತೋರುತ್ತದೆ.



ಚಿತ್ರ 5. ಹಳೆಯ ಬೆಳ್ಗೊಳದ ಕೊಳದ ದಡದ ಮೇಲಿನ ಜೈನ ವಿಗ್ರಹದ ತಲೆ

ಹಳೆಯ ಬೆಳ್ಗೊಳದ ಬಸದಿ- ಚಾವುಂಡರಾಯನ ಮಗ ಕಟ್ಟಿಸಿದ್ದು

ಊರಿನ ಹೊರಗೆ, ಊರಿಗೆ ಅಂಟಿಕೊಂಡಂತೆ ಗಂಗರ ಕಾಲದ ಎಲ್ಲ ವಾಸ್ತು ಲಕ್ಷಣಗಳನ್ನೊಳಗೊಂಡ ಸುಂದರ ಬಸದಿಯು ಹೊದೆಗಳ ಮಧ್ಯೆ ಹುದುಗಿದೆ. (ಚಿತ್ರ 7; 8; 9; 9ಎ) ಶ್ರವಣಬೆಳಗೊಳ ಊರಿನಲ್ಲಾಗಲಿ ಅಥವಾ ಸುತ್ತಮುತ್ತಣ ಹಳ್ಳಿಗಳಲ್ಲಾಗಲಿ ನೆಲದ ಮೇಲಿನ ಕಟ್ಟಡಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದ ಇದನ್ನು ವಾಸ್ತುಶೈಲಿಯಲ್ಲಿ ಚಾಮುಂಡರಾಯನ ಬಸದಿಗೆ ಹೋಲಿಸಬಹುದು.

---


12 ಈ ಎಲ್ಲ ವಿಗ್ರಹಗಳು ಸ್ಪಷ್ಟವಾಗಿ ಹೊಯ್ಸಳ ಪೂರ್ವಯುಗದವೆಂದೂ ಬಹುಶಃ ಗಂಗರ ಕಾಲದವೆಂದೂ ಚಿತ್ರಗಳನ್ನು ನೋಡಿದ ಡಾ. ರಘುನಾಥ ಭಟ್ ಅವರು ಸಮರ್ಥಿಸುತ್ತಾರೆ.



ಚಿತ್ರ 6. 'ಕೊಳ'ದ ದಡದ ಈಚಿನ ಶಿವ ದೇವಾಲಯ



ಚಿತ್ರ 7. ಚಾವುಂಡರಾಯನ ಮಗ ಜಿನದೇವಣನ ಬಸದಿ : ಹಳೆಯ ಬೆಳ್ಗೊಳ



ಚಿತ್ರ 8. ಅದೇ ಬಸದಿಯ ಇನ್ನೊಂದು ದೃಶ್ಯ



ಚಿತ್ರ 9. ಅದೇ ಬಸದಿಯ ಇನ್ನೊಂದು ದೃಶ್ಯ



ಚಿತ್ರ 9. ಬಿ : ಅದೇ ಬಸದಿಯ ಇನ್ನೊಂದು ದೃಶ್ಯ

ಬಸದಿಯ ಹೊರಭಾಗದಲ್ಲಿರುವ ಗೋಡೆಗಂಬಗಳು (pilasters), ಮೇಲಿನ ಗೂಡುಗಳು, ಮುಖ ಮಂಟಪಗಳಲ್ಲಿ ಎರಡಕ್ಕೂ ಇರುವ ಹೋಲಿಕೆ ಬಹಳ ಹತ್ತಿರದ್ದು. ಬಸದಿಯ ಪಕ್ಕದಲ್ಲೇ ಇರುವ ಕ್ರಿ. ಶ. 1094ರ ಶಾಸನವು (E. C. II No. 568) ಆ ಬಸದಿಗೆ ಬಿಟ್ಟುಕೊಟ್ಟ ದತ್ತಿಗಳನ್ನು ಹೇಳುತ್ತದೆ. ಅರಸನು ವಿಕ್ರಮಾದಿತ್ಯನ ಕಾಲದಲ್ಲಿ ವಿಜಿಗಂಗ ಹೊಯ್ಸಳನು ಗಂಗಮಂಡಳವನ್ನು ಆಳುತ್ತಿರುವಾಗ ದತ್ತಿಯ ವಿವರಗಳು ಹೀಗಿವೆ :

> "ಬೆಳ್ಗೊಳದ ಕಬ್ಬಪ್ಪು ತೀರ್ಥದ ಬಸದಿಗಳ ಜೀರ್ಣೋದ್ಧಾರಕ್ಕಂ ದೇವ
> ಪೂಜೆಗಮಾಹಾರದಾನಕ್ಕಂ ಪಾತ್ರದಾನಕ್ಕಂ ರಾಚನ ಹಳ್ಳಿಯುಮಂ
> ಬೆಳ್ಗೊಳವನೆರಡುಮಂ ಧಾರಾಪೂರ್ವಕಂ ಮಾಡಿ ಬಿಟ್ಟ ದತ್ತಿ"

ಈ ಭಾಗವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು. ರಾಚನಹಳ್ಳಿ ಈಗಿನ ಶ್ರವಣಬೆಳಗೊಳಕ್ಕೆ ವಾಯುವ್ಯದಲ್ಲಿ ಮುಕ್ಕಾಲು ಮೈಲಿ ದೂರದ ರಾಚೇನಹಳ್ಳಿ ;

“ಕಬ್ಬಪ್ಪು ತೀರ್ಥ” ಈಗಿನ ಚಿಕ್ಕಬೆಟ್ಟ. ಇನ್ನು ‘‘ಬೆಳ್ಗೊಳ’’ವು ‘‘ಬೆಳ್ಗೊಳ ಪನ್ನೆರಡು’’ ಜಿಲ್ಲೆಯ ಕೇಂದ್ರ ಸ್ಥಾನ. ಈ ಶಾಸನದ ಪ್ರಕಾರ ಆ ಸಮೀಪದ ಪ್ರದೇಶಗಳಲ್ಲಿ ಬಸದಿಗಳಿದ್ದುದು ‘‘ಬೆಳ್ಗೊಳ”ದಲ್ಲಿ ಮತ್ತು ‘‘ಕಬ್ಬಪ್ಪು ತೀರ್ಥ’’ದಲ್ಲಿ. ನಾವು ಈಗಾಗಲೇ ನೋಡಿರುವಂತೆ ಶ್ರವಣಬೆಳ್ಗೊಳದಲ್ಲಿ ಆ ಕಾಲದಲ್ಲಿ ನಿರ್ಮಾಣವಾದ ಯಾವುದೇ ಕಟ್ಟಡವೂ ಇಲ್ಲ, ಮತ್ತು ಅದನ್ನು ಮೇಲಿನ ಶಾಸನವು ದೃಢಪಡಿಸುತ್ತದೆ. ಹಳೆಯ ಬೆಳ್ಗೊಳ ಶಾಸನದ ಕಾಲ ಕ್ರಿ. ಶ. 1094. ಬಸದಿಯ ನಿರ್ಮಾಣವನ್ನು ಹೇಳದೆ ಬಸದಿಯ ಜೀರ್ಣೋದ್ಧಾರದ ವಿಷಯವನ್ನು ಹೇಳುವುದರಿಂದ ಆ ಬಸದಿ ಕ್ರಿ. ಶ. 1094 ಕ್ಕಿಂತ ಹಿಂದಿನದು ಎಂಬುದು ಸ್ಪಷ್ಟವಾಗಿದೆ. ‘ಬೆಳ್ಗೊಳ’ದ ಬಸದಿಗಳ ಜೀರ್ಣೋದ್ಧಾರದ ವಿಷಯ ಹೇಳುವ ಶಾಸನ ಇರಬೇಕಾದುದು ಅದೇ ಊರಲ್ಲಿ ತಾನೆ ? ಶಾಸನದಲ್ಲಿ ಉಲ್ಲೇಖವಾಗಿರುವ ‘ಬೆಳ್ಗೊಳವು’ ಈಗಿನ ‘ಹಳೆಯ ಬೆಳ್ಗೊಳ’ ವೇ ಎಂಬಲ್ಲಿ ಅನುಮಾನವಿಲ್ಲ.

ಶಾಸನಗಳ ಬೆಳ್ಗೊಳವು ಈಗಿನ ಹಳೆಯ ಬೆಳ್ಗೊಳ : ಹೆಚ್ಚಿನ ಆಧಾರಗಳು

ಇದಕ್ಕೆ ಇನ್ನೂ ಹಲವು ಖಚಿತ ಆಧಾರಗಳನ್ನು ಕೊಡಬಹುದು. ಚಿಕ್ಕ ಬೆಟ್ಟದ ಮೇಲಿನ ಕ್ರಿ. ಶ. 1118ರ ಶಾಸನವೊಂದು (ಸಂ. 82) ಪರಮ ಎಂಬ ಊರಿನ ಗಡಿಯನ್ನು ಹೀಗೆ ಹೇಳುತ್ತದೆ.– ‘‘ಪಡುವಲು ಚಿಕ್ಕರ್ಸೊಳಗೆಱೆಯ ಮಾವಿನಕೆರೆಯ ಗದ್ದೆ ಪೊಳಗಾಗಿ ಬೆಳುಗೊಳಕ್ಕೆ ಹೋದ ಬಟ್ಟೆಗಡಿ”. ಈಗಿನ ಚಿಕ್ಕದ ಕೆರೆಯಿಂದ ಹಳೆಯ ಬೆಳಗೊಳಕ್ಕೆ ಹೋಗುವ ದಾರಿಯೇ ಪರಮ ಊರಿನ ಪಶ್ಚಿಮ ಗಡಿಯೆಂಬುದನ್ನು ಚನ್ನರಾಯಪಟ್ಟಣ ತಾಲೂಕಿನ ವಿಸ್ತೃತ ಭೂಪಟ ಸ್ಪಷ್ಟಪಡಿಸುತ್ತದೆ. ಚಿಕ್ಕ ಊರಿನ ಕ್ರಿ. ಶ. 1173ರ ಶಾಸನವೊಂದು (ಸಂ.565) ಆ ಊರಿನ ಗಡಿಯನ್ನು ಹೀಗೆ ಹೇಳುತ್ತದೆ: ‘‘ಚಿಕ್ಕನ ಮೂಡಣ ಸೀಮೆ ಬೆಳ್ಗೊಳದಿಂ ಜಿನನಾಥಪುರಕ್ಕೆ ಬಂದ ಹೆಬ್ಬಟ್ಟೆ’’. ಹಳೆಯ ಬೆಳ್ಗೊಳದಿಂದ ಜಿನನಾಥಪುರಕ್ಕೆ ಬರುವ ಮಾರ್ಗವೇ ಚಿಕ್ಕ ಊರಿನ ಪೂರ್ವದ ಗಡಿ. ಎಂದರೆ, ಹನ್ನೊಂದು–ಹನ್ನೆರಡನೇ ಶತಮಾನಗಳಲ್ಲಿ ಮತ್ತು ಅದಕ್ಕೆ ಮುಂಚೆ ಬೆಳ್ಗೊಳ ಎಂದರೆ ಹಳೆಯ ಬೆಳ್ಗೊಳವೇ ಹೊರತು ಶ್ರವಣ ಬೆಳ್ಗೊಳ ಅಲ್ಲ.

‘‘ಬೆಳ್ಗೊಳ’’ದಲ್ಲಿ ಚಾವುಂಡರಾಯನ ಮಗ ಜಿನದೇವಣ ಕಟ್ಟಿಸಿದ ಬಸದಿ ಬಹುಶಃ ಈಗಿನ ಹಳೆಯ ಬೆಳ್ಗೊಳ ಬಸದಿಯೇ ಇರಬೇಕು. ಬಸದಿಯ ಪ್ರಾಚೀನತೆ, ವಾಸ್ತುಲಕ್ಷಣಗಳು ಅಂತಹ ಊಹೆಯೊಂದನ್ನು ಪ್ರಚೋದಿಸುತ್ತವೆ.

ಹಳೆಯ ಬೆಳ್ಗೊಳ ಮತ್ತು ಶ್ರವಣ ಬೆಳ್ಗೊಳ : ಗ್ರಾಮ ವಸ್ತು

ಈ ಎರಡು ಊರುಗಳ ಗ್ರಾಮವಾಸ್ತು (town architcture) ಅದರಲ್ಲೂ ಶ್ರವಣ ಬೆಳ್ಗೊಳದ ಗ್ರಾಮ ವಾಸ್ತು ಗಮನಿಸಬೇಕಾದ್ದು. ಹಳೆಯ ಬೆಳ್ಗೊಳದ ತೀರ

ಇಕ್ಕಟ್ಟಾದ ಬೀದಿಗಳು, ಬೀದಿಗಳ ಅಕ್ಕಪಕ್ಕದಲ್ಲಿ ಚರಂಡಿಗಳು ಇರುವ ಬದಲು ಬೀದಿಯ ಮಧ್ಯದಲ್ಲಿ ಚರಂಡಿ ಮಾಡಿರುವುದು ಇವೆಲ್ಲ ವಿಶೇಷತೆಯನ್ನೇನೂ ಪ್ರದರ್ಶಿಸದಿದ್ದರೂ, ಆ ಹಳ್ಳಿಗೆ ಹೋಗುತ್ತಿದ್ದಂತೆ ಅದೊಂದು ಬಹು ಪ್ರಾಚೀನವೆನ್ನುವ ಭಾವನೆ ಮನಸ್ಸಿಗೆ ಬರುತ್ತದೆ. (ಮನಸ್ಸಿನ ನಿಶ್ಚಯವೂ ಇದಕ್ಕೆ ಕಾರಣವಿರಬಹುದು.) ಶ್ರವಣ ಬೆಳ್ಗೊಳ ಬಹು ಎಚ್ಚರಿಕೆಯಿಂದ ನಿಯೋಜಿತ ರೀತಿಯಲ್ಲಿ ಕಟ್ಟಿದ ಊರು. ಅಲ್ಲಿನ ನೇರ ರಸ್ತೆಗಳು, ಅಗಲವಾದ ಬೀದಿಗಳು ಅದು ತೀರ ಪ್ರಾಚೀನವಾದ ಊರಲ್ಲವೆಂಬುದನ್ನು ದೃಢಪಡಿಸುತ್ತವೆ. ಬೆಟ್ಟದ ಬುಡದಲ್ಲಿರುವ ಭಂಡಾರ ಬಸದಿಯಿಂದ (ಕ್ರಿ. ಶ. 1159) ಉತ್ತರಕ್ಕೆ ಅಕ್ಕನ ಬಸದಿವರೆಗೆ (ಕ್ರಿ. ಶ. 1189) ಇರುವ ಬೀದಿಯ ಅಕ್ಕಪಕ್ಕದಲ್ಲಿ ಊರು ಬೆಳೆದಿದೆ. ಇವೆರಡು ಬಸದಿಗಳು "ಹನ್ನೆರಡನೆಯ ಶತಮಾನದ ಶ್ರವಣ ಬೆಳ್ಗೊಳ ಊರಿನ ಗಡಿಗಳು".[13] ಯಾವುದೇ ಊರು ಅದು ಕ್ರಮೇಣ ಸಹಜವಾಗಿ ತನ್ನಷ್ಟಕ್ಕೆ ತಾನು ಬೆಳೆದು ಬಂದಿದ್ದರೆ ಅಲ್ಲಿ ಅಂಥ ವ್ಯವಸ್ಥೆ ಕಾಣಿಸದು. ಆದರೆ ಹಳೆಯ ಊರನ್ನು ಬಿಟ್ಟು ಬೇರೊಂದೆಡೆಗೆ ಹೋಗಿ ನೆಲಸುವವರು ಹೆಚ್ಚು ವ್ಯವಸ್ಥಿತವಾಗಿ ಮನೆ ಕಟ್ಟಿಕೊಳ್ಳಲು ಬಯಸುತ್ತಾರೆ. ಹಳೆಯ ಬೆಳ್ಗೊಳದ ಜೈನರು ಶ್ರವಣಬೆಳ್ಗೊಳಕ್ಕೆ ಬಂದು ಮನೆ ಕಟ್ಟಿಕೊಂಡರು, ಹೊಸ ಊರನ್ನು ಸ್ಥಾಪಿಸಿದರು ಎನ್ನುವ ಸಂಗತಿಯನ್ನು ಶ್ರವಣಬೆಳ್ಗೊಳದ ಗ್ರಾಮವಾಸ್ತು ದೃಢಪಡಿಸುತ್ತದೆ.

ಜಾನಪದ ಶಾಸ್ತ್ರದ ಬೆಂಬಲ

ಶ್ರವಣಬೆಳ್ಗೊಳದ ಹಿರಿಯರು ಹಳೆಯ ಬೆಳ್ಗೊಳವೇ ಮೂಲ ಬೆಳ್ಗೊಳವೆಂಬ ನಂಬಿಕೆಯನ್ನು ಇಂದಿಗೂ ತಮ್ಮ ಮಾತುಕತೆಗಳಲ್ಲಿ ಉಳಿಸಿಕೊಂಡು ಬಂದಿದ್ದಾರೆ. ಅಲ್ಲಿ ಹಾಳಾದ ಬಸದಿಗಳ ಕಂಬ, ತೊಲೆಗಳನ್ನು ತಂದು ಶ್ರವಣಬೆಳ್ಗೊಳದ ಬಸದಿಗಳನ್ನು ಕಟ್ಟಿದರು ಎಂಬ ಮಾತೂ ಕೇಳಿಬರುತ್ತದೆ.[14] ಇದು ಪೂರ್ತಿ ನಿಜವಲ್ಲದಿದ್ದರೂ ಅಲ್ಲಿನ ಕೆಲವಾದರೂ ವಿಗ್ರಹಗಳನ್ನು ತಂದು ಶ್ರವಣಬೆಳ್ಗೊಳದಲ್ಲಿ ಸ್ಥಾಪಿಸಿರಬಹುದು (ಉದಾ : ಚಿಕ್ಕ ಬೆಟ್ಟದ ಮೇಲಿನ ಚಾಮುಂಡರಾಯ ಬಸ್ತಿಯ ತೀರ್ಥಂಕರ ವಿಗ್ರಹ). ಹಳೇ ಬೆಳ್ಗೊಳ ಊರಿನ ಒಬ್ಬ ಅಜ್ಜಿ, ಒಬ್ಬ ಮಧ್ಯವಯಸ್ಸಿನ ಅವಿದ್ಯಾವಂತ, ಅದೇ ಊರಿನ ವಯಸ್ಸಾದ ಸಾಲುಭೋಗಿಗರು ತಮ್ಮ ಊರಿನಲ್ಲಿ ಹಿಂದೆ ಎಪ್ಪತ್ತೇಳು ಬಸದಿಗಳು ಇದ್ದುವೆಂದೂ, ಆ ಕಾಲದಲ್ಲಿ ಒಂದು ರಾತ್ರಿ ಎಂಬುದು ಒಂದು ವರ್ಷಕ್ಕೆ ಸಮನಾಗಿದ್ದು 'ಒಂದು ರಾತ್ರಿ' (= ಒಂದು ವರ್ಷ) ಒಟ್ಟು ಎಪ್ಪತ್ತಾರು ಬಸದಿಗಳನ್ನು ಕಿತ್ತು ತೆಗೆದುಕೊಂಡು ಹೋದರೆಂದೂ,

13 ಸೆಟ್ಟರ್ ಎಸ್. ಅವರ ಪೂರ್ವೋಕ್ತ ಗ್ರಂಥ. ಪು. 59.

14 ಶ್ರವಣಬೆಳ್ಗೊಳದ ಭಂಡಾರ ಬಸದಿ ಅರ್ಚಕ ಪಂಡಿತ ಎಸ್. ಡಿ. ನಾಗೇಂದ್ರ ಶಾಸ್ತ್ರಿಗಳಿಂದ ತಿಳಿದು ಬಂದುದು.

ಬೆಳಗಾದ್ದರಿಂದ ಒಂದು ಬಸದಿ ಮಾತ್ರ ಹಾಗೆ ಉಳಿಯಿತೆಂದೂ, ಹಾಗೆ ತೆಗೆದುಕೊಂಡು ಹೋದ ಬಸದಿಗಳ ಅವಶೇಷಗಳನ್ನು ಬಳಸಿ ಶ್ರವಣಬೆಳ್ಗೊಳದಲ್ಲಿ ಬಸದಿಗಳನ್ನು ಕಟ್ಟಿದರೆಂದೂ ಕತೆಗಳನ್ನು ಹೇಳುತ್ತಾರೆ. ಶ್ರವಣಬೆಳ್ಗೊಳದಲ್ಲಿ ಮಾರಮ್ಮನ ಗುಡಿಯೊಂದಿದೆ ; ಅದು ವಾಸ್ತವವಾಗಿ ಒಂದು ಮನೆಯ ಗೋಡೆ ಕೆಳಗೆ ಇರುವ ಚಿಕ್ಕ ಗೂಡು. ಅದರಲ್ಲಿ ಎರಡು ಕಲ್ಗುಂಡುಗಳಿವೆ. ಜಿನೇಶ್ವರದ ಏಳನೆಯ ದಿನ ಅದಕ್ಕೆ ಪ್ರಾಣಿಬಲಿಯಿಲ್ಲದೆ ಜಾತ್ರೆ ನಡೆಯುತ್ತದೆ. ಒಂದು ಐತಿಹ್ಯದ ಪ್ರಕಾರ ಮೊದಲು ಆ ಗುಡಿಯು ಊರಿನಿಂದ ಮೂರು ಮೈಲಿ ದೂರದಲ್ಲಿನ ಹಳೆಯ ಬೆಳ್ಗೊಳದಲ್ಲಿತ್ತು. ಆಗ ಮಾರಮ್ಮನಿಗೆ ನಿತ್ಯಬಲಿ ದೊರಕುತ್ತಿತ್ತು. ಒಂದು ದಿನ ಬಲಿಯ ಹಸು ತಪ್ಪಿಸಿಕೊಂಡು ಜೈನ ಶಾಸ್ತ್ರಾಧ್ಯಯನ ನಡೆಯುತ್ತಿದ್ದ ಮನೆಗೆ ನುಗ್ಗಿತು. ಅಲ್ಲಿನ ಜೈನರು ಅದನ್ನು ಹೊರಕ್ಕೆ ಬಿಡಲಿಲ್ಲ : ಅದರ ಬಲಿಯಾಗುವುದು ಅವರಿಗೆ ಇಷ್ಟವಿರಲಿಲ್ಲ. ಜನ ಬಲವಂತದಿಂದ ಬಾಗಿಲು ಒಡೆದು ನೋಡಿದಾಗ ಹಸು ಮಾಯವಾಗಿತ್ತು. ಬಳಿಕ ಮಾರಮ್ಮ ಅಶರೀರವಾಣಿಯ ಮೂಲಕ ಈಗಿನ ಗುಡಿ ಕಟ್ಟಿಸಲು ಹೇಳಿದಳು. ಅಂದಿನಿಂದ ಪ್ರಾಣಿಬಲಿ ನಿಂತು ಸಸ್ಯಾಹಾರದ ನೈವೇದ್ಯ ಪ್ರಾರಂಭವಾಯಿತು. ಈ ಕತೆ ಹಳೆಯ ಬೆಳ್ಗೊಳವು ಜೈನ ಕೇಂದ್ರವಾಗಿದ್ದಿತೆಂಬುದನ್ನು ಸೂಚಿಸುವುದು.[15] ಈಗಿನ ಹಳೆಯ ಬೆಳ್ಗೊಳದಲ್ಲಿನ ಜನರು ಬಹುಮಟ್ಟಿಗೆ ಮಾಂಸಾಹಾರಿಗಳು. ಆ ಊರಿನ ದೈವಗಳಿಗೆ ಪ್ರಾಣಿಬಲಿ ನಡೆಯುವುದಾದರೂ ಅದು ಊರಿನ ಹೊರಗೇ ನಡೆಯಬೇಕು. ಇದೂ ಕೂಡ ಒಂದು ಕಾಲಕ್ಕೆ ಆ ಊರಲ್ಲಿ ಜೈನರಿದ್ದರೆಂದೂ, ಅವರಿಗಾಗಿ ಆ ಕಾಲಕ್ಕೆ ತೋರಿದ್ದ ರಿಯಾಯ್ತಿ ಈಗಲೂ ಉಳಿದುಕೊಂಡು ಬಂದಿದೆಯೆಂದೂ ಹೇಳಲು ಸಹಾಯಕವಾಗುತ್ತದೆ. ಗೊಮ್ಮಟ ವಿಗ್ರಹಕ್ಕೆ ಗುಳ್ಳಕಾಯಜ್ಜಿಯು ಅಭಿಷೇಕಕ್ಕೆ ಎರೆದ ಹಾಲು ಹರಿದು ಬಂದು ಮಡುಗಟ್ಟಿದ್ದೇ ಈಗಿನ ಕಲ್ಯಾಣಿ ಎಂಬ ಕತೆಯೂ ಉಂಟು.[16] ಈಗಿನ ಶ್ರವಣ ಬೆಳಗೊಳದ ಕಲ್ಯಾಣಿಯು ಚಾವುಂಡರಾಯನಿಗಿಂತ ಹಿಂದಿನದು ಅಲ್ಲ ಎಂಬ ಇಲ್ಲಿನ ಸೂಚನೆ ಗಮನಾರ್ಹ. (ಶಾಸನಗಳ ಪ್ರಕಾರ ಅದನ್ನು ಕಟ್ಟಿಸಿದ್ದು ಮೈಸೂರು ದೊರೆ ಚಿಕ್ಕದೇವರಾಜ ಒಡೆಯರ್).

'ಬೆಳ್ಗೊಳ ಅದ್ರಿ', 'ಬೆಳ್ಗೊಳ ತೀರ್ಥ' ಯಾವುವು ?

'ವೆಳ್ಗೊಳ ಅದ್ರಿ' ('ಬೆಳ್ಗೊಳ ಅದ್ರಿ') ಎಂದರೆ ಚಿಕ್ಕಬೆಟ್ಟ : ಈ ಹೆಸರು ಏಳನೆಯ ಶತಮಾನದಷ್ಟು ಹಳೆಯದು (ಸಂ. 34). ಈಗಿನ ಶ್ರವಣಬೆಳ್ಗೊಳ

---

15 ನೋಡಿ–ಪದ್ಮಪ್ರಸಾದ್ ಎಸ್. ಪಿ. ಜೈನ ಜಾನಪದ ಸಾಹಿತ್ಯ (ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅರ್ಪಿಸಿದ ಪಿ.ಎಚ್.ಡಿ. ನಿಬಂಧ. 1979 ಅಪ್ರಕಟಿತ). ಪು. 226

16 ಅದೇ. ಪು. 217

ಊರು ಆಗ ಇರಲಿಲ್ಲವೆಂದಾದರೆ, ಆ ಹೆಸರು ಹೇಗೆ ಬಂತು ? ಇದಕ್ಕೆ ಕಾರಣಗಳನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಚಿಕ್ಕಬೆಟ್ಟದ ನಿಜವಾದ ಹೆಸರು "ಕಬ್ಬಪ್ಪು", ಈ ಹೆಸರೂ ಅಷ್ಟೇ ಪ್ರಾಚೀನ. ಕಬ್ಬಪ್ಪು ಬೆಟ್ಟಕ್ಕೆ "ವೆಳ್ಗೊಳ ಅದ್ರಿ" ಅಥವಾ ಬೆಳ್ಗೊಳದ ಬೆಟ್ಟ ಎಂಬ ಹೆಸರು ವಿವರಣಾತ್ಮಕ ಸ್ವರೂಪದ್ದು. ಏಳನೆಯ ಶತಮಾನ ಅಥವಾ ಅದಕ್ಕಿಂತ ಚಿಕ್ಕಬೆಟ್ಟಕ್ಕೆ ತೀರ ಸಮೀಪದ ಊರೆಂದರೆ ಹಳೆಯ ಬೆಳ್ಗೊಳವೇ ಆಗಿದ್ದುದರಿಂದ ಮತ್ತು ಚಿಕ್ಕಬೆಟ್ಟದಲ್ಲಿ ವಾಸವಾಗಿದ್ದ ಮುನಿಗಳು ಭಿಕ್ಷೆಗಾಗಿ ಹೋಗುತ್ತಿದ್ದ ಊರು ಹಳೆಯ ಬೆಳ್ಗೊಳವಾದ್ದರಿಂದ ಚಿಕ್ಕಬೆಟ್ಟಕ್ಕೆ ವೆಳ್ಗೊಳ ಅದ್ರಿ ಎಂಬ ಹೆಸರು ಪ್ರಾಪ್ತವಾಗಿರಬೇಕು. ಒಂದು ಗುಡ್ಡಕ್ಕೆ ಅದರದೇ ಒಂದು ಹೆಸರು, ಅದರ ಸಮೀಪದ ಊರಿನಿಂದಾಗಿ ಇನ್ನೊಂದು ಹೆಸರು ಹೀಗೆ ಎರಡು ಹೆಸರುಗಳಿರುವುದು ಅಸಹಜವೇನೂ ಅಲ್ಲ. ಚನ್ನಗಿರಿ ತಾಲ್ಲೂಕಿನ "ಬಿಡು ಮರಡಿ ರಂಗಪ್ಪನ ಗುಡ್ಡ" ಎಂಬ ಹೆಸರಿನ ಜೊತೆ (ಬಹುಶಃ "ಮರಡಿ" ಅಥವಾ "ಮೊರಡಿಗುಡ್ಡ" ಎಂಬುದು ಮೂಲ ಹೆಸರು) ಅದರ ಪಕ್ಕದ ದೇವರಹಳ್ಳಿಯಿಂದಾಗಿ ದೇವರಹಳ್ಳಿ ಗುಡ್ಡ ಎಂಬ ಇನ್ನೊಂದು ಹೆಸರೂ ಇರುವುದು ಇಲ್ಲಿ ಉಲ್ಲೇಖಾರ್ಹ. ಚಿಕ್ಕಬೆಟ್ಟಕ್ಕೆ ಹಳೆಯಬೆಳ್ಗೊಳಕ್ಕಿಂತ ಇನ್ನೂ ಹತ್ತಿರ, ಸುಮಾರು ಒಂದು ಮೈಲಿ ದೂರದಲ್ಲಿ ನೈರುತ್ಯದಿಕ್ಕಿಗೆ ಕಬ್ಬಾಳು ಎನ್ನುವ ಗ್ರಾಮವಿದ್ದು ಅದರಲ್ಲಿ ಹಳೆಯ ಬೆಳ್ಗೊಳದಲ್ಲಿ ದೊರಕುವ ಶಾಸನಕ್ಕಿಂತ ಪ್ರಾಚೀನವಾದ, ಎಂದರೆ ಒಂಬತ್ತನೆಯ ಶತಮಾನದ ಶಾಸನ ದೊರಕಿದೆ (ಸಂ. 544). ಆ ಒಂದೇ ಕಾರಣದಿಂದಾಗಿ ಕಬ್ಬಾಳು ಗ್ರಾಮವು ಹಳೇ ಬೆಳ್ಗೊಳಕ್ಕಿಂತ ಪ್ರಾಚೀನವೆಂದು ಕರೆಯಿಸಿಕೊಳ್ಳುವುದಿಲ್ಲ. ಹಳೇ ಬೆಳ್ಗೊಳ ಬಹು ಹಿಂದಿನಿಂದ ಇದ್ದು ಅಲ್ಲಿ ಶಾಸನ ಹಾಕಿಸುವ ಅವಕಾಶ ಒದಗಿರಲಾರದು. ಅಥವಾ ಪ್ರಾಚೀನ ಶಾಸನ ನಾಶವಾಗಿರಬಹುದು. ಒಂದು ವೇಳೆ ಕಬ್ಬಾಳು ಗ್ರಾಮವು ಹಳೆ ಬೆಳ್ಗೊಳದಷ್ಟೇ ಪ್ರಾಚೀನವೆಂದಾದರೂ ಅದು ದೊಡ್ಡಬೆಟ್ಟದ ಹಿಂಭಾಗದಲ್ಲಿದ್ದು ಚಿಕ್ಕಬೆಟ್ಟಕ್ಕೆ ಮರೆಯಾಗಿ ಹೋಗಿದೆ. ಚಿಕ್ಕಬೆಟ್ಟದ ಮೇಲೆ ನಿಂತರೆ ಎದುರಿಗೆ ನೇರವಾಗಿ ಉತ್ತರಕ್ಕೆ ಹಳೆಯ ಬೆಳ್ಗೊಳ ಕಾಣಿಸುತ್ತದೆ ; ಮತ್ತು ಕ್ರಿಸ್ತ ಪೂರ್ವದಲ್ಲಿ ಉತ್ತರದಿಂದ ಭದ್ರಬಾಹುಮುನಿಗಳು ಬಂದಾಗ ಈಗಿನ ಹಳೆಯ ಬೆಳ್ಗೊಳ ಗ್ರಾಮವನ್ನು ಹಾದು ಚಿಕ್ಕಬೆಟ್ಟಕ್ಕೆ ಬಂದಿರುವ ಸಾಧ್ಯತೆಗಳಿವೆ. ಈ ಊಹೆಯ ಮಿತಿಗಳನ್ನು ನಾನು ಕಲ್ಪಿಸಿಕೊಳ್ಳಬಲ್ಲೆನಾದ್ದರಿಂದ ಅದನ್ನು ಹೆಚ್ಚಾಗಿ ವಿಸ್ತರಿಸಲು ಹೋಗದೆ "ವೆಳ್ಗೊಳ ಅದ್ರಿ" ಎಂಬ ಹೆಸರು ಕಬ್ಬಪ್ಪು ಬೆಟ್ಟದ ಮೂರು ಮೈಲಿ ದೂರದ ಹಳೇಬೆಳ್ಗೊಳದಿಂದ ಬಂದಿದೆಯೆಂಬ ನನ್ನ ವಾದವನ್ನು ಮಾತ್ರ ಮುಂದೆ ಮಾಡಲು ಬಯಸುತ್ತೇನೆ.

"ಕಾಬ್ಬಪ್ಪು ತೀರ್ಥ" (ಸಂ. 16) ಎಂಬುದು ಚಿಕ್ಕಬೆಟ್ಟ ಒಂದು ಪವಿತ್ರ ಜಾಗವಾಗಿದ್ದುದರ ಸೂಚಕ. ಚಿಕ್ಕಬೆಟ್ಟವನ್ನು "ಬೆಳ್ಗೊಳ ತೀರ್ಥ" ಎಂದು

ಕರೆದಿರುವುದೂ ಉಂಟು, ಮತ್ತು ಹಾಗೆ ಕರೆದಿರುವುದು ಸಹಜವಾಗಿದೆ ('ಕಬ್ಬಪ್ಪು' 'ವೆಳ್ಗೊಳ ಅದ್ರಿ' ಇವು ಸಮಾನಾರ್ಥಕಗಳೆಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು). ನೋಡಿ- "ಶಾಂತಲದೇವಿ...... ಶ್ರೀ ಬೆಳ್ಗೊಳದ ತೀರ್ಥದೊಳ್ ಸವತಿ ಗಂಧ ವಾರಣ ಜಿನಾಲಯಮುಮಂ ಮಾಡಿಸಿ" (ಸಂ. 162, ಕ್ರಿ.ಶ. 1123). ಬೆಳ್ಗೊಳ ತೀರ್ಥವನ್ನು "ಧವಳ ಸರಸತೀರ್ಥ"ವೆಂದೂ ಸಂಸ್ಕೃತೀಕರಿಸಲಾಗಿದೆ (ಸಂ. 77, ಕ್ರಿ. ಶ. 1129) "ಬೆಳ್ಗೊಳ ತೀರ್ಥ" ಎಂಬುದು ಕ್ರಮೇಣ ಚಿಕ್ಕಬೆಟ್ಟದ ಸುತ್ತ ಮುತ್ತಣ ಪ್ರದೇಶವನ್ನೂ ಒಳಗೊಂಡಿತು ; ಈಗಿನ ಶ್ರವಣಬೆಳ್ಗೊಳ ಊರನ್ನು "ಬೆಳ್ಗೊಳ ತೀರ್ಥ"ವೆಂದೂ ಕರೆದಿರುವುದನ್ನೂ ನೋಡಬೇಕು–"ಬೆಳ್ಗೊಳ ತೀರ್ಥ ದೊಳ್ ಚತುರ್ವಿಂಶತಿ ತೀರ್ಥ ಕೃನ್ನಿಳಯಮುಮಂ ಮಾಡಿಸಿದಂ" (ಸಂ. 466, ಕಿ.ಶ. 1159) ; ಶ್ರೀ ಬೆಳುಗುಳ ತೀರ್ಥದ ಗೊಮ್ಮಟದೇವರ ಸುತ್ತಾಲಯ" (ಸಂ. 337) "ಬೆಳ್ಗೊಳ ತೀರ್ಥವಾಸಿ ನಗರಂಗಳು" (ಸಂ. 455, 13ನೇ ಶತಮಾನ). ಬೆಳ್ಗೊಳ ಎಂಬ ಹೆಸರು ಮೂಲತಃ ಹಳೆಯ ಬೆಳ್ಗೊಳಕ್ಕೆ ಅನ್ವಯವಾಗುತ್ತಿದ್ದು, ಮುಂದೆ ಚಿಕ್ಕಬೆಟ್ಟಕ್ಕೆ ಅನ್ವಯವಾಗುತ್ತಬಂದು, ಹನ್ನೊಂದನೇ ಶತಮಾನದಲ್ಲಿ ಈಗಿನ ಶ್ರವಣಬೆಳ್ಗೊಳ ಊರು ಆರಂಭವಾದಾಗ ಅದಕ್ಕೂ ಅನ್ವಯವಾಗುತ್ತಾ ಬಂದು ಮೇಲಿನ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ.

ಹಳೆಯ ಊರಿನ ಜನ ಹೊಸ ಊರು ಮಾಡಿಕೊಂಡಾಗ

ಒಂದು ಊರಿನ ಜನ ತಮ್ಮ ಊರನ್ನು ಬಿಟ್ಟು ಬೇರೆ ಕಡೆ ಹೋಗಿ ಅಲ್ಲಿ ಬೀಡು ಮಾಡಿಕೊಂಡಾಗ ಅವರು ಹೊಸ ವಸತಿಗೆ ತಮ್ಮ ಹಳೆಯ ಊರಿನ ಹೆಸರನ್ನೇ ಇಡುವುದು ವಿಶ್ವಾದ್ಯಂತ ಕಂಡುಬರುವ ಪ್ರವೃತ್ತಿ. ಇಂಗ್ಲೆಂಡಿನ ಜನ ಅಮೆರಿಕದ ಸಂಯುಕ್ತ ಸಂಸ್ಥಾನ ಪ್ರದೇಶಕ್ಕೆ ಹೋಗಿ ಅಲ್ಲಿನ ಈಶಾನ್ಯ ದಿಕ್ಕಿನಲ್ಲಿ ನೆಲಸಿದಾಗ ಆ ಪ್ರದೇಶವನ್ನು ನವ ಇಂಗ್ಲೆಂಡ್ (New England) ಎಂದು ಕರೆದರು. ಅಮೆರಿಕದಲ್ಲಿಯೇ ಒಂದಕ್ಕಿಂತ ಹೆಚ್ಚು ಆಕ್ಸ್‌ಫರ್ಡ್, ಕೇಂಬ್ರಿಜ್, ಲಂಡನ್ ಎಂಬ ಹೆಸರಿನ ಊರುಗಳಿರಲೂ ಅದೇ ಕಾರಣ. ನಮ್ಮಲ್ಲಿ ಹೊಸ–ಹಳೆ–ಎಂದು ಆರಂಭವಾಗುವ ಊರಿನ ಹೆಸರುಗಳು ಜನರ ವಲಸೆಗಳನ್ನೂ ಸ್ಥಳಾಂತರಗಳನ್ನೂ ಹೇಳುತ್ತವೆ. ಕೆಸರೆ – ಹೊಸಕೆಸರೆ (ಹೊಸನಗರ ತಾಲ್ಲೂಕು) ; ಪಾಳ್ಯ – ಹಳೇಪಾಳ್ಯ (ಮಾಲೂರು ತಾಲ್ಲೂಕು) ಈ ಬಗೆಯ ನೂರಾರು ಉದಾಹರಣೆಗಳು ಸಿಗುತ್ತವೆ. ಕೆಸರೆಯ ಜನ ಕೆಲವರು ಹೋಗಿ ಕೆಲವು ಮೈಲಿಯಾಚೆ ಮನೆ ಕಟ್ಟಿಕೊಂಡರು : ಆ ಊರು ಹೊಸ ಕೆಸರೆ ಎನ್ನಿಸಿಕೊಂಡಿತು. ಪಾಳ್ಯದ ಜನ ಹೋಗಿ ಸ್ವಲ್ಪ ದೂರದಲ್ಲಿ ಮನೆ ಮಾಡಿಕೊಂಡರು : ಆ ಮೊದಲ ಪಾಳ್ಯವು ಹಳೇ ಪಾಳ್ಯವಾಯ್ತು ; ಹೊಸ ಊರಿಗೆ ಹಿಂದಿನ "ಪಾಳ್ಯ" ಎಂಬ ನಾಮಕರಣವಾಯ್ತು. ಬೆಳ್ಗೊಳದ ಕೆಲವು ಜನ ದೊಡ್ಡಬೆಟ್ಟದ ಬುಡಕ್ಕೆ ಬಂದು ನೆಲಸಿದರು; ಅದು ಬೆಳ್ಗೊಳವಾಯಿತು ;

ಮೊದಲ ಬೆಳ್ಗೊಳವು ಹಳೇ ಬೆಳ್ಗೊಳ ಎನ್ನಿಸಿತು. ಅದೇ ಮೊದಲ ಬೆಳ್ಗೊಳದ (ಈಗಿನ ಹಳೆ ಬೆಳ್ಗೊಳ) ಕೆಲವು ಜನ ತಮ್ಮ ಊರ ಪಕ್ಕದ ಕೆರೆಯ ಕೋಡಿ ಹತ್ತಿರ ಮನೆಗಳನ್ನು ಕಟ್ಟಿಕೊಂಡರು; ಅದು ಕೋಡಿ ಬೆಳ್ಗೊಳ ಎಂದು ಕರೆಯಿಸಿಕೊಂಡಿತು.

ಹಿಂದೆ ಆಗಲೇ ಸೂಚಿಸಿದಂತೆ, ಮೊದಲ ಊರಿನಿಂದ ಬೇರೆ ಕಡೆಗೆ ಹೋಗಿ ನೆಲಸಿದ ಜನ ತಮ್ಮ ಊರನ್ನು ಹೆಚ್ಚು ಸುವ್ಯವಸ್ಥಿತವಾಗಿ ಕಟ್ಟಿಕೊಳ್ಳುವ ಅವಕಾಶಗಳೇ ಹೆಚ್ಚು.

ಹಳೆ ಬೆಳ್ಗೊಳದ ಜೈನರ ಸ್ಥಳಾಂತರಕ್ಕೆ ಕಾರಣ ಏನು?

ಈ ಬಗ್ಗೆ ಖಚಿತ ಮಾಹಿತಿ ದೊರಕದಿದ್ದರೂ ಕೆಲವು ಸಂಭವನೀಯ ಕಾರಣಗಳನ್ನು ಕೊಡಲು ಸಾಧ್ಯವಾಗಿದೆ. ಜನರ ಸ್ಥಳಾಂತರ ಅಥವಾ ವಲಸೆಗಳು ತಮ್ಮ ಬದುಕು ಹೆಚ್ಚು ಸುಗಮವಾಗಿರಲಿ ಎಂಬ ಕಾರಣಕ್ಕಾಗಿ-ಆರ್ಥಿಕ ಕಾರಣಕ್ಕಾಗಿ-ನಡೆಯುತ್ತವೆ ಎಂಬ ಹಿನ್ನೆಲೆಯಲ್ಲಿ ಇವನ್ನು ಪರಿಶೀಲಿಸಬಹುದು. ಹತ್ತನೆಯ ಶತಮಾನದ ಅಂತ್ಯದಲ್ಲಿ ಶ್ರವಣಬೆಳ್ಗೊಳ ಊರು ಆರಂಭವಾಯಿತು ಎಂಬುದು ವಿಚಿತ್ರವಾದರೆ-ಇದು ಬಹುಮಟ್ಟಿಗೆ ಖಚಿತ; ಏಕೆಂದರೆ ಅಲ್ಲಿನ ಶಾಸನಗಳು ಮತ್ತು ಮಂದಿರಗಳು ಎಲ್ಲ ಹನ್ನೊಂದನೇ ಶತಮಾನಕ್ಕಿಂತ ಈಚಿನವು. ಆ ಊರು ಆರಂಭವಾಗಲು ಏನು ಪ್ರಚೋದನೆಯಿರಬಹುದು? ಅಲ್ಲಿಯವರೆಗೆ ಅಲ್ಲಿ ಇದ್ದುದು ಕಾಡು, ಅಥವಾ ಬರೀ ಹೊಲ, ಗದ್ದೆ, ತೋಟಗಳು ಮಾತ್ರ. ದೊಡ್ಡಬೆಟ್ಟ ಒಂದು ನಿರ್ದಿಷ್ಟ ಹೆಸರಿಲ್ಲದ, ವ್ಯಕ್ತಿತ್ವವಿಲ್ಲದ ಒಂದು ಬಂಡೆಯಾಗಿತ್ತು. (ಹೆಚ್ಚೆಂದರೆ ಅದನ್ನು "ಪೆರ್ಗಳ್ಬಪ್ಪು", ಎಂದರೆ ದೊಡ್ಡ ಕಬ್ಬಪ್ಪು ಎಂದು ಕರೆಯುತ್ತಿದ್ದರು. ಸಂ. 38. 8ನೇ ಶತಮಾನ) ಕುತೂಹಲಿಗಳು ಆ ಬೆಟ್ಟವನ್ನು ಹತ್ತಿ ಇಳಿಯುತ್ತಿದ್ದುದನ್ನು ಬಿಟ್ಟರೆ ಆ ಬೆಟ್ಟ ಸಾಂಸ್ಕೃತಿಕವಾಗಿ ಒಂದು ದೊಡ್ಡ ಸೊನ್ನೆಯಾಗಿತ್ತು. ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳೆಲ್ಲ ಚಿಕ್ಕಬೆಟ್ಟಕ್ಕೆ ಮೀಸಲಾಗಿದ್ದುವು. ಆದರೆ ಹತ್ತನೇ ಶತಮಾನದ ಕೊನೆಯಲ್ಲಿ, ಸು. 890 ರ ಸುಮಾರಿನಲ್ಲಿ ಚಾವುಂಡರಾಯ ಆ ದೊಡ್ಡಬೆಟ್ಟದ ಮೇಲೆ ಗೊಮ್ಮಟನ ವಿಗ್ರಹವನ್ನು ಕಡೆಯಿಸಲು ಸಂಕಲ್ಪಿಸಿದಾಗ ಅಲ್ಲಿಗೆ ಸಾವಿರಾರು ಜನ ಕಲ್ಕುಟಿಗರು, ನೂರಾರು ಕಲಾಶಿಲ್ಪಿಗಳು ಬಂದರು[17]. ಆ ಬೆಟ್ಟದ ದೊಡ್ಡ ಕೋಡುಗಲ್ಲು ಗೊಮ್ಮಟಮೂರ್ತಿಯಾಗಿ ಮಾರ್ಪಾಟಾಗಲು ಹಲವು ವರ್ಷಗಳೇ ಆಗಿರಬೇಕು. ಆ ಬೆಟ್ಟದ ಮೇಲೆ ಕೆಲಸಮಾಡುತ್ತಿದ್ದ ಕೆಲಸಗಾರರಾಗಲಿ ಶಿಲ್ಪಿಗಳಾಗಲಿ ತಾತ್ಕಾಲಿಕವಾಗಿ ಬೆಟ್ಟದ ಬುಡದಲ್ಲೇ ಮನೆಗಳನ್ನು ಮಾಡಿಕೊಂಡಿರ

---

17. ಆ ಸಮಯದಲ್ಲಿ ಅಲ್ಲಿ ಕೆಲಸ ಮಾಡಿದ ರೂವಾರಿ ಬದಿಗ, ಜೆಡ್ಡುಗ ಎಂಬ ಇಬ್ಬರ ಶಿಲ್ಪಿಗಳ ಹೆಸರುಗಳು ದೊರಕುತ್ತವೆ. (ಸಂ. 433 ಮತ್ತು 434. 10ನೇ ಶತಮಾನ)

ಬೇಕು. ಆಗ ಅದೇ ತಾತ್ಕಾಲಿಕ ವಸತಿ ಪ್ರದೇಶದಲ್ಲಿ ವ್ಯಾಪಾರಗಾರರು ತಾತ್ಕಾಲಿಕ ವಾಗಿ ತಮ್ಮ ದಿನಸಿ ಅಂಗಡಿಗಳನ್ನು ತೆರೆದಿರಬೇಕು. ಹಳೆಯ ಬೆಳ್ಗೊಳದ ಜೈನರು ಮತ್ತು ಜೈನ ವ್ಯಾಪಾರಿಗಳು ದೊಡ್ಡ ಬೆಟ್ಟದ ಬುಡದಲ್ಲಿ ತಮಗೆ ದೊರಕುತ್ತಿದ್ದ ಲಾಭವನ್ನು ಕಳೆದುಕೊಳ್ಳಲು ಬಹುಶಃ ಸಿದ್ಧರಿರಲಿಲ್ಲ. ಜೈನಮತ ಕಾರಣವಾಗಿ ಉಳಿದ ಜಾತಿಯವರಿಗಿಂತ ಹಳೆಯ ಬೆಳ್ಗೊಳದ ಜೈನರಿಗೆ ದೂರದ ಸಂಪರ್ಕಗಳು ಬೆಳೆದು ಅವರು ಉಳಿದವರಿಗಿಂತ ವಿದ್ಯೆ, ಲೌಕಿಕ ಜ್ಞಾನಗಳಲ್ಲಿ ಎಷ್ಟೋ ಮುಂದು ವರಿದವರಾಗಿದ್ದಿರಬೇಕು. ಹೀಗೆ ಆರಂಭವಾದ ತಾತ್ಕಾಲಿಕ ವಸತಿಗಳೇ ಈಗಿನ ಶ್ರವಣಬೆಳ್ಗೊಳ ಊರಿನ ಅಂಕುರಾರ್ಪಣೆ ಎಂದರೂ ಸರಿಯೇ. ಶಂಕು ಸ್ಥಾಪನೆ ಎಂದರೂ ಸರಿಯೇ. ಚಾವುಂಡರಾಯ ಮಂತ್ರಿಯು ನೇರ ಉಸ್ತುವಾರಿ ಇದ್ದುದರಿಂದ ಆ ತಾತ್ಕಾಲಿಕ ನಿವಾಸಿಗಳಿಗೆ ನೀರು, ವಸತಿ, ಆಹಾರ ಸರಬರಾಜುಗಳಲ್ಲಿ ಕೊರತೆ ಆಗಿರಲಾರದು. ವಿಗ್ರಹದ ಕೆಲಸ ಮುಗಿದರೂ ಆ ದೊಡ್ಡಬೆಟ್ಟದ ಮೇಲಿನ ಶಿಲ್ಪಕಾರ್ಯಗಳು ನಿಲ್ಲಲಿಲ್ಲ. ಮುಂದೆ ಬೇರೆ ಬೇರೆ ಬಸದಿಗಳು, ಸ್ಥಂಭಗಳು, ಸುತ್ತಾಲಯ ಇತ್ಯಾದಿಗಳ ಕೆಲಸ ನಿರಂತರವಾಗಿ ಮುಂದುವರಿಯಿತು. ಶಿಲ್ಪಿಗಳು, ಕೆಲಸಗಾರರು ತಾತ್ಕಾಲಿಕ ಮನೆಗಳನ್ನು ಕಿತ್ತು ಹಾಕಿ ಬೇರೆ ಕಡೆಹೋಗುವ ಪ್ರಮೇಯ ಬರಲಿಲ್ಲ. ಅಲ್ಲಿಯವರೆಗೆ ಕಟ್ಟಪ್ಪ ಪ್ರದೇಶ-ಶ್ರವಣ ಬೆಳಗೊಳ ಪ್ರದೇಶ–ಕೇವಲ ತೀರ್ಥಕ್ಷೇತ್ರವಾಗಿತ್ತು; ಪವಿತ್ರ ಭೂಮಿಯಾಗಿತ್ತು ; ಅದು ಜೈನ ಯಾತ್ರಾರ್ಥಿಗಳು ಬಂದು ಹೋಗುವ ಜಾಗ ಆಗಿತ್ತು. ಗೊಮ್ಮಟ ವಿಗ್ರಹದಿಂದ ಆ ಪ್ರದೇಶ ಇನ್ನೂ ದೊಡ್ಡ ತೀರ್ಥಕ್ಷೇತ್ರ ಆಯ್ತು ಅದಕ್ಕಿಂತ ಹೆಚ್ಚಾಗಿ ಪ್ರವಾಸಿ ಕೇಂದ್ರ ಆಯ್ತು. ಬಂದು ಹೋಗುವ ಜೈನ ಯಾತ್ರಾರ್ಥಿಗಳ ಸಂಖ್ಯೆಯೂ ಹೆಚ್ಚಿತು: ಇತರ ಮತೀಯರೂ ಬಂದು ಹೋಗುವ ಆಕರ್ಷಕ ಪ್ರದೇಶವಾಯ್ತು. ಹಳೆಯ ಬೆಳ್ಗೊಳದ ಜೈನರಿಗೆ ತಮ್ಮ ಊರಲ್ಲಿರುವುದಕ್ಕಿಂತ ದೊಡ್ಡಬೆಟ್ಟದ ಬುಡದಲ್ಲಿರುವುದು ಆರ್ಥಿಕ ವಾಗಿ ನಿಶ್ಚಿತವಾಗಿಯೂ ಹೆಚ್ಚು ಲಾಭದಾಯಕವಾಯ್ತು. ತಮ್ಮ ಪವಿತ್ರಭೂಮಿಯ ಮಧ್ಯೆಯೇ ಇರುವ ಅವಕಾಶವೂ ಒದಗಿತು. ಅವರಲ್ಲಿ ಹಲವರು ಶಾಶ್ವತವಾಗಿ ತಮ್ಮ ವಾಸವನ್ನು ಶ್ರವಣಬೆಳ್ಗೊಳಕ್ಕೆ ವರ್ಗಾಯಿಸಿದರು. ಅಲ್ಲಿನ ಇಡೀ ವ್ಯಾಪಾರ ಅವರ ಕೈಯಲ್ಲಿ ಇತ್ತು. ಹನ್ನೆರಡನೆಯ ಶತಮಾನದ ಶಾಸನಗಳಲ್ಲಿ ಬರುವ "ನಖರ" ಅಥವಾ "ನಗರ"ಗಳೆಲ್ಲರೂ ಜೈನರು (ಸಂ. 457, 458, 459, 455.) ನಖರ ಅಥವಾ ನಗರ ಎಂದರೆ ವರ್ತಕರು ; ವರ್ತಕರ ಸಂಘ ಎಂದೂ ಆಗುತ್ತದೆ. ಅಲ್ಲಿನ ನಖರಗಳೇ ಸೇರಿ ಶ್ರವಣಬೆಳ್ಗೊಳದಲ್ಲಿ ಕ್ರಿ. ಶ. 1195 ರಲ್ಲಿ "ನಗರ ಜಿನಾಲಯ" ವೆನ್ನುವ ಸುಂದರ ಬಸದಿಯನ್ನು ಕಟ್ಟಿಸುವಷ್ಟು ಶ್ರೀಮಂತರಾಗಿದ್ದರು. ಇವರನ್ನು ಮಾಣಿಕ್ಯನಗರಂಗಳು ಎಂದೂ ಶಾಸನಗಳು ಕರೆದಿವೆ. ("ಶ್ರೀ ಬೆಳ್ಗೊಳ ತೀರ್ಥದ ಬಲಾತ್ಕಾರ ಗಣಾಗ್ರಗಣ್ಯರುಂ ಅಗಣ್ಯಪುಣ್ಯರುಮಪ್ಪ ಸಮಸ್ತ ಮಾಣಿಕ್ಯ ನಗರಂ ಗಳು" ಸಂ. 334. ಕ್ರಿ. ಶ, 1282). ಮಾಣಿಕ್ಯ ಮತ್ತು ರತ್ನಗಳ ವ್ಯಾಪಾರವನ್ನು

ಮಾಡುತ್ತಿದ್ದ ವರ್ತಕರು ಅವರು. ಈ ವರ್ತಕರೆಲ್ಲ ಹಳೆಯ ಬೆಳ್ಗೊಳದವರೇ ಎಂದು ಹೇಳಲಾಗದಿದ್ದರೂ ಹಲವರು ಅಲ್ಲಿಂದ ಬಂದವರಾಗಿರಬಹುದು. ಜೊತೆಗೆ, ದೊಡ್ಡಬೆಟ್ಟದ, ಚಿಕ್ಕಬೆಟ್ಟದ ಬಸದಿಗಳಲ್ಲಿ ಪೂಜೆ ಮತ್ತು ಇತರ ಕೈಂಕರ್ಯಗಳ ಕೆಲಸಗಳನ್ನು ಕೈಗೊಂಡಿದ್ದ ಹಳೆಯ ಬೆಳ್ಗೊಳ ನಿವಾಸಿಗಳೂ ದಿನವೂ ಮೂರು ಮೈಲಿ ಹೋಗಿ ಬರುವುದಕ್ಕಿಂತ ಶ್ರವಣ ಬೆಳ್ಗೊಳದಲ್ಲೇ ನೆಲಸಲು ಮನಸು ಮಾಡಿದ್ದು ತೀರ ಸ್ವಾಭಾವಿಕವಾಗಿದೆ. ಏನೇ ಆದರೂ ಶ್ರವಣ ಬೆಳ್ಗೊಳ ಊರಿನ ನಿರ್ಮಾಣಕ್ಕೆ ಪ್ರಚೋದನೆ ಮುಖ್ಯವಾಗಿ ಆರ್ಥಿಕವಾದುದು : ಗೌಣವಾಗಿ ಧಾರ್ಮಿಕವಾದುದು.

"ಶ್ರವಣ ಬೆಳ್ಗೊಳ" ಹೆಸರು

ಕೆಲವು ಕಾಲ ಶ್ರವಣಬೆಳ್ಗೊಳವನ್ನು ಬೆಳ್ಗೊಳ ತೀರ್ಥವೆಂದು (ಸಂ. 476, ಕ್ರಿ.ಶ. 1159)ಗೊಮ್ಮಟಪುರವೆಂದು (ಸಂ. 481, ಕ್ರಿ.ಶ. 1159)ಕರೆಯುತ್ತಿದ್ದರು. ಬೆಳ್ಗೊಳ ತೀರ್ಥವು ಚಿಕ್ಕಬೆಟ್ಟ, ದೊಡ್ಡಬೆಟ್ಟ, ಶ್ರವಣಬೆಳ್ಗೊಳ ಊರು ಎಲ್ಲವನ್ನೂ ಒಳಗೊಂಡ ಪ್ರದೇಶವನ್ನು ಗೊಮ್ಮಟಪುರವು ಶ್ರವಣ ಬೆಳ್ಗೊಳ ಊರನ್ನು ಮಾತ್ರ ಒಂದು ಶಾಸನದಲ್ಲಿ ಸೂಚಿಸುವಂತೆ ಕಾಣುತ್ತದೆ (ಸಂ. 476, ಕ್ರಿ. ಶ. 1159) ಗೊಮ್ಮಟಪುರ ಹೆಸರು ಬಳಕೆಗೆ ಹೆಚ್ಚು ಬರಲಿಲ್ಲ. ಕ್ರಮೇಣ ಬೆಳ್ಗೊಳ ಎಂಬುದೇ ಶ್ರವಣಬೆಳ್ಗೊಳದ ಏಕೈಕ ಹೆಸರಾಗಿ ಪರಿಣಮಿಸಿತು (ಸಂ. 482, 14 ನೇ ಶತಮಾನ ; ಸಂ. 473, 15 ನೇ ಶತಮಾನ). ಬರಿಯ "ಬೆಳ್ಗೊಳ" ಎಂಬುದು ಯಾವಾಗ ಎರಡು ಊರನ್ನು ಹೇಳಲು ಆರಂಭವಾಯ್ತೋ (ಬಹುಶಃ 14 ನೇ ಶತಮಾನದಲ್ಲಿ) ಆಗ ಶ್ರವಣಬೆಳ್ಗೊಳಕ್ಕೆ ಬೆಳ್ಗೊಳ ಹೆಸರು ಅಂಟಿಕೊಂಡಿತು; ಮೂಲ ಬೆಳ್ಗೊಳವು "ಹಳೆಯ ಬೆಳ್ಗೊಳ" ಎಂದು ಕರೆಯಿಸಿಕೊಂಡಿತು. (14 ನೇ ಶತಕಕ್ಕೆ ಮುಂಚೆ ಶ್ರವಣ ಬೆಳ್ಗೊಳವನ್ನು ಬೆಳ್ಗೊಳ ತೀರ್ಥ, ಗೊಮ್ಮಟಪುರ ಎಂದು ಮುಂತಾಗಿ ಕರೆಯುತ್ತಿದ್ದುದನ್ನು ನೋಡಿದ್ದೇವೆ. ಆ ಕಾರಣ ಬೆಳ್ಗೊಳ ಹೆಸರಿನ ಬಳಕೆಯಲ್ಲಿ ಗೊಂದಲವಿರಲಿಲ್ಲ) ಹದಿನಾರು ಹದಿನೇಳನೇ ಶತಮಾನದ ಶಾಸನಗಳಲ್ಲಿ ಬೆಳ್ಗೊಳ ಎಂದರೆ ಶ್ರವಣಬೆಳ್ಗೊಳ ಎಂದೇ ಅರ್ಥವಾಗುತ್ತದೆ. ಮುಂದೆ ಬೆಳ್ಗೊಳವನ್ನು ಇತರ ಬೆಳ್ಗೊಳಗಳಿಂದ ಬೇರ್ಪಡಿಸಲು (ಉದಾಹರಣೆಗೆ, ಮೈಸೂರಿನ ಹತ್ತಿರವೂ ಒಂದು ಬೆಳ್ಗೊಳ ಇದೆ) ಹತ್ತೊಂಬತ್ತನೇ ಶತಮಾನದಲ್ಲಿ ಬೆಳ್ಗೊಳ ಹೆಸರಿಗೆ "ಶ್ರವಣ"—ಎಂಬ ವಿಶೇಷಣವನ್ನು ಸೇರಿಸಲಾಯ್ತು. 'ಶ್ರವಣ' ಎಂದರೆ ಜೈನ ಸನ್ಯಾಸಿ, ಜೈನ ಕೇಂದ್ರವಾದ ಶ್ರವಣಬೆಳ್ಗೊಳವನ್ನು ಇತರ ಬೆಳ್ಗೊಳಗಳಿಂದ ಪ್ರತ್ಯೇಕಿಸಲು 'ಶ್ರವಣ' ಎನ್ನುವ ಪೂರ್ವಪದದ ಸಹಾಯ ಪಡೆದಿರುವುದು ಸಹಜ. ಕ್ರಿ. ಶ. 1810 ರ ದಿವಾನ್ ಪೂರ್ಣಯ್ಯನವರ ಸನ್ನದಿನಲ್ಲಿ ಶ್ರವಣಬೆಳ್ಗೊಳ ಎಂಬ

ಹೆಸರಿನ ಮೊದಲ ಉಲ್ಲೇಖ ದೊರಕುತ್ತದೆ. (ಸಂ. 353). ಕ್ರಿ. ಶ. 1830 ರ ಮುಮ್ಮಡಿ ಕೃಷ್ಣರಾಜ ಒಡೆಯರ ಸನ್ನದಿನಲ್ಲಿ ಶ್ರವಣಬೆಳ್ಗೊಳ ಹೆಸರು ಮೂರು ನಾಲ್ಕು ಬಾರಿ ಬಂದಿದೆ.

ಹಳೆಯ ಬೆಳ್ಗೊಳದ ಜೈನರ ವಲಸೆ ಪೂರ್ಣಗೊಂಡದ್ದು ಯಾವಾಗ ?

ಹತ್ತನೇ ಶತಮಾನದ ಅಂತ್ಯದಲ್ಲೋ ಅಥವಾ ಹನ್ನೊಂದನೆಯ ಶತಮಾನ ದಲ್ಲೋ ಪಲವರು ಜೈನರು ಹಳೇ ಬೆಳ್ಗೊಳದಿಂದ ಶ್ರವಣ ಬೆಳ್ಗೊಳಕ್ಕೆ ಬಂದಿರ ಬಹುದು. ಆದರೆ ಬಹು ಸಂಖ್ಯೆಯಲ್ಲಿದ್ದ ಅಲ್ಲಿನ ಎಲ್ಲ ಜೈನರೂ ಒಂದೇ ಬಾರಿಗೆ ಬಂದರೆಂದು ಊಹಿಸುವುದು ಕಷ್ಟ. ಆದರೆ ಅವರಲ್ಲಿ ಕೊನೆಯವರು ಸುಮಾರಾಗಿ ಯಾವಾಗ ಹಳೆಯ ಬೆಳ್ಗೊಳವನ್ನು ಬಿಟ್ಟಿರಬಹುದು ಎಂಬುದಕ್ಕೆ ಒಂದು ಒಳ್ಳೆಯ ಪ್ರಾಸಂಗಿಕ ಸಾಕ್ಷಿ (Circumstantial evidence) ಇದೆ. ಹದಿನಾಲ್ಕನೇ ಶತಮಾನ ದಲ್ಲಿ ಜೈನರಿಗೂ ವೈಷ್ಣವರಿಗೂ ಜಗಳಗಳೂ ತಿಕ್ಕಾಟಗಳೂ ನಡೆದುವೆಂಬುವಕ್ಕೆ ಶ್ರವಣ ಬೆಳ್ಗೊಳದ ಬುಕ್ಕನ ಶಾಸನ ಆಧಾರವಾಗಿದೆ. (ಸಂ. 475, ಕ್ರಿ. ಶ. 1368). ಇದೇ ಶಾಸನದ ಪಾಠ ಮಾಗಡಿ ತಾಲೂಕಿನ ಕಲ್ಯ ಊರಿನ ಶಾಸನದಲ್ಲೂ ದೊರೆಯುವು ದಲ್ಲದೆ, ವೈಷ್ಣವರ ಜೈನರ ಮಧ್ಯೆ ರಕ್ತಪಾತವೂ ನಡೆಯಿತು ಎಂಬರ್ಥದ ಸೂಚನೆಯೂ ಅಲ್ಲಿದೆ. ರಕ್ತಪಾತದ ವಿಷಯ ಶ್ರವಣಬೆಳ್ಗೊಳದ ಶಾಸನದಲ್ಲಿಲ್ಲ. ಅದರ ವಾಸ್ತವತೆ ಏನೇ ಇರಲಿ, ಜೈನರು ವೈಷ್ಣವರ ದೇವಾಲಯಗಳನ್ನೂ ವೈಷ್ಣವರು ಜೈನರ ಬಸದಿ ಗಳನ್ನೂ ಹಾಳುಮಾಡಿದರೆಂಬುದು ಮಾತ್ರ ಖಚಿತ. ಭಂಡಾರ ಬಸದಿ ಶಾಸನದಲ್ಲಿ (ಸಂ. 475) ಈ ಮಾತುಗಳಿವೆ–"ಶ್ರೀ ತಿರುಮಲೆಯ ತಾತಯ್ಯಂಗಳು ಸಮಸ್ತ ರಾಜ್ಯದ ಭವ್ಯಜನಂಗಳ ಅನುಮತದಿಂದ ಬೆಳುಗುಳ ತೀರ್ಥದಲ್ಲಿ ವೈಷ್ಣವ ಅಂಗರಕ್ಷೆ ಗೋಸುಗ ಸಮಸ್ತ ರಾಜ್ಯದೊಳಗುಳ್ಳಂತಹ ಜೈನ[ರು] ಬಾಗಿಲುಗಟ್ಟಲೆಯಾಗಿ ಮನೆ ಮನೆಗೆ ವರ್ಷಕ್ಕೆ ಹಣಕೊಟ್ಟು..."ಜೈನ ಬಸದಿಗಳ ರಕ್ಷಣೆಗಾಗಿ ನೇಮಕವಾಗುವ ವೈಷ್ಣವ ಕಾವಲುಗಾರರ ಖರ್ಚನ್ನು ಜೈನರು ವಹಿಸಿಕೊಳ್ಳಬೇಕೆಂಬ ನಿಬಂಧನೆಯನ್ನು ಜೈನರೂ ವೈಷ್ಣವರೂ ಕೂಡಿ ಮಾಡಿಕೊಳ್ಳುತ್ತಾರೆ. ಇಲ್ಲಿಯವರೆಗೆ ಜೈನರಿಂದ ಹಾಳಾದ ಯಾವುದೇ ವೈಷ್ಣವ ದೇವಾಲಯ, ವೈಷ್ಣವರಿಂದ ಹಾಳಾದ ಜೈನ ದೇವಾಲಯ ಇಂತಹುದೇ ಎಂದು ಎಲ್ಲೂ ಗುರುತಿಸಲಾಗಿಲ್ಲ. ಆದರೆ ಹಳೆಯ ಬೆಳ್ಗೊಳದ ಅಂತಹ ದೇವಾಲಯಗಳು ದೊರಕಿರುವುದು ಮಹತ್ವದ ಸಂಗತಿ. ಊರ ಹೊರಗೆ ಪಶ್ಚಿಮ ದಿಕ್ಕಿನಲ್ಲಿ ಚಾವುಂಡರಾಯನ ಮಗ ಜಿನದೇವಣ ಕಟ್ಟಿಸಿದನೆಂದು ನಾನು ಸಕಾರಣವಾಗಿ ಊಹಿಸುವ ಹಾಳು ಬಸದಿ ಇದೆಯಷ್ಟೇ. ಇನ್ನೂ ಹಲವು (ಬಹುಶಃ ಹೊಯ್ಸಳ ಕಾಲದ) ಬಸದಿಗಳ ಸ್ಮಾರಕಗಳು ದೊರಕುತ್ತವೆ. (ಚಿತ್ರ 10,11,12,13,14,15) ಅದಕ್ಕೂ ಊರಿಗೂ ಮಧ್ಯೆ, ಊರಿನ ಅಂಚಿಗೆ ತೀರ ಅಂಟಿಕೊಂಡಂತೆ ಒಂದು ಹಾಳಾದ ಚೆನ್ನಕೇಶವ ದೇವಾಲಯವಿದೆ. ಅಲ್ಲಿನ ಮೂಲ




ಚಿತ್ರ 10 ಹಳೆಯ ಬೆಳ್ಗೊಳದ ಕೆರೆಯ ಕೋಡಿಯ ಕಲ್ಲುಗಳ ಮಧ್ಯೆ ಒಂದು ಕಂಬ



ಚಿತ್ರ 11. ಅದೇ ಭಾಗದಲ್ಲಿ ಇನ್ನೊಂದು ಕಂಬ



ಚಿತ್ರ 12. ಅದೇ ಭಾಗದಲ್ಲಿ ಇನ್ನೊಂದು ಕಂಬ



ಚಿತ್ರ 13. ಅದೇ ಭಾಗದಲ್ಲಿ ಅರಳಿದ ಕಮಲದ ಶಿಲ್ಪ



ಚಿತ್ರ 14. ಕೆರೆಯ ಕೋಡಿಯ ಮೇಲೆ ಚಾಮರಧಾರಿ ಶಿಲ್ಪ



ಚಿತ್ರ 15. ಕೆರೆಯ ಸಮೀಪ ಹೂತು ಹೋಗಿರುವ ಶಿಲ್ಪ

ಮೂರ್ತಿ (ಚಿತ್ರ 16) ಹಾಳಾಗಿರುವುದಲ್ಲದೆ ಒಳಗೆ ಎರಡು ಆಳ್ವಾರರ ವಿಗ್ರಹಗಳು (ಚಿತ್ರ 17) ನಾಶವಾಗಿವೆ. ಹದಿನಾಲ್ಕನೇ ಶತಮಾನದಲ್ಲಿ ಶ್ರೀವೈಷ್ಣವರಿಗೂ ಜೈನರಿಗೂ



ಚಿತ್ರ 16. ಹಳೆಯ ಬೆಳ್ಗೊಳದ ಚೆನ್ನಕೇಶವ ಮೂರ್ತಿ

ನಡೆದ ಘರ್ಷಣೆಗಳಲ್ಲಿ ಜೈನರಿಂದ ಈ ಚೆನ್ನಕೇಶವ ದೇವಾಲಯವೂ, ವೈಷ್ಣವರಿಂದ ಅಲ್ಲಿನ ಬಸದಿಗಳೂ ನಾಶವಾಗಿರಬೇಕು.[18] ಆಗ ಆ ಊರಲ್ಲಿ ಅಲ್ಪಸಂಖ್ಯಾತರೂ ಇನ್ನೂ ಉಳಿದುಕೊಂಡಿದ್ದ ಜೈನರೂ ಆ ಊರು ಬಿಟ್ಟು ಶ್ರವಣಬೆಳ್ಗೊಳಕ್ಕೆ ಬಂದು ನೆಲಸಿದರೆಂದು ತೋರುತ್ತದೆ. ತಿರುಮಲೆಯ ತಾತಯ್ಯ ಮತ್ತು ಶ್ರವಣಬೆಳ್ಗೊಳದ ಜೈನರ ಮಧ್ಯೆ ಆದ ಜೈನ ವೈಷ್ಣವ ಮತಗಳ ಪರಸ್ಪರ ರಕ್ಷಣೆಯ ಒಪ್ಪಂದ ಎಷ್ಟರ

18. ಜೈನರಿಗೂ ಶ್ರೀ ವೈಷ್ಣವರಿಗೂ ಘರ್ಷಣೆ ನಡೆದುದು ಎರಡು ಶಾಸನಗಳಲ್ಲಿ ದಾಖಲಾಗಿದ್ದರೂ ಅಂತಹ ಘರ್ಷಣೆಗಳಿಗೆ ಸ್ಪಷ್ಟ ಸಾಕ್ಷ್ಯಾಧಾರವನ್ನು ನಾವು ಸದ್ಯಕ್ಕೆ ಹಳೆಯ ಬೆಳ್ಗೊಳದಲ್ಲಿ ಮಾತ್ರ ಕಾಣಬಹುದು. ಈ ದೃಷ್ಟಿಯಿಂದ ಶ್ರವಣ ಬೆಳ್ಗೊಳದ ಸುತ್ತಮುತ್ತಣ ಊರುಗಳನ್ನು ಪರಿಶೋಧಿಸಬೇಕು.

ಮಟ್ಟಿಗೆ ಜಾರಿಗೆ ಬಂತೋ ತಿಳಿಯದು. ಹತ್ತು ಹನ್ನೊಂದನೇ ಶತಮಾನದಲ್ಲೇ ಬಹುಸಂಖ್ಯೆಯ ಜೈನರು ಹಳೆಯ ಬೆಳ್ಗೊಳವನ್ನು ಬಿಟ್ಟು ಶ್ರವಣಬೆಳ್ಗೊಳಕ್ಕೆ ಬಂದು ನೆಲಸಿದ್ದರು. ಉಳಿದ ಕೆಲವು ಮನೆತನಗಳೂ ಹದಿನಾಲ್ಕನೇ ಶತಮಾನದ ಮಧ್ಯಭಾಗದಲ್ಲಿ, ಎಂದರೆ ಸುಮಾರು 1365–1368ರ ಸುಮಾರಿನಲ್ಲಿ ಹಳೆಯ



ಚಿತ್ರ 17. ಹಳೆಯ ಬೆಳ್ಗೊಳದ ಆಳ್ವಾರರ ವಿಗ್ರಹಗಳು

ಬೆಳ್ಗೊಳವನ್ನು ತ್ಯಜಿಸಿರಬೇಕು. (ಈಗಿನ ಚೆನ್ನಕೇಶವ ದೇವಾಲಯದಲ್ಲಿ "ಉಷ್ಟಮರು" <ವೈಷ್ಣವರು] ಎಂಬ ಬ್ರಾಹ್ಮಣೇತರ ಅರ್ಚಕರು. ದೇವಾಲಯದ ಕೆಲವು ಭಾಗ ಬಿದ್ದು ಹೋಗಿದೆ; ಪೂಜೆ ಅಂತೂ ಹೇಗೋ ನಡೆದು ಕೊಂಡು ಹೋಗುತ್ತಿದೆ.

ಹಳೆಯ ಬೆಳ್ಗೊಳದ ಸಾಂಸ್ಕೃತಿಕ ಮಹತ್ವ

ಕೊನೆಯ ಪಕ್ಷ ಕ್ರಿ.ಶ. 1000-50ರ ವರೆಗೆ 'ಬೆಳ್ಗೊಳ'ದ ಸಾಂಸ್ಕೃತಿಕ ಮಹತ್ವದ ಬಗ್ಗೆ ಏನು ಹೇಳಿದರೂ ಅದು ಹಳೆಯ ಬೆಳ್ಗೊಳಕ್ಕೆ ಸಲ್ಲುತ್ತದೆ, ಇಂದಿನ ಶ್ರವಣಬೆಳ್ಗೊಳವು ಹಳೆಯ ಬೆಳ್ಗೊಳಕ್ಕೆ ಸಲ್ಲಬೇಕಾದ ಯಶಸ್ಸಿನ ಎಷ್ಟೋ ಭಾಗವನ್ನು ಈಗ ಕಸಿದುಕೊಂಡುಬಿಟ್ಟಿದೆ. ಶ್ರವಣ ಬೆಳ್ಗೊಳದ ಅಸ್ತಿತ್ವ ಆರಂಭವಾದುದೇ ಕ್ರಿ.ಶ. 1000-50 ಈ ಅವಧಿಯಲ್ಲಿ ಎಂದು ಬಹುಮಟ್ಟಿಗೆ

ಖಚಿತವಾಗಿರುವುದರಿಂದ, ಕೊನೆಯ ಪಕ್ಷ ಆಪಕ್ಕಿಂತ ಹಿಂದಿನ "ಬೆಳ್ಗೊಳ"ದ ಎಲ್ಲ ಕೀರ್ತಿಯೂ ಹಳೆಯ ಬೆಳ್ಗೊಳಕ್ಕೆ ಸಲ್ಲಬೇಕು. ಉದಾಹರಣೆಗೆ, ಆದಿಕಾಲದಿಂದ ಕ್ರಿ.ಶ. 1000-50ರವರೆಗೆ ಜೈನಮುನಿಗಳನ್ನೂ ಧರ್ಮವನ್ನೂ ಪೋಷಿಸಿದವರು ಹಳೆಯ ಬೆಳ್ಗೊಳದ ಜೈನರು ಮತ್ತು ಇತರ ಅಭಿಮಾನಿ ಸಾರ್ವಜನಿಕರು. ಜೈನ ವಿದ್ವಾಂಸ ಗೃಹಸ್ಥರಿದ್ದುದು ಅಲ್ಲಿ; ಹೊರಗಿನಿಂದ ಶ್ರವಣ ಬೆಳ್ಗೊಳದ ದರ್ಶನಕ್ಕೆ ಬಂದ ಜೈನರು ತಂಗುತ್ತಿದ್ದುದು ಅಲ್ಲಿ; ಹತ್ತನೇ ಶತಮಾನದ ಉತ್ತರಾರ್ಧದಲ್ಲಿ ಶ್ರವಣ ಬೆಳ್ಗೊಳಕ್ಕೆ ಭೇಟಿ ನೀಡಿದ ರನ್ನ ತಂಗಿದ್ದುದು ಬಹುಶಃ ಹಳೆಯ ಬೆಳ್ಗೊಳದಲ್ಲಿ; ಗೊಮ್ಮಟ ವಿಗ್ರಹದ ದರ್ಶನಕ್ಕೆ ಬಂದ ಅತ್ತಿಮಬ್ಬೆ ತಂಗಿದ್ದುದೂ ಬಹುಶಃ ಹಳೆಯ ಬೆಳ್ಗೊಳದಲ್ಲಿಯೇ; ಏಕೆಂದರೆ ಅವಳು ದರ್ಶನಕ್ಕೆ ಬಂದಾಗ ಗೊಮ್ಮಟ ವಿಗ್ರಹ ಪೂರ್ಣಗೊಂಡು ಬಹಳ ವರ್ಷಗಳಾಗಿರಲಿಲ್ಲ; ಆ ಕಾರಣ ಕೇಗೆ ಶ್ರವಣಬೆಳ್ಗೊಳ ಪ್ರದೇಶದಲ್ಲಿ ಪ್ರವಾಸಿಗರಿಗೆ ಸೌಕರ್ಯಗಳು ಇನ್ನೂ ಆಗಿರಲಾರವು.

ಗೊಮ್ಮಟ ವಿಗ್ರಹವನ್ನು ಕೆತ್ತಿಸುತ್ತಿದ್ದ ಚಾಮುಂಡರಾಯ ಮಂತ್ರಿ ಬೆಟ್ಟದ ಬುಡದಲ್ಲಿ ತಾತ್ಕಾಲಿಕ ಬೀಡಿನಲ್ಲಿ ಅಥವಾ ಚಿಕ್ಕಬೆಟ್ಟದ ಮೇಲೆ ತಂಗುತ್ತಿದ್ದರೂ ಅವನಿಗೆ ಇದ್ದುದು ಹಳೆಯ ಬೆಳ್ಗೊಳದ ಜೈನಗೃಹಸ್ಥರ ಸಂಪರ್ಕ. ಅಲ್ಲೂ ಅವನಿಗೆ ತಂಗುದಾಣವಿದ್ದಿರಬೇಕು (ಅವನ ಮಗ ಜಿನದೇವಣ ಹಳೆಯ ಬೆಳ್ಗೊಳದಲ್ಲಿ ಬಸದಿಯನ್ನು ಕಟ್ಟಿಸಿದ್ದು ಇಲ್ಲಿ ನೆನಪಿಗೆ ಬರುತ್ತದೆ.) ಹನ್ನೊಂದು ಹನ್ನೆರಡು ಹದಿಮೂರನೆಯ ಶತಮಾನದವರೆಗಾದರೂ ಹಳೆಯ ಬೆಳ್ಗೊಳ ತನ್ನ ಸಾಂಸ್ಕೃತಿಕ ಚೈತನ್ಯವನ್ನು ಉಳಿಸಿಕೊಂಡು ಬಂದಿರಬೇಕು. ಈ ವಿಷಯದಲ್ಲಿ ಶ್ರವಣಬೆಳ್ಗೊಳದ ಶಾಸನಗಳಲ್ಲಿರುವ ಸಾಮಗ್ರಿಯನ್ನು ಎಚ್ಚರಿಕೆಯಿಂದ ಸಂಗ್ರಹಿಸಿ ಹಳೆಯ ಬೆಳ್ಗೊಳದ ಚರಿತ್ರೆಯನ್ನು ಬರೆಯಬೇಕು. ಈಗ ಹಳೆಯ ಬೆಳ್ಗೊಳದಲ್ಲಿ ಒಂದೇ ಬಸದಿ ಉಳಿದಿದ್ದರೂ ಊರ ಮಧ್ಯೆ ಇರುವ ಕೊಳದ ಪಕ್ಕದಲ್ಲಿರುವ ಹಲವು ಜೈನ ವಿಗ್ರಹಗಳು ಕೆರೆಯ ಕೋಡಿಯ ಹತ್ತಿರವಿರುವ ಶಿಲ್ಪಗಳು ಅಲ್ಲಿ ಇನ್ನೂ ಹಲವು ಬಸದಿಗಳಿದ್ದಿರಬೇಕೆಂಬುದಕ್ಕೆ ಸಾಕ್ಷಿಯಾಗಿದೆ. ಕೊನೆಯ ಪಕ್ಷ ಎರಡು ಸಾವಿರ ವರ್ಷದಷ್ಟಾದರೂ ಪ್ರಾಚೀನತೆ ಇರುವ ಹಳೆಯ ಬೆಳ್ಗೊಳದಲ್ಲಿ ಭೂಶೋಧನೆ ನಡೆಸಿದರೆ ಹೆಚ್ಚಿನ ಮಾಹಿತಿ ದೊರಕುವ ಸೂಚನೆಗಳಿವೆ. ಅಲ್ಲಿ ರೈತರು ನೆಲ ಉಳುವಾಗ ಒಡೆದ ಮಡಕೆ ಇತ್ಯಾದಿ ಅವಶೇಷಗಳು ದೊರಕುತ್ತವೆ. ಈಗಿನ ಹಳ್ಳಿಗೂ ಕೆರೆಗೂ ಮಧ್ಯದ ತೋಟಗಳೆಲ್ಲ ಒಂದು ಕಾಲಕ್ಕೆ ಜನವಸತಿಯ ನಿವೇಶನವಾಗಿದ್ದಿತೆಂಬುದಕ್ಕೆ ಆಧಾರಗಳಿವೆ.

ಒಂದು ಸಮಾನಾಂತರ ನಿದರ್ಶನ

ಆಂಧ್ರದ ತಿರುಮಲಬೆಟ್ಟಕ್ಕೆ ಮೊದಲು ತೀರ ಹತ್ತಿರವ ಹಳ್ಳಿಯೆಂದರೆ ಅಲ್ಲಿಗೆ ಒಂಬತ್ತು ಮೈಲಿ ದೂರದ ತಿರುಚ್ಚಾನೂರು ಆಗಿತ್ತು. ತಿರುಮಲ ಅಥವಾ

ತಿರುವೇಂಗಡ ಬೆಟ್ಟದ ಮೇಲೆ ಕೆಲಸ ಮಾಡುತ್ತಿದ್ದ ಅರ್ಚಕರು ತಿರುಚ್ಚಾನೂರಿನಲ್ಲಿ ವಾಸವಾಗಿದ್ದರು. ತಿರುಮಲಬೆಟ್ಟದ ಮೇಲಿನ ದೇವಾಲಯವು ಹೆಚ್ಚು ಪ್ರಸಿದ್ಧಿಗೆ ಬಂದು ಹೆಚ್ಚು ಜನರನ್ನು ಆಕರ್ಷಿಸಲು ಆರಂಭಿಸಿದ ಮೇಲೆ ಬೆಟ್ಟದ ಬುಡದಲ್ಲಿ ಈಗಿನ ತಿರುಪತಿ ಊರು ಸ್ಥಾಪಿತವಾಯ್ತು. ಈಚೆಗೆ ಆರಂಭವಾದ ತಿರುಪತಿಯು ಪ್ರಾಚೀನವಾದ ತಿರುಚ್ಚಾನೂರನ್ನು ಹಿನ್ನೆಲೆಗೆ ತಳ್ಳಿ ಬೆಳೆಯಿತು.[19]

ಅದೇ ರೀತಿ, ದೊಡ್ಡಬೆಟ್ಟದ ಮೇಲೆ ಗೊಮ್ಮಟವಿಗ್ರಹವು ನಿರ್ಮಾಣಗೊಂಡ ಮೇಲೆ ಈಗಿನ ಶ್ರವಣ ಬೆಳ್ಗೊಳವು ಹುಟ್ಟಿಕೊಂಡಿತು; ತನಗಿಂತ ಹಿಂದಿನ ಹಳೆಯ ಬೆಳ್ಗೊಳವನ್ನು ಸಂಪೂರ್ಣವಾಗಿ ಮರೆಮಾಡಿ ತಾನು ಬೆಳೆಯಿತು.

19. ರಾಮಚಂದ್ರರಾವ್ ಎಸ್. ಕೆ. : ತಿರುಪತಿ ತಿಮ್ಮಪ್ಪ ಬೆಂಗಳೂರು 1980. ಪು. 38; ಪು. 62-63.

ಸೂಚ್ಯಾರ್ಥ ಸೂಚನೆಯ ಲಿಂಗಗಳು/ಮುದ್ರೆಗಳು

ಎ. ಚಂದ್ರಶೇಖರ ನಂಗಲಿ

1.0 ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುವ ಅವತರಣಿಕೆಗಳಲ್ಲಿ ದೈವಸ್ತುತಿಯಿಂದ ಹಿಡಿದು ಫಲಶ್ರುತಿಯವರೆಗೆ ಹಲವಾರು ಅಂಶಗಳು ಕಂಡುಬರುತ್ತವೆ. ಇಂತಹ ಹಲವಾರು ಅಂಶಗಳಲ್ಲಿ ಸೂಚ್ಯಾರ್ಥ ಸೂಚನೆಯೂ ಒಂದು. ಸೂಚ್ಯಾರ್ಥ ಸೂಚನೆಯೆಂದರೆ ತನ್ನ ಕಾವ್ಯದ ವಿವಕ್ಷಿತ ಅಂತರಾರ್ಥದ ಗ್ರಹಿಕೆಗಾಗಿ ಸಹೃದಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ವತಃ ಕವಿಯೇ ಆಯಾ ಕಾವ್ಯದ ಅವತರಣಿಕೆಯಲ್ಲಿ ಒದಗಿಸಿಕೊಡುವ ಸೂಚ್ಯವಾದ ಕೀಲಿಗೈಗಳು ಎಂದರ್ಥ. ಈ ಸೂಚ್ಯಾರ್ಥ ಸೂಚನೆಯು ವಾಚ್ಯವಾಗಿ ವ್ಯಕ್ತವಾಗದೆ ವ್ಯಂಜನಾ ವ್ಯಾಪಾರವನ್ನು ಆಧರಿಸಿ ಸಹೃದಯರಿಗೆ ಪ್ರತೀತವಾಗುವುದರಿಂದ, ಸ್ವಲ್ಪ ಮಟ್ಟಿಗೆ ಇದು ಧ್ವನಿ ತತ್ತ್ವವನ್ನು ಹೋಲುತ್ತದೆ. ಈ ಪದ್ಧತಿಯು ಕನ್ನಡ ಕಾವ್ಯಗಳಲ್ಲಿ ಸ್ಪಷ್ಟವಾಗಿಲ್ಲದಿದ್ದರೂ ತೆಲುಗು ಮತ್ತು ಸಂಸ್ಕೃತ ಸಾಹಿತ್ಯದಲ್ಲಿದೆ. ಈ ಪದ್ಧತಿಯನ್ನು ತೆಲುಗು ವಿದ್ವಾಂಸರು 'ಲಿಂಗ'ಗಳೆಂದು ಗುರುತಿಸಿಕೊಂಡಿದ್ದಾರೆ. ಸಂಸ್ಕೃತದಲ್ಲಿ ಇದಕ್ಕೆ 'ಮುದ್ರೆ'ಗಳು ಅಥವಾ ಅಂಕನಗಳು ಎಂಬ ಹೆಸರಿರುವಂತೆ ತೋರುತ್ತದೆ. ಪ್ರಸ್ತುತ, ಈ ಸೂಚ್ಯಾರ್ಥ ಸೂಚನೆಯ ಪದ್ಧತಿಯನ್ನು ನಿದರ್ಶನ ಸಹಿತವಾಗಿ ಪರಿಚಯಿಸಿಕೊಳ್ಳೋಣ.

1.1 ತೆಲುಗಿನ ಸುಪ್ರಸಿದ್ಧ ಸಾಹಿತಿಗಳೂ ವಿದ್ವಾಂಸರೂ ಆದ ವಿ. ವಿಶ್ವನಾಥ ಸತ್ಯನಾರಾಯಣರು ಹೇಳಿರುವ ಈ ಮಾತುಗಳನ್ನು ಗಮನಿಸಿ : "ಒಂದು ಗ್ರಂಥ ಯಾವ ಉದ್ದೇಶದಿಂದ ರಚಿತವಾಗುತ್ತದೆಯೋ ಅದೇ ಅದರ ಅಂತರಾರ್ಥ. ಆ ಉದ್ದೇಶವನ್ನು ಕಂಡುಕೊಳ್ಳುವುದು ಹೇಗೆ ? ವಾಸ್ತವವಾಗಿ ನಿಪುಣಮತಿಯಾದ ಕವಿ ತನ್ನ ಉದ್ದೇಶವನ್ನು ಕಾವ್ಯದಲ್ಲಿ ಸುವ್ಯಕ್ತಗೊಳಿಸುತ್ತಾನೆ. ಸುವ್ಯಕ್ತಗೊಳಿಸುವುದೆಂದರೆ ವಾಚ್ಯವಾಗಿ ಹೇಳುವುದೆಂದಲ್ಲ; ವಾಚ್ಯವಾಗಿ ಹೇಳಿದರೆ ಅದು ಉತ್ತಮ ಕಾವ್ಯವೇ ಅಲ್ಲ, ನಿಪುಣನಾದ ಪಾಠಕನು ಜಾಗ್ರತೆಯಿಂದ ಊಹಿಸಿದರೆ ಅದು ಆತನಿಗೆ ತಿಳಿಯುವಂತೆ ಬರೆಯುತ್ತಾನೆ. ಪೂರ್ವದಿಂದಲೂ ನಮ್ಮ ದೇಶದಲ್ಲಿ ನಿಪುಣನಾದ ಕವಿ ತನ್ನ ಪ್ರಧಾನ ಉದ್ದೇಶವನ್ನು ಕಾವ್ಯದಲ್ಲಿ ಏರ್ಪಡಿಸುವುದಕ್ಕೆ ಕೆಲವು ಮಾರ್ಗಗಳಿವೆ. ಇವನ್ನು ಪಾರಿಭಾಷಿಕವಾಗಿ ಲಿಂಗಗಳು ಎಂದಿದ್ದಾರೆ"...[1]. ಇಲ್ಲಿರುವ 'ಲಿಂಗ' ಶಬ್ದವನ್ನು ಕೇವಲ ಗುರುತು (a mark), ಸಂಜ್ಞೆ

(a sign) ಎಂಬ ಪರಿಮಿತಾರ್ಥದಲ್ಲಿ ಮಾತ್ರ ಸ್ವೀಕರಿಸಬೇಕು. ಅಂದರೆ ಕವಿಯೊಬ್ಬ ಅವತರಣಿಕೆಯಲ್ಲಿ ತನ್ನ ಕಾವ್ಯದ ಅಂತರಾರ್ಥದ ಗ್ರಹಿಕೆಗಾಗಿ, ಪ್ರಧಾನ ಉದ್ದೇಶದ ಸ್ಪಷ್ಟನೆಗಾಗಿ ನೀಡಿರುವ ಕೆಲವು ಗುರುತು ಅಥವಾ ಸಂಜ್ಞೆಗಳನ್ನು ಲಿಂಗಗಳೆಂದು ಕರೆಯಲಾಗಿದೆ. ವಿ. ವಿಶ್ವನಾಥ ಸತ್ಯನಾರಾಯಣರು ಇಲ್ಲಿ 'ಲಿಂಗ' ಶಬ್ದವನ್ನು ಅದು ಬಳಕೆಯಾಗುವ ವಿಶಿಷ್ಟ ಅರ್ಥ ವ್ಯಾಪ್ತಿಯ ಹಿನ್ನೆಲೆಯಲ್ಲಿ ಪ್ರಸ್ತಾಪ ಮಾಡಿದ್ದಾರೆಯೇ ಹೊರತು, ಆ ಲಿಂಗಗಳಿಗೆ ಉದಾಹರಣೆಯನ್ನೇನೂ ಕೊಟ್ಟಿಲ್ಲ. ಆದರೆ 'ಲಿಂಗ' ಲಕ್ಷಣದ ನಿರ್ವಚನಕ್ಕೆ ಸರಿಹೊಂದುವಂತೆ ವಿಶ್ವನಾಥ ಸತ್ಯನಾರಾಯಣರು ಪ್ರಾಸಂಗಿಕವಾಗಿ ನಡೆಸಿರುವ ವಿಮರ್ಶೆಯನ್ನು ತೆಲುಗು 'ಮನು ಚರಿತ್ರೆ'ಯ ಪೀಠಿಕಾ ಭಾಗದಲ್ಲಿ ಉದಾಹರಿಸಲಾಗಿದೆ.[2] ಅದನ್ನು ಸಹ ಪದಶಃ ಅನುವಾದದೊಂದಿಗೆ ಕೆಳಗೆ ಕೊಟ್ಟಿದ್ದೇನೆ :

> "ಭಾರತೀಯ ನಾಟಕಗಳಲ್ಲಿ ವಿಷಯ ಸೂಚನೆಗೆ ಹೆಚ್ಚು ಪ್ರಾಧಾನ್ಯವಿದೆ. ಸಂಸ್ಕೃತ ನಾಟಕಗಳಲ್ಲಿ ಬಹಳ ಕಡೆ 'ಗಂಡ' ವೆಂಬ ಒಂದು ಅಂಗವು ಕಲ್ಪಿಸಲ್ಪಟ್ಟಿರುತ್ತದೆ. ಅದೇ ಸೂಚ್ಯಾರ್ಥ ಸೂಚನೆ. ಅಲ್ಲಸಾನಿ ಪೆದ್ದನನು ಕೂಡ ಅಂತಹ ಪದ್ಧತಿಯನ್ನು ಅವಲಂಬಿಸಿ ತನ್ನ ಮನು ಚರಿತ್ರೆಯಲ್ಲಿ ಆ ಸಂಪ್ರದಾಯವನ್ನು ನಿಬಂಧಿಸಿದ್ದಾನೆ."

ಎಂದು ಅಭಿಪ್ರಾಯ ಪಡುವ ವಿಶ್ವನಾಥರು 'ಮನು ಚರಿತ್ರೆ'ಯ ಪ್ರಾರಂಭದಲ್ಲಿರುವ ದೇವತಾ ಪ್ರಾರ್ಥನಾ ರೂಪವಾದ ಪದ್ಯಗಳನ್ನು ಉಲ್ಲೇಖಿಸುತ್ತಾರೆ. ಅವುಗಳ ಕನ್ನಡ ತಾತ್ಪರ್ಯ ಹೀಗಿದೆ :

1. ಶ್ರೀವಿಷ್ಣುವು ಲಕ್ಷ್ಮಿಯನ್ನು ಗಾಢವಾಗಿ ಅಪ್ಪಿಕೊಂಡಾಗ ಆತನ ಎದೆಯ ಮೇಲೆ ಅಂಟಿದ ಲಕ್ಷ್ಮೀ ವಕ್ಷೋಜ ಕಸ್ತೂರಿ ಪಂಕವನ್ನು ಕಂಡ ಸನಕಾದಿ ಸಜ್ಜನ ಭಕ್ತ ಶ್ರೇಣಿಗೆ, ವಿಷ್ಣುವು ಲಕ್ಷ್ಮಿಗೆ ಸಮೀಪದಲ್ಲಿ ಮತ್ತೊಬ್ಬ ಪತ್ನಿಯಾದ ಭೂದೇವಿಯನ್ನು ಕೂಡ ಪ್ರೀತಿಯಿಂದ ತನ್ನ ಎದೆಯಲ್ಲಿ ನಿಲ್ಲಿಸಿರಬೇಕೆಂದು ಭಾಸವಾಯಿತಂತೆ. ಈ ರೀತಿ ತೋರುತ್ತಿರುವ ರಾಜೀವಾಕ್ಷನು ತನ್ನ ಶುಭ ದೃಷ್ಟಿಯಿಂದ ಕೃಷ್ಣದೇವರಾಯನನ್ನು ಕೃತಾರ್ಥನನ್ನಾಗಿ ಮಾಡಲಿ.

2. ಪಾರ್ವತಿಯ ಅಂಕವನ್ನೇರಿದ ಬಾಲಗಣಪತಿಯು, ತಾಯಿಯ ಸ್ತನ್ಯಪಾನ ಮಾಡುವ ವೇಳೆಯಲ್ಲಿ ಬಾಲ ಸಹಜವಾದ ಚೇಷ್ಟೆಗಳಿಂದ ತನ್ನ ಸೊಂಡಿಲನ್ನು ಮತ್ತೊಂದು ಸ್ತನದೆಡೆಗೆ ಚಾಚಿ ಅಲ್ಲಿ ಕುಚವನ್ನು ಕಾಣದೆ (ಪಾರ್ವತಿಯ ಅರ್ಧ ಭಾಗ ಪುರುಷನಾದ ಶಿವ) ಅಲ್ಲಿದ್ದ ಅಹಿವಲ್ಲಭನ ಹಾರಗಳನ್ನು ಕಂಡು ಅವೇ ಮೃಣಾಳಾಂಕುರಗಳೆಂದು ಬಗೆದು ತಾಕುತ್ತಿರುವ ಗಜ ಮುಖನನ್ನು ಅಭೀಷ್ಟ ಸಿದ್ಧಿಗಾಗಿ ಪ್ರಾರ್ಥಿಸುವೆನು.

ಪ್ರಸ್ತುತ, ನಾವಿಲ್ಲಿ ಗಮನಿಸಬೇಕಾದ ಅಂಶವೆಂದರೆ, 'ಮನು ಚರಿತ್ರೆ'ಯ ಪ್ರಾರಂಭದ ಪದ್ಯಗಳಲ್ಲಿ ಪ್ರಸ್ತಾಪಿತವಾಗಿರುವ ಭ್ರಾಂತಿ ವಿಚಾರ, ಮೊದಲ ಪದ್ಯದಲ್ಲಿ ಸನಕಾದಿ ಸಜ್ಜನರು ಭ್ರಾಂತಿಗೆ ಒಳಗಾಗಿದ್ದರೆ, ಎರಡನೆಯ ಪದ್ಯದಲ್ಲಿ ಬಾಲ ಗಣಪತಿಯು ಭ್ರಾಂತಿಗೆ ಒಳಗಾಗಿದ್ದಾನೆ. ಈ ಅಂಶಗಳನ್ನು ವಿವರಿಸುತ್ತಾ ವಿಶ್ವನಾಥ ಸತ್ಯನಾರಾಯಣರು ಹೇಳುವ ಮಾತುಗಳನ್ನಿಲ್ಲಿ ಪರಿಶೀಲಿಸಬಹುದು.

> "ಈ ಪದ್ಯಗಳಲ್ಲಿ ಭ್ರಾಂತಿ ವಿಷಯವೇ ಪ್ರಸ್ತಾಪಿತವಾಗಿದೆ. 'ಮನು ಚರಿತ್ರೆ'ಯ ಪೂರ್ವ ಕಥೆಯಲ್ಲಿ ವರೂಧಿನಿ–ಪ್ರವರಾಖ್ಯರ ವೃತ್ತಾಂತವಿದೆ. ಅಲ್ಲಿ ವರೂಧಿನಿ ಪ್ರವರಾಖ್ಯನ ಆಕಾರವನ್ನು ಕಂಡು ಆತನು ವಿಲಾಸಪರನೆಂದು ಭ್ರಾಂತಿ ಹೊಂದುವಳು. ಪ್ರವರನು ಹವ್ಯವಾಹನನನ್ನು ಪ್ರಾರ್ಥಿಸಿ ಸ್ವಸ್ಥಳವನ್ನು ಸೇರಿದ ನಂತರ, ವರೂಧಿನಿಯನ್ನು ಒಲಿದಿದ್ದ ಗಂಧರ್ವನೊಬ್ಬನು ಮರುದಿನ ಉದ್ಯಾನವನದಲ್ಲಿ ಪ್ರವರ ವೇಷಧಾರಿಯಾಗಿ ವರೂಧಿನಿಗೆ ಕಾಣಿಸಿಕೊಳ್ಳಲು ಅವಳು ಆತನೇ ಪ್ರವರನೆಂದು ಭ್ರಾಂತಿ ಹೊಂದುವಳು. ಪ್ರವರನೆಂಬ ಭ್ರಾಂತಿಯಿಂದಲೇ ಗಂಧರ್ವನೊಡನೆ ಸಂಸಾರ ಹೂಡುವಳು. ತನಗೆ ಗರ್ಭವುಂಟಾದುದು ಪ್ರವರನ ಮೂಲಕವೆಂದೇ ಅವಳ ಭ್ರಾಂತಿ. ಆ ಭ್ರಾಂತಿ ಕಡೆಯವರೆಗೂ ಅವಳಿಗೂ ಹಾಗೇ ಇರುತ್ತದೆ. ಅವಳಿಗೆ ನಿಜ ಸಂಗತಿಯೇ ತಿಳಿಯುವುದಿಲ್ಲ. ಈ ರೀತಿ ಕಥಾ ಭಾಗದಲ್ಲಿರುವ ಈ ಭ್ರಾಂತಿಯನ್ನು ಸೂಚಿಸುವುದಕ್ಕಾಗಿಯೇ ಪೆದ್ದನನು ಕೃತಿಯ ಆದಿಯಲ್ಲಿರುವ ದೈವಸ್ತುತಿ ಪೂರ್ವಕವಾದ ಪದ್ಯಗಳಲ್ಲಿ ಭ್ರಾಂತಿ ವಿಷಯವನ್ನೇ ಅಭಿವರ್ಣಿಸಿದ್ದಾನೆ."

ಇಂತಹ ಸೂಚ್ಯಾರ್ಥ ಸೂಚನೆಯ ಕ್ರಮವನ್ನೇ ವಿಶ್ವನಾಥ ಸತ್ಯನಾರಾಯಣರು ಲಿಂಗಗಳು ಎಂದು ಕರೆದಿರುವಂತೆ ತೋರುತ್ತದೆ. ಹೀಗೆ ಕಾವ್ಯಮುಖದಲ್ಲಿ ಪ್ರಸ್ತಾಪಿತವಾಗಿರುವ ಸೂಚ್ಯಾರ್ಥವನ್ನು ಒಟ್ಟು ಕಾವ್ಯ ಶರೀರದ ಜೊತೆಯಲ್ಲಿಟ್ಟು, ಕಾವ್ಯಾರ್ಥದ ಮುಖ್ಯ ಸೂತ್ರವೊಂದನ್ನು ಕಂಡುಕೊಳ್ಳುವ ಈ ಪ್ರಯತ್ನ 'ಪ್ರಬಂಧ ಧ್ವನಿ'ಯ ಕಲ್ಪನೆಯನ್ನು ನೆನಪಿಸುತ್ತದೆ. ಈ ಸೂಚ್ಯಾರ್ಥ ಸೂಚನೆಯ ಸಂಜ್ಞಾಮಾರ್ಗವು ಸಂಸ್ಕೃತ ಮತ್ತು ತೆಲುಗು ಸಾಹಿತ್ಯಗಳಲ್ಲಿ ಬಳಕೆಯಲ್ಲಿರುವ ಪದ್ಧತಿಯಾಗಿದೆ. ಇದರಲ್ಲಿ ಗಮನಿಸತಕ್ಕ ಅಂಶವೆಂದರೆ, "ತಿಳಿಯ ಹೇಳುವೆ ಕೃಷ್ಣ ಕಥೆಯನು (ಕರ್ಣಾಟಕ ಭಾರತ ಕಥಾಮಂಜರಿ 1.13) ಎಂಬಂತಹ ವಾಚ್ಯತೆಗೆ ಸ್ಥಾನವಿಲ್ಲ. ಏನಿದ್ದರೂ, ಕವಿ ತನ್ನ ಕಾವ್ಯವಸ್ತುವಿನ ಅಂತರಾರ್ಥವನ್ನು ಸೂಕ್ಷ್ಮವಾಗಿ ಮತ್ತು ಪರೋಕ್ಷವಾಗಿ ಸೂಚಿಸಿರಬೇಕು. ವಿಶ್ವನಾಥರ ಪ್ರಕಾರ

"ನಿಪುಣನಾದ ಪಾಠಕನು ಜಾಗ್ರತೆಯಿಂದ ಊಹಿಸಿದರೆ ಅದು ಆತನಿಗೆ ತಿಳಿಯುವಂತೆ" ಬರೆಯಬೇಕು.

1.2. ಈ ಲಿಂಗಗಳಿಗೆ ಮುದ್ರೆಗಳು, ಅಂಕನಗಳು ಎಂಬ ಪರ್ಯಾಯ ಶಬ್ದಗಳಿರುವಂತೆ ತೋರುತ್ತದೆ. ಏಕೆಂದರೆ, ಭಾಮಹನು ತನ್ನ 'ಕಾವ್ಯಾಲಂಕಾರ'ದಲ್ಲಿ ಮಹಾಕಾವ್ಯದ ಲಕ್ಷಣಗಳನ್ನು ಹೀಗೆ ವಿವರಿಸಿದ್ದಾನೆ:

> **ಕವೇರಭಿಪ್ರಾಯಕೃತೈರಂಕನೈ ಕೈಶ್ಚಿದಂಕಿ ತಾ**
> **ಕನ್ಯಾಹರಣಾ ಸಂಗ್ರಾಮ ವಿಪ್ರಲಂಭೋದಯಾನ್ವಿತಾ ॥**

ಕವಿಯ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಒಳಗೊಂಡ ಕೆಲವು ಮುದ್ರೆಗಳಿಂದಲೂ ಅದು (ಅಂದರೆ ಮಹಾಕಾವ್ಯವು) ಗರ್ಭಿತವಾಗಿರುವುದುಂಟು. ಕನ್ಯಾಹರಣ, ಯುದ್ಧ, ವಿರಹ, ನಾಯಕನ ಅಭ್ಯುದಯ ಇವುಗಳಿಂದಂತೂ ಕೂಡಿರುತ್ತದೆ.[4]

ಇಲ್ಲಿ ಭಾಮಹನು ಮಹಾಕಾವ್ಯವು "ಕವಿಯ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಒಳಗೊಂಡ ಕೆಲವು ಮುದ್ರೆ (=ಅಂಕನ)ಗಳಿಂದಲೂ ಗರ್ಭಿತವಾಗಿರುವುದುಂಟು..." ಎಂಬ ಐಚ್ಛಿಕ ಲಕ್ಷಣವನ್ನು ಹೇಳುತ್ತಿದ್ದಾನೆಯೇ ಹೊರತು ಆ ಮುದ್ರೆ ಅಥವಾ ಅಂಕನಗಳ ಸ್ವರೂಪ ಸ್ವಭಾವಗಳನ್ನು ವಿವರಿಸುವ ಯಾವ ನಿದರ್ಶನಗಳನ್ನು ಕೊಟ್ಟಿಲ್ಲ. ಈ ಮುದ್ರೆ ಅಥವಾ ಅಂಕನಗಳು ಈಗಾಗಲೇ ವಿವರಿಸಿದ ಸೂಚ್ಯಾರ್ಥ ಸೂಚನೆಯ ಸಂಬಂಧ ವಾಚಕಗಳೇ ಆಗಿರಬೇಕು. ಅಂದರೆ, ಮುದ್ರೆ ಅಥವಾ ಅಂಕನ ಎಂಬ ಪದಗಳನ್ನು ಭಾಮಹನು ಕವಿಯೊಬ್ಬ ತನ್ನ ಕಾವ್ಯದ ಅಂತರಾರ್ಥದ ಗ್ರಹಿಕೆಗಾಗಿ, ಪ್ರಧಾನ ಉದ್ದೇಶದ ಸ್ಪಷ್ಟನೆಗಾಗಿ ನೀಡಿರುವ ಸೂಕ್ಷ್ಮವಾದ ಗುರುತು ಅಥವಾ ಸಂಜ್ಞಾಪೂರ್ವಕವಾದ ಅಭಿಪ್ರಾಯಗಳು ಎಂಬರ್ಥದಲ್ಲಿ ಬಳಸಿರುವನೆಂದು ಸದ್ಯಕ್ಕೆ ಊಹಿಸಬಹುದು.[5] ಇದನ್ನು ಒಪ್ಪುವುದಾದರೆ, ಸೂಚ್ಯಾರ್ಥ ಸೂಚನೆಯ ಸಂಜ್ಞಾಮಾರ್ಗವು ಭಾಮಹನ ಕಾಲಕ್ಕಾಗಲೇ ಒಂದು ಪ್ರಚಲಿತ ಲಕ್ಷಣವಾಗಿತ್ತು ಎನ್ನಬಹುದು. ಈ ಸೂಚ್ಯಾರ್ಥ ಸೂಚನೆಯ ಸಂಜ್ಞಾಮಾರ್ಗವು ಸ್ವಲ್ಪಮಟ್ಟಿಗೆ ಧ್ವನಿತತ್ತ್ವವನ್ನು ಹೋಲುವುದರಿಂದ ಅಸಾಧುವಲ್ಲದ ಒಂದು ಊಹೆಯನ್ನು ಮಾಡಬಹುದಾಗಿದೆ. ಅಂದರೆ, ಸಾರಸ್ವತ ಲೋಕದಲ್ಲಿ ಮುಂದೆ ಆನಂದವರ್ಧನನಿಂದ ಧ್ವನಿ ಸಿದ್ಧಾಂತವು ಒಂದು ಸ್ಪಷ್ಟ ರೂಪವನ್ನು ಪಡೆದುಕೊಂಡದ್ದು ಸರಿಯಷ್ಟೆ. ಇದಕ್ಕೆ ಮುಂಚಿನಿಂದಲೂ ಪ್ರಾಚೀನ ಕಾವ್ಯ–ನಾಟಕಗಳಲ್ಲಿ ಬಳಕೆಯಲ್ಲಿದ್ದ ಈ ಸೂಚ್ಯಾರ್ಥ ಸೂಚನೆಯ ಸಂಜ್ಞಾಮಾರ್ಗವು (ಲಿಂಗಗಳು/ಮುದ್ರೆಗಳು) ಒಂದು ದೃಷ್ಟಿಯಿಂದ ಧ್ವನಿತತ್ತ್ವದ ಪ್ರಾಥಮಿಕ ಗ್ರಹಿಕೆಯಾಗಿದ್ದು ಇದೇ ಮುಂದೆ ಧ್ವನಿ ಸಿದ್ಧಾಂತದ ಸ್ಪಷ್ಟ ಸ್ವರೂಪಕ್ಕೆ ದಾರಿ ಮಾಡಿಕೊಟ್ಟ ಪ್ರಾಚೀನ ವಿಚಾರಗಳೇ? ಎಂಬುದು ಕುತೂಹಲದ ಸಂಗತಿಯಾಗಿದೆ[6A].

1.3. ಸಂಸ್ಕೃತ ನಾಟಕಗಳನ್ನು ಪ್ರಸ್ತಾಪ ಮಾಡುವುದಾದರೆ, ಇವುಗಳಲ್ಲಿ ಸೂಚ್ಯಾರ್ಥ ಸೂಚನೆಯು ಅಗತ್ಯವಾಗಿ ಅನುಸರಿಸಲೇಬೇಕಾದ ಪದ್ಧತಿಯಾಗಿತ್ತು. 'ದಶರೂಪಕ'ದ ಕರ್ತೃವಾದ ಧನಂಜಯನು ಇಂತಹ ಸೂಚನಾ ಕ್ರಮವನ್ನು 'ಸ್ಥಾಪನಾ' ಎಂದು ಕರೆದಿದ್ದಾನೆ.6B

> "ಪೂರ್ವರಂಗದ ಮಂಗಲಾಚರಣೆ ಮೊದಲಾದವುಗಳನ್ನು ಮುಗಿಸಿ ಸೂತ್ರಧಾರನು ಒಳಕ್ಕೆ ಹೋಗಲು ಮತ್ತೊಬ್ಬ ನಟನು ವೈಷ್ಣವ ಸ್ಥಾನಕದಿಂದ ಪ್ರವೇಶಿಸಿ ಕಾವ್ಯ ವಿಷಯವನ್ನು ಸ್ಥಾಪಿಸತಕ್ಕದ್ದು. ಕಾವ್ಯಾರ್ಥವನ್ನು ಸೂಚಿಸಿ ಸ್ಥಾಪಿಸುವುದರಿಂದ ಆತನಿಗೆ ಸ್ಥಾಪಕ ಎನ್ನುತ್ತಾರೆ (3.2)... ಆತ ಸೂಚಿಸತಕ್ಕದ್ದು ಕಥೆಯ ವಸ್ತು ಇಲ್ಲವೆ ಬೀಜ, ಇಲ್ಲವೆ ಮುಖ ಅಥವಾ ಪಾತ್ರ (3.3)"

ಇಲ್ಲಿ ಧನಂಜಯನು ಹೇಳುತ್ತಿರುವ 'ಸ್ಥಾಪನಾ' ಎಂಬ ಸೂಚನಾಕ್ರಮಕ್ಕೆ 'ಅಂಕಮುಖ'ವೆಂಬ ಪರ್ಯಾಯ ಶಬ್ದವಿರುವಂತೆ ತೋರುತ್ತದೆ. ಅಂಕಮುಖ : Introductory act of a drama giving a clue to the whole plot.[7] ಈ ಸೂಚ್ಯಾರ್ಥ ಸೂಚನೆಗೆ ನಿದರ್ಶನವಾಗಿ ಮೃಚ್ಛಕಟಿಕ ಮತ್ತು ಅಭಿಜ್ಞಾನ ಶಾಕುಂತಲ ನಾಟಕಗಳ ಪ್ರಸ್ತಾವನೆಯನ್ನು ಪರಿಶೀಲಿಸಬಹುದು. 'ಮೃಚ್ಛಕಟಿಕ'ದ ಪ್ರಸ್ತಾವನೆಯಲ್ಲಿ ನಟಿ ಮತ್ತು ಸೂತ್ರಧಾರರ ಸಂಭಾಷಣೆಯ ಸಂದರ್ಭದಲ್ಲಿ ಅಭಿರೂಪ ಪತಿಯನ್ನು ಹೊಂದಲು ವ್ರತವನ್ನು ಆಚರಿಸುವ ವಿಚಾರವಿದೆ. ನಟಿ ಹೇಳುವ ಈ ಮಾತನ್ನು ಗಮನಿಸಿ :

"ಅಭಿರೂಪ ಪತಿ ಅಂತ, ಸುಂದರನಾದ ಪತಿ ಸಿಗಲಿ ಅಂತ ಮಾಡುವ ವ್ರತ"... ನಟಿ ಮತ್ತು ಸೂತ್ರಧಾರರ ನಡುವೆ ಕೇವಲ ಬಾಯಿಮಾತಿನಲ್ಲಿ ವ್ಯಕ್ತವಾಗುತ್ತಿರುವ ಈ ವ್ರತ ವಿಚಾರವನ್ನು ವಾಸ್ತವವಾಗಿ ಜೀವನದಲ್ಲಿ ಅಳವಡಿಸಿಕೊಳ್ಳುವುದು ವಸಂತ ಸೇನೆ. ಈಕೆ ತನಗೆ ಎಷ್ಟೇ ಅಡ್ಡಿ ಆತಂಕಗಳು ಉಂಟಾದರೂ ಕೂಡ ಕಡೆಗೆ ಇಷ್ಟ ಪಟ್ಟವನನ್ನೇ ತನ್ನ ಬಾಳಿನ ಸಂಗಾತಿಯನ್ನಾಗಿ ಆರಿಸಿಕೊಳ್ಳುತ್ತಾಳೆ. ನಾಟಕ ದಲ್ಲಿರುವ ಈ ಮುಖ್ಯಾರ್ಥವನ್ನು 'ಮೃಚ್ಛಕಟಿಕ'ದ ಕರ್ತೃವು ಸೂಚ್ಯಾರ್ಥ ಸೂಚನೆಯ ಪದ್ಧತಿಯನ್ನವಲಂಬಿಸಿ ಪ್ರಸ್ತಾವನೆಯಲ್ಲೇ ಎತ್ತಿ ಹಿಡಿದಿದ್ದಾನೆ. ಇದೇ ರೀತಿ ಕಾಳಿದಾಸನ 'ಅಭಿಜ್ಞಾನ ಶಾಕುಂತಲಾ' ನಾಟಕದಲ್ಲಿ ಸೂತ್ರಧಾರನು ಮೊದಲು ಆಡಬೇಕಾದ ನಾಟಕದ ಹೆಸರನ್ನು ಹೇಳಿ, ಋತು ವರ್ಣನೆಯ ನಂತರ ಮರೆತು ಪುನಃ ಜ್ಞಾಪಿಸಿಕೊಳ್ಳುವುದನ್ನು ಸೂಚಿಸಬಹುದು. ಏಕೆಂದರೆ, ಅಂಕಮುಖ ದಲ್ಲಿ ಪ್ರಸ್ತಾಪಿತವಾಗಿರುವ ಈ ಮರೆವು-ನೆನಪಿನ ವಿಚಾರವು 'ಶಾಕುಂತಲಾ' ನಾಟಕದ ಪ್ರಮುಖ ಆಶಯಗಳಲ್ಲೊಂದಾಗಿದೆ. ಈ ಸೂಚ್ಯಾರ್ಥ ಸೂಚನೆಯು ಸಂಸ್ಕೃತ ನಾಟಕಗಳಲ್ಲಿ ಮಾತ್ರವಲ್ಲದೆ ಸಂಸ್ಕೃತ ಕಾವ್ಯಗಳಲ್ಲಿ ಕೂಡ ಪ್ರಾರಂಭದಲ್ಲಿ

ಪ್ರಸ್ತಾಪಿತವಾಗಿರುವುದುಂಟು. ಉದಾಹರಣೆಗೆ ವಾಲ್ಮೀಕಿ ವಿರಚಿತ 'ರಾಮಾಯಣ'ದ ಪ್ರಾರಂಭದಲ್ಲಿರುವ ಈ ಸುಪ್ರಸಿದ್ಧ ಶ್ಲೋಕವನ್ನು ಗಮನಿಸಿ :

> ಮಾನಿಷಾದ ! ಪ್ರತಿಷ್ಠಾಂತ್ವಮಗಮಃ ಶಾಶ್ವತೀ ಸಮಾಃ
> ಯತ್ ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಮ್ ॥

ರಾಮಾಯಣದ ಕಾವ್ಯಮುಖದಲ್ಲಿ ಕಂಡುಬರುವ ಈ ನಿಷಾಧ ಪ್ರಸಂಗವು ತುಂಬ ಧ್ವನಿಪೂರ್ಣವಾಗಿದೆ. ಇಲ್ಲಿ ಪ್ರಸ್ತಾಪಿತವಾಗಿರುವ ಸಂಬಂಧ ವಿಚ್ಛೇದಕ ವಿಷಯವು ಮುಂದೆ ಕಾವ್ಯದುದ್ದಕ್ಕೂ ವಿವಿಧ ಕ್ರಿಯಾರೂಪಗಳಲ್ಲಿ ಮತ್ತೆ ಮತ್ತೆ ಸಂಭವಿಸುತ್ತಲೇ ಇರುತ್ತದೆ. ಅಂದರೆ, ಇಡೀ ರಾಮಾಯಣವು ಪ್ರಾರಂಭದ ನಿಷಾದ ಪ್ರಸಂಗದಿಂದ ಹಿಡಿದು ಸೀತೆ ಭೂಮಿಯಲ್ಲಿ ಸೇರಿ ಹೋಗುವವರೆಗೆ ಬಗೆಬಗೆಯ ಸಂಬಂಧಗಳು ಕಡಿದು ಬೀಳುವ ಮತ್ತು ಅಗಲುವ ಘಟನೆಗಳಿಂದಲೇ ತುಂಬಿಕೊಂಡಿದೆ. ಕೃಷ್ಣಚೈತನ್ಯರ ಈ ಅಭಿಪ್ರಾಯವನ್ನು ಕೆ. ವಿ. ನಾರಾಯಣರು ತಮ್ಮ ಲೇಖನವೊಂದರಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದಾರೆ.[8] ಹೀಗಾಗಿ, ನಿಷಾದ ಪ್ರಸಂಗದ ಶ್ಲೋಕವು ಸೂಚ್ಯಾರ್ಥ ಸೂಚನೆಗೆ ಒಂದು ಅತ್ಯುತ್ತಮ ಉದಾಹರಣೆಯಾಗಿ ನಿಲ್ಲುತ್ತದೆ. ಇದೇ ಶ್ಲೋಕವನ್ನು ಸೂಚ್ಯಾರ್ಥ ಸೂಚನೆಗೆ ಪೂರಕವಾಗಿ ವಿಶ್ಲೇಷಿಸುತ್ತಾ ತೆಲುಗಿನ ಸುಪ್ರಸಿದ್ಧ ವಿದ್ವತ್ ವಿಮರ್ಶಕರೊಬ್ಬರು ಚಮತ್ಕಾರ ಪೂರ್ಣವಾದ ಎರಡು ವಿಲಕ್ಷಣ ಅರ್ಥಗಳನ್ನು ಆರೋಪಿಸಿದ್ದಾರೆ :[9]

> "ಓ ನಿಷಾದನೇ! ಕ್ರೌಂಚ ಮಿಥುನದಿಂದ, ಕಾಮಮೋಹಿತವಾದ ಗಂಡು ಪಕ್ಷಿಯನ್ನು ವಧಿಸಿದ ನೀನು ಶಾಶ್ವತವಾಗಿ ಪ್ರತಿಷ್ಠೆಯನ್ನು ಹೊಂದದೆ ಇರುವವನಾಗು ಎಂಬುದು ಈ ಶ್ಲೋಕದ ಅರ್ಥ. ಮೇಲುನೋಟಕ್ಕೆ ಈ ಅರ್ಥವೊಂದೆ ಗೋಚರಿಸುತ್ತಿದ್ದರೂ ಅದರಲ್ಲಿನ್ನೂ ಹಲವಾರು ಅರ್ಥಗಳಿವೆ. ಅವು ರಾಮಾಯಣ ಕಥೆಯ ದಿಕ್ಸೂಚಿಗಳಾಗಿವೆ. ಮಾ ನಿಷಾದ! ಅಂದರೆ ಲಕ್ಷ್ಮಿಗೆ ನಿವಾಸ ಸ್ಥಾನನಾದ ಓ ವಿಷ್ಣು! ಕ್ರೌಂಚರಾದ ಮಂಡೋದರಿ–ರಾವಣರೆಂಬ (ರಾವಣನ ತಾಯಿಯ ಹೆಸರು ಕ್ರುಂಚಿ) ದಂಪತಿಗಳಲ್ಲಿ, ಕಾಮಮೋಹಿತನಾದ ರಾವಣನನ್ನು ಸಂಹರಿಸಿದೆಯಾದ್ದರಿಂದ ನೀನು ಅನೇಕ ಸಂವತ್ಸರಗಳು ಪ್ರತಿಷ್ಠೆಯನ್ನು ಹೊಂದುವೆಯೆಂಬುದು ಇದರಲ್ಲಿನ ಒಂದರ್ಥವಾಗಿದೆ. 'ನಿಷಾದ' ಶಬ್ದಕ್ಕೆ ಪ್ರಪಂಚ ಸ್ಥಿತಿಗೆ ಭಂಗವನ್ನುಂಟುಮಾಡುವ 'ಅಧರ್ಮ' ವೆಂಬ ಅರ್ಥವನ್ನು ಹೇಳಲು ಸಾಧ್ಯವಿದೆ. ಓ ಅಧರ್ಮವೆ! ಆದರ್ಶಪ್ರಾಯವಾದ ಜೀವನವನ್ನು ಪ್ರಕಟಪಡಿಸುವ ಸೀತಾರಾಮರೆಂಬ ದಂಪತಿಗಳಲ್ಲಿ ಒಬ್ಬರನ್ನು ಅಪಹೃತಗೊಳಿಸಿದ ನೀನು ಅನೇಕ ಸಂವತ್ಸರಗಳು ಸ್ಥಿರವಾಗಿ ನಿಲ್ಲದವನಾಗು ಎಂಬುದು ಮತ್ತೊಂದು

ಅರ್ಥ. ಈ ಎರಡರ್ಥಗಳು ಕಥಾಸಂಬದ್ಧವಾಗಿದ್ದು ಕಾವ್ಯಾರ್ಥವನು ಸೊಗಸಾಗಿ ಸೂಚಿಸುತ್ತಿವೆ."

1.4 ಈ ಸೂಚ್ಯಾರ್ಥ ಸೂಚನೆಯ ಸಂಜ್ಞಾ ಮಾರ್ಗವು ಸಂಸ್ಕೃತ ಮತ್ತು ತೆಲುಗು ಕಾವ್ಯಗಳ ಅವತರಣಿಕಾ ಭಾಗದಲ್ಲಿ ಕಂಡುಬರುವ ಒಂದು ವಿಶಿಷ್ಟ ಅಂಶವಾಗಿದೆ. ಇದನ್ನು ಕನ್ನಡ ಕವಿಗಳು ತಂದಿದ್ದಾರೆಯೇ ? ಇಲ್ಲವೇ ? ಎಂಬುದನ್ನು ಪರಿಶೀಲಿಸಬೇಕಾಗಿದೆ. ಸಾಮಾನ್ಯವಾಗಿ ಎಲ್ಲ ಕನ್ನಡ ಕವಿಗಳು ತಮ್ಮ ಕಾವ್ಯದ ಉದ್ದೇಶವನ್ನು, ಪ್ರಮುಖ ಅಂತರಾರ್ಥವನ್ನು ಅತ್ಯಂತ ನೇರವಾಗಿ ಸ್ಪಷ್ಟವಾದ ಮಾತುಗಳಿಂದ ಹೇಳಿಕೊಂಡಿದ್ದಾರೆ. "ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್" (ವಿಕ್ರಮಾರ್ಜುನ ವಿಜಯ 1.14) ಅಂದಮಾತ್ರಕ್ಕೆ ಕನ್ನಡ ಕವಿಗಳಿಗೆ ಸೂಚ್ಯಾರ್ಥ ಸೂಚನೆಯ ಸಂಜ್ಞಾ ಮಾರ್ಗದ ಬಗ್ಗೆ ಯಾವುದೇ ತಿಳುವಳಿಕೆಯು ಇಲ್ಲವೆಂದು ನಿರ್ಣಯಿಸುವಂತಿಲ್ಲ. ಪಂಪ ಕವಿಯು ತನ್ನ ಸಮಸ್ತ ಭಾರತದ ಮೊದಲ ನಾಲ್ಕು ಪದ್ಯಗಳಲ್ಲಿ ಪ್ರಭುವಾದ ಅರಿಕೇಸರಿಯನ್ನು ವಿಷ್ಣು, ಶಿವ, ಸೂರ್ಯ, ಮನ್ಮಥರೊಂದಿಗೆ ಸಮೀಕರಿಸಿದ್ದಾನೆ. ಜಿ. ಎಸ್. ಶಿವರುದ್ರಪ್ಪನವರು ಈ ಪದ್ಯಗಳನ್ನು ವಿಶ್ಲೇಷಿಸುತ್ತಾ "ಪಂಪನ ಸ್ತುತಿ ಮಾತ್ರ ವಿಲಕ್ಷಣವಾಗಿದೆ" ಎಂಬ ಮಾತನ್ನು ಬರೆದಿದ್ದಾರೆ.[10] ಪಂಪನ ಈ ಪದ್ಯಗಳು ವಿಲಕ್ಷಣವಾಗಿರುವುದು ನಿಜ. ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದಾಗ 'ಸಮಸ್ತಭಾರತ'ದ ಮೊದಲ ನಾಲ್ಕು ಪದ್ಯಗಳಲ್ಲಿರುವ "ತಗುಳ್ಚಿ ಪೋಲಿಪ" ದೃಷ್ಟಿಯು ಅರ್ಥಪೂರ್ಣವಾಗಿರುವಂತಿದೆ. ಏಕೆಂದರೆ ಇಡೀ ಕಾವ್ಯವೇ ಮುಂದೆ "ತಗುಳ್ಚಿ ಪೋಲಿಪ" ಕ್ರಮವೇ ಆಗಿದೆ. ಇದನ್ನೊಳಗೊಂಡಿರುವ ಸಮಸ್ತ ಭಾರತದ ಮೊದಲ ನಾಲ್ಕು ಪದ್ಯಗಳು ಒಂದು ದೃಷ್ಟಿಯಿಂದ "ತಗುಳ್ಚಿ ಪೋಲಿಪ" ವಿನೂತನ ಕಥನ ಕ್ರಮವನ್ನು ಪರಿಚಯಿಸಿಕೊಡುವ ಸೂಚನಾ ಪದ್ಯಗಳಾಗಿವೆಯೇ ? ಎಂಬುದು ವಿಚಾರಿಸಬೇಕಾದ ಅಂಶವಾಗಿದೆ. ಇದೇ ಕ್ರಮವು ರನ್ನ ಕವಿಯ ಸಾಹಸಭೀಮವಿಜಯದ ಪ್ರಾರಂಭದಲ್ಲಿ ಮತ್ತು ಇನ್ನಿತರ ಕಾವ್ಯಗಳಲ್ಲಿ ಕಂಡು ಬರುತ್ತದೆ.

1.5 ಕೊನೆಯದಾಗಿ, ಇಂತಹ ಸೂಚ್ಯಾರ್ಥ ಸೂಚನೆಯ ಸಂಜ್ಞಾ ಮಾರ್ಗದಿಂದ ಆಯಾ ಕಾವ್ಯಗಳ ವಿಮರ್ಶೆಗೆ, ವಿಶ್ಲೇಷಣೆಗೆ ಯಾವ ಪ್ರಯೋಜನವಿದೆ ? ಎಂಬುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಮೊದಲಿಗೆ ವಿಶ್ವನಾಥ ಸತ್ಯನಾರಾಯಣರು ವಿಶ್ಲೇಷಿಸಿರುವ 'ವಸು ಚರಿತ್ರೆ'ಯ ಮೊದಲ ಪದ್ಯಗಳನ್ನೇ ತೆಗೆದುಕೊಳ್ಳೋಣ. ಈ ಪದ್ಯಗಳಲ್ಲಿ ಸೂಚ್ಯಾರ್ಥ ಸೂಚನೆಯ ಸಂಜ್ಞಾ ಮಾರ್ಗದ ಪದ್ಧತಿಯಿದೆ ಎಂಬುದನ್ನು ಗ್ರಹಿಸದೆಯೂ ಆ ಕಾವ್ಯದ ಉದ್ದೇಶವೂ ಪ್ರಮುಖ ಅಂತರಾರ್ಥವೂ ಆದ ಭ್ರಾಂತಿ ವಿಚಾರವನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲವೆ ?

'ಮೃಚ್ಛಕಟಿಕ'ದ ಪ್ರಸ್ತಾವನೆಯಲ್ಲಿ ಅಭಿರೂಪ ಪತಿಯನ್ನು ಹೊಂದಲು ಆಚರಿಸಬೇಕಾದ ವ್ರತ ವಿಚಾರವಿದೆ. ಇದನ್ನು ಗ್ರಹಿಸದಿದ್ದರೂ ಕೂಡ ಆ ನಾಟಕದ ಪ್ರಮುಖ ಆಶಯಗಳಲ್ಲಿ ಅಭಿರೂಪ ಪತಿಯನ್ನು ಹೊಂದುವುದು ಕೂಡ ಒಂದೆಂಬುದು ತಿಳಿಯುವುದಿಲ್ಲವೆ? ಹಾಗೆಯೇ 'ಅಭಿಜ್ಞಾನ ಶಾಕುಂತಲಾ' ನಾಟಕದ ಪ್ರಸ್ತಾವನೆಯಲ್ಲಿ ಸೂತ್ರಧಾರನ ಸಂದರ್ಭದಲ್ಲಿ ಏರ್ಪಡುವ ಮರೆವು - ನೆನಪಿನ ವಿಚಾರದ ಪ್ರಸ್ತಾಪವಿಲ್ಲದೆಯೂ ಆ ನಾಟಕದ ಪ್ರಧಾನ ಆಶಯಗಳಲ್ಲೊಂದಾದ ಮರೆವು - ನೆನಪಿನ ವಿಚಾರವನ್ನು ಗ್ರಹಿಸಲು ಸಾಧ್ಯವಿಲ್ಲವೆ? ಎಂಬ ಪ್ರಶ್ನೆಗಳಿಗೆ ಸಾಧ್ಯವೆಂದೇ ಉತ್ತರಿಸಬೇಕಾಗುತ್ತದೆ. ಮೇಲಾಗಿ ಕೃತಿಯೊಂದರ ಪ್ರಾರಂಭ ಭಾಗಗಳಲ್ಲಿರಬಹುದಾದ ಸೂಚ್ಯಾರ್ಥ ಸೂಚನೆಯು ನಮಗೆ ತಿಳಿಯುವುದು ಕಥಾವಸ್ತುವಿನ ಸಂಪೂರ್ಣ ಪರಿಚಯವಾದ ಮೇಲೆಯೆ ಹೊರತು ಅದಕ್ಕೆ ಮುಂಚೆ ಅಲ್ಲವೆಂಬುದನ್ನು ಗಮನಿಸಬೇಕು. ಈ ವಿಧವಾಗಿ ಕಾವ್ಯಮುಖದಲ್ಲಿ ಕವಿಯೊಬ್ಬನು ಹುದುಗಿಸಿರುವ ಸೂಚ್ಯಾರ್ಥ ಸೂಚನೆಯನ್ನು ಶೋಧಿಸಿ, ಅದನ್ನು ಒಟ್ಟು ಕಾವ್ಯ ಶರೀರದ ಜೊತೆಯಲ್ಲಿಟ್ಟು, ಇದಕ್ಕನುಗುಣವಾಗಿ ಕಾವ್ಯಾರ್ಥದ ಏಕ ಸೂತ್ರವನ್ನು ಕಂಡುಕೊಳ್ಳುವ ಈ ದೃಷ್ಟಿಕೋನ ಮೂಲತಃ "ಕೃತಿ ಮತ್ತು ಕೃತಿಕಾರ ಬೇರೆ ಅಲ್ಲ" ಎಂದು ಪ್ರತಿಪಾದಿಸುವ ಅಪಾಯಕಾರಿ ನೆಲೆಯಿಂದ ಒಡಮೂಡಿದ ವಿಚಾರವಾಗಿದೆ. ಈ ಲೇಖನದ ಪ್ರಾರಂಭದಲ್ಲಿ ತಿಳಿಸಿರುವಂತೆ ಸೂಚ್ಯಾರ್ಥ ಸೂಚನೆಯನ್ನು ಸ್ವಲ್ಪ ಮಟ್ಟಿಗೆ ಹೋಲುವ ಧ್ವನಿ ಸಿದ್ಧಾಂತವು, ಅದರಿಂದ ಸಂಪೂರ್ಣವಾಗಿ ಬೇರೆಯಾಗುವುದು ಈ ದೃಷ್ಟಿಯಿಂದಲೇ. "ಸ ಕಾವ್ಯಾರ್ಥ ವಿರಾವೋಽಸ್ತಿ" (4.6) ಎಂದು ಒಪ್ಪಿಕೊಳ್ಳುವ ಧ್ವನಿ ಸಿದ್ಧಾಂತವು ಕಾರಯಿತ್ರಿ ಮತ್ತು ಭಾವಯಿತ್ರಿ ಪ್ರತಿಭೆಗಳ ಹೃದಯ ಸಂವಾದದಲ್ಲಿ ಪ್ರಕಟಗೊಳ್ಳುವ ವಿಶಿಷ್ಟ ಕಾವ್ಯತತ್ತ್ವವಾಗಿದೆ. ಆದರೆ, ಸೂಚ್ಯಾರ್ಥ ಸೂಚನೆಯು ಸ್ಪಷ್ಟವಾಗಿ ಕಾರಯಿತ್ರಿಯನ್ನು ಆಧರಿಸಿ ಆ ನೆಲೆಯಿಂದಲೇ ಪ್ರಕಟಗೊಳ್ಳುವ ಪರಿಮಿತ ಕಾವ್ಯಾರ್ಥದ ಸಂಜ್ಞಾಮಾರ್ಗವಾಗಿದೆ. ಆದ್ದರಿಂದ ಸೂಚ್ಯಾರ್ಥ ಸೂಚನೆಯು ಪದ್ಧತಿಯು ಪ್ರಾಚೀನ ಕಾವ್ಯಗಳ ಅವತರಣಿಕೆಯಲ್ಲಿ ಪ್ರಸ್ತಾಪಿತವಾಗಿದ್ದರೆ, ಕಾವ್ಯದ ಅಂತರಾರ್ಥದೊಂದಿಗೆ ಅದರ ಸಂಬಂಧವನ್ನು ಕಲ್ಪಿಸಬಹುದೇ ಹೊರತು ಆ ಸೂಚ್ಯಾರ್ಥ ಸೂಚನೆಯ ಸಂಜ್ಞಾಮಾರ್ಗವು ಇದ್ದುದರಿಂದಲೇ ಕಾವ್ಯದ ಅಂತರಾರ್ಥವನ್ನು ಗ್ರಹಿಸಲು ಸಾಧ್ಯವಾಯಿತು ಎಂದು ವಾದಿಸುವಂತಿಲ್ಲ. ಹಾಗೆಂದು ವಾದಿಸುವವರಿಗೆ—'ನನ್ನ ಕೋಳಿ ಕೂಗಿದ್ದರಿಂದಲೇ ಊರವರಿಗೆಲ್ಲ ಬೆಳಿಗ್ಗೆಯಾಗಿದ್ದು ತಿಳಿಯಿತು' ಎಂದು ಭ್ರಮಿಸಿದ ಅಜ್ಜಿಯ ಕಥೆಯನ್ನು ನೆನಪಿಸಬೇಕಾಗುತ್ತದೆ.

ಗ್ರಂಥ ಸೂಚಿ ಮತ್ತು ಟಿಪ್ಪಣಿಗಳು

1 ವಿಶ್ವನಾಥ ಸತ್ಯನಾರಾಯಣರ ಈ ವಿವರಣೆ ಆನಂದವರ್ಧನನು ಪ್ರತಿಪಾದಿಸಿರುವ 'ವಾಚ್ಯ' ಮತ್ತು 'ಪ್ರತೀಯಮಾನ'ಗಳನ್ನು ನೆನಪಿಗೆ ತರುತ್ತದೆ. ವಿಮರ್ಶಿನಿ, 2 (ವಿಶ್ವನಾಥ ವಾಙ್ಮಯ ಜೀವಿತ ವಿಶೇಷ ಸಂಚಿಕೆ) ಪು. 27, ಅನ್ಯುಅಲ್ ರಿಸರ್ಚ್ ಜರ್ನಲ್ 1977, ಕಾಕತೀಯ ವಿಶ್ವವಿದ್ಯಾಲಯ, ಓರಂಗಲ್. ಕನ್ನಡ ಅನುವಾದ ನನ್ನದು.

2 ಮನುಚರಿತ್ರ ಸಂ. ತಿಮ್ಮಾವಜ್ಝಲ ಕೋದಂಡರಾಮಯ್ಯ ಪು. 26-27, 1966.

3 'ಗಂಡ' ಲಕ್ಷಣ: ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ ಬೇರೆ ಯಾವುದೋ ವಿಷಯ ಒಮ್ಮೆಲೆ ಬರುವುದು 'ಗಂಡ'. ಧನಂಜಯನ ದಶರೂಪಕ 3.21 ಪು. 164 ಮೂಲ ಮತ್ತು ಕನ್ನಡಾನುವಾದ ಸಹಿತವಾಗಿದೆ. ಸಂ. ಕೆ. ವಿ. ಸುಬ್ಬಣ್ಣ.

4 'ಕನ್ನಡ ಕಾವ್ಯಾಲಂಕಾರ' ಕೆ. ಕೃಷ್ಣಮೂರ್ತಿ (1.27).

5 ವಿ. ರಾಘವನ್ ವಿರಚಿತ 'ಭೋಜನ ಶೃಂಗಾರ ಪ್ರಕಾಶ' ವೆಂಬ ಆಂಗ್ಲ ಸಿದ್ಧಾಂತ ಗ್ರಂಥದಲ್ಲಿ 'ಮುದ್ರಾ' ಎಂಬುದಕ್ಕೆ ಕೊಟ್ಟಿರುವ ವಿವರಣೆಯು ಹೀಗಿದೆ : Mudra: It is the presence of the poets rich ideas at a certain point, in a word, in a sentence, in the case-ending, in number, in gender etc p. 357.

6A 'ಲಿಂಗ' ಎಂಬ ಪಾರಿಭಾಷಿಕ ಶಬ್ದವು ಧ್ವನಿ ಸಿದ್ಧಾಂತಕ್ಕೆ ಮುಂಚಿನಿಂದಲೂ ತಾರ್ಕಿಕರ ವಿಚಾರ ಸರಣಿಯುಲ್ಲಿ ಬಳಕೆಯಲ್ಲಿತ್ತೆಂದು ತಿಳಿದುಬರುತ್ತದೆ. ತಾರ್ಕಿಕರ ವಿಚಾರ ಸರಣಿಯನ್ನು ತನ್ನ ಪೂರ್ವಪಕ್ಷವನ್ನಾಗಿ ಮಾಡಿಕೊಂಡು ಆ ನೆಲೆಯಿಂದಲೂ 'ಧ್ವನಿ ಸಮರ್ಥನೆ'ಯನ್ನು ನೀಡುವ ಆನಂದ ವರ್ಧನನು ತಾರ್ಕಿಕರು ಒಪ್ಪುವ ವಿಚಾರಗಳಿಗೂ ವ್ಯಂಜನಾ ವೃತ್ತಿಗೂ ಮೂಲಭೂತವಾದ ವ್ಯತ್ಯಾಸವೇನೂ ಇಲ್ಲವೆಂದೂ, ವಿರೋಧವನ್ನು ಕಲ್ಪಿಸುವ ಅವಶ್ಯಕತೆ ಇಲ್ಲವೆಂದೂ ತೋರಿಸಿಕೊಟ್ಟಿದ್ದಾನೆ. ಇದನ್ನು ಡಾ॥ ಕೆ. ವಿ. ನಾರಾಯಣರು 'ಧ್ವನ್ಯಾಲೋಕ – ಒಂದು ಅಧ್ಯಯನ' ವೆಂಬ ಸಿದ್ಧಾಂತ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ. "ತಾರ್ಕಿಕರು ಶಬ್ದ ಮತ್ತು ಅರ್ಥಗಳ ಸಂಬಂಧವನ್ನು ಕೃತ್ರಿಮ ಎನ್ನುವವರು. ಆದ್ದರಿಂದ ಅವರು ವಾಚ್ಯವೆನಿಸದ ಇನ್ನಿತರ ಅರ್ಥಗಳನ್ನು ಒಪ್ಪುವವರೇ ಆಗಿದ್ದಾರೆ. ಇಲ್ಲಿ ಆನಂದವರ್ಧನನು ಪೂರ್ವಪಕ್ಷವಾಗಿ ತಾರ್ಕಿಕರನ್ನು ಪರಿಗಣಿಸಿ ಅವರ ವಾದವನ್ನು ನಮ್ಮ ಮುಂದಿಡುತ್ತಾನೆ. ಶಬ್ದಗಳಿಗೆ ಯಾವುದನ್ನು ವ್ಯಂಜಕತ್ವವೆಂದು ಧ್ವನಿವಾದಿಗಳು ಹೇಳುತ್ತಾರೋ, ಆರೋಪಿಸುತ್ತಾರೋ ಅದು ವಾಸ್ತವವಾಗಿ 'ಗಮಕತ್ವ' ಅಂದರೆ, ಗಮ್ಯಾರ್ಥವನ್ನು ಪ್ರತಿಪಾದಿಸುವ ಸಾಮರ್ಥ್ಯ ವಾಚಕವನ್ನು 'ಲಿಂಗ' ವೆಂದೂ, ಗಮಕತ್ವವನ್ನು 'ಲಿಂಗತ್ವ' ವೆಂದೂ, ಗಮ್ಯಾರ್ಥವನ್ನು 'ಲಿಂಗಿ' ಎಂದೂ, ಕಲ್ಪಿಸಿಕೊಂಡರೆ ಸಮಸ್ಯೆ ಮುಗಿಯಿತು. ಹೀಗಿರುವಾಗ ವ್ಯಂಜಕತ್ವವೆಂಬುದು ಲಿಂಗತ್ವವೇ ಸರಿ. ವಾಚ್ಯ ಮತ್ತು ವ್ಯಂಗ್ಯಗಳ ನಡುವೆ ಲಿಂಗ ಮತ್ತು ಲಿಂಗಿಗಳ ನಡುವಣ ಸಂಬಂಧವೇ ಇರುತ್ತದೆ." 'ಧ್ವನ್ಯಾಲೋಕ ಒಂದು ಅಧ್ಯಯನ', ಡಾ॥ ಕೆ. ವಿ. ನಾರಾಯಣ, ಬೆಂಗಳೂರು ವಿಶ್ವವಿದ್ಯಾಲಯದ ಪಿ.ಎಚ್‌ಡಿ ಪದವಿ ಪರೀಕ್ಷೆಗಾಗಿ ಒಪ್ಪಿಸಿದ ನಿಬಂಧದಿಂದ ಪು. 76, 1982 (ಅಪ್ರಕಟಿತ)

6B ಧನಂಜಯನ 'ದಶರೂಪಕ', ಕೆ. ವಿ. ಸುಬ್ಬಣ್ಣ, ಪು. 152-154.

7 ಸಂಸ್ಕೃತ-ಇಂಗ್ಲಿಷ್ ನಿಘಂಟು, ಮೋನಿಯರ್ ವಿಲಿಯಮ್ಸ್, ಪು. 7
8 ಸಾಧನೆ ಸಂಪುಟ 6. ಸಂಚಿಕೆ 3, ಪು. 78, 1977
9 ಆಚಾರ್ಯ ದಿವಾಕರ್ಲ ವೆಂಕಟಾವಧಾನಿ 'ರಾಮಾಯಣ ಸುಧಾಲಹರಿ' ಪು. 6 1977. (A collection of lectures in Telugu on 'Ramayana' in Sanskrit, Tamil, Malayalam, Kannada, Hindi and Telugu languages. Yuva Bharathi Publications) ಕನ್ನಡ ಅನುವಾದ ನನ್ನದು. ನವ್ಯವಿಮರ್ಶೆಯ ಕಸರತ್ತುಗಳನ್ನು ಪ್ರಾಚೀನವಾದ ವಿದ್ವತ್ ದೃಷ್ಟಿಯ ವಿಮರ್ಶೆಗಳಲ್ಲೂ ಗುರುತಿಸಬಹುದೆಂಬುದಕ್ಕೆ 'ರಾಮಾಯಣ'ದ ಪ್ರಾರಂಭದ ಶ್ಲೋಕಕ್ಕೆ ಇತ್ತಿರುವ ವಿಲಕ್ಷಣ ವಿಶ್ಲೇಷಣೆ ಒಂದು ಉತ್ತಮ ನಿದರ್ಶನ.
10 ಜಿ. ಎಸ್. ಶಿವರುದ್ರಪ್ಪ, ‹ಕನ್ನಡ ಸಾಹಿತ್ಯ ಸಮೀಕ್ಷೆ.› ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂಪುಟ 1, ಪು 133, 1975.

ರಸ್ತೆ

ಎಚ್. ಎಚ್. ಗಂಗಾಧರಾಚಾರ್

ನಾನು ಬಾಲ್ಯದಿಂದಲೂ ನೋಡುತ್ತಿದ್ದೇನೆ ಈ ರಸ್ತೆ
ಇದರ ಮೇಲೆ ನಡೆದಾಡಿ, ಓಡಾಡಿ ಬೆಳೆದು ದೊಡ್ಡವನಾಗಿದ್ದೇನೆ.
ಆದರೂ ಇದನ್ನು ನಿರ್ಮಿಸಿದ ಇಸವಿ ಗೊತ್ತಿಲ್ಲ.
ಇದು ನನ್ನ ತಾತ ಮುತ್ತಾತಂದಿರಿಗಿಂತ ಪೂರ್ವಕಾಲದ್ದಿರಬಹುದು.
ಮೊದಲು ಕಾಲುದಾರಿಯಾದದ್ದು, ಬಂಡಿ ಜಾಡಾಗಿ
ನಂತರ ಮಣ್ಣಿನ ರಸ್ತೆಯಾಗಿರಬಹುದು.
ನಾನು ಕಂಡ ಹಾಗೆ ಮಣ್ಣಿನ ರಸ್ತೆಯಾಗಿದ್ದದ್ದು
ಟಾರು ರಸ್ತೆಯಾಯಿತು.
ಈಗಲೂ ಈ ರಸ್ತೆಯ ಇಕ್ಕೆಲದಲ್ಲೂ ಸಾಲು ಮರಗಳಿವೆ
ಈ ವೃಕ್ಷಗಳು ಬೆಳೆಯುತ್ತ ಬೆಳೆಯುತ್ತ ಹೋದಂತೆ
ನಮ್ಮವರು ರೆಂಬೆಗಳ ಕಡಿಯುತ್ತ ಕಡಿಯುತ್ತ ಬಂದರು
ಆದರೂ ಈ ವೃಕ್ಷಗಳ ಹಸಿರು ಕುಂದಿಲ್ಲ ; ಬೆಳವಣಿಗೆ ನಿಂತಿಲ್ಲ.
ಈ ರಸ್ತೆಯ ಮೇಲೆ ನಡೆದಾಡಿದವರ ಲೆಕ್ಕ ಸಿಗುವುದಿಲ್ಲ
ನೂರೆಂಟು ಕುಲದವರು ನಡೆದಾಡಿ ಈ ದಾರಿ ಸವೆಸಿದ್ದಾರೆ
ಬರುವವರಿಗೆಲ್ಲ ಸ್ವಾಗತವನ್ನೀಯುತ್ತ
ಉದ್ದಕ್ಕೆ ಮಲಗಿದೆ ಮಿಸುಕಾಡದ ಹೆಬ್ಬಾವಿನಂತೆ
ಕಾಲವನ್ನೆಲ್ಲ ತನ್ನಲ್ಲೇ ಒಳಗೊಳ್ಳುತ್ತ ಇತಿಹಾಸ ಸೃಷ್ಟಿಸುತ್ತ
ಜನಪದದ ಏಳುಬೀಳುಗಳಿಗೆ ಸಾಕ್ಷೀಭೂತವಾಗಿ ನಿಂತಿರುವ
ಓ ರಸ್ತೆ ! ಅಗೋ...ಅಂಬೆಗಾಲಿಟ್ಟು ಬರುತ್ತಿವೆ
ನಿನ್ನ ತೊಡೆಯ ಮೇಲೆ ನಲಿದಾಡಲು ಹಸುಮಕ್ಕಳು ;
ಸರಸ ಸಲ್ಲಾಪಗಳ ನಡೆಸಲು
ಜೊತೆಗೂಡಿ ಬರತ್ತಿದ್ದಾರೆ ಯುವಕ ಯುವತಿಯರು.
ಕೋಲೂರಿಕೊಂಡು ತಡಕಾಡುತ್ತ ಬರುತ್ತಿದ್ದಾರೆ
ಕಾಲನ ಕರೆಗೆ ಓಗೊಟ್ಟು ಮುದುಕರು.
ಓ ರಸ್ತೆ ! ನೀನೇಕೆ ಅನುಭವಿಸುವುದಿಲ್ಲ ಬಾಲ್ಯಯೌವನ ಮುಪ್ಪುಗಳ ?
ನೀನೇಕೆ ಅನುಭವಿಸುವುದಿಲ್ಲ ನಮ್ಮಂತೆ ಕಷ್ಟ ಸುಖಗಳ

ನಾವೋ ನೋಡ ನೋಡುತ್ತಿದ್ದಂತೆ ಮರೆಯಾಗುವ ಮಂಜಿನ ಹನಿಗಳು
ನೀನೋ ಅನಂತ ಕಾಲದವ, ಅಮರ, ಅದ್ವಿತೀಯ !
ದಯವಿಟ್ಟು ಇನ್ನಾದರೂ ಕಿವಿಗೊಡು
ನಮ್ಮ ಆಸಕ್ತಿ ಅಭಿಮಾನಗಳ ಕೇಳಿಸಿಕೋ
ನಿನ್ನ ಹಿಡಿ ಹಿಡಿ ಮಣ್ಣಿನಲ್ಲಿ ಅಡಗಿಸಿಟ್ಟುಕೊಂಡಿರುವ
ಅಸಂಖ್ಯಾತ ಕಥೆಗಳ ನಮಗೆ ಹೇಳು
ನಾವು ಇತಿಹಾಸ ಬರೆಯುತ್ತೇವೆ ;
ಅದರೊಳಗೆ ನಿನ್ನನ್ನೂ ಸೇರಿಸುತ್ತೇವೆ.

ಭಾರತೀಯ ಆಂಗ್ಲ ನಾಟಕಗಳು
(Indian English Plays)

ಎಸ್. ಕೃಷ್ಣಭಟ್ಟ

ಪುರಾತನ ಕಾಲದಿಂದಲೂ ಮಾನವನು ಬೆಳೆಸಿಕೊಂಡಿರುವ ಸಾರ್ವಕಾಲಿಕ ಕಲೆಗಳಲ್ಲಿ ನಾಟಕವೂ ಒಂದು. ಈ ಕಲೆ ಜಗತ್ತಿನ ವಿವಿಧ ಭಾಗಗಳಲ್ಲಿ ತನ್ನದೇ ಆದ ಹುಟ್ಟು, ಬೆಳವಣಿಗೆಯನ್ನು ಹೊಂದಿದೆ. ನಮ್ಮ ಭಾರತದಲ್ಲಂತೂ ರಂಗ-ಭೂಮಿಯ ಸಂಪ್ರದಾಯದ ಶ್ರೀಮಂತಿಕೆ ವಿವಿಧ ರೀತಿಗಳಲ್ಲಿ ನಡೆದು ಬಂದಿದೆ. ಒಂದುಕಡೆ ಜಗತ್ತಿನ ಅತಿ ಪ್ರಾಚೀನ ಗ್ರಂಥವೆನಿಸಿರುವ ಋಗ್ವೇದದಲ್ಲಿ ಕಂಡುಬರುವ ಕೆಲವು ಸಂಭಾಷಣೆಯಲ್ಲದೆ, ಹೃಷ್ಟಪುಷ್ಟವಾಗಿ ಬೆಳೆದಿರುವ ಸಂಸ್ಕೃತ ರಂಗ ಭೂಮಿಯೇ ಇದೆ. ಇದರ ಮೂಲ ವಿವಾದಾತ್ಮಕವಾಗಿದ್ದರೂ, ಭಾಸ-ಕಾಳಿದಾಸ-ಭವಭೂತಿ ಮೊದಲಾದ ನಾಟಕಕರ್ತೃಗಳ ಭವ್ಯ ಪರಂಪರೆಯನ್ನೇ ಹೊಂದಿದೆ. ಜೊತೆಯಲ್ಲೇ ಅನಾದಿಕಾಲದಿಂದಲೂ ಪರಸ್ಪರ ಪೂರಕವಾಗಿ ಬೆಳೆದುಕೊಂಡು ಬಂದಿರುವ ಶ್ರೀಮಂತ ಜಾನಪದ ರಂಗಭೂಮಿಯು ದೇಶದ ವಿವಿಧ ಭಾಗಗಳಲ್ಲಿ ಯಕ್ಷಗಾನ, ವೀಧಿನಾಟಕ, ತಮಾಶಾ, ರಾಮಲೀಲಾ-ಕೃಷ್ಣಲೀಲಾ, ಜಾತ್ರಾ ಮುಂತಾದ ವಿವಿಧರೂಪಗಳಲ್ಲಿ ಜನಸ್ತೋಮಕ್ಕೆ ಮನರಂಜನೆ ನೀಡುತ್ತಿದೆ. ಈಚೆಗೆ ನಮ್ಮ ದೇಶದಲ್ಲಿ ಆಂಗ್ಲ ಶಿಕ್ಷಣ ಪ್ರಾರಂಭವಾದ ನಂತರ ಪಾಶ್ಚಾತ್ಯ ರಂಗಭೂಮಿಯ ಪ್ರಭಾವವೂ ನಮ್ಮ ನಾಟಕ ಕರ್ತೃಗಳ ಮೇಲೆ ಸಾಕಷ್ಟು ಬಿದ್ದಿದೆ. ದೇಶಾದ್ಯಂತ ಬೆಳೆದುಕೊಂಡು ಬಂದಿರುವ ಕಲಾವಿಲಾಸಿ ಸಂಘಗಳ ಚಟುವಟಿಕೆಗಳ ಜೊತೆಗೆ ಸ್ವಾತಂತ್ರ್ಯದ ಅನಂತರ ಸ್ಥಾಪಿಸಲ್ಪಟ್ಟ ಸಂಗೀತನಾಟಕ ಅಕಾಡೆಮಿ, ನ್ಯಾಶನಲ್ ಸ್ಕೂಲ್ ಆಫ್ ಡ್ರಾಮ, ಅಡಿಯಾರ್-ದರ್ಪಣಗಳಂತಹ ತರಬೇತಿ ಕೇಂದ್ರಗಳು, ವಿಶ್ವವಿದ್ಯಾಲಯಗಳಲ್ಲಿನ ನಾಟಕ ವಿಭಾಗಗಳು, ಆಗಾಗ್ಗೆ ಭೇಟಿನೀಡುವ ವಿದೇಶೀ ನಾಟಕಗಳ ಕಂಪೆನಿಗಳೇ ಮೊದಲಾದ ವಿವಿಧ ಸಂಸ್ಥೆಗಳೂ ನಾಟಕ ಕಲೆಯನ್ನು ಸಾಕಷ್ಟು ಬೆಳೆಸಿ ಪೋಷಿಸಿಕೊಂಡು ಬಂದಿವೆ.

ಹೀಗೆ ನಾಟಕಕಲೆಯಲ್ಲಿ ಶ್ರೀಮಂತ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರುವ ನಮ್ಮ ದೇಶದಲ್ಲಿ ಆಂಗ್ಲ ಭಾಷೆಯ ಶಿಕ್ಷಣದ ಪ್ರಭಾವದಡಿಯಲ್ಲಿ ಭಾರತೀಯರು ಅನುವಾದಗಳ ಜೊತೆಗೆ ಮೂಲ ಆಂಗ್ಲ ನಾಟಕಗಳನ್ನೂ ಬರೆಯುತ್ತಾ ಬಂದಿದ್ದಾರೆ. ಇಂಡಿಯನ್ ಇಂಗ್ಲಿಷ್ ಡ್ರಾಮ ಎಂದು ಈಚೆಗೆ ಕರೆಯಲ್ಪಡು

ತ್ತಿರುವ ಈ ಕ್ಷೇತ್ರದಲ್ಲಿ ಈ ಲೇಖಕನು ಸುಮಾರು ಹನ್ನೆರಡು ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆಸಿದ ಸಂಶೋಧನೆಗಾಗಿ ಸಿದ್ಧಪಡಿಸಿದ ಗ್ರಂಥಸೂಚಿ (Bibliography) ಯಲ್ಲಿ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ನಾಟಕಗಳು ಸೇರಿವೆ. ವಿದೇಶೀಯರ ಆಳ್ವಿಕೆಯ ಕಾಲದಲ್ಲಿ 'ಭಾರತೀಯ' ವೆಂದು ಮೂಲೆಗುಂಪಾಗಿದ್ದ ಭಾರತೀಯ ಆಂಗ್ಲ ಸಾಹಿತ್ಯ (Indian English literature) ಈಚೆಗೆ ಶ್ರೀ ಅರವಿಂದರು, ರಾಜಾರಾವ್, ನಾರಾಯಣ್, ಮುಲ್ಕ್‌ರಾಜ್ ಆನಂದ್ ಮುಂತಾದ ಲೇಖಕರ ಮೇಲೆ ಮಾಡಿರುವ ಶ್ರೇಷ್ಠ ಮಟ್ಟದ ಮೌಲ್ಯಮಾಪನದಿಂದ ತನ್ನ ನಿಜವಾದ ಸ್ಥಾನವನ್ನೇನೋ ಗಳಿಸಿಕೊಳ್ಳುತ್ತ ಬಂದಿದೆ (ಈ ದಿಸೆಯಲ್ಲಿ ನಡೆದಿರುವ ವಿವಿಧ ವಿಮರ್ಶೆಯ ಕಾರ್ಯಗಳ ಕೀರ್ತಿ ಡಾ॥ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಡಾ॥ ಎಂ. ಕೆ. ನಾಯಕ್, ಪ್ರೊ. ಸಿ. ಡಿ. ನರಸಿಂಹಯ್ಯ, ಪ್ರೊ॥ ಪಿ. ಲಾಲ್ ಮುಂತಾದ ವಿದ್ವಾಂಸರಿಗೆ ಸಲ್ಲಬೇಕು) ಆದರೂ ಈ ವಿಶಿಷ್ಟ ಸಾಹಿತ್ಯದಲ್ಲಿ ನಾಟಕ ಮಾತ್ರ ಕವನ ಹಾಗೂ ಕತೆ–ಕಾದಂಬರಿಗಳಿಗಿಂತ ಹಿಂದುಳಿದಿದೆ. ಇದಕ್ಕೆ ಕಾರಣಗಳೇನು ?

ಭಾರತೀಯ ಆಂಗ್ಲ ನಾಟಕಗಳ ಬೆಳವಣಿಗೆಯನ್ನು ಪರಿಶೀಲಿಸಲು ಪ್ರಕಟಣೆಯ ಕಾಲದ ಆಧಾರದ ಮೇಲೆ "ಸ್ವಾತಂತ್ರ್ಯ ಪೂರ್ವ" ಮತ್ತು "ಸ್ವಾತಂತ್ರ್ಯೋತ್ತರ" ವೆಂದು ವಿಂಗಡಿಸಬಹುದು. ಮೊದಲನೆಯ ಅವಧಿಯಲ್ಲಿ ಶ್ರೀ ಅರವಿಂದರು, ಹರೀಂದ್ರನಾಥ ಚಟ್ಟೋಪಾಧ್ಯಾಯ, ಟಿ. ಪಿ. ಕೈಲಾಸಂ ಮತ್ತು ಭಾರತೀ ಸಾರಾಭಾಯಿ ಮುಂತಾದ ನಾಟಕಕರ್ತೃಗಳೂ, ಎರಡನೇ ಅವಧಿಯಲ್ಲಿ ಆಸಿಫ್ ಕರೀಂಭಾಯ್ ಮತ್ತು ಇತರರೂ ಬರುತ್ತಾರೆ. ಮಹಾಕವಿ ಕಾಳಿದಾಸನು ಹೇಳುವಂತೆ 'ಪ್ರಯೋಗ ಪ್ರಧಾನ'ವಾದ ಈ ಕ್ಷೇತ್ರದಲ್ಲಿ ಇವರೆಲ್ಲರ ಸಾಧನೆಯೇನು ? ರಂಗಭೂಮಿಯ ದೃಷ್ಟಿಯಿಂದ ವಸ್ತುನಿರೂಪಣೆ, ಪಾತ್ರಗಳ ಸೃಷ್ಟಿ, ಮಾದರಿ ಹಾಗೂ ತಂತ್ರಗಳು, ಭಾಷೆ ಮುಂತಾದ ಮುಖ್ಯಾಂಶಗಳಿಗೆ ಇವರೆಲ್ಲಾ ಎಷ್ಟು ಗಮನ ಕೊಟ್ಟಿದ್ದಾರೆ ? ಎಂಬುದನ್ನು ಪರಿಶೀಲಿಸಬೇಕು.

ವಸ್ತುವಿನ ಬಳಕೆ (Treatment of themes)

ಇತರ ಕ್ಷೇತ್ರಗಳಲ್ಲಿರುವಂತೆ ಈ ಭಾರತೀಯ ಆಂಗ್ಲ ನಾಟಕ ಕರ್ತೃಗಳಲ್ಲೂ ವಸ್ತುವಿನ ಆಯ್ಕೆಯಲ್ಲಿ ಪೌರಾಣಿಕ–ಮಹಾಕಾವ್ಯ, ಐತಿಹಾಸಿಕ ಹಾಗೂ ಸಾಮಾಜಿಕ ಮೂಲಗಳನ್ನು ಅವಲಂಬಿಸಿದ್ದಾರೆ. ಕೆಲವು ನಾಟಕಗಳಲ್ಲಿ ಪೌರಾಣಿಕ ವ್ಯಕ್ತಿಗಳ ಮಹತ್ವವನ್ನು ಎತ್ತಿ ತೋರಿಸುವುದರತ್ತ ಗಮನ ಹರಿದಿದೆ. ಉದಾಹರಣೆಗೆ ಕೈಲಾಸಂ ಅವರ ಕರ್ಣ, ಸಾದರ-ಜೋಷಿಯವರ ಆಚಾರ್ಯದ್ರೋಣ, ರಾಮಸ್ವಾಮಿ ಶಾಸ್ತ್ರಿ ಅವರ ದ್ರೌಪದಿ, ಮಧುರಂ ಭೂತಲಿಂಗಂ ಅವರ ಅಲೋನ್ ಇನ್

ಅಯೋಧ್ಯಾ (ಅಯೋಧ್ಯೆಯಲ್ಲಿ ಒಂಟಿಯಾಗಿ). ಗಿರೀಶ್ ಕಾರ್ನಾಡರು ಮಾಡಿರುವಂತೆ, ಪೌರಾಣಿಕ ಕತೆಯನ್ನು ಆಧುನಿಕ ಸಮಸ್ಯೆಗಳ ನಿರೂಪಣೆಗಾಗಿ ಬಳಸಿಕೊಂಡಿರುವ ನಿದರ್ಶನಗಳೂ ಅಲ್ಲಲ್ಲಿ ಕಂಡುಬರುತ್ತವೆ. ಉದಾ : ಶ್ರೀ ಅರವಿಂದರ ಪರ್ಸೂಸ್, ಹರೀಂದ್ರನಾಥ ಚಟ್ಟೋಪಾಧ್ಯಾಯರ ಸಿದ್ಧಾರ್ಥ, ಭಾರತೀ ಸಾರಾಭಾಯ್ ಅವರ ದಿ ವೆಲ್ ಆಫ್ ದಿ ಪೀಪಲ್ (ಜನಸಾಮಾನ್ಯರ ಬಾವಿ), ವಿ. ವಿ. ಶ್ರೀನಿವಾಸ ಅಯ್ಯಂಗಾರ್‌ರ ರಾಮರಾಜ್ಯ, ಶಿವಕುಮಾರ್ ಜೋಶಿ ಅವರ ಹಿ ನೆವರ್ ಸ್ಲೆಪ್ಟ್ ಸೋ ಲಾಂಗ್ (ಆತನು ಎಂದೂ ದೀರ್ಘಕಾಲ ನಿದ್ರಿಸಿರಲಿಲ್ಲ), ಬೋರ್‌ಗಾಂವ್‌ಕರ್ ಅವರ ಭಸ್ಮಾಸುರ. ಆದರೆ ವೇದ–ಉಪನಿಷತ್ತುಗಳು, ಪುರಾಣಗಳು, ಮಹಾಕಾವ್ಯಗಳಂತಹ ಹೇರಳವಾಗಿರುವ ಪ್ರಾಚೀನ ವಸ್ತು–ಸಂಪತ್ತನ್ನು ನಮ್ಮ ಭಾರತೀಯ ಆಂಗ್ಲನಾಟಕ ಕರ್ತೃಗಳು ಪೂರ್ಣವಾಗಿ ಹಾಗೂ ತೃಪ್ತಿಕರವಾಗಿ ಬಳಸಿಕೊಂಡಿಲ್ಲ.

ಈ ಲೋಪವನ್ನು ಐತಿಹಾಸಿಕ ಕ್ಷೇತ್ರದಲ್ಲೂ ಕಾಣಬಹುದು. ನಮ್ಮ ದೇಶದ ಮಧ್ಯಕಾಲೀನ ಹಾಗೂ ಆಧುನಿಕ ಇತಿಹಾಸವನ್ನು ಬಳಸಿಕೊಂಡಿರುವ ಕೆಲವು ಒಳ್ಳೆಯ ನಾಟಕಗಳೇನೋ ಕಂಡುಬರುತ್ತವೆ. ಉದಾ : ಅಣ್ಣಯ್ಯ ಅವರ ದಿ ಬ್ರೈಡ್ ಆಫ್ ಗಾಡ್ (ದೇವರ ಕನ್ಯೆ), ಎ. ಎಸ್. ಪಿ. ಅಯ್ಯರ್ ಅವರ ಮದರ್ಸ್ ಸ್ಯಾಕ್ರಿಫೈಸ್ (ತಾಯಿಯ ತ್ಯಾಗ), ದಿಲೀಪ್ ಕುಮಾರ್‌ರಾಯ್ ಮತ್ತು ಇಂದಿರಾ ದೇವಿ ಅವರ ದಿ ಬೆಗ್ಗರ್ ಪ್ರಿನ್ಸೆಸ್ (ಭಿಕ್ಷುಕಿ–ರಾಜಕುಮಾರಿ), ಲಷಿನ್ ದೇಬ್ ಅವರ ಟೈಗರ್–ಕ್ಲಾ (ವ್ಯಾಘನಖ), ಆಸಿಪ್ ಕರೀಂಭಾಯ್ ಅವರ ರೆಫ್ಯೂಜೀ (ನಿರಾಶ್ರಿತ), ಗುರುಚರಣ್‌ದಾಸ್ ಅವರ ಲಾರಿಶ್ ಸಾಹಿಬ್ ಇತ್ಯಾದಿ. ದೇಶದ ಪ್ರಾಚೀನ ಇತಿಹಾಸದಲ್ಲಿ ಅಸ್ಪಷ್ಟತೆಯ ಸಮಸ್ಯೆ ಇದ್ದರೆ, ಬ್ರಿಟಿಷರ ಕಾಲದಲ್ಲಿ ಸತ್ಯಾಂಶಗಳ ಮೇಲೆ ಬೆಳಕು ಚೆಲ್ಲುವ ಧೈರ್ಯ ಲೇಖಕರಿಗೆ ಅಷ್ಟಾಗಿ ಇರಲಿಲ್ಲ; ಆದರೂ ಸ್ವಾತಂತ್ರ್ಯದ ನಂತರವೂ ಈ ಚರಿತ್ರೆಯನ್ನು ಕಡೆಗಣಿಸಿರುವುದು ಆಶ್ಚರ್ಯ.

ಭಾರತೀಯ ಆಂಗ್ಲ ನಾಟಕಕರ್ತೃಗಳು ಮೇಲ್ಕಂಡ ಎರಡು ಮೂಲಗಳಿಗಿಂತ ಹೆಚ್ಚಾಗಿ ಸಾಮಾಜಿಕ ವಸ್ತುವಿನ ಕಡೆವಾಲಿರುವುದು ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಅವಧಿಗಳೆರಡರಲ್ಲೂ ಕಂಡುಬರುತ್ತದೆ. ಅದಕ್ಕೆ ತಕ್ಕಂತೆ ನಮ್ಮ ದೇಶದಲ್ಲಿ ಸಾಮಾಜಿಕ ಸಮಸ್ಯೆಗಳಿಗೇನೂ ಕೊರತೆಯಿಲ್ಲ : ಶ್ರೀಮಂತರಿಂದ ಬಡವರ ಶೋಷಣೆ, ವಿವಿಧ ಪಂಥ–ಧರ್ಮ ಹಾಗೂ ಭಾಷೆಗಳ ಹೆಸರಿನಲ್ಲಿ ನಡೆಯುವ ಘರ್ಷಣೆಗಳು ವರದಕ್ಷಿಣೆ, ವಿಧವಾವಿವಾಹ, ಅಸ್ಪೃಶ್ಯತೆ ಇತ್ಯಾದಿ. ಆದರೆ ಸಾಮಾಜಿಕ ವಸ್ತುವನ್ನು ನಾಟಕಗಳಲ್ಲಿ ಬಳಸಿಕೊಂಡಿರುವ ರೀತಿಗಳು ವಿಧವಿಧವಾಗಿವೆ. ವಿ.ವಿ. ಶ್ರೀನಿವಾಸ ಅಯ್ಯಂಗಾರ್ ಅಂಥ ಕೆಲವರು ಲಘು ವಿನೋದಕ್ಕಾಗಿ ಈ ವಸ್ತುವನ್ನು ಬಳಸಿ

ಕೊಂಡಿದ್ದರೆ, ಎ. ಎಸ್. ಪಿ. ಅಯ್ಯರ್. ಬೋರ್‌ಗಾಂವ್‌ಕರ್, ನಾರಾಯಣನ್ ಮುಂತಾದವರ ದೃಷ್ಟಿಯಲ್ಲಿ ಇವೆಲ್ಲ ಗಂಭೀರ ಸಮಸ್ಯೆಗಳಾಗಿ ಪರಿಗಣಿಸಲ್ಪಟ್ಟಿವೆ ; ಉದಾಹರಣೆಗೆ, ಅಯ್ಯರ್ ಅವರ ಇನ್ ದಿ ಕ್ಲಚ್ ಆಫ್ ದಿ ಡೆವಿಲ್ (ಭೂತದ ಹಿಡಿತದಲ್ಲಿ), ಬೋರ್‌ಗಾಂವ್‌ಕರ್ ಅವರ ದಿ ಟೆಂಪಲ್-ಎಂಟ್ರಿ (ದೇವಾಲಯ ಪ್ರವೇಶ), ನಾರಾಯಣನ್ ಅವರ ದಿ ಲಾಯರ್ ಅಂಡ್ ಹಿಸ್ ಡಾಟರ್ (ನ್ಯಾಯವಾದಿ ಮತ್ತು ಅವರ ಮಗಳು), ಬಲವಂತ್ ಗಾರ್ಗಿಯವರ ದಿ ವಲ್ಚರ್ಸ್ (ರಣಹದ್ದುಗಳು). ಸಾಮಾಜಿಕ ವಸ್ತುವನ್ನು ಅಣಕು-ವಿಚಾರಣೆ (ಮಾಕ್-ಟ್ರಯಲ್), ಅರ್ಥಾಂತರೋಕ್ತಿ (Allegory) ಮುಂತಾದ ರೀತಿಗಳಲ್ಲಿ ನಿರೂಪಿಸಿರುವ ನಿದರ್ಶನಗಳೂ ಇವೆ : ಎ. ಎಸ್. ಪಿ. ಅಯ್ಯರ್ ಅವರ ದಿ ಟ್ರಯಲ್ ಆಫ್ ಸೈನ್ಸ್(ವಿಜ್ಞಾನದ ವಿಚಾರಣೆ), ಶ್ರೀಮತಿ ಘೋಸಾಲರ ಪ್ರಿನ್ಸೆಸ್ ಕಲ್ಯಾಣಿ, ಕೃಷ್ಣಸ್ವಾಮಿ ಅವರ ಕೈಲಾಶ್. ಇಷ್ಟಾದರೂ. ನಮ್ಮ ಸಮಾಜದಲ್ಲೆಲ್ಲ ತುಂಬಿ ತುಳುಕುತ್ತಿರುವ ಗಂಭೀರಸಮಸ್ಯೆಗಳ ಪ್ರಮಾಣವನ್ನು ನೋಡಿದರೆ ಈ ವಸ್ತುವನ್ನು ಉಪಯೋಗಿಸಿ ಕೊಂಡಿರುವ ದಿಸೆಯಲ್ಲಿ ನಾಟಕ ಕರ್ತೃಗಳ ಸಾಧನೆ ಸಾಲದೆಂದು ಅನ್ನಿಸುತ್ತದೆ.

ಮಾದರಿ ಹಾಗೂ ತಂತ್ರಗಳು Modes & Techniques

ಇನ್ನು ರಂಗಭೂಮಿಯ ದೃಷ್ಟಿಯಿಂದ ನೋಡಬೇಕಾದ ಇನ್ನೊಂದು ಮುಖ್ಯಾಂಶವೆಂದರೆ ಮಾದರಿ ಹಾಗೂ ತಂತ್ರಗಳ ಬಳಕೆ. ಈ ವಿಚಾರದಲ್ಲಿ ಅಷ್ಟಾಗಿ ಗಮನ ಕೊಡದೆ ಕೇವಲ ಸಂಭಾಷಣೆಯೇ ನಾಟಕವೆಂದು ತಿಳಿದು ಬರೆದಿರುವವರು ಅನೇಕರು ಭಾರತೀಯ ಆಂಗ್ಲ ನಾಟಕ ಕ್ಷೇತ್ರದಲ್ಲಿ ಕಂಡು ಬರುತ್ತಾರೆ. ನಮ್ಮ ಪ್ರಾಚೀನ ದೇಶದಲ್ಲಿ ಸಂಸ್ಕೃತ ಹಾಗೂ ಜಾನಪದ ರಂಗಭೂಮಿಯ ಶ್ರೀಮಂತ ಸಂಪ್ರದಾಯಗಳಿದ್ದರೂ ಶ್ರೀ ಅರವಿಂದರಂತಹ ಕೆಲವು ನಾಟಕ ಕರ್ತೃಗಳು ಅನವಶ್ಯಕವಾಗಿ ಎಲಿಜಬೀತನ ನಾಟಕದ ಮಾದರಿ-ತಂತ್ರಗಳಿಗೆ ಮಾರುಹೋಗಿರುವುದರ ಪರಿಣಾಮವಾಗಿ, ಅವರ ಕೃತಿಗಳಿಗೆ (ಉದಾಹರಣೆ, ವಾಸವದತ್ತ) ರಂಗಭೂಮಿಯ ಮೇಲೆ ಒಂದು ವಿಧದ ಕೃತ್ರಿಮತೆ ಮೂಡುತ್ತದೆ. ಕೈಲಾಸಂರಂತಹ ಕೆಲವರಿಗೆ ರಂಗಭೂಮಿಯ ಪ್ರಜ್ಞೆ ಚೆನ್ನಾಗಿದ್ದರೂ ಅದನ್ನು ತಮ್ಮ ಕೃತಿಗಳಲ್ಲಿ ಪೂರ್ಣವಾಗಿ ಬಳಸಿಕೊಂಡಿಲ್ಲ. ಹರೀಂದ್ರನಾಥ ಚಟ್ಟೋಪಾಧ್ಯಾಯ, ಭಾರತೀ ಸಾರಾಭಾಯ್ ಮುಂತಾದವರು ಅಷ್ಟಾಗಿ ಪಾಶ್ಚಾತ್ಯ ತಂತ್ರಗಳಿಗೆ ಮಾರು ಹೋಗದೆ, ಭಾರತೀಯ ತಂತ್ರಗಳನ್ನೇ ಬಳಸಿಕೊಂಡಿದ್ದಾರೆ. ಪಾಶ್ಚಾತ್ಯ ಏಕಾಂಕ ನಾಕಟಗಳ ಅಚ್ಚುಕಟ್ಟಿನಿಂದ ಲಾಭ ಪಡೆದಿರುವ ಅಸಿಫ್ ಕರೀಂಭಾಯ್‌ರಂತಹ ಕೆಲವರು ದೊಡ್ಡ ನಾಟಕಗಳಿಗೆ ಬೇಕಾದ ಸಮಗ್ರ ದೃಷ್ಟಿಯ ಅಭಾವದ ಜೊತೆಗೆ, ಸಿನಿಮಾ ತಂತ್ರಗಳ ಅತಿಯಾದ ಬಳಕೆಯಿಂದ ರಂಗಭೂಮಿಯ ಹೊರೆಯನ್ನು ಅನವಶ್ಯಕವಾಗಿ ಹೆಚ್ಚಿಸಿದ್ದಾರೆ.

ಏಕಾಂಕ ನಾಟಕಗಳ ಮಾದರಿಯನ್ನು ಸಾರ್ಥಕವಾಗಿ ಬಳಸಿಕೊಂಡಿರುವುದೇ ಅಲ್ಲದೆ, ಎರಡು ಹಾಗೂ ಮೂರು ಅಂಕಗಳ ಚೌಕಟ್ಟಿಗೆ ಸಮರ್ಪಕವಾಗಿ ಅಳವಡಿಸಿದ ಕೆಲವು ನಿದರ್ಶನಗಳೂ ಅಲ್ಲಲ್ಲಿ ದೊರಕುತ್ತವೆ. ಆಸಿಫ್ ಕರೀಂಭಾಯ್ ಅವರ ಗೋವ, ಮೃಣಾಲಿನಿ ಸಾರಾಭಾಯ್ ಅವರ ಡಾಟರ್ ಆಫ್ ಇಂಡ್ (ಭಾರತದ ಪುತ್ರಿ), ಕೈಲಾಸಂ ಅವರ ದಿ ಪರ್ಪಸ್ (ಉದ್ದೇಶ) ಇತ್ಯಾದಿ. ಆದರೆ ಲಖಿನ ದೇಬ್ ಅವರ ಟೈಗರ್–ಕ್ಲಾದಂತಹ ಮೂರು–ಅಂಕದ ನಾಟಕಗಳು ಅಚ್ಚುಕಟ್ಟಾದ ಏಕಾಂಕದ ಮಾದರಿಗೆ ಅಳವಳಡಿಸಬೇಕಾದಂಥವುಗಳು. ಅಂತೆಯೇ ವಿ. ವಿ. ಶ್ರೀನಿವಾಸ ಅಯ್ಯಂಗಾರ್ ಅವರ ರಾಮರಾಜ್ಯದ, ಸಾದರ–ಜೋಶಿ ಅವರ ಆಚಾರ್ಯ ದ್ರೋಣ, ಲೋಬೋ ಪ್ರಭು ಅವರ ಏಪ್ಸ್ ಇನ್ ದಿ ಪಾರ್ಲರ್, ಗಫೂರ್ ಅವರ ಡಾಕ್ಟರ್ ಲವರ್ ಮುಂತಾದ ನಾಟಕಗಳಲ್ಲಿ ಐದು 'ಅಂಕ'ಗಳು ಎನ್ನುವುದಕ್ಕೆ ಅರ್ಥವಿಲ್ಲ ; ಏಕೆಂದರೆ ಅವು ಐದು ದೃಶ್ಯಗಳು ಮಾತ್ರ. ಆದರೂ 'ಮಿನಿ ನಾಟಕ'ಗಳಂತಹ ಈಚಿನ ಪ್ರಯೋಗಗಳನ್ನೂ ಈ ಸಂದರ್ಭದಲ್ಲಿ ಗಮನಿಸ ಬಹುದು.

ತಂತ್ರಗಳ ಬಗೆಗೆ ಹೇಳುವುದಾದರೆ, ಕೆಲವರು ಮಾತ್ರ ಪಾಶ್ಚಾತ್ಯ ತಂತ್ರ ಗಳನ್ನೂ, ಅದಕ್ಕಿಂತ ಕಡಿಮೆಯಾಗಿ ಸಂಸ್ಕೃತ ನಾಟಕದ ತಂತ್ರಗಳನ್ನು ಬಳಸಿ ಕೊಂಡಿರುವುದು ಕಂಡುಬರುತ್ತದೆ. ಉದಾಹರಣೆಗೆ, Prologue ತಂತ್ರವನ್ನು ಶ್ರೀ ಅರವಿಂದರು ತಮ್ಮ ಪರ್ಸೂಸ್ ನಾಟಕದಲ್ಲೂ, ಚಟ್ಟೋಪಾಧ್ಯಾಯರು ತಮ್ಮ ಸಿದ್ಧಾರ್ಥ ನಾಟಕದಲ್ಲೂ, ವಿವಿಧ ರೀತಿಯಲ್ಲಿ ನಾಟಕದ ಪ್ರಾರಂಭವಾಗಿ ಉಪ ಯೋಗಿಸಿಕೊಂಡಿದ್ದಾರೆ. ಅಂತೆಯೇ, ಪ್ರೊಲಾಗ್ ಮತ್ತು ಎಪಿಲಾಗ್‌ಗಳೆರಡನ್ನು ಮೃಣಾಲಿನಿ ಸಾರಾಭಾಯ್ ಅವರ ಕ್ಯಾಪ್ಟಿವ್ ಸಾಯಿಲ್ ನಾಟಕದಲ್ಲೂ, ಶಾಂತಿ ಜಾವೇರಿ ಅವರ ಡೆಲ್ಯೂಜ್ (ಪ್ರಳಯ) ನಾಟಕದಲ್ಲೂ ಕಾಣಬಹುದು. ಶ್ರೀಮತಿ ಘೋಸಾಲರ ಪ್ರಿನ್ಸೆಸ್ ಕಲ್ಯಾಣಿ ನಾಟಕದ ಪ್ರೊಲಾಗ್‌ನಲ್ಲಿರುವ ವಿದ್ಯಾಧಿ ದೇವತೆಯ ಪ್ರಾರ್ಥನೆಯು ಸಂಸ್ಕೃತ ನಾಟಕದ ಸೂತ್ರಧಾರನ ಕೆಲಸವನ್ನೂ ಸ್ವಲ್ಪ ಮಟ್ಟಿಗೆ ನಿರ್ವಹಿಸುವುದು. ಹಾಗೆಯೇ, ಫ್ಲಾಶ್-ಬ್ಯಾಕ್ (ಹಿನ್ನೋಟ) ತಂತ್ರ ವನ್ನು ಸ್ವಾಮಿ ಶಿವಾನಂದರ ರಾಧಾಸ್ ಪ್ರೇಮ್ (ರಾಧೆಯ ಪ್ರೇಮ) ಮುಂತಾದ ಕೆಲವೆಡೆಗಳಲ್ಲಿ ಸೂಕ್ತ ರೀತಿಯಲ್ಲಿ ಬಳಸಲಾಗಿದೆ.

ಅಂತೆಯೇ, ಸಂಸ್ಕೃತದ 'ಪ್ರವೇಶಕ' ತಂತ್ರವು ಆರತಿ ನಗರವಾಲಾ ಅವರ ದಿ ಬೈಟ್ (ಗಾಳ) ಎಂಬ ನಾಟಕದಲ್ಲಿ ಹುಲಿಯನ್ನು ಕೊಂದ ಸನ್ನಿವೇಶದ ವಿವರಣೆ ಕೊಡಲು ಸಹಾಯಕವಾಗಿದೆ. ಗುರುಚರಣ್‌ಸಿಂಗ್ ಅವರ ಲಾರಿನ್ಸ್ ಸಾಹಿಬ್ ನಾಟಕದಲ್ಲಿ ನಾಯಕನ ಪ್ರಕ್ಷುಬ್ಧ ಮನಸ್ಸನ್ನು ತೋರಿಸಲು ವಿವಿಧ ಧ್ವನಿಗಳ ತಂತ್ರ ವನ್ನು, ಸಾದರ-ಜೋಶಿ ಅವರ ಆಚಾರ್ಯ ದ್ರೋಣ ಎಂಬ ನಾಟಕ ಆಚಾರ್ಯರ

ಮಾನಸಿಕ ಸಂಘರ್ಷವನ್ನು ನಿರೂಪಿಸಲು ಒಂದು ರೀತಿಯ 'ಅಶರೀರವಾಣಿ' ತಂತ್ರವನ್ನು ಬಳಸಲಾಗಿದೆ. ಆದರೆ ಪರತಾಪ್ ಶರ್ಮರ ದಿ ಪ್ರೊಫೆಸರ್ ಹ್ಯಾಸ್ ಎ ವಾರ್‌ಕ್ರೈ ನಾಟಕದಲ್ಲಿ ಬಳಸಿರುವ ಕಥಕ್ಕಳಿ-ರಾಕ್ಷಸ ಕಥೆಗೆ ಸರಿಯಾಗಿ ಸಂಬಂಧ ಪಡಿಸಿಲ್ಲ. ಆದರೂ ಹಿಂದೆ ಹೇಳಿದಂತೆ ಅನೇಕ ನಾಟಕಗಳಲ್ಲಿ ಈ ವಿಚಾರದಲ್ಲಿ ಸಾಕಷ್ಟು ಗಮನ ಕೊಡದಿರುವುದರಿಂದ ಸೂಕ್ತ (ಅಂದರೆ ಅನೇಕ ಕಡೆಗಳಲ್ಲಿ ಭಾರತೀಯ, ಕೆಲವೆಡೆಗಳಲ್ಲಿ ವಿದೇಶೀಯ) ತಂತ್ರಗಳಿಗಾಗಿ ಹಾತೊರೆಯುತ್ತಿರುವ ಸನ್ನಿವೇಶಗಳೇ ಹೆಚ್ಚಾಗಿವೆ. ಕೆಲವು ನಿದರ್ಶನಗಳನ್ನು ಹೇಳುವುದಾದರೆ, ರಾಯ್ ಮತ್ತು ಇಂದಿರಾದೇವಿ ಅವರ ದಿ ಬೆಗ್ಗರ್ ಪ್ರಿನ್ಸೆಸ್ ನಾಟಕದಲ್ಲಿ ಭಾರತೀಯ ಹಿನ್ನೆಲೆ (ಸೆಟಿಂಗ್), ಪ್ರಾರಂಭದಲ್ಲಿ ಸೂತ್ರಧಾರ ಹಾಗೆಯೇ ಮೀರಾದೇವಿಯ ಜನಪ್ರಿಯತೆ ನಿರೂಪಿಸಲು ಜಾನಪದ ಗೀತ-ನೃತ್ಯಗಳನ್ನು ಬಳಸಿದ್ದರೆ, ನಾಟಕಕ್ಕೆ ಹೆಚ್ಚಿನ ಸ್ವಾಭಾವಿಕತೆಯ ಮೆರುಗು ಬರುತ್ತಿತ್ತು. ಅಂತೆಯೇ, ಶ್ರೀಮತಿ ಠಾಕೂರರು ಕುಂತಿ–ಕರ್ಣರ ಮೇಲೆ ಬರೆದಿರುವ ಮದರ್ ಅಂಡ್ ಚೈಲ್ಡ್ ನಾಟಕದಲ್ಲಿ ಸಂಸ್ಕೃತದ 'ಪ್ರವೇಶಕ' ತಂತ್ರದ ಬಳಕೆಯಿಂದ ಮೊದಲನೆಯ ಹಾಗೂ ಎರಡನೆಯ ಅಂಕಗಳ ನಡುವಣ ಅಂತರವನ್ನು ಕಡಿಮೆ ಮಾಡಬಹುದಾಗಿತ್ತು. ಒಟ್ಟಿನಲ್ಲಿ ಹೇಳುವುದಾದರೆ, ತಂತ್ರಗಳನ್ನು ಅದರಲ್ಲೂ ಭಾರತೀಯ ಸಂಸ್ಕೃತ ಹಾಗೂ ಜಾನಪದ ನಾಟಕದ ತಂತ್ರಗಳನ್ನು ಬಳಸದಿರುವುದೂ ಭಾರತೀಯ ಆಂಗ್ಲ ನಾಟಕಗಳ ಸೋಲಿಗೆ ಒಂದು ಮುಖ್ಯ ಕಾರಣವೆಂದು ಹೇಳಬಹುದು. ಈ ಅಂಶವು ಚೆನ್ನಾಗಿ ಮನದಟ್ಟಾಗಲು ತಂತ್ರಗಳ ಬಳಕೆಯಲ್ಲಿ ಮಹತ್ ಸಾಧನೆ ಮಾಡಿರುವ ಗಿರೀಶ್ ಕಾರ್ನಾಡ್ ಮುಂತಾದವರ ನಾಟಕಗಳೊಂದಿಗೆ ಇವುಗಳನ್ನು ಹೋಲಿಸಬೇಕು.

ನಾಟಕದ ಭಾಷೆ :– ಇನ್ನು ಭಾರತೀಯ ಆಂಗ್ಲ ನಾಟಕಗಳಲ್ಲಿ ಭಾಷೆಯ ಬಳಕೆ ಹೇಗಿದೆ ಎಂಬುದನ್ನು ಪರಿಶೀಲಿಸೋಣ. ರಂಗಭೂಮಿಯ ಮೇಲೆ ಅಭಿನಯಾದಿ ಅಂಶಗಳಿಗೆ ಪೂರಕವಾಗಿ ಬರುವ ಸಂಭಾಷಣೆ ಒಂದು ನಾಟಕವನ್ನು ಸೃಷ್ಟಿಸಬಲ್ಲದು ಅಥವಾ ನಾಶಮಾಡಬಲ್ಲದು. ಆಂಗ್ಲ ಭಾಷೆಯ ಶ್ರೀಮಂತಿಕೆಯಿಂದ ನಮ್ಮ ದೇಶ ಹೆಚ್ಚು ಪ್ರಯೋಜನವನ್ನೇನೋ ಪಡೆದಿದೆ, ಪಡೆಯುತ್ತಲೂ ಇದೆ. ಆದರೆ ಈ ಭಾಷೆಯನ್ನು ಬಲ್ಲವರ, ಅದರಲ್ಲೂ ಆಡುವವರ ಸಂಖ್ಯೆ ಕಡಮೆ. ಹೀಗಿರುವಾಗ, ಭಾರತೀಯ ಆಂಗ್ಲ ನಾಟಕಗಳಲ್ಲಿ ಸಂಭಾಷಣೆಗೆ ಎಂತಹ ಭಾಷೆಯನ್ನು ಬಳಸಬೇಕು ಎಂಬುದೂ ಒಂದು ಮುಖ್ಯ ಸಮಸ್ಯೆ. ಆದರೆ ಈ ಕ್ಷೇತ್ರದಲ್ಲಿ ಅನೇಕರು ಈ ಬಗೆಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಚಟ್ಟೋಪಾಧ್ಯಾಯ, ಕರೀಂಭಾಯ್, ಎ ಜಿ ಕೀಲ್ ಮುಂತಾದ ಕೆಲವರನ್ನು ಬಿಟ್ಟರೆ, ಅನೇಕರು ಬೇಡದ ಕಡೆಗಳಲ್ಲೆಲ್ಲ ಬರವಣಿಗೆಯ, ಸಾಹಿತ್ಯಕ ಭಾಷೆಯನ್ನು ಬಳಸಿ, ರಂಗಭೂಮಿಯ ಮೇಲೆ ಕೃತ್ರಿಮತೆಯನ್ನು ತಂದಿದ್ದಾರೆ. ಶೈಲಿಯುಕ್ತ ಭಾಷೆಯನ್ನು ಪೌರಾಣಿಕ ಹಾಗೂ ಐತಿಹಾಸಿಕ ನಾಟಕ

ಗಳಲ್ಲೂ, ಆಡು ಭಾಷೆಯನ್ನು ಸಾಮಾಜಿಕ ನಾಟಕಗಳಲ್ಲೂ ಬಳಸುವ ಔಚಿತ್ಯವನ್ನು ಮನಗಂಡವರು ಈ ಕ್ಷೇತ್ರದಲ್ಲಿ ವಿರಳ; ಅಂತೆಯೇ, ಕೆಲವರು ಪಾತ್ರದ ಮಟ್ಟಕ್ಕೆ ತಕ್ಕ ಭಾಷೆಯನ್ನು ಬಳಸಿಲ್ಲ. ಈ ಪರಿಸ್ಥಿತಿಯಲ್ಲೂ ಸಾಮಾಜಿಕ ನಾಟಕಗಳಲ್ಲಿ ಆಡು ಭಾಷೆಯನ್ನೂ ಬಳಸಿರುವುದು ಸ್ವಾತಂತ್ರ್ಯೋತ್ತರ ನಾಟಕಗಳಲ್ಲಿ ಹೆಚ್ಚಾಗಿ ಕಂಡುಬರುವುದು. ಇನ್ನು ನಮ್ಮ ದೇಶದ ಧರ್ಮ–ಸಂಸ್ಕೃತಿ ಹಾಗೂ ವ್ಯವಹಾರ ಗಳಿಗೆ ಸಂಬಂಧಿಸಿದ ಕೆಲವು ವಿಶಿಷ್ಟ ಸಂಸ್ಕೃತ ಹಾಗೂ ಇತರ ಭಾರತೀಯ ಶಬ್ದಗಳಿಗೆ ಸಮರ್ಪಕವಾದ ಆಂಗ್ಲ ಪರ್ಯಾಯ ವಾಚಕಗಳು ಸಿಗದಿರುವ ಸ್ಥಳಗಳಲ್ಲಿ ಆಯಾ ಶಬ್ದಗಳನ್ನೇ ಬಳಸುವುದೇನೊ ಸೂಕ್ತವಾದುದು; ಆದರೂ ಕೆಲವು ನಾಟಕಗಳಲ್ಲಿ ಎರಡೂ ಕಡೆಯ ವೈಪರೀತ್ಯಗಳನ್ನು ಕಾಣಬಹುದು. ಒಟ್ಟಿನಲ್ಲಿ, ಭಾರತೀಯ ಆಂಗ್ಲ ನಾಟಕಗಳಲ್ಲಿ ಸೂಕ್ತ ಭಾಷೆಯ ಸಮಸ್ಯೆಯನ್ನು ಸಾಕಷ್ಟು ತೃಪ್ತಿಕರವಾಗಿ ಬಗೆಹರಿಸಿಲ್ಲವೆಂಬುದು ಸ್ಪಷ್ಟ.

ಜೀವಂತ ರಂಗಭೂಮಿ

ಅನೇಕ ಭಾರತೀಯ ಆಂಗ್ಲ ನಾಟಕಗಳು ರಂಗಭೂಮಿಯ ಪ್ರಯೋಗಕ್ಕೆ ಅರ್ಹತೆ ಪಡೆಯದೇ ಇರಲು ಪ್ರಬಲವಾದ ಕಾರಣವೆಂದರೆ ಈ ನಾಟಕಗಳಿಗೆಂದೇ ಮೀಸಲಾದ ಜೀವಂತ ರಂಗಭೂಮಿ (Living theatre) ಯ ಅಭಾವ. ಈ ಕಲೆ ಪ್ರಯೋಗಪ್ರಧಾನವಾದ್ದರಿಂದ ನಾಟಕ ಕರ್ತೃವು ತನ್ನ ಕೃತಿಯನ್ನು ಆಗಾಗ್ಗೆ ರಂಗಭೂಮಿಯ ಮೇಲೆ ತಂದು ನ್ಯೂನತೆ ಹಾಗೂ ಅತಿರೇಕಗಳನ್ನು ಗಮನಿಸಿ, ಅದರ ಜಯ–ಅಪಜಯಗಳನ್ನು ಪರೀಕ್ಷಿಸಿ ತನ್ನ ಕಲೆಯನ್ನು ತಿದ್ದಿಕೊಳ್ಳಲು ರಂಗ ಭೂಮಿಯು ಅತ್ಯಂತ ಅವಶ್ಯಕವೆಂದು ಹೇಳಬೇಕಾಗಿಲ್ಲ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಾಟಕ ವೃತ್ತಿಯ ಸಂಸ್ಥೆಗಳೂ ಹಾಗೂ ಕಲಾವಿಲಾಸಿ ಸಂಘಗಳೂ ಸಾಕಷ್ಟು ಇದ್ದುವು; ಹಿಂದೆ ಹೇಳಿದಂತೆ. ಇವುಗಳು ಸ್ವಾತಂತ್ರ್ಯದ ನಂತರ ಸಂಗೀತ–ನಾಟಕ ಅಕಡೆಮಿ ಮುಂತಾದ ಸಂಸ್ಥೆಗಳು ಸ್ಥಾಪಿತವಾದುವು. ಆದರೆ ವಿಶೇಷವಾಗಿ ದೇಶಭಾಷೆಗಳ ನಾಟಕಗಳಿಗೆ ಪ್ರೋತ್ಸಾಹ ನೀಡಲು ಇವುಗಳ ಚಟುವಟಿಕೆಗಳು ಮೀಸಲಾದ್ದರಿಂದ, ಭಾರತೀಯ ಆಂಗ್ಲನಾಟಕಗಳ ಬೆಳವಣಿಗೆಗೆ ಮೊದಲಿನಿಂದಲೂ ಇವುಗಳಿಂದ ಹೆಚ್ಚು ಉಪಯೋಗವಿಲ್ಲದಂತಾಗಿದೆ. ಈ ಕ್ಷೇತ್ರಕ್ಕೆಂದೇ ಗೊತ್ತಾಗಿರುವ ಬೆಂಗಳೂರಿನ ಲಿಟಲ್ ಥಿಯೇಟರ್ ದೆಹಲಿಯ ಅಕ್ಷಯ ಥಿಯೇಟರ್ ನಂತಹ ಸಂಸ್ಥೆಗಳು ದೇಶಾದ್ಯಂತ ಸ್ಥಾಪಿಸಲ್ಪಟ್ಟರೆ ಈ ನಾಟಕಗಳ ಪ್ರಗತಿ ಸಾಧ್ಯವಾಗುತ್ತದೆ,

ಭವಿಷ್ಯ

ಇದುವರೆಗೆ ವಿವೇಚಿಸಿದಂತೆ, ವಸ್ತು, ಮಾದರಿ–ತಂತ್ರಗಳು, ಭಾಷೆಯ ಬಳಕೆ, ಜೀವಂತರಂಗಭೂಮಿಯ ಅಭಾವ ಮುಂತಾದ ಪ್ರಮುಖ ಕಾರಣಗಳಿಂದ ಭಾರತೀಯ

ಆಂಗ್ಲ ನಾಟಕಗಳು ರಂಗಭೂಮಿಯ ದೃಷ್ಟಿಯಿಂದ ಸಾಕಷ್ಟು ಪ್ರಗತಿ ಸಾಧಿಸಿಲ್ಲ. ಆದರೂ ಇವುಗಳಿಂದ ಈಗಿನ ನಾಟಕ ಕರ್ತೃ ಎದೆಗುಂದಬೇಕಾಗಿಲ್ಲ. ಶೈಕ್ಷಣಿಕ ಮೌಲ್ಯದ ದೃಷ್ಟಿಯಿಂದ ಈ ಕಲೆಯನ್ನು ಬೆಳೆಸಲು ಬೇಕಾದ ನಾಟಕ ಮಂದಿರಗಳ ಸ್ಥಾಪನೆ, ಲೇಖಕರು ಹಾಗೂ ಕಲಾಕಾರರಿಗೆ ಅವಶ್ಯಕವಾದ ಸವಲತ್ತುಗಳೇ ಮುಂತಾದುವು ಸರ್ಕಾರದ ಸಹಾಯಕ್ಕೆ ಸಂಬಂಧಪಟ್ಟ ಅಂಶಗಳು, ಆದರೆ ನಾಟಕಕರ್ತೃ ತನ್ನ ಪರಿಮಿತಿಯಲ್ಲಿರುವ ಮೇಲ್ಕಂಡ ಅಂಶಗಳ ಕಡೆ ಚೆನ್ನಾಗಿ ಗಮನ ಹರಿಸಿ, ಭಾರತೀಯ ಸಮೃದ್ಧ ಸಂಪ್ರದಾಯವನ್ನು ಬಳಸಿಕೊಂಡು ಅವಶ್ಯವಾದೆಡೆಗಳಲ್ಲಿ ವಿದೇಶೀ ನಾಟಕ ಕಲೆಯಿಂದ ಲಾಭ ಪಡೆಯುತ್ತ, ಭಾರತೀಯತೆಯನ್ನು ಬಿಡದೆ ಹೊಸ ಪ್ರಯೋಗ ಮಾಡುವ ಅಭ್ಯಾಸ ಬೆಳೆಸಿಕೊಂಡರೆ ಭಾರತೀಯ ಆಂಗ್ಲನಾಟಕದ ಭವಿಷ್ಯ ಉತ್ತಮ ಗೊಳ್ಳುವುದು.

ಸಂಕ್ಷಿಪ್ತ ಗ್ರಂಥಸೂಚಿ (Select Bibliography)

Dr. Srinivasa Iyengar, K.R,	Indian writing in English (Bombay 1973)
Dr. M. K. Naik & S. Mokashi - Punekar	Perspectives on Indian Drama in English (OUP, Madras, 1977)
Dr. Adya Rangacharya,	The Indian Theatre (New Delhi, 1971)
Sri Aurobindo,	Collected Poems & Plays (Pondicherry 1942)
T. P. Kailasam,	The Curse or Karna (B'lore, 1946 The Purpose (B'lore, 1944) Little lays & Plays (B'lore, 1933)
Harindranath Chattopadhyaya,	Five Plays (Pondicherry, 1937) Poems & Plays (Madras, 1927) Siddahartha (Bombay, 1956)
Arati Nagarwalla,	The Bait (Calcutta, 1969)
Bharati Sarabhai,	Two Women (Bombay, 1952) The Well of the people (Calcutta, 1943)
Mrinalini Sarabhai,	Captive Soil (Bombay 1945)
Asif Currimbhoy,	Asis Currimbhoy's plays (New Delhi, n.d.)

Sadar Joshi,	Acharya Drona (Culcutta 1963)
Ramaswamy Shastry	Draupadi (Madras 1939)
Mathuram Bhutalingam,	Alone in Ayodhya. (New Delhi 1970)
Srinivasa Aiyangar, V.V.	Ramarajya (Madvas, 1952)
Shivakumar Joshi,	He never sleptso long (Calcatta, 1972)
Borgaonkar D. M.	One-Act plays (Agra, 1957)
Annayya,	The Bride of God (Tungabhadra 1931)
A.S.P. Ayyar,	Mothers Sacrifice (Madras. 1937) In the Clutch of the Devl (Bombay 1926)
Dilipkumar Roy & Indira Devi	The Beggar Princess (Allahabad, 1956)
Lakhan Deb,	Tiger-claw (New Delhi, 1968)
Gurcharan Das	Larins Sahib (New Delhi, 1970)
Narayanan,	Where God is not & Other playlets (Madras, 1933)
Balwant Gargi,	The Vultures (Lahore, 1941)
Mrs. Ghosal,	Princess Kalyani (Madras, 1930)
Krishna Swami,	Kailash (Lahore, 1944)
Lobo prabhu	Collected plays (Madras, 1954)
Gaffoor,	Dr. Lover (Madras, 1972)
Shanti Jhaveri,	Deluge (– –, 1944)
Swami Sivananda,	Radha's prem (Rishi Kesh 1945)

ಮಂಗರಸನ ಜಯನೃಪ ಕಾವ್ಯ ಮತ್ತು ಚೆಂಗಾಳ್ವ ವಿಕ್ರಮರಾಯ

ದಿವಂಗತ ಸುಧಾ ವೆಂ. ಮನಸೂರ

ಕಥಾ ನಾಯಕನನ್ನು ಚರಿತ್ರೆಯ ನಾಯಕರೊಂದಿಗೆ 'ತಗುಳ್ಚಿ' ಕಾವ್ಯ ಬರೆಯುವ ಪರಿಪಾಠ ನಮ್ಮಲ್ಲಿ ಆದಿಕವಿ ಪಂಪನಿಂದಲೂ ಇದೆಯಷ್ಟೆ! ಆ ಪರಿಪಾಠವನ್ನು ಮುಂದಿನ ಅನೇಕ ಕವಿಗಳು ಮುಂದುವರಿಸಿಕೊಂಡು ಬಂದಿರುವುದನ್ನು ನಾವು ಸಾಹಿತ್ಯ ಚರಿತ್ರೆಯಲ್ಲಿ ಕಾಣುತ್ತೇವೆ. ಅಂತಹರಲ್ಲಿ (ಕ್ರಿ. ಶ. 15ನೆಯ ಶತಮಾನದ ಉತ್ತರಾರ್ಧ 16ನೆಯ ಶತಮಾನದ ಪೂರ್ವಾರ್ಧದಲ್ಲಿ ಬಾಳಿದ) ಮೂರನೆಯ ಮಂಗರಸನೂ ಒಬ್ಬ. ಅದು ವ್ಯಕ್ತವಾದದ್ದು ಅವನ 'ಜಯನೃಪಕಾವ್ಯ' ದಲ್ಲಿ.

ಜಯನೃಪ ಕಾವ್ಯವು ಹಿಂದೆ ಜಿನಸೇನನು ಹೇಳಿದ ಕಥಾವಸ್ತುವನ್ನೇ ಒಳಗೊಂಡಿದ್ದರೂ ಮಹಾಕಾವ್ಯದ ಅಷ್ಟಾದಶ ವರ್ಣನೆಗಳನ್ನೊಳಗೊಂಡಂತೆ ವಿಸ್ತಾರವೂ ಸರಸವೂ ವಿಶಿಷ್ಟವೂ ಆಗಿದೆ. ಅಂಥ ವಿಶಿಷ್ಟತೆಗಳಲ್ಲಿ ಕಥಾ ನಾಯಕನನ್ನು ಚರಿತ್ರೆಯ ನಾಯಕರೊಂದಿಗೆ ತಗುಳ್ಚಿ ಹೇಳಿದುದೂ ಒಂದಾಗಿದೆ. ಜೊತೆಗೆ ಜಯನೃಪನನ್ನು ಕಥಾನಾಯಕನನ್ನಾಗಿ ಮಾಡಿ ಬರೆದ ಏಕಮೇವ ಕಾವ್ಯವೂ ಆಗಿದೆ.

ಜಯನೃಪ ಕಾವ್ಯವು ಮೇಲು ನೋಟಕ್ಕೆ ಪೌರಾಣಿಕ ಜಯಕುಮಾರ ವೃತ್ತಾಂತವನ್ನೊಳಗೊಂಡ ಕಾವ್ಯವೆನಿಸಿದರೂ ಕಾವ್ಯದ ಅಂತರಂಗವು ಚೆಂಗಾಳ್ವ ವಿಕ್ರಮರಾಯನನ್ನು ವರ್ಣಿಸಿ ಬರೆದ ಕಾವ್ಯವೆಂಬುದನ್ನು ಸಿದ್ಧಪಡಿಸುತ್ತದೆ. 'ವಿಕ್ರಮ' ಎಂಬ ಹೆಸರು ಮಂಗರಸನ ಸಮಕಾಲೀನ ಚೆಂಗಾಳ್ವ ಅರಸನ ಹೆಸರಾದುದರಿಂದ ಕಾವ್ಯದಲ್ಲಿ ಕಾವ್ಯನಾಯಕನಾದ ಜಯನೃಪನನ್ನು 'ವಿಕ್ರಮ ಕೌರವ' ಎಂಬ ಇನ್ನೊಂದು ಹೆಸರಿನಿಂದ ಕರೆದದ್ದು ಚೆಂಗಾಳ್ವ ವಿಕ್ರಮರಾಯನನ್ನು ಜಯನೃಪನಿಗೆ ಹೋಲಿಸಿ ಬರೆದದ್ದನ್ನು ವಿಚಾರ ಮಾಡಲು ಪ್ರಥಮ ಅವಕಾಶವನ್ನು ಒದಗಿಸುತ್ತದೆ.

ಚೆಂಗಾಳ್ವ ವಿಕ್ರಮರಾಯನನ್ನು ಕಾವ್ಯ ನಾಯಕನನ್ನಾಗಿ ಮಾಡಿ ಬರೆದ ಜಯನೃಪ ಕಾವ್ಯದಲ್ಲಿ ಯುದ್ಧ ಘಟನೆಗೇ ಪ್ರಾಮುಖ್ಯತೆಯಿದೆ. ಮಂಗರಸನಿಗೆ ಚೆಂಗಾಳ್ವರ ಮೇಲಿನ ಅಭಿಮಾನವಲ್ಲದೆ ಚೆಂಗಾಳ್ವ ನಂಜರಾಜ ಮತ್ತು ವಿಜಯನಗರದ ಚಕ್ರವರ್ತಿಯಾದ ಕೃಷ್ಣದೇವರಾಯ ಇವರಿಬ್ಬರಲ್ಲಿ ನಡೆದ ಯುದ್ಧದಲ್ಲಿ

ಮರಣ ಹೊಂದಿದ ತನ್ನ ತಂದೆಯನ್ನು ಸ್ಮರಿಸುವ ಉದ್ದೇಶವೂ ಇದಕ್ಕೆ ಕಾರಣ ವಾಗಿದೆ. ಕಾವ್ಯದಲ್ಲಿ ಮುಖ್ಯವಾಗಿ ವಿಕ್ರಮರಾಯನನ್ನು ವರ್ಣಿಸಿದ್ದರೂ ಅನೇಕ ಸಂದರ್ಭಗಳಲ್ಲಿ ಹೇಳಿದ 'ವಿಜಯ' ಎಂಬ ಹೆಸರು ತನ್ನ ತಂದೆಯಾದ ವಿಜಯೇಂದ್ರ ನನ್ನು ಉದ್ದೇಶಿಸಿಯೆ ಇರಬಹುದೇ–ಎಂಬ ಕಲ್ಪನೆಗೆ ಎಡೆಗೊಡುತ್ತದೆ.

ವಿಜಯನಗರದ ಕೃಷ್ಣದೇವರಾಯ ಮತ್ತು ಚೆಂಗಾಳ್ವ ನಂಜರಾಯ ಇವರಲ್ಲಿ ನಡೆದ ಯುದ್ಧದಲ್ಲಿ ಮಂಗರಸನ ತಂದೆಯಾದ ವಿಜಯನು ತನ್ನ ಅಧಿರಾಜನಾದ ನಂಜರಾಯನ ಪರವಾಗಿ ಯುದ್ಧದಲ್ಲಿ ಹೋರಾಡಿ ಮರಣ ಹೊಂದಿದ್ದು 'ರಾಮನಾಥ ಚರಿತಂ' ಕಾವ್ಯದಿಂದಲೂ, ಮಂಗರಸನಿಗೆ ಸಂಬಂಧಿಸಿದ ಶಾಸನ ಪ್ರತಿಯಿಂದಲೂ ತಿಳಿದು ಬರುತ್ತದೆ.

ತಂದೆಯ ಮರಣದಿಂದ ಮಂಗರಸನ ಮನಸ್ಸು ಉದ್ವಿಗ್ನಗೊಂಡಿರಬೇಕು. ಆ ಸಮಯದಲ್ಲಿ ಅವನು ತನ್ನ ಮಾನಸಿಕ ಉದ್ವೇಗದ ಉಪಶಮನಕ್ಕಾಗಿಯೂ ತಮ್ಮ ಮನೆತನದ ಪೋಷಕ ರಾಜನ ಮೇಲಿನ ಅಭಿಮಾನಕ್ಕಾಗಿಯೂ, ವಿಜಯನಗರದ ಚಕ್ರ ವರ್ತಿಯಾದ ಕೃಷ್ಣದೇವರಾಯನು ಚೆಂಗಾಳ್ವ ನಂಜರಾಜನೊಡನೆ ಮಾಡಿದ ಯುದ್ಧದ ಘಟನೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಚೆಂಗಾಳ್ವ ವಿಕ್ರಮರಾಯನನ್ನು ಜಯನೃಪನಿಗೆ ಹೋಲಿಸಿ ಕಾವ್ಯವನ್ನು ಬರೆದಿದ್ದಾನೆ.

ಮಂಗರಸನು ಕಾವ್ಯದಲ್ಲಿ ತಾನು ವರ್ಣಿಸಿದ ಯುದ್ಧವು ಚೆಂಗಾಳ್ವರು ಮತ್ತು ಕೃಷ್ಣದೇವರಾಯನಲ್ಲಿ ನಡೆದ ಯುದ್ಧವೆಂಬ ಬಗೆಗೆ ಸ್ಪಷ್ಟವಾಗಿ ಉಲ್ಲೇಖಿಸಿಲ್ಲ ವಾದರೂ ವಿಜಯನಗರದ ದೊರೆ ಕೃಷ್ಣದೇವರಾಯನೊಡನೆ ಯುದ್ಧ ಮಾಡಿದ ಚೆಂಗಾಳ್ವ ಅರಸನನ್ನು ಕಾವ್ಯ ನಾಯಕನನ್ನಾಗಿ ಮಾಡಿ ಕಾವ್ಯ ಬರೆದಿದ್ದರಿಂದ ತನ್ನ ಕಾವ್ಯಕ್ಕಾಗಿ ಆಯ್ದುಕೊಂಡ ಪುರಾಣ ಕಾವ್ಯದಲ್ಲಿಯ 'ಸ್ವಯಂವರ ಘಟನಾ' ಪ್ರಧಾನವಾದ ಸಂದರ್ಭವನ್ನು ಅದಕ್ಕೆ ವ್ಯತಿರಿಕ್ತವಾಗಿ ಯುದ್ಧ ಘಟನೆಗೆ ಪ್ರಾಮುಖ್ಯತೆಯನ್ನು ಕೊಟ್ಟು ವರ್ಣಿಸಿರುವನು. ಅಲ್ಲದೆ ಜಯನೃಪ ಕಾವ್ಯ ದಲ್ಲಿಯ ಯುದ್ಧ ವರ್ಣನೆಯು ಕೇವಲ ಪೌರಾಣಿಕ ಯುದ್ಧ ವರ್ಣನೆಯಾಗಿರದೆ ತನ್ನ ತಂದೆಯೂ ಭಾಗವಹಿಸಿದ ಚೆಂಗಾಳ್ವರಾಜ ಮತ್ತು ಕೃಷ್ಣದೇವರಾಯ ಇವರಲ್ಲಿ ನಡೆದ ಐತಿಹಾಸಿಕ ಯುದ್ಧ ವರ್ಣನೆಯೆಂಬುದು ಸಿದ್ಧವಾಗುತ್ತದೆ. ಮಂಗರಸನ ತಂದೆಯಾದ ವಿಜಯನೃಪನು ಚೆಂಗಾಳ್ವರ ಸೈನ್ಯದಲ್ಲಿ ಸೇನಾಪತಿಯಾಗಿದ್ದನೆಂಬುದು ಕವಿಯ ಸೂಪಶಾಸ್ತ್ರ ಗ್ರಂಥದಲ್ಲಿಯ ಪದ್ಯದಿಂದ ಸ್ಪಷ್ಟವಾಗುತ್ತದೆ. ಮಂಗರಸನು ತನ್ನ ಉಳಿದ ಕಾವ್ಯಗಳಲ್ಲಿ ತಂದೆಯ ಶೌರ್ಯದ ಬಗೆಗೆ ವರ್ಣಿಸದೆ ಜಯನೃಪ ಕಾವ್ಯದಲ್ಲಿ ಮಾತ್ರ ವರ್ಣಿಸಿದ್ದಾನೆ. ಕಾವ್ಯವು ತನ್ನ ತಂದಯು ಚೆಂಗಾಳ್ವರ ಪರವಾಗಿ ಯುದ್ಧದಲ್ಲಿ ಭಾಗವಹಿಸಿದ್ದನ್ನು ಅನುಲಕ್ಷಿಸಿ ಬರೆದ ಕಾವ್ಯವಾದ್ದರಿಂದ ಈ ರೀತಿಯಿಂದ ನೆನೆದಿರುವುದು ಸಾಧ್ಯವಿದೆ. ಆದರೆ ತನ್ನ ತಂದೆಯು ಯುದ್ಧದಲ್ಲಿ

ಮರಣ ಹೊಂದಿದ್ದನ್ನು ಹೇಳದೇ ಇರುವುದು ಒಂದು ರೀತಿಯ ಮನಸ್ಸಿನ ಸಮಾಧಾನಕ್ಕೆಂದೇ ತಿಳಿಯಬಹುದು. ಮಂಗರಸನಿಗೆ ವಿಕ್ರಮರಾಯನು ಕೃಷ್ಣದೇವರಾಯನಂಥ ಚಕ್ರವರ್ತಿಯನ್ನು ಎದುರಿಸಿದ ಬಗೆಗೆ ಅಭಿಮಾನವೆನಿಸಿರಬೇಕು. ಅಂತೆಯೇ ನಿಜವಾದ ಯುದ್ಧದಲ್ಲಿ ಕೃಷ್ಣದೇವರಾಯನಿಗೆ ಜಯವಾದದ್ದು ಸ್ಪಷ್ಟವಾಗಿ ತಿಳಿದಿದ್ದರೂ ವಿಕ್ರಮರಾಯನನ್ನು ಜಯನೃಪನಿಗೆ ಸಮೀಕರಿಸಿ ಕಾವ್ಯವನ್ನು ಬರೆದು ವಿಧವಿಧವಾಗಿ ವರ್ಣಿಸಿದ್ದಾನೆ.

ಜಯನೃಪ ಕಾವ್ಯವು ಚೆಂಗಾಳ್ವ ವಿಕ್ರಮರಾಯನನ್ನು ಜಯನೃಪನಿಗೆ ಹೋಲಿಸಿ ಬರೆದ ಮತ್ತು ಮಹತ್ವದ ಯುದ್ಧ ಘಟನೆಯನ್ನೊಳಗೊಂಡ ಐತಿಹಾಸಿಕ ಹಿನ್ನಲೆಯುಳ್ಳ ಕಾವ್ಯವೇನೋ ಹೌದು, ಆದರೆ ಪಂಪನು ಧೈರ್ಯವಾಗಿ "ತಗುಳ್ಚಿ ಪೋಲಿಪೊಡೆ ಎನಗಳ್ತಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೊಳ್" ಎಂದು ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಹೇಳಿದ ಹಾಗೆ ಹೇಳದೆ ಇರುವುದಕ್ಕೆ ಹಾಗೂ ಪಂಪನು ತನ್ನ ಕಾವ್ಯದಲ್ಲಿ ನಿರಾತಂಕವಾಗಿ ಅರಿಕೇಸರಿಯನ್ನೂ ಆ ಚಾಲುಕ್ಯ ವಂಶವನ್ನೂ ವರ್ಣಿಸಿದಂತೆ ಮಂಗರಸನು ತನ್ನ ಕಾವ್ಯದಲ್ಲಿ ಕಾವ್ಯ ಬರೆದ ಉದ್ದೇಶವನ್ನೂ, ವ್ಯಕ್ತಿಗಳ ಹೆಸರನ್ನೂ ಸ್ಪಷ್ಟವಾಗಿ ಹೇಳದಿರುವುದಕ್ಕೆ ಕಾರಣಗಳುಂಟು:

1. ಪೌರಾಣಿಕ ಜಯಕುಮಾರ ಕಥಾ ಸಂದರ್ಭವನ್ನು ತಮ್ಮ ಮನೆತನದ ಪೋಷಕ ಅರಸನನ್ನು ಹೊಗಳಿ ಬರೆದ ಲೌಕಿಕ ಕಾವ್ಯವೆಂದು ಹೇಳಿದ್ದೇ ಆದರೆ, ಈ ಮುಂಚೆ ಮಂಗರಸನು 'ರಾಮನ ಸಂಗೀತ' ಕಾವ್ಯವನ್ನು ಬರೆದಾಗ ಗುರು ನಿಂದೆಗೊಳಗಾದಂತೆ ಮತ್ತೆ ಗುರುನಿಂದೆಗೊಳಗಾಗುವ ಭೀತಿ;

2. ಯುದ್ಧದ ಕಾರಣದಿಂದಾಗಿ ವಿಜಯನಗರ ಚಕ್ರಾಧಿಪತ್ಯ ಮತ್ತು ಕೃಷ್ಣದೇವರಾಯನ ಬಗೆಗೆ ಮನದಲ್ಲಿ ವೈಮನಸ್ಸು ಉಂಟಾಗಿ ಕಾವ್ಯ ಬರೆದಿದ್ದರೂ ವಿಜಯನಗರ ಸಾಮ್ರಾಜ್ಯದ ಅಧೀನ ಪ್ರದೇಶದ ಪಾಳೆಯಗಾರನಾದ ಅವನಿಗೆ ತನ್ನ ಉದ್ದೇಶವನ್ನು ಕಾವ್ಯದಲ್ಲಿ ಸ್ಪಷ್ಟಪಡಿಸುವುದು ಸಾಧ್ಯವಾಗದೆ ಇರುವುದು.

3. ತನ್ನ ತಂದೆಯ ಮರಣ ಮತ್ತು ಕೃಷ್ಣದೇವರಾಯ ಚೆಂಗಾಳ್ವ ಪ್ರದೇಶವನ್ನು ಅಧೀನಪಡಿಸಿಕೊಂಡದ್ದು ಮುಂತಾದ ಸತ್ಯ ಘಟನೆಗಳಿಗೆ ವ್ಯತಿರಿಕ್ತವಾಗಿ, ತನ್ನ ಮನಸ್ಸಿನ ಸಮಾಧಾನಕ್ಕಾಗಿ ಕಾವ್ಯವನ್ನು ಬೇರೆ ರೀತಿಯಿಂದಲೇ ವರ್ಣನೆ ಮಾಡಿದ್ದರಿಂದ ಮಂಗರಸನಿಗೆ ತನ್ನ ಕಾವ್ಯದ ರಹಸ್ಯವನ್ನು ಕಾಯ್ದುಕೊಳ್ಳಬೇಕಾಗಿದ್ದುದು.

ಈ ಎಲ್ಲ ಕಾರಣಗಳಿಂದಾಗಿ, ಮಂಗರಸನು ಚೆಂಗಾಳ್ವ ವಿಕ್ರಮರಾಯನ ಬಗೆಗೆ ನಿಜವಾದ ಅಭಿಮಾನದಿಂದ ಕಾವ್ಯವನ್ನು ಬರೆದಿದ್ದರೂ ಸ್ಪಷ್ಟವಾಗಿ ತಾನು ತಗುಳ್ಚಿ

ಕಾವ್ಯ ಬರೆದ ಉದ್ದೇಶವನ್ನು ಕಾವ್ಯ ನಾಯಕನ ವಂಶಾವಳಿ ಮುಂತಾದವುಗಳನ್ನೂ ಹೇಳಲು ಸಾಧ್ಯವಾಗಿಲ್ಲವೆಂಬುದು ಸ್ಪಷ್ಟವಾಗಿದೆ.

ಹೀಗೆ ಕವಿ ತನ್ನ ಕಾವ್ಯದ ಉದ್ದೇಶವನ್ನು ನಿರ್ಭಯವಾಗಿ ಹೇಳುವ ಪರಿಸರ ವನ್ನು ಹೊಂದಿರದಿದ್ದರೂ, ತಮ್ಮ ಮನೆತನದ ಪೋಷಕ ರಾಜನಾದ ಚೆಂಗಾಳ್ವ ವಿಕ್ರಮರಾಯನನ್ನು ಹೋಲಿಸಿ ಬರೆದ ಜಯನೃಪನನ್ನು ಮತ್ತು ಅನೇಕ ಮಹತ್ವದ ಘಟನೆಗಳನ್ನು ಶ್ಲೇಷಾರ್ಥರೂಪವಾಗಿ ವರ್ಣಿಸುವುದರಲ್ಲಿ ಸಫಲನಾಗಿದ್ದಾನೆ.

ಅಲ್ಲದೆ ಕಾವ್ಯನಾಯಕನ ಬಗೆಗೆ ತೋರಿಸಿದ ವಿಶೇಷವಾದ ಅಭಿಮಾನ ಮತ್ತು ಆತ್ಮೀಯತೆ, ಕಾವ್ಯ ನಾಯಕನ ಹೆಸರು, ಪುರಾಣ ಕಾವ್ಯದಲ್ಲಿಯ ಜಯಕುಮಾರ ಕಥೆ ಮತ್ತು ಜಯನೃಪ ಕಾವ್ಯದಲ್ಲಿ ಕಂಡು ಬರುವ ಪಾತ್ರ ಚಿತ್ರಣಗಳಲ್ಲಿಯ ವ್ಯತ್ಯಾಸ, ಸ್ವಯಂವರ ಹಾಗೂ ಯುದ್ಧ ಘಟನೆಗಳಲ್ಲಿಯ ಮಾರ್ಪಾಟು, ರವಿಕೀರ್ತಿ ಮತ್ತು ಭರತೇಶನನ್ನು ಕಂಡರಿಸಿದ ರೀತಿ, ಇವೆಲ್ಲವುಗಳು ಕಾವ್ಯದಲ್ಲಿ ಚೆಂಗಾಳ್ವ ರಾಜನಾದ ವಿಕ್ರಮರಾಯನನ್ನು ಜಯನೃಪನಿಗೂ, ಕೃಷ್ಣದೇವರಾಯನನ್ನು ರವಿಕೀರ್ತಿಗೂ, ವಿಜಯನಗರ ಸಾಮ್ರಾಜ್ಯವನ್ನು ಭರತೇಶ್ವರನ ಚಕ್ರಾಧಿಪತ್ಯಕ್ಕೂ ತಗುಳ್ಚಿ ಬರೆದದ್ದನ್ನು ಸೂಚಿಸುವ ಸ್ಪಷ್ಟ ಆಧಾರಗಳಾಗಿವೆ.

ಇವೆಲ್ಲವುಗಳನ್ನು ನೋಡಿದಾಗ ಜಯನೃಪ ಕಾವ್ಯವು ಇದುವರೆಗೆ ವಿದ್ವಾಂಸರು ಭಾವಿಸಿದಂತೆ ಕೇವಲ ಪೌರಾಣಿಕ ಕಾವ್ಯ ಮಾತ್ರವಾಗಿರದೆ ಮಹತ್ವದ ಐತಿಹಾಸಿಕ ಅಂಶಗಳನ್ನೊಳಗೊಂಡ ಚಾರಿತ್ರಿಕ ಕಾವ್ಯವೂ ಆಗಿದೆ ಎಂಬುದು ಸುಸ್ಪಷ್ಟ. ಇದರೊಂದಿಗೆ ಮೂಲ ಪೌರಾಣಿಕ ಕಥೆಗೆ ಅನ್ಯಾಯವಾಗದಂತೆ ಕವಿ ಸಾಕಷ್ಟು ಜಾಗ್ರತೆ ವಹಿಸಿರುವುದು ಅವನ ದಕ್ಷತೆಗೂ ಪ್ರತಿಭೆಗೂ ಸಾಕ್ಷಿಯಾಗಿದೆ.

ಒಂದು ಟಿಪ್ಪಣಿ :

ಮೂರನೆಯ ಮಂಗರಸನನ್ನು ಕುರಿತು ಸುಧಾ ಮನಸೂರರು ಕರ್ನಾಟಕ ವಿಶ್ವವಿದ್ಯಾಲಯ ದಿಂದ 1981ರಲ್ಲಿ ಪಿ.ಎಚ್.ಡಿ. ಪಡೆದ ಸಂಪ್ರಬಂಧದ ಒಂದು ಹೊಸ ಅಂಶವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಈ ವಿಷಯದ ಸಂಶೋಧನೆಗಾಗಿ ಗಂಡ ಹೆಂಡತಿ-ಇಬ್ಬರೂ ಕವಿ ಬಾಳಿದ್ದ ಪ್ರದೇಶವನ್ನು ಸುತ್ತಾಡಿ ಕೈಕೊಂಡ ಕಾರ್ಯವನ್ನು ಮುಗಿಸಿದ್ದರು. ಈಚೆಗೆ ಅವರಿಬ್ಬರೂ ತರುಣ ವಯಸ್ಸಿನಲ್ಲಿಯೇ ತೀರಿಕೊಂಡದ್ದು ವಿಷಾದನೀಯ ಸಂಗತಿಯಾಗಿದೆ. — ಶ್ರೀನಿವಾಸ ಹಾವನೂರ

ಶಾಸನದಲ್ಲೊಂದು ಷಟ್ಪದಿ – ಒಂದು ಪ್ರತಿಕ್ರಿಯೆ

ಬಿ. ರಾಜಶೇಖರಪ್ಪ

1980ರ ಜುಲೈ-ಸೆಪ್ಟೆಂಬರ್‌ನ 'ಸಾಧನೆ'ಯ 'ಮಂಥನ'ದ (ಪು 150–51ರ) ಪ್ರಕಟವಾಗಿರುವ "ಶಾಸನದಲ್ಲೊಂದು ಷಟ್ಪದಿ" ಎನ್ನುವ ಲೇಖನದಲ್ಲಿ ಶ್ರೀಮತಿ ಹನುಮಾಕ್ಷಿ ಗೋಗಿ ಅವರು, ಚಿತ್ರದುರ್ಗದ ಸಂಟಿಗೆ ಸಿದ್ಧೇಶ್ವರ ದೇವಾಲಯದ ಒಂದು ಶಾಸನದಲ್ಲಿ[1] ಆರಂಭದಲ್ಲಿ ಬರುವ 'ಒಂದು ಪದ್ಯ'ದ ಛಂದಸ್ಸು ಭೋಗ ಷಟ್ಪದಿ–ಅದರಲ್ಲೂ ಮಾತ್ರಾಗಣಾನ್ವಿತವಾದ ಭೋಗಷಟ್ಪದಿಯ ಒಂದು ಪ್ರಕಾರ- ಎಂದು ನಿರ್ಣಯಿಸಲು ಯತ್ನಿಸಿದ್ದಾರೆ. ಅವರ ಪ್ರತಿಪಾದನೆ ಮತ್ತು ನಿರ್ಣಯಗಳು ಅಸಮರ್ಪಕತೆಯ ದಾರಿಯಲ್ಲಿ ಸಾಗಿವೆ ಎಂಬುದನ್ನು ತೋರಿಸುವುದು ಮತ್ತು ಆ ಪದ್ಯದ ಸಮರ್ಪಕವಾದ ಪಾಠ ಕೊಟ್ಟು ಛಂದಸ್ಸನ್ನು ಕುರಿತು ಮರು ಪರಿಶೀಲನೆಗೆ ಅವಕಾಶ ಕಲ್ಪಿಸುವುದು ಈ ಲೇಖನದ ಉದ್ದೇಶ.

ಮೊದಲನೆಯದಾಗಿ ಶ್ರೀ ಬಿ. ಎಲ್. ರೈಸರು ಪ್ರಕಟಿಸಿರುವ 'ಈ ಪದ್ಯಭಾಗ'ದ ಶಾಸನಪಾಠ ಸಮಗ್ರವಾಗಿಲ್ಲ. ಕೆಲವೆಡೆ ಅಕ್ಷರಗಳೂ ಪದಗಳೂ ಮುಕ್ಕಾಗಿರುವಂತೆ ತೋರಿಸಿರುವ ಇಂಥ ಪಾಠವನ್ನು ಆಧರಿಸಿ, ಛಂದಸ್ಸಿನಂಥ ಲೆಕ್ಕಾಚಾರಬದ್ಧವಾದ ತಾಂತ್ರಿಕ ಅಂಶವೊಂದನ್ನು ಕುರಿತು ತರ್ಕಿಸುವುದೂ ನಿರ್ಣಯಿಸುವುದೂ ಕಷ್ಟವಾಗುತ್ತದೆ. ಏನೇ ಆದರೂ ಅಸಮಗ್ರ ಪಾಠದಿಂದಾಗಿ ನಿರ್ಣಯ ಶಂಕಾತೀತ ಎನಿಸುವುದಿಲ್ಲ. ಈ ಪಾಠ "ಪಠ್ಯದೋಷಗಳಿಂದ ಕೂಡಿರುವುದರಿಂದ ನಿರ್ಣಯಂ ತೊಡಕಿನದು" ಎಂದು ಹೇಳಿಯೂ ಗೋಗಿಯವರು ಇದನ್ನು ಉಪಯೋಗಿಸಿಕೊಂಡಿದ್ದಾರೆ; ಅಲ್ಲದೆ ಒಂದು ನಿರ್ಣಯ ಸ್ಥಾಪಿಸಲೂ ಕೂಡ ಯತ್ನಿಸಿದ್ದಾರೆ. ಆದರೆ ಇನ್ನೂ ನಿರಾಶೆಯೆಂದರೆ, ಇರುವ ಪಾಠವನ್ನೂ ಅವರು ಪೂರ್ಣವಾಗಿ ಮತ್ತು ಕ್ರಮಬದ್ಧವಾಗಿ ಉಪಯೋಗಿಸಿಲ್ಲ, ಎಂಬುದು. ಇದು ಹೇಗೆ ಎಂಬುದನ್ನು ನೋಡಬೇಕು :

ರೈಸರು ಕೊಟ್ಟಿರುವ ಕನ್ನಡ ಲಿಪಿ ಪಾಠ ಹೀಗಿದೆ :

2 ಪರಮನೆ ಪರತಂಕೃತ್ಯನೆ... ಪರನೆ ಪರಾಮೇಶನೆ
3 ...ನೆಗಾಧಾರನೆ ಪರಲೋಕ ಹಿತಾರ್ಥನೆ ಪಾಪದಾವನೆ ಪಾಲಿಪನೆ ಪರಸುರರ ಪಿತನೆ ಪವಿತ್ರನೆ ಕ
4 ರುಣಸ್ಯೈ ವರಂದಾನಿ ಪ್ರಸಿದ್ಧಲಿಂಗವೇ ॥

---

1 EC XI (1903) ; Ed : B. L. Rice ; ಚಿತ್ರದುರ್ಗ 3 (1356 A D.)

ಈ 'ಪದ್ಯ'ದಲ್ಲಿ ನಿಯತಪ್ರಾಸವಿದೆಯೆಂದು ಭಾವಿಸಿ, ರೈಸರು ಇಂಗ್ಲಿಷ್ ಲಿಪ್ಯಂತರ ಪಾಠ ವಿಭಾಗದಲ್ಲಿ, ಮೇಲಿನ ಪಾಠವನ್ನು ಅಲ್ಲಲ್ಲಿ ತಿದ್ದಿ ಆರು ಸಾಲುಗಳಿಗೆ ಅಳವಡಿಸಿದ್ದಾರೆ. ಇದನ್ನು ಇಲ್ಲಿ ಕನ್ನಡದಲ್ಲಿ ಹೀಗೆ ಕೊಟ್ಟಿದೆ :

ಪರಮನೆ ಪರತರ - ಕೃತ್ಯನೆ...!
ಪರನೆ ಪರಮೇಶನೆ ನಗ - ಧರನೆ ।
ಪರಲೋಕ - ಹಿತಾರ್ಥನೆ ಪಾಪ - ದಾವನೆ ಪಾಲಿಪನೇ ।
ಪರ... ... ...ನೆ ।
ಪರ-ಸುರರ ಪಿತನೆ ಪವಿತ್ರನೆ ।
ಕರುಣಿಸ್ಯೆ ವರಂದಾನಿ [ಪ][2]ರ ಸಿಧ - ಲಿಂಗವೇ ॥

ಇಂಗ್ಲಿಷ್ ಲಿಪ್ಯಂತರದಲ್ಲಿರುವ ರೈಸರ ಈ ಆರು ಸಾಲುಗಳ ಅಳವಡಿಕೆಯನ್ನೇ ಗೋಗಿಯವರು ಹೀಗೆ ಅಳವಡಿಸಿದ್ದಾರೆ.

ಪರಮನೆ ಪರತರ ಕ್ರಿತ್ಯನೆ
ಪರಮೇಶ ಪನ್ನಗಧರನೆ
ಪರಲೋಕ ಹಿತಾರ್ತ್ಥನೆ ಪಾಪದಾವನೆ ಪಾಲಿಪನೆ
ಪರ............ನೆ
ಪರಸುರರ ಪಿತನೆ ಪವಿತ್ರನೆ
ಕರುಣಿಸು ವರವಂ ದಾನಿ ಪ್ರಸಿದ್ಧಲಿಂಗವೇ

ಮೂಲ ಪಾಠವನ್ನು ಆರು ಸಾಲುಗಳಿಗೆ ಅಳವಡಿಸುವಲ್ಲಿ ರೈಸರು ಕೆಲವು ಅಕ್ಷರಗಳನ್ನು ಅಥವಾ ಅಕ್ಷರಗಳಿದ್ದು ಮುಕ್ಕಾದ ಭಾಗವನ್ನು ಕೈಬಿಟ್ಟಿದ್ದಾರೆ: ಒಂದೆರಡೆಡೆ ಪದಗಳನ್ನು ತಿದ್ದಿದ್ದಾರೆ. ಗೋಗಿಯವರೂ ರೈಸರ ಹಾಗೇ ಆರು ಸಾಲುಗಳನ್ನು ಅಳವಡಿಸುತ್ತ ಕೆಲವು ಅಕ್ಷರಗಳನ್ನೂ ಪದಗಳನ್ನೂ ಕೈಬಿಟ್ಟಿದ್ದಾರೆ; ಕೆಲವೆಡೆ ಪಾಠವನ್ನೂ ಸಹ ತಿದ್ದಿದ್ದಾರೆ. ರೈಸರಲ್ಲಾದ ಲೋಪವನ್ನು ಗೋಗಿಯವರು ತಿದ್ದಬಹುದಿತ್ತು; ಆದರೆ. ಅಂಥ ಅವಕಾಶವನ್ನು ಕಳೆದುಕೊಂಡಿದ್ದಾರಲ್ಲದೆ ತಾವೂ ಇನ್ನಷ್ಟು ಲೋಪಕ್ಕೆ ಎಡೆ ಕೊಟ್ಟಿದ್ದಾರೆ. ಶಾಸನ ಪಾಠವನ್ನು ಆರು ಸಾಲಿಗೆ, ಷಟ್ಪದಿ ರೂಪಕ್ಕೆ ಅಳವಡಿಸುವ ಭರದಲ್ಲಿ ಹೀಗೆ ಅಕ್ಷರಗಳನ್ನು ಪದಗಳನ್ನು ಬಿಟ್ಟಿರುವುದನ್ನೂ, ತಿದ್ದಿದ ಪಾಠವನ್ನು ಸೂಚಿಸಲು 'ಸಂಪಾದಕೀಯ ಆವರಣ ಚಿಹ್ನೆ'ವನ್ನು ಬಳಸಿಲ್ಲದಿರುವುದನ್ನೂ ನೋಡಿದಾಗ 'ಪಾಠ ಪರಾಮರ್ಶನ ವಿಜ್ಞಾನ' (Textual Criticism)ದ ಕ್ರಮಕ್ಕೂ ಅವರು ಮಾನ್ಯತೆ ಕೊಡದೆ ಹೋದರೇ ಎಂದು ಆಶ್ಚರ್ಯವಾಗುತ್ತದೆ. (ರೈಸರಾದರೂ ಒಂದು ಕಡೆ ಮಾತ್ರ ಸಂಪಾದಕೀಯ ಆವರಣ ಹಾಕಿರುತ್ತಾರೆ).

---

2 ಇಂಗ್ಲಿಷ್ ಲಿಪ್ಯಂತರದಲ್ಲಿ p[a]ra-Sidha ಎಂದು ಕೊಡಲಾಗಿದೆ.

ಒಂದು ಪದ್ಯದ ಛಂದಸ್ಸನ್ನು ಗೊತ್ತುಹಚ್ಚುವ ಪ್ರಯತ್ನ ನಡೆಸಿದಾಗ, ಆ ಪದ್ಯದ ಯಾವೊಂದು ಪದವನ್ನಾಗಲಿ ಪದ ಸಮುಚ್ಚಯವನ್ನಾಗಲಿ ಕಡೆಗೆ ಅಕ್ಷರವನ್ನಾಗಲಿ ಕೈಬಿಡುವುದು ಅಸಮರ್ಪಕವಾಗುತ್ತದೆ. ಏಕೆಂದರೆ ಪದ್ಯದ ಪ್ರತಿ ಅಕ್ಷರವೂ ಪದವೂ ಅದರ ಒಟ್ಟು ಛಂದಸ್ಸಿನ ಘಟಕವಾಗಿರುತ್ತವೆ. ಅಂಥ ಘಟಕಗಳನ್ನೇ ಕೈಬಿಟ್ಟು, ಅಲ್ಲಲ್ಲಿ ತಿದ್ದಿ, ಅಂದರೆ ಪಾಠಕ್ಕೆ ಪೂರ್ಣವಾಗಿ ನಿಷ್ಠವಾಗಿರದೆ, ಛಂದಸ್ಸು ಇಂಥದ್ದು ಎಂದು ನಿರ್ಣಯಿಸಹೋಗುವ ಪ್ರಯತ್ನ ಅಸಮರ್ಪಕವಾಗುತ್ತದೆ. ಹಿಂದಿನವರಾದ ರೈಸರ ಮಾತಿರಲಿ, ಈಗಿನವರಾದ ಗೋಗಿಯವರ ಪ್ರಯತ್ನವೂ ಹೀಗಾಗಿ, ನಿರಾಶೆಯುಂಟುಮಾಡಿದೆ.

ಅಂತೂ ಹೀಗೆ ಆರು ಸಾಲುಗಳಿಗೆ ಮರು ಅಳವಡಿಸಿದ ನಂತರ ಗೋಗಿ ಅವರು ಅದನ್ನು "ಮಾತ್ರಾಗಣಾನ್ವಿತವಾದ ಭೋಗಷಟ್ಪದಿ" ಎಂದಿರುವುದನ್ನೂ ಪರಿಶೀಲಿಸಬೇಕು. ಅವರು 'ರೂಪಿಸಿದ' ಪದ್ಯದ ಪ್ರತಿಪಾದದ ಮಾತ್ರೆಗಳನ್ನು ಲೆಕ್ಕಹಾಕಿ ನೋಡಿದಾಗ ಈ 'ಪದ್ಯ' –ಭೋಗಷಟ್ಪದಿಯ ಲಕ್ಷಣಕ್ಕೆ ಕ್ರಮವಾಗಿ–ಮಾತ್ರಾಗಣಾನ್ವಿತವಾಗಿಲ್ಲದಿರುವುದು ಇನ್ನೂ ಆಶ್ಚರ್ಯತರುತ್ತದೆ.

1, 2 ಮತ್ತು 6ನೆಯ ಪಾದಗಳೇನೊ ಭೋಗಷಟ್ಪದಿಯ ಲಕ್ಷಣಕ್ಕೆ ಸರಿಯಾಗಿ, ಅನುಕ್ರಮವಾಗಿ 12, 12 ಮತ್ತು 20 (=18 ಮಾತ್ರೆ + 1 ಗುರು) ಮಾತ್ರೆಯ ಲೆಕ್ಕಕ್ಕೆ ಅಳವಡಬಹುದಾದರೂ, ಉಳಿದ 3 ಮತ್ತು 5ನೆಯ ಪಾದಗಳಲ್ಲಿ ಅನುಕ್ರಮವಾಗಿ 2 ಮತ್ತು 1 ಮಾತ್ರೆ ಅಧಿಕವಾಗಿವೆ. ಅಂದರೆ (18 ಮಾತ್ರೆ + 1 ಗುರು=) 20 ಮಾತ್ರೆ ಇರಬೇಕಾದ 3ನೇ ಪಾದದಲ್ಲಿ 22 ಮಾತ್ರೆಗಳೂ, 12 ಮಾತ್ರೆ ಇರಬೇಕಾದ 5ನೆಯ ಪಾದದಲ್ಲಿ 13 ಮಾತ್ರೆಗಳೂ ಇವೆ. 4ನೆಯ ಪಾದದಲ್ಲಿ ಅಕ್ಷರಗಳು ಮುಕ್ಕಾದಂತೆ ತೋರಿಸಿರುವುದರಿಂದ ಅಲ್ಲಿ ಮಾತ್ರಾ ಸಂಖ್ಯೆ ಅನಿಶ್ಚಿತ. ಹೀಗಾಗಿ ಮಾತ್ರಾ ಸಂಖ್ಯೆ ಪದ್ಯ ಲಕ್ಷಣಕ್ಕೆ ಅನ್ವಯವಾದ ರೀತಿಯಲ್ಲಿಲ್ಲ. ಹೀಗಿರುವ ಈ ಪದ್ಯ ಗೋಗಿಯವರಿಗೆ 'ಮಾತ್ರಾಗಣಾನ್ವಿತವಾದ ಷಟ್ಪದಿ'ಯಾಗಿ ಕಂಡದ್ದಾದರೂ ಹೇಗೆ ?

ಇನ್ನು ಶಾಸನ ಪಾಠದ ಬಗ್ಗೆ ಮುಖ್ಯವಾಗಿ ಹೇಳಬೇಕಾದ ಮಾತು : ರೈಸರ ಪಾಠ ಅಸಮಗ್ರವಾಗಿದೆಯೆಂದು ಹಿಂದೆಯೇ ಹೇಳಿದೆಯಷ್ಟೆ. ಅದು ಅಸಮಗ್ರವಷ್ಟೇ ಅಲ್ಲ, ಕೆಲವೆಡೆ ಅಪಪಾಠವೂ ಆಗಿದೆ. ಆದರೆ ಆಶ್ಚರ್ಯವಾಗಬಹುದಾದ ಸಂಗತಿಯೆಂದರೆ, ಶಾಸನದಲ್ಲಿ ಈ ಪಾಠ ಯಾವೊಂದು ಅಕ್ಷರವೂ ಮುಕ್ಕಾಗದೆ ಸಮಗ್ರವಾಗೇ ಇದೆ !

ಇದು ನನ್ನ ಅನುಭವಕ್ಕೆ ಬಂದದ್ದು ಹೀಗೆ : ಎರಡು ವರ್ಷಗಳ ಕೆಳಗೆ ಚಿತ್ರದುರ್ಗದ ಶಾಸನಗಳನ್ನು ಅಧ್ಯಯನ ಮಾಡುತ್ತಿದ್ದಾಗ ಈ ಶಾಸನ ಪದ್ಯ ನನ್ನ

ಗಮನ ಸೆಳೆಯಿತು. ಇದರ ಛಂದಸ್ಸಿನ ಬಗ್ಗೆಯೂ ಕುತೂಹಲ ಉಂಟಾಯಿತು.[3] ರೈಸರು ಇದನ್ನು (ಇಂಗ್ಲಿಷ್ ಲಿಪ್ಯಂತರದಲ್ಲಿ) ಆರು ಸಾಲುಗಳಲ್ಲಿಟ್ಟದ್ದು ನನಗೆ ಸಮಂಜಸವಾಗಿ ತೋರಲಿಲ್ಲ. ಏಕೆಂದರೆ ಅವರ ಪಾಠದಲ್ಲಿ ಮಧ್ಯೆ ಮಧ್ಯೆ ಅಕ್ಷರ ಗಳು (ಪದಗಳು) ಮುಕ್ಕಾಗಿದ್ದಂತೆ ತೋರಿಸಿದ್ದುದರಿಂದ ಆ ಪದ್ಯದ ರೂಪ (form) ಸರಿಯಾಗಿ ಗ್ರಹಿಕೆಗೆ ಬರುವಂತಿರಲಿಲ್ಲ. ಈ ಶಾಸನವನ್ನು ಖುದ್ದಾಗಿ ನೋಡಿದಾಗ ಅದರಲ್ಲಿ ಯಾವೊಂದು ಅಕ್ಷರವೂ ಮುಕ್ಕಾಗದಿದ್ದುದು ಕಂಡುಬಂದು ಸಂತೋಷವಾಯಿತು. ಜತೆಗೆ, ರೈಸರ ಪಾಠ ಹೀಗಿಲ್ಲವಲ್ಲ ಎಂದು ಆಶ್ಚರ್ಯವೂ ಆಯಿತು.[4] ಪ್ರಸ್ತುತ ಪದ್ಯವನ್ನು ಕುರಿತ ಹಾಗೆ ಶಾಸನದಲ್ಲಿ ನಿಜವಾದ ಪಾಠ ಇರುವುದು ಈ ಕೆಳಗಿನಂತೆ. ಜತೆಯಲ್ಲಿ ರೈಸರ ಕನ್ನಡ ಲಿಪಿ ಪಾಠವನ್ನೂ ಕೊಟ್ಟಿದೆ ; ಹೋಲಿಸಿ.

---

3. ಚಿತ್ರದುರ್ಗ ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿಯ ಪ್ರಕಟಣೆ "ಐತಿಹಾಸಿಕ ಚಿತ್ರದುರ್ಗ" (1979)ದಲ್ಲಿ 'ಚಿತ್ರದುರ್ಗದ ಪ್ರಮುಖ ಶಾಸನಗಳು' ಎಂಬ ನನ್ನ ಲೇಖನದಲ್ಲಿ (ಪುಟ 50 ರಲ್ಲಿ) ಹೀಗೆ ಹೇಳಿದ್ದೇನೆ : "ಇದು ಯಾವ ಪದ್ಯ ಜಾತಿ ಎಂಬುದು ಸ್ಪಷ್ಟವಾಗುವುದಿಲ್ಲ. ಶಾಸನಗಳಲ್ಲಿ ಈ ಬಗೆಯ ಲಿಂಗ ಸ್ತೋತ್ರ ಸಿಕ್ಕು ವುದು ಅಪೂರ್ವ".

4. ಮೇಲಿನ ಅಡಿ ಟಿಪ್ಪಣಿಯಲ್ಲಿ ಸೂಚಿಸಿರುವ ಲೇಖನದಲ್ಲಿ ಇದನ್ನೂ ಹೇಳಿದ್ದೇನೆ. ಇಂಥ ಸ್ಖಾಲಿತ್ಯ ಇನ್ನೂ ಕೆಲವು ಶಾಸನಗಳ ಓದಿಕೆ (reading) ಯಲ್ಲಿ ಆಗಿರುವುದು ನನ್ನ ಗಮನಕ್ಕೆ ಬಂದಿದೆ.

ರೈಸರು ವಿದೇಶೀಯರಾದರೂ ನಮ್ಮ ಶಾಸನಗಳನ್ನು ಓದುವುದರಲ್ಲಿ ಪ್ರಕಟಿಸುವುದ ರಲ್ಲಿ ಅಸಾಧಾರಣವಾಗಿ ದುಡಿದಿದ್ದಾರೆ. ಇದು ಸ್ಮರಣೀಯ ಆದರೂ ಅಂಥ ಲಿಪಿ ತಜ್ಞರ ಓದಿಕೆಯಲ್ಲೂ ಅಲ್ಲಲ್ಲಿ ಸ್ಖಾಲಿತ್ಯಗಳುಂಟಾಗಿವೆ. ಗಣ್ಯ ಪುರಾತತ್ವ ಶೋಧಕ ರಾದ ಡಾ. ಎಂ. ಎಸ್. ಕೃಷ್ಣ ಅವರ ಓದಿಕೆಯಲ್ಲೂ ಕೆಲವೆಡೆ ಸ್ಖಾಲಿತ್ಯ ಘಟಿಸಿವೆ.

ಈಗ 'ಎಪಿಗ್ರಾಫಿಯ ಕರ್ನಾಟಿಕ'ದ ಸಂಪುಟಗಳನ್ನು ಪುನರ್ಮುದ್ರಣ ಮಾಡಿಸು ತ್ತಿರುವ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯವರು-ಎಲ್ಲವನ್ನೂ ಅಲ್ಲದಿದ್ದರೂ ತೀರ ಮಹತ್ತ್ವದ-ಶಾಸನಗಳನ್ನು ಶಾಸನ ತಜ್ಞರಿಂದ ಮತ್ತೊಮ್ಮೆ ಖುದ್ದು ಪರಿ ಶೀಲನೆ ಮಾಡಿಸಿ ಸ್ಖಾಲಿತ್ಯಗಳಿದ್ದಲ್ಲಿ ತಿದ್ದಿ ಪ್ರಕಟಿಸುವುದು ಅತ್ಯಗತ್ಯ. ಆದಷ್ಟು ಬೇಗ ಈ ಕೆಲಸ ಕೈಕೊಳ್ಳುವುದು ಒಳ್ಳೆಯದು.

ಶಾಸನದಲ್ಲಿ ಪಂಕ್ತಿ ಸಂಖ್ಯೆ	ರೈಸರ ಕನ್ನಡ ಲಿಪಿಪಾಠ	ಶಾಸನದಲ್ಲಿ ಇರುವ ನಿಜವಾದ ಪಾಠ
2.	॥ಪರಮನೆ ಪರತರಕ್ರಿತ್ಯನೆ ...ಪರನೆ ಪರಾಮೇಶನೆ	॥ಪರಮನೆ ಪರಜವಕ್ರುತನೆ[5] ಪರಾಪರನೆ ಪರಮೇಶನೀಶನೆ
3.	...ನೆಗಾಧಾರನೆ ಪರಲೋಕ ಹಿತಾರ್ತ್ಥನೆ ಪಾಪದಾವನೆ ಪಾಲಿ ಪನೆ ಪರಾ...ನೆ ಪರಸುರರ ಹಿತನೆ ಪವಿತ್ರನೆ ಕ	ಪಂನ್ನಗಾಧಾರನೆ ಪಲವು ಲೋಕ ಹಿತಾರ್ತ್ಥನೆ ಪಾಪಧಾವನೆ ಪಾಲಿಪನೆ ಪರಾಭುಜನೆ ಪರಸುಧರ ಪ್ರೀತನೆ ಪವಿತ್ರನೆ ಕ
4.	ರುಣಸ್ಯೆ ಪರಂದಾಸಿ ಪ್ರಸಿದ್ಧ ಲಿಂಗವೇ ॥	ರುಣಸ್ಯೆ ಪರದಾಸಿ ಪ್ರಸಿದ್ಧ ಲಿಂಗವೆ ॥

ಶಾಸನದಲ್ಲಿ ಇರುವ ನಿಜವಾದ ಪಾಠವನ್ನು —ಅದು ಹೇಗಿದೆಯೋ ಹಾಗೆ ಇಟ್ಟುಕೊಂಡು ಈ ಪದ್ಯ ಯಾವ ಛಂದಸ್ಸಿಗೆ ಸೇರಿರಬಹುದೆಂದು ಗೊತ್ತು ಹಚ್ಚಲು ಅನೇಕ ರೀತಿಯಲ್ಲಿ ಪ್ರಯತ್ನಿಸಿದರೂ ಇದು ಯಾವ ಛಂದಸ್ಸಿನ ಲಕ್ಷಣಕ್ಕೂ ಒಳಪಡುವ ಹಾಗೆ ಕಾಣಲಿಲ್ಲ. ಹೀಗಾಗಿ ಆ ಪ್ರಯತ್ನವನ್ನು ಅಲ್ಲಿಗೇ ನಿಲ್ಲಿಸಿದ್ದ ನನಗೆ, ಮೇಲೆ ತಿಳಿಸಿದ ಗೋಗಿಯವರ ಲೇಖನ ಕಣ್ಣಿಗೆ ಬಿದ್ದಿತು. ರೈಸರ ಅಥವಾ ಗೋಗಿಯವರ ತರ್ಕದಂತೆ ಈ ಪದ್ಯ ಆರು ಸಾಲಿನ ಯಾವ ಪದ್ಯ ಜಾತಿಗೂ ಒಳಪಡುವಂತೆ ಕಾಣುವುದಿಲ್ಲ. ಈ ಪದ್ಯದ ಛಂದಸ್ಸನ್ನು ಕುರಿತು ಈಚೆಗೆ ಮತ್ತೆ ಪರಿಶೀಲನೆ ಮುಂದುವರಿಸಿದಾಗ ಇಲ್ಲಿರುವುದು ಒಂದು ಷಟ್ಪದಿಯಲ್ಲದೆ ಎರಡು ತ್ರಿಪದಿಗಳಾಗಿರಬಹುದೆ, ಎಂಬ ಸಂದೇಹ ಬರುತ್ತಿದೆ. ಎರಡು ಪದ್ಯಗಳ ನಡುವೆ ಅವನ್ನು ಪ್ರತ್ಯೇಕಿಸಲು ದಂಡ ಚಿಹ್ನೆಗಳನ್ನು ಹಾಕುವುದನ್ನು ಬಹುಶಃ ಶಾಸನಕಾರರು ಮರೆತಿರಬಹುದೆ? ನಡುವೆ ದಂಡ ಚಿಹ್ನೆಗಳಿಲ್ಲದುದೇ, ಇದಿಷ್ಟೂ ಅಖಂಡವಾದ ಒಂದೇ ಪದ್ಯ ಎಂಬ ಭಾವನೆ ಬರಲು ಕಾರಣವಾಗಿರಬಹುದೆ—ಎಂದು ಅನ್ನಿಸುತ್ತಿದೆ.

ಈ ಪದ್ಯ ಭಾಗವನ್ನು ಎರಡು ಪದ್ಯಗಳಾಗಿ ಒಡೆದಾಗ ಅವು ಲಯದಲ್ಲಿ ಮತ್ತು ಛಂದಸ್ಸಿನ ದೃಷ್ಟಿಯಲ್ಲಿ ಮಾತ್ರ ಜನಪದ ತ್ರಿಪದಿಗಳನ್ನು ಹೋಲುವ ಹಾಗೆ ಕಾಣುತ್ತದೆ.

---

5. ಇದು 'ಪರಭವ ಕೃತನೆ' ಎಂಬುದಕ್ಕೆ ಶಾಸನಕಾರರಿಂದ ಆಗಿರುವ ಅಪಲಿಖಿತ. ಹೀಗೆ, ಇಲ್ಲಿ ಇನ್ನೂ ಕೆಲವು ಅಪಲಿಖಿತಗಳಾಗಿರುವುದನ್ನು ಗಮನಿಸಿ.

ಶಾಸನದ ನಿಜವಾದ ಪಾಠದಲ್ಲಿ ಹೀಗೆ, ಈ ಕೆಳಗಿನಂತೆ ಎರಡು ತ್ರಿಪದಿಗಳನ್ನು ಕಾಣಲು ಸಾಧ್ಯ. ಈ ಬಗ್ಗೆ ವಿದ್ವಾಂಸರಿಂದ ಇನ್ನೂ ಹೆಚ್ಚಿನ ಪರಿಶೀಲನೆ ನಡೆಯಬೇಕು.

ಪರಮನೆ । ಪರಚವ । ಕೃತನೆ ಪ । ರಾಪರನೆ ।
ಪರಮೇಶ । ನೀಶನೆ । ಪಂನ್ನಗಾ ॥ ಧಾರನೆ ।
ಪಲವು । ಲೋಕಹಿ । ತಾರ್ಥ್ಥನೆ ॥

ಪಾಪಧಾ । ವನೆ ಪಾಲಿ । ಪನೆ ಪರಾ । ಭುಜನೆ ।
ಪರಸುಧರ । ಪ್ರೀತನೆ । ಪವಿತ್ರನೆ* ॥ ಕರುಣಿಸೈ ।
ವರದಾನಿ । ಪ್ರಸಿದ್ಧ* । ಲಿಂಗವೆ ॥

ಜನಪದ ತ್ರಿಪದಿಗಳು ಕನ್ನಡ ಪದಗಳಿಂದ ತುಂಬಿರುತ್ತಿದ್ದರೆ, ಈ ಪದ್ಯಗಳು ಸಂಸ್ಕೃತ ಪದಗಳಿಂದ ತುಂಬಿವೆ. ಕೆಲವು ಪದಗಳ ಕಾಗುಣಿತವೂ ಶುದ್ಧವಿಲ್ಲ. ಇದನ್ನು ನೋಡಿದರೆ, ಈ ಪದ್ಯಗಳ ರೀತಿ 'ಜಾಣಪದ'[6] ಎನ್ನಬಹುದಾದ್ದಲ್ಲವೆ ?

ಈ ಪದ್ಯಭಾಗ ಎರಡು ತ್ರಿಪದಿಗಳೇ ಆದ ಪಕ್ಷದಲ್ಲಿ, ಇದರಿಂದ, ಕ್ರಿ.ಶ.ಸು. 8ನೇ ಶತಮಾನದಿಂದ ಉಪಲಬ್ಧವಿರುವ, ತ್ರಿಪದಿಗಳು ಬರುವ, ಅನೇಕ ಶಾಸನಗಳಲ್ಲಿ ಈ ಪದ್ಯಗಳು ಬರುವ ಶಾಸನವೂ ಒಂದಾಗಿ, ಹೊಸದಾಗಿ ಸೇರ್ಪಡೆಯಾಗಬಹುದು, ಅಷ್ಟೆ. ಆದರೆ, ಲಿಂಗವನ್ನು ಕುರಿತಂತೆ—ಸಂಸ್ಕೃತ ಪದಗಳೇ ಹೆಚ್ಚಾಗಿ ಬರುವ ಮತ್ತು ಅನುಪ್ರಾಸದಿಂದ ಅನುರಣಿಸುವ—ಲಲಿತವಾದ ಇಂಥ ಸ್ತೋತ್ರ ತ್ರಿಪದಿಯಲ್ಲಿ ಸಿಕ್ಕುವುದು ವಿರಳ.[7]

---

* ಈ ಗುರುತು ಹಾಕಿರುವ ಎರಡು ಕಡೆಗಳಲ್ಲಿ ಮಾತ್ರ ಗಣಸ್ವರೂಪ ತೊಡಕಿನದಾಗುತ್ತದೆ. ಉಳಿದ ಕಡೆ ಇಂಥ ತೊಡಕು ಕಾಣುವುದಿಲ್ಲ. ಒಟ್ಟಿನಲ್ಲಿ ತ್ರಿಪದಿಯ ಲಯಕ್ಕೆ ಬಾಧಕವೇನೂ ಕಾಣುವುದಿಲ್ಲ.

6. ನೋಡಿ : ಕರ್ನಾಟಕ ಭಾರತಿ-10-1 (1977) ಡಾ. ಎಂ. ಎಂ. ಕಲಬುರ್ಗಿ– ಅವರ ಲೇಖನ "ಜಾಣಪದ ಸಾಹಿತ್ಯ'' (ಪು. 112–122).

7. ತೀರ ಇತ್ತೀಚೆಗೆ ಈ ಶಾಸನ ಪದ್ಯ ಕುರಿತಂತೆ ಎರಡು ಅಭಿಪ್ರಾಯಗಳು ಪ್ರಕಟವಾಗಿರುವುದು ನನ್ನ ಗಮನಕ್ಕೆ ಬಂತು ;

1) ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಣೆ ''ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'' ಸಂಪುಟ 3 (1977)ರ ಪುಟ 368 ರಲ್ಲಿ, ಡಾ॥ ಜಿ. ವರದರಾಜರಾವ್ ಅವರು "ಷಟ್ಪದಿಯ ಉಗಮ ಮತ್ತು ಪ್ರಾರಂಭ'' ಎಂಬ ತಮ್ಮ ಲೇಖನದಲ್ಲಿ, ಈ ಪದ್ಯ ಬ್ರಹ್ಮಗಣಾನ್ವಿತವಾದ (ಒಂದು ಮೂಲ) ಷಟ್ಪದಿಯೇ ಎಂದು, ಗಣವಿಭಜನೆಮಾಡಿ, ಸ್ಥಾಪಿಸಲು ಯತ್ನಿಸಿದ್ದಾರೆ.

2) ಡಾ॥ ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ''ಕನ್ನಡ ಛಂದಃಸ್ವರೂಪ'' (1978) ಎಂಬ ತಮ್ಮ ಹೆಬ್ಬೊತ್ತಿಗೆಯಲ್ಲಿ, ಪುಟ 586 ರಲ್ಲಿ, ಅಡಿಟಿಪ್ಪಣಿ 105 ರಲ್ಲಿ, ಮೇಲೆ ತಿಳಿಸಿದ ಡಾ. ಜಿ. ವರದರಾಜರಾಯರ ಅಭಿಪ್ರಾಯವನ್ನು ನಿರಾಕರಿಸಿ ''ಇದು ಒಂದು ಅಂಶ ಷಟ್ಪದಿಯಾಗಿರುವುದು ಬಹುಮಟ್ಟಿಗೆ ಅಸಂಭವ ಎಂದೇ ಹೇಳಬೇಕು. ಇದೊಂದು ಷಟ್ಪದಿಯಾಗಿದ್ದರೆ, ಶಿಥಿಲವಾಗಿ ಕಟ್ಟಿದ ಯಾವುದಾದರೂ ಮಾತ್ರಾ ಷಟ್ಪದಿಯಾಗಿರಬಹುದೇನೊ ? ಇದನ್ನು ಕೂಡ ಖಚಿತ ಪಡಿಸುವುದು ಕಷ್ಟ'' ಎಂದು ಬರೆದಿದ್ದಾರೆ.

ಈ ಎರಡು ಅಭಿಪ್ರಾಯಗಳೂ ರೈಸರ ಅಸಮರ್ಪಕ ಪಾಠದ ಆಧಾರದ ಮೇಲೆಯೇ ಮೂಡಿ ಬಂದವುಗಳು. ಆದುದರಿಂದ ಇವುಗಳ ಬಗ್ಗೆಯೂ ಪ್ರಸ್ತುತ ಲೇಖನ ನನ್ನ ನಿಲುವೇನೆಂಬುದನ್ನು ಹೇಳುವಂತಿದೆ.

ಇಂದ್ರಗೋಪ

ಎಂ. ಮಾಧವ ಪೈ

ರಾಷ್ಟ್ರಕವಿ ಕುವೆಂಪುರವರ 'ಕದರಡಕೆ' ಎಂಬ ಕವನ ಸಂಕಲನದಲ್ಲಿರುವ ಕವನವೊಂದು 'ಇಂದ್ರಗೋಪ' ಎಂಬುದು. ಇದು ದ್ವಿತೀಯ ಪಿ.ಯು.ಸಿ. ಪಠ್ಯಪುಸ್ತಕದಲ್ಲೂ ಇವೆ. ಪ್ರಕೃತ ಕವನದಲ್ಲಿ 'ಇಂದ್ರಗೋಪ' ಎಂಬ ಹುಳುವನ್ನು ಮಿಂಚುಹುಳು-ಮಿಣುಕುಹುಳು ಎಂಬರ್ಥದಲ್ಲಿ ವರ್ಣಿಸಿರುವಂತೆ ಕಂಡುಬರುತ್ತದೆ. ಈ ಕವನದ ಅರ್ಥ ವಿವರಿಸಿರುವ ಟಿಪ್ಪಣಿಯಲ್ಲಿಯೂ ಇದೇ ಅರ್ಥವನ್ನು ಕೊಡಲಾಗಿದೆ. ಇವರೆ ಇದು ಎಷ್ಟರಮಟ್ಟಿಗೆ ಸಮಂಜಸ ?

'ಇಂದ್ರಗೋಪ' ಎಂಬ ಶಬ್ದಕ್ಕೆ ಅರ್ಥಕೋಶಗಳಲ್ಲಿ ಈ ರೀತಿ ವಿವರಣೆ ನೀಡಲಾಗಿದೆ :

ಕನ್ನಡ–ಇಂಗ್ಲಿಷ್ ಅರ್ಥಕೋಶ (ಕಿಟ್ಟೆಲ್)

ಇಂದ್ರಗೋಪ : cochinal (ಕಿರಿಮಂಜಿ ಬಣ್ಣ ಕೊಡುವ ಹುಳು)

ಸಿರಿಗನ್ನಡ ಅರ್ಥಕೋಶ (ಕಾರಂತ)

ಇಂದ್ರಗೋಪ : (ಇಂದ್ರನಿಂದ ರಕ್ಷಿಸಲ್ಪಡುವುದು) ಜೇಕಿಹುಳು, ಮಿಂಚುಹುಳು.

ಕವಿಕಂಠಹಾರ (ಸೂರ್ಯಕವಿ)

ಇಂದ್ರಗೋಪ ಕೆಂಬುಟ್ಟುವಕ್ಕುಂ (ಪದ್ಯ ೯೫)

ಸಂಸ್ಕೃತ–ಇಂಗ್ಲಿಷ್ ಡಿಕ್ಶನರಿ (ವಾಮನ ಶಿವರಾಮ ಆಪ್ಟೆ)

ಇಂದ್ರಗೋಪ–ಗೋಪಕ : a kind of insect of red or white colour

ಸಂಕ್ಷಿಪ್ತ ಹಿಂದೀ ಶಬ್ದಸಾಗರ (ರಾಮಚಂದ್ರವರ್ಮ)

ಇಂದ್ರಗೋಪ : ವೀರಬಹೂಟಿ (ಸಂಸ್ಕೃತ-ವೀರವಧೂಟೀ) ಮಳೆಗಾಲದಲ್ಲಿ ತೆವಳುವ ಒಂದು ಚಿಕ್ಕಕೆಂಪು ಹುಳು.

(ವೀರವಧೂಟೀ ಎಂದರೆ ವೀರಳಾದ ನವವಧೂ ಎಂದೂ ಅರ್ಥವಾಗುತ್ತದೆ)

ಸ್ಟ್ಯಾಂಡರ್ಡ್ ಇಲ್ಲಸ್ಟ್ರೇಟೆಡ್ ಡಿಕ್ಶನರಿ ಆಫ್ ದಿ ಹಿಂದೀ ಲ್ಯಾಂಗ್ವೇಜ್-ಹಿಂದಿ-ಇಂಗ್ಲಿಷ್ ಎಡಿಶನ್ (ಆರ್. ಸಿ. ಪಾಠಕ್)

ಇಂದ್ರಗೋಪ : an insect of scarlet colour like valvet, a ladybird. ಇದನ್ನು 'ಇಂದ್ರವಧೂ' ಎಂಬುದಾಗಿಯೂ ಕರೆಯುತ್ತಾರೆ. ಅದರ ಅರ್ಥ : a small red insect which appears when the first rains fall, the ladycow, the lady fly, the lady bird.

ಈ ಎಲ್ಲ ಅರ್ಥಕೋಶಗಳು ನೀಡಿರುವ ಅರ್ಥವಿವರಣೆಯನ್ನು ಓದಿದಾಗ ಇಂದ್ರಗೋಪವೆಂದರೆ ಶ್ರೀಕಾರಂತರೊಬ್ಬರು ಮಾತ್ರ ಮಿಂಚುಹುಳು ಎಂದು ಅರ್ಥೈಸಿರುವುದು ಕಂಡುಬರುತ್ತದೆ. ಎಲ್ಲರೂ ಅದೊಂದು ಕೆಂಪು ಹುಳು ಎಂದು ತಿಳಿಸಿದ್ದಾರೆಯೇ ಹೊರತು ಮಿಂಚುಹುಳು, ಮಿಣುಕುಹುಳು ಎಂದು ಯಾರೂ ತಿಳಿಸಿಲ್ಲ. ಅಲ್ಲದೆ ಇಂದ್ರಗೋಪವೆಂಬುದನ್ನು ಸುರಗೋಪ, ಸುಮನೋಗೋಪ, ಹರಿಗೋಪ ಎಂಬುದಾಗಿಯೂ ಹೇಳುತ್ತಾರೆ. ಈ ಪರ್ಯಾಯ ಶಬ್ದಗಳ ಅರ್ಥ ವಿವರಿಸುವಲ್ಲಿಯೂ 'ಕೆಂಪುಹುಳು' ಎಂದು ಹೇಳಲಾಗಿದೆಯೇ ಹೊರತು ಎಲ್ಲಿಯೂ ಮಿಂಚುಹುಳು–ಮಿಣುಕುಹುಳು ಎಂದು ಹೇಳಿಲ್ಲ.

ಇಂದ್ರಗೋಪ–ಇದು ಸಂಸ್ಕೃತ ಶಬ್ದ. ಸಂಸ್ಕೃತದಲ್ಲಿ ಮಿಂಚುಹುಳಕ್ಕೆ 'ಖದ್ಯೋತ' ವೆನ್ನುತ್ತಾರೆ. ಖದ್ಯೋತದ ಪರ್ಯಾಯ ಶಬ್ದಗಳನ್ನು ಸಂಸ್ಕೃತ ಕೋಶಗಳಲ್ಲಿ ಈ ರೀತಿಯಲ್ಲಿ ವಿವರಿಸಲಾಗಿದೆ.

"ಖದ್ಯೋತೋ ಜೋತಿರಿಂಗಣಃ" (ಅಮರಕೋಶ 2–5–28)

ಖದ್ಯೋತ, ಜ್ಯೋತಿರಿಂಗಣ ಎಂದು ಎರಡು ಹೆಸರುಗಳು

"ತಮೋಮಣಿಃ ಧ್ವಾಂತೋನ್ಮೇಷಶ್ಚ ಖದ್ಯೋತೋ ಜ್ಯೋತಿರ್ಬೀಜೋ
ನಿಮೇಷರುಕ್"
(ತ್ರಿಕಾಂಡಶೇಷಕೋಶ 2-6-34)

ತಮೋಮಣಿ, ಧ್ವಾಂತೋನ್ಮೇಷ, ಖದ್ಯೋತ, ಜ್ಯೋತಿರ್ಬೀಜ ಹಾಗೂ ನಿಮೇಷರುಕ್ ಎಂಬುದಾಗಿ ಐದು ಹೆಸರುಗಳು.

"ಜ್ಯೋತಿರ್ಬೀಜಂ ಚ ಖದ್ಯೋತಂ ಧ್ವಾಂತೋನ್ಮೇಷಂ ತಮೋಮಣಿಃ
(ಹಾರಾವಲೀ–75)

ಇಲ್ಲಿ ಬರುವ ಪರ್ಯಾಯವಾಚಕ ಶಬ್ದಗಳಲ್ಲಿ ಎಲ್ಲಿಯೂ ಇಂದ್ರಗೋಪ ಎಂಬ ಶಬ್ದ ಕಂಡುಬರುವುದಿಲ್ಲ. ಮಾತ್ರವಲ್ಲ 'ಹಾರಾವಲೀ'ಯಲ್ಲಿ 'ಇಂದ್ರಗೋಪ'ವನ್ನು ಪ್ರತ್ಯೇಕವಾಗಿ ಹೇಳಿ ಅದಕ್ಕೆ 'ತಾಮ್ರಕೃಮಿ' ಎಂದು ಹೇಳುತ್ತಾರೆ-" "ತಾಮ್ರಕೃಮಿ ರಿಂದ್ರಗೋಪಃ (84) ಎಂದು ಹೇಳಲಾಗಿದೆ.

ಶ್ರೀ ಲಲಿತಾ ಸಹಸ್ರನಾಮದಲ್ಲಿ ಶ್ರೀ ಲಲಿತಾದೇವಿಯನ್ನು 'ಇಂದ್ರಗೋಪ ಪರಿಕ್ಷಿಪ್ತಸ್ಮರತೂಣಾಭ ಜಂಘಿಕಾ'- ಇಂದ್ರಗೋಪಗಳಿಂದ ಮಾಡಲ್ಪಟ್ಟ ಮನ್ಮಥನ ಬತ್ತಳಿಕೆಯಂತಿರುವ ಜಂಘೆಗಳುಳ್ಳವಳು ಎಂದೂ, ಶ್ರೀ ಲಲಿತಾ ತ್ರಿಶತೀ ಸ್ತೋತ್ರದಲ್ಲಿ 'ಹರಿಗೋಪಾರುಣಾಂಶುಕಾ'- ಇಂದ್ರಗೋಪದಂತೆ ಅರುಣ ವರ್ಣ

ವುಳ್ಳವಳು ಎಂದೂ ವರ್ಣಿಸಲಾಗಿದೆ. ಇಲ್ಲಿ ಬರುವ ಇಂದ್ರಗೋಪ, ಹರಿಗೋಪ ವೆಂಬ ಶಬ್ದಗಳನ್ನು ವಿವರಿಸುವಾಗ ವ್ಯಾಖ್ಯಾನಕಾರರಾದ ಶ್ರೀ ಸ್ವಾಮಿ ಆದಿದೇವಾನಂದರು– 'ಒಂದು ಸಣ್ಣ ಕೀಟ, ಆರ್ದ್ರಾ-ಮಘಾ ನಕ್ಷತ್ರಗಳ ಮಳೆ ಯಲ್ಲಿ ಹುಟ್ಟುವ ಎಂಟು ಕಾಲುಳ್ಳ ಕೆಂಪು ಬಣ್ಣದ ಮೃದುವಾದ ಅಂಗಗಳಿಂದ ಕೂಡಿದ ಒಂದು ವಿಧದ ಕೀಟ' ಎಂದು ವಿವರಿಸಿದ್ದಾರೆ.

ಆಚಾರ್ಯ ವಿನೋಬಾರವರು ತಮ್ಮ ಗೀತಾಪ್ರವಚನದಲ್ಲಿ "ಆತ್ಮದ ಬಣ್ಣ ವನ್ನು ಹೇಳುವಾಗ 'ಯಥಾ ಅಯಂ ಇಂದ್ರಗೋಪಃ' ಎಂದು ಉಪನಿಷತ್ತಿನಲ್ಲಿ ಋಷಿಗಳು ಹಾಡಿದ್ದಾರೆ ಎಂದು ಹೇಳುತ್ತ 'ಕೆಂಪು ರೇಶಿಮೆಯಂಥ ನುಣ್ಣನೆಯ ಕೀಟ' ಎಂದು ಇಂದ್ರಗೋಪಕ್ಕೆ ಅರ್ಥವನ್ನು ವಿವರಿಸಿದ್ದಾರೆ.

ಇನ್ನು ಕನ್ನಡ ಕಾವ್ಯಗಳಲ್ಲಿ ಯಾವ ಅರ್ಥದಲ್ಲಿ ಪ್ರಯೋಗಿಸಲಾಗಿದೆಯೆಂದು ಗಮನಿಸೋಣ :

ಭವಲಲಾಟ ವಿಲೋಚನಾಗ್ನಿ ಶಿಖೆಯಂ ಬೆಂದಳ್ಕಿ ಮತ್ತಂ ಮನೋ
ಭವನೆಬ್ಬುತ್ತೊಡೆ ಕಾಮಕಾಂತೆ ಬಟೆಯಂ ತನ್ನಿಚ್ಚೆಯಿಂ ಮೆಚ್ಚಿ ಬ
ಣ್ಣವುರಂ ತೀವಿದ ಮಾಟ್ಕೆಯಾಯ್ತು ಸವಿಲಿಂ ಕುಂದಂಗಳಿಂದಿಂದ್ರಗೋ
ಪ ವಿಳಾಸಂಗಳಿನಾಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ ॥

ಪಂಪಭಾರತ 7.24

ಈ ವರ್ಣನೆಯಲ್ಲಿ ಇಂದ್ರಗೋಪ ಶಬ್ದ ಪ್ರಯೋಗವಾಗಿದ್ದರೂ ಅದರ ಬಣ್ಣ ಯಾವುದೆಂದು ತಿಳಿಸಲಾಗಿಲ್ಲ. ಅದೇ ಮುಂದಿನ ಪದ್ಯದಲ್ಲಿ ಸ್ಪಷ್ಟವಾಗಿ ಅದರ ಬಣ ಕೆಂಪು ಎಂದು ವರ್ಣಿಸಿರುವುದು ಕಂಡುಬರುತ್ತದೆ. ನೋಡಿ –

ಪೊಳೆವಮರೇಂದ್ರಗೋಪದ ಪಸುರ್ತೆಳವುಲ್ಲಗಳ ತಳ್ತ ಕಾರ್ಮುಗಿ
ಲ್ಗಳ ಕಿಱುಗೊಂಕು ಕೊಂಕಿದ ಪೊಸಲ್ಗಳ ಕೆಂಪು ಪಸುರ್ಪುಕರ್ಪು ಬೆ
ಳ್ಪೊಳಕೊಳೆ ಶಕ್ರ ಕಾರ್ಮುಕ ವಿಳಾಸಮನೇನೆರ್ದೆಗೊಂಡು ಬೇಟದ
ತ್ರಳಗಮನುಂಟು ಮಾಡಿದುದೊ ಕಾಮನ ಕಾರ್ಮುಕದಂತೆ ಕಾರ್ಮುಕಂ ॥

ಪಂಪ ಭಾರತ 7–25

ಅಲ್ಲಿಯೇ ಮುಂದೆ–

ವ ॥ ಅಂತು...ಪಸುರ್ಪುವಡೆದ ನೆಲದೊಳ್ ಪಚ್ಚೆಯ ಪದ್ಮರಾಗದ ಪರಲ್ಗಳಂ
ಬಲಿಗೆದಱಿದಂತೆ ಪಸುರ್ಪೆಸೆವ ನೆಲದೊಳುಪಾತ್ರಯಂಬಡೆದಳಂಕರಿಸು
ವಿಂದ್ರಗೋಪಂ
ಗಳುಮಂ (ಪಂಪ ಭಾರತ 7.25 ವಚನ)

ನೇಮಿನಾಥ ಪುರಾಣದಲ್ಲಿ ಹೀಗೆ ವರ್ಣಿಸಲಾಗಿದೆ

ಸ್ಫುರಿಯಿಪ ಶಸ್ತ್ರ ಸಂಹತಿಗಳಂತಿರೆ ಮಿಂಚುವ ಮಿಂಚು ತತ್ಪಯೋ
ಧರ ಘಂಟೆಯೊಳ್ ಪತಾಕೆಗಳ ಪಾಂಗಿನೊಳಿಂದ್ರಶರಾಸನಂ ಮನೋ
ಹರತೆಯನೀಯೆ ಶಸ್ತ್ರಹತನಾದ ನಿದಾಘನ ಮೆಯ್ಯ ರಕ್ತಶೀ
ಕರದಮರೇಂದ್ರಗೋಪತತಿ ಕಣ್ಗೆಸೆದಿರ್ದುವು ಸರ್ವಧಾತ್ರಿಯೊಳ್ ॥

ಕವಿ ರುದ್ರಭಟ್ಟನು ತನ್ನ ಜಗನ್ನಾಥ ವಿಜಯಂ ಕಾವ್ಯದಲ್ಲಿ ಇದರ ಸ್ಪಷ್ಟ ಚಿತ್ರಣವನ್ನು ಕೊಟ್ಟಿರುವುದನ್ನು ಕಾಣಬಹುದು.

ವಿದಳಿಸೆ ಘನದಂತಿ ಬಿಸಿ
ಲ್ಗುದುರೆಗಳಂ ಪನಿತು ಪೆತ್ತನೆತ್ತರ ಪನಿಯಂ
ದದಿನಲ್ಲಲ್ಲಿಗೆ ಕಣ್ಗೊಳಿ
ಸಿದತ್ತು ಕಾರ್ಮುಕದೊಳಿಂದ್ರಗೋಪ ಕಳಾಪಂ ॥ ೪-೧೩ ॥

ಮಳೆಗಾಲದ ಮೋಡವೆಂಬ ದೊಡ್ಡ ಆನೆ ಬಿಸಿಲ್ಗುದುರೆಗಳನ್ನು ಸೀಳಿದುದ ರಿಂದ ಹನಿರಕ್ತದ ಬಿಂದುಗಳಂತೆ ಇಂದ್ರ ಗೋಪಗಳ ಗುಂಪು ಅಲ್ಲಲ್ಲಿ ಶೋಭಿಸುತ್ತಿತ್ತು. "ಸುರಗೋಪ" ಎಂಬ ಶಬ್ದವನ್ನು ಪ್ರಯೋಗಿಸಿ ಹೀಗೆ ವರ್ಣಿಸಿದ್ದಾನೆ.

ಸುರಗೋಪಂಗಳು ಮಾಲಿಕಲ್ಲು ಮೆಳವುಲ್ಲುಂ ಕೆಂಪಿನಿಂ ಬೆಳ್ಪಿನಿಂ
ಹರಿತಚ್ಛಾಯೆಯಿನಲ್ಲಿಗಲ್ಲಿಗೆಸಗುಂ ಮಾಣಿಕ್ಯದಿಂ ಮುತ್ತಿನಿಂ
ಗರುಡೋದ್ಗಾರದ ಪಚ್ಚೆಯಿಂ ಸಮೆದ ನಾನಾ ಭೂಷಣಾನೀಕಮಂ
ಧರಣೀ ವಲ್ಲಭೆಗೆಂಬುದಾಗಮುವಿಟಂ ತಂದಿಕ್ಕಿದೊಂದಂದದಿಂ ॥ ೪-೨೦ ॥

"ಸುಮನೋಗೋಪ" ಎಂಬ ಶಬ್ದವನ್ನು ಪ್ರಯೋಗಿಸಿ ಹೀಗೆ ವರ್ಣಿಸಿದ್ದಾನೆ:

ಸುಮನೋಗೋಪ ಸಮಾವೃತಂ ಜಲಧರಶ್ಯಾಮಂ ಕದಂಬ ದ್ರುಮೋ
ದ್ಗಮಮಾಳಾ ಸುಭಗಂ ಮಯೂರನವಬರ್ಹಾಳಂಕೃತಂ ಕುಂದ ಹಾ
ಸಮನೋಜ್ಞಂ ಭುವನಾತ್ಮಕಂ ವಿಜಿತ ಚಂದ್ರಾದಿತ್ಯ ತೇಜಂ ಘನಾ
ಗಮದೊಳ್ ಶೌರಿ ಘನಾಗಮಂಬೊಲೆಸೆದಂ ಗೋಪಲೀಲಾಸ್ಪದಂ ॥ ೪-೩೬ ॥

ಈ ಮೇಲಿನ ಎಲ್ಲ ಪದ್ಯಗಳಲ್ಲಿ ಪ್ರಯೋಗವಾದ ಇಂದ್ರಗೋಪ, ಸುರಗೋಪ, ಅಮರೇಂದ್ರಗೋಪ, ಸುಮನೋಗೋಪ ಎಂಬ ಶಬ್ದಗಳು ಕೆಂಪು ಬಣ್ಣದ ಹುಳುವೆಂಬ ಅರ್ಥವನ್ನೇ ನೀಡುತ್ತವೆ. ಎಲ್ಲಿಯೂ ಮಿಂಚು ಹುಳು ಎಂಬ ಅರ್ಥವನ್ನು ಕೊಡುವುದಿಲ್ಲ.

ಮೇಲಿನ ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಇಂದ್ರ ಗೋಪವೆಂದರೆ ಅದೊಂದು ಕೆಂಪು ಬಣ್ಣದ ಹುಳಂ. ಗುಲಗಂಜಿಯಂತೆ ಅಥವಾ ಮಂಜುಮಾಟ ದಂತೆ ಕಡುಕೆಂಪು ವರ್ಣದ ಹುಳು. ಇದು ಮಳೆಗಾಲದಲ್ಲಿ ಕಂಡು ಬರುತ್ತದೆ. ಸಾಮಾನ್ಯವಾಗಿ ಈ ಹುಳಂಗಳು ಗುಂಪು ಗುಂಪಾಗಿ ನೆತ್ತರಿನ ಹನಿಗಳಂ ಚೆಲ್ಲಿದಂತೆ ಅಲ್ಲಿ ಇಲ್ಲಿ ತೆವಳುತ್ತಿರುತ್ತವೆ. ಪಂಪನು–ಪಸುರ್ಪುವಡೆದ ನೆಲದೊಳ್ ಪಚ್ಚೆಯ ಪದ್ಮರಾಗದ ಪರಲ್ಗಳಂ ಬಲಿಗೆದಱುವಂತೆ ಪಸುರ್ಪೆಸೆವ ನೆಲದೊಳ್ ಉಪಾಶ್ರಯಂ ಬಡೆದಳಂಕರಿಸುವಿಂದ್ರಗೋಪಂಗಳುಮಂ–ಎಂದು ಸ್ಪಷ್ಟವಾಗಿ ಅದರ ಚಿತ್ರ

ಕೊಟ್ಟಿರುವುದನ್ನು ಗಮನಿಸಬೇಕು. (ಮಳೆಗಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದನ್ನು ಧಾರಾಳವಾಗಿ ನೋಡಬಹುದು) ಹರಿಗೋಪ, ಸುರಗೋಪ, ಸುಮನೋಗೋಪ, ತಾಮ್ರಕೃಮಿ ಎಂಬಿವುಗಳು ಇದರ ಪರ್ಯಾಯ ವಾಚಕ ಶಬ್ದಗಳು. ಈ ಪರ್ಯಾಯವಾಚಕ ಶಬ್ದಗಳನ್ನು ತಿಳಿಸುವಲ್ಲಿ ಎಲ್ಲಿಯೂ ಖದ್ಯೋತ ಅಥವಾ ಅದರ ಪರ್ಯಾಯ ಶಬ್ದಗಳನ್ನು ಈ 'ಇಂದ್ರ ಗೋಪ ಶಬ್ದಕ್ಕೆ ಹೇಳಿಲ್ಲ. ಅಂದ ಮೇಲೆ ಇಂದ್ರ ಗೋಪವೆಂದರೆ ಮಿಂಚುಹುಳು, ಮಿಣುಕು ಹುಳು ಅಲ್ಲ ಎಂಬುದು ಸುಸ್ಪಷ್ಟ.

ಎಲ್ಲಮ್ಮನನ್ನು ಕುರಿತ ಪೌರಾಣಿಕ ಮತ್ತಿತರ ಸಂಗತಿಗಳು: ಒಂದು ವಿವೇಚನೆ

ದೇವೇಂದ್ರಕುಮಾರ ಹಕಾರಿ

ಎಲ್ಲಮ್ಮನನ್ನು ಸಾಮಾನ್ಯವಾಗಿ 'ಏಳುಕೊಳ್ಳದ ಎಲ್ಲಮ್ಮ' ಎಂದೇ ಕರೆಯಲಾಗುತ್ತದೆ. 'ಏಳೂಕೊಳ್ಳ್ದಲ್ಲಮ್ಮಾ ನಿನ್ನಾಲಕ್ಕs ಉಧೋ ಉಧೋ'–ಎಲ್ಲಮ್ಮನ ಭಕ್ತರ ಉದ್ಘೋಷ. 'ಎಲ್ಲೀಕಾಣೆಲ್ಲಿಕಾಣೇ ಎಲ್ಲಮ್ಮನಂಥಾಕೆಲ್ಲೀಕಾಣೆಲ್ಲಕಾಣೆ' 'ಹುಟ್ಟಿಬಂದೆ ಎಲ್ಲಮ್ಮನಾಗಿ! ನಿನ ಮದಿವೀ ಮಾಡಿ, ಕೊಟ್ಟಾರಪ್ಪ ಜಮದಗ್ನಿಗಿ'– ಇತ್ಯಾದಿ ಎಲ್ಲಮ್ಮನ ಮಹಿಮೆಯನ್ನು ಸಾರುವ ಜನಪದ ಹಾಡುಗಳು.

ಎಲ್ಲಮ್ಮನ ಕ್ಷೇತ್ರಕ್ಕೆ ಸಂಬಂಧಿಸಿದ ಜನಪದ ಹಾಡುಗಳಲ್ಲಿ 'ಏಳುಕೊಳ್ಳ', 'ಸಿದ್ಧನಕೊಳ್ಳ' ಮುಂತಾದ ಮಾತು ದೊರೆಯುತ್ತವೆ. ಸವದತ್ತಿ ಹತ್ತಿರದ ಈ ಪ್ರದೇಶದ ಭೌಗೋಲಿಕ ಪಾತಳಿ ಬೆಟ್ಟಕೊಳ್ಳಗಳಿಂದ ರೂಪುಗೊಂಡಿದ್ದು ಬಹುಕಾಲದಿಂದಲೇ ಇದು ಸಿದ್ಧ ಸಂತರ ಸಾಧನೆಯ ಸ್ಥಳವಾಗಿರಬೇಕು, ಈ ಪ್ರದೇಶದ ಮಣ್ಣಿನಲ್ಲಿಯೇ ಹುಟ್ಟಿ, ಬೆಳೆದು ಬಂದುದರಿಂದ, ಎಲ್ಲಮ್ಮನಿಗೂ ಇಲ್ಲಿಯ ಏಳುಕೊಳ್ಳಗಳಿಗೂ ಗಾಢವಾದ ಸಂಬಂಧ ಮೌಖಿಕ ಪರಂಪರೆಯಲ್ಲಿ ನಿರಂತರ ಸಂವಹನಗೊಳ್ಳುತ್ತ ಬಂದಿರುವುದನ್ನು ಕಾಣುತ್ತೇವೆ. 'ಹೊಕ್ಕಾಳದೇವಿ ಕಾಲ್ಮುರಿದ ಮಾಡಿ', 'ವಾರಿ ವಾರಿ' ತಿರುಗುತ್ತಿದ್ದಳು; 'ಏಳು ಮಂದಿ ಸಿದ್ಧರನಾಕಿ ಒತ್ತಿಬಿಟ್ಟಾಳ ಪಾತಾಳಕ ದೂಡಿ, ಮ್ಯಾಲಿನಿಂದ ಸೀಸವ ಗುಂಡ ಓಡಿs ಓಡಿs (ಜಡೀ ಜಡಿ ?) ಮುಂತಾದ ಜನಪದ ಹಾಡಿನ ಸಂಗತಿಗಳಿಗೆ ಯಾವ ಐತಿಹಾಸಿಕ ಆಧಾರಗಳೂ ದೊರಕುವುದಿಲ್ಲ. ಆ ಏಳು ಸಿದ್ಧರು ಯಾರು, ಅವರ ಸೇವೆಯಲ್ಲಿ ಎಲ್ಲಮ್ಮ ತೊಡಗಿದ ಸಂದರ್ಭ ಯಾವುದು ? ಎಲ್ಲಮ್ಮ ಯಾರು ? ಯಾವ ವೃಂದಕ್ಕೆ ಸಂಬಂಧಿಸಿದವಳು ? ಈಕೆ 'ಧರ್ಮ' ದಲ್ಲಿ ತೊಡಗಿ ದೇವತೆಯಾಗಿ ಪರಿವರ್ತನೆಗೊಂಡು, ಅತಿಮಾನುಷ ಶಕ್ತಿಯಾಗಿ ಎಲ್ಲರಿಗೂ ಅಮ್ಮನಾಗಿ ವಿಜೃಂಭಿಸಿದ್ದು ಎಂದಿನಿಂದ ? ಈಕೆಯ ಸುತ್ತೂ ಹುಟ್ಟಿಕೊಂಡಿರುವ ಪುರಾಣ–ಐತಿಹಾಸಿಕ ಕಥೆಗಳಲ್ಲಿ ಹುದುಗಿರುವ, ಪವಾಡಗಳಲ್ಲಿ ಅಡಕಗೊಂಡಿರುವ ಸಂಗತಿಗಳ ನಿಜರೂಪ ಯಾವುದು ? ಇತ್ಯಾದಿ ಪ್ರಶ್ನೆಗಳ ಜಾಲವನ್ನು ನಾವು ಏಕಕಾಲಕ್ಕೆ ಎದುರುಗೊಳ್ಳುತ್ತೇವೆ. ಏಕೆಂದರೆ ಎಲ್ಲಮ್ಮನನ್ನು ಕುರಿತು ದೊರೆಯುವ ಸಾಮಗ್ರಿ ಮೂರು ವಿಭಿನ್ನ ಆಕರಗಳಲ್ಲಿ ತೊಡಗಿಕೊಂಡಿದ್ದು, ಒಂದೊಂದೂ ಅನೇಕ ವೈರುದ್ಧ್ಯಗಳನ್ನು ಒಳಗೊಂಡಿವೆ. ಒಂದು : ಶಿಷ್ಟಪದ

ಪುರಾಣಗಳಲ್ಲಿ ದೊರೆಯುವ ಕಥೆಗಳು ; ಎರಡು : ಐತಿಹಾಸಿಕ ವ್ಯಕ್ತಿಗಳ ಜೊತೆಗೆ ಹೆಣೆಯಲಾದ ಸಂಗತಿಗಳು ; ಮೂರು : ಜನಪದ ಹಾಡುಗಳ ಮೂಲಕ ವಿಭಿನ್ನ ಪ್ರದೇಶಗಳಲ್ಲಿ ಚೆದುರಿದ ಸ್ಥಿತಿಯಲ್ಲಿ ಕಾಣುವ ಸಂಗತಿಗಳು. ಈ ಪ್ರತಿಯೊಂದರಲ್ಲಿ ಕಂಡುಬರುವ ಎಲ್ಲಮ್ಮನ ಪೌರಾಣಿಕ ವಿವರಣೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಆ ಬಳಿಕ ಅವುಗಳ ವಿವೇಚನೆ ಮಾಡುವುದು ಸೂಕ್ತ.

ಎಲ್ಲಮ್ಮನನ್ನು ಕುರಿತ ಪೌರಾಣಿಕ ಸಂಗತಿಗಳನ್ನು ಸಂಗ್ರಹಿಸುವ ಮೊದಲ ಹಂತದಲ್ಲಿಯೇ ಎದುರಾಗುವ ಪ್ರಶ್ನೆ 'ಎಲ್ಲಮ್ಮ' ಮತ್ತು 'ರೇಣುಕಾ' ಹೆಸರುಗಳ ಸಮೀಕರಣ. ಶಿಷ್ಟಪದ (ಕೃತಿ) ಪುರಾಣಗಳಲ್ಲಿ ರೇಣುಕಾ ಎನ್ನುವ ಹೆಸರು ಬರುತ್ತದೆಯೇ ಹೊರತು ಎಲ್ಲಿಯೂ ರೇಣುಕೆಯೇ ಎಲ್ಲಮ್ಮ ಎಂದು ಹೇಳಲಾಗಿಲ್ಲ. ಸಧ್ಯ ಎಲ್ಲಮ್ಮನೇ ರೇಣುಕೆ ಎಂದು ಭಾವಿಸಿ ಅಲ್ಲಿಯ ಘಟನೆಗಳನ್ನು ನೋಡಬಹುದು. ಮಹಾಭಾರತ, ವಾಯುಪುರಾಣ, ಹರಿವಂಶ ಮತ್ತು ಭಾಗವತಗಳಲ್ಲಿ ರೇಣುಕೆಯ ಜೀವನಕ್ಕೆ ಸಂಬಂಧಿಸಿದ ಸಂಗತಿಗಳನ್ನು ಅನುಷಂಗಿಕವಾಗಿ ಹೇಳಲಾಗಿದೆ.

ಇಕ್ಷ್ವಾಕುವಂಶದ ಅರಸು ರೇಣುಕರಾಜ. ಆತನ ಮಗಳು ರೇಣುಕೆ. (ಮಹಾಭಾರತದ ವನಪರ್ವ 117). ಭಾಗವತದಲ್ಲಿ ರೇಣುಕರಾಜನ ಹೆಸರು ಪ್ರಸೇನಜಿತ. ಹರಿವಂಶದ (1–23) ಪ್ರಕಾರ ರೇಣುಕಾ ಕಮಲದಲ್ಲಿ ಜನಿಸಿದವಳು; ಪ್ರಸೇನಜಿತ ಇವಳ ಸಾಕುತಂದೆ. ವಾಯುಪುರಾಣಕ್ಕನುಗುಣವಾಗಿ (ರೇಣುಕಾ) ಸುವೇಣ ಮುನಿಯ ಮಗಳು ಕಾಮಾಲಿ. ಮಹಾಭಾರತದಲ್ಲಿ ಬರುವ ರೇಣುಕಾ ಕಥೆ ಹೀಗಿದೆ: ಭೃಗುವಂಶದ ಜಮದಗ್ನಿ ತಪಸ್ವಿ ಮತ್ತು ಕೋಪಿಷ್ಠ, ಕಟ್ಟುನಿಟ್ಟಿನ ವ್ರತಾಚರಣೆಗೆ ಹೆಸರಾದವನು. ರೇಣುಕರಾಜನ ಮಗಳು ರೇಣುಕೆಗೂ ಮಹರ್ಷಿ ಜಮದಗ್ನಿಗೂ ಮದುವೆ ಆಯಿತು. ರೇಣುಕ ಗಂಡನ ಎಲ್ಲ ವ್ರತಾಚರಣೆಗಳಿಗೆ ಬದ್ಧಳಾಗಿ ಜೀವನ ಸಾಗಿಸಿದಳು. ಐದು ಜನ ಮಕ್ಕಳನ್ನು ಪಡೆದಳು: ರುಮಣ್ವಂತ, ಸುಷೇಣ, ವಸು, ವಿಶ್ವಾವಸು, ಕೊನೆಯವನು–ಪರಶುರಾಮ.

ಒಮ್ಮೆ ರೇಣುಕೆ ತನ್ನ ಸಖಿಯರೊಡಗೂಡಿ ಪತಿಯ ಪೂಜೆಗಾಗಿ ನೀರು ತರಲು ಹೋದಳು. ಸರೋವರದಲ್ಲಿ ಚಿತ್ರರಥ ಗಂಧರ್ವ ತನ್ನ ಹೆಂಡತಿಯರೊಡನೆ ಜಲ ಕ್ರೀಡೆಯಲ್ಲಿ ತೊಡಗಿರುವುದನ್ನು ಕಂಡ ರೇಣುಕೆಯ ಚಿತ್ತ, ಚಾಂಚಲ್ಯಕ್ಕೆ ಪಕ್ಕಾಯಿತು. ಒಂದು ಕ್ಷಣ ಅದನ್ನು ನೋಡುತ್ತ ನಿಂತವಳು, ಮೈಮರೆತು ನಿಂತೇಬಿಟ್ಟಳು. ಮರಳಿ ಆಶ್ರಮಕ್ಕೆ ಬರುವಷ್ಟರಲ್ಲಿ ಪತಿ ಜಮದಗ್ನಿಯ ಪೂಜಾ ಸಮಯ ಮೀರಿತ್ತು. ತಡವಾಗಿ ಬಂದ ರೇಣುಕೆಯನ್ನು ಕಂಡ ಜಮದಗ್ನಿ ಕೆಂಡವಾದ ; ತನ್ನ ಮಕ್ಕಳನ್ನು ಕೂಗಿ ಇವಳ ರುಂಡ ಚೆಂಡಾಡಲು ಅಜ್ಞಾಪಿಸಿದ. ಅದಕ್ಕೆ ಮೊದಲ ನಾಲ್ಕು ಮಕ್ಕಳು ಒಪ್ಪಲಿಲ್ಲ. ಕೊನೆಯ ಮಗ ಪರಶುರಾಮ ತಂದೆಯ ಆಜ್ಞೆಗೆ ತಲೆಬಾಗಿ ರೇಣುಕೆಯ ರುಂಡ ಚೆಂಡಾಡಿದ; ಜೊತೆಗೆ ತಂದೆಯ ಆಜ್ಞೆಯನ್ನು ಧಿಕ್ಕರಿಸಿದ ತನ್ನ

ಅಣ್ಣಂದಿರನ್ನೂ ಕೊಚ್ಚಿಹಾಕಿದ. ನಿಷ್ಠೆಗೆ ಸುಪ್ರೀತನಾದ-ತಂದೆ-ಜಮದಗ್ನಿಯಿಂದಲೇ ವರ ಪಡೆದ ಪರಶುರಾಮ, ಎಲ್ಲರನ್ನೂ ಮತ್ತೆ ಜೀವಂತಗೊಳಿಸಿದ. ರೇಣುಕಾ ಅನೇಕ ಕಷ್ಟಗಳಿಗೆ ಈಡಾದಳು. ಭೃಗು ಮಹರ್ಷಿಗಳು ಅವಳನ್ನು ಕರುಣೆಯಿಂದ ಕಾಣುತ್ತ ಅವಳಿಗೆ ಕೃಪಾರಕ್ಷೆ ಒದಗಿಸುತ್ತ ಬಂದರು.

ರೇಣುಕೆಯ ಕಥೆಯಲ್ಲಿ ತೊಡಗಿಕೊಂಡ ಇನ್ನೊಂದು ಘಟನೆ ಕಾರ್ತವೀರ್ಯ ನದು. ಸೂರ್ಯವಂಶದ ಕೃತವೀರ್ಯನ ಮಗ ಕಾರ್ತವೀರ್ಯ. ವಿಂಧ್ಯ ಪ್ರಾಂತದ ಮಹಿಷ್ಮತಿ ನಗರ ರಾಜಧಾನಿ. ಕುಲಗುರು ಗಾರ್ಗ್ಯ ಮುನಿಯ ಬೋಧೆಯಂತೆ ದತ್ತಾತ್ರೇಯನ ಆರಾಧನೆಯಿಂದ ತನಗೆ "ರಣಾಂಗಣದಲ್ಲಿ ನಿಶ್ಚಿತ ಜಯ" ಮತ್ತು "ಯುದ್ಧ ಕಾಲದಲ್ಲಿ ಸಾವಿರ ತೋಳು" ಗಳ ವರ ಪಡೆದ. ಕಾರ್ತವೀರ್ಯನ ಅಹಂಕಾರ ಪರಶುರಾಮನಿಂದ ನಾಶವಾಗಲಿ ಎಂದು ವಶಿಷ್ಠರ ಶಾಪ (ಮಹಾಭಾರತದ ಶಾಂತಿಪರ್ವ48). ಬೇಟೆಗೆ ಹೊರಟ ಕಾರ್ತವೀರ್ಯ ತನ್ನ ಎಲ್ಲ ಸೈನ್ಯದೊಡನೆ ಜಮದಗ್ನಿ ಋಷಿಯ ಆಶ್ರಮಕ್ಕೆ ಬರುತ್ತಾನೆ. ಜಮದಗ್ನಿ ತಕ್ಷಣ ಎಲ್ಲರಿಗೂ ಸುಖಭೋಜನ ನೀಡಿ ಉಪಚರಿಸುತ್ತಾನೆ. ಇದಕ್ಕೆಲ್ಲ ಕಾರಣ 'ಕಾಮಧೇನು' ಎಂದು ತಿಳಿದ ಕಾರ್ತವೀರ್ಯ ಜಮದಗ್ನಿಯಿಂದ 'ಕಾಮಧೇನು' ವನ್ನು ಕೊಂಡೊಯ್ಯುವ ಯತ್ನ ಮಾಡುತ್ತಾನೆ. ಅದಕ್ಕೆ ಒಪ್ಪದ ಜಮದಗ್ನಿಯನ್ನುಕೊಲ್ಲುತ್ತಾನೆ. ಅದರಿಂದ ಉರಿದೆದ್ದ ಪರಶುರಾಮ ಕಾರ್ತವೀರ್ಯನ ಜೊತೆ ಕಾದಾಡಿ ಅವನ ಸಾವಿರ ತೋಳು ಕತ್ತರಿಸಿ ಅವನ ರಾಜ್ಯವನ್ನೇ ನಾಶಮಾಡುತ್ತಾನೆ, ಇತ್ಯಾದಿ (ಆದಿಪರ್ವ 2–65–113). ಈ ಪರಶುರಾಮ ಮಹಾವಿಷ್ಣುವಿನ ಆರನೆಯ ಅವತಾರವೆಂದು ನಂಬಿಕೆ.[1] ರಾಮಾಯಣದಲ್ಲಿಯೂ (ಬಾಲಕಾಂಡ ಸರ್ಗ 74–76) ಪರಶುರಾಮನ ಕಥೆ ಬಂದಿರುವುದನ್ನು ಗುರುತಿಸಲಾಗಿದೆ.

ವೈದಿಕ ಪುರಾಣಗಳಿಗಿಂತ ಭಿನ್ನವಾದ ರೇಣುಕೆ ಪರಶುರಾಮರಿಗೆ ಸಂಬಂಧಿಸಿದ ಕಥೆಯೊಂದು ಗುಣಭದ್ರನ ಉತ್ತರ ಪುರಾಣದಲ್ಲಿರುವುದನ್ನು ಗೋವಿಂದ ಪೈಗಳು ಗಮನಿಸಿದ್ದಾರೆ.[2] ಆ ಕಥೆ ಹೀಗಿದೆ :

ಇಕ್ಷ್ವಾಕು ವಂಶದ ಸಹಸ್ರಬಾಹು. ಕೋಸಲ ದೇಶದ ಅಯೋಧ್ಯಾನಗರ ಆತನ ರಾಜಧಾನಿ. ಆತನ ಚಿಕ್ಕಪ್ಪ ಶತಬಿಂದು. ಪಾರತದೇಶದ ಅರಸನ ಸೋದರಿ ಶ್ರೀಮತಿಯ ಜೊತೆ ಶತಬಿಂದು ಮದುವೆ. ಇವರ ಮಗನೇ ಜಮದಗ್ನಿ. ಜಮದಗ್ನಿಗೆ ಬಾಲಕನಿರುವಾಗಲೇ ಮಾತೃವಿಯೋಗ. ಅಪಾರ ದುಃಖ –ಆತನಿಗೆ ವಿರಕ್ತಿ. ಪಂಚಾಗ್ನಿ ಮಧ್ಯದಲ್ಲಿ ತಪಸ್ಸು ಕೈಕೊಳ್ಳುತ್ತಾನೆ. ಆತನ ಹತ್ತಿರ ಬಂದ ಇಬ್ಬರು

1. ಶ್ರೀ ಗೋವಿಂದ ಪೈ. ಮೂರು ಉಪನ್ಯಾಸಗಳು, ಪು. 4
2. ಅದೇ. ಪು. 5. (ಗುಣಭದ್ರನ ಕಾಲ ಕ್ರಿ. ಶ. 897).

ಜೋತಿಷ್ಯ ದೇವತೆಗಳು 'ಅಪುತ್ರಸ್ಯ ಗತಿರ್ನಾಸ್ತಿ' ಆದುದರಿಂದ ಮದುವೆಯಾಗಿ ಮಕ್ಕಳನ್ನು ಪಡೆ. ಎಂದು ಬೋಧಿಸುತ್ತಾರೆ. ಜಮದಗ್ನಿ, ತಪಸ್ಸು ಬಿಟ್ಟು ಹೊರಟು ಕಾನ್ಯ ಕುಬ್ಜ ದೇಶದ ಅರಸನ ಬಳಿಗೆ ಬಂದು ತನಗೊಬ್ಬ ಕನ್ಯೆಬೇಕು ಎಂದು ಹೇಳುತ್ತಾನೆ. ಆತ ತನಗಿದ್ದ ನೂರುಜನ ಕನ್ಯೆಯರಲ್ಲಿ ಯಾರನ್ನು ಬೇಕಾದರೂ ಆಯ್ದುಕೊಂಡು ಮದುವೆಯಾಗು ಎನ್ನುತ್ತಾನೆ. ತೊಂಬತ್ತೊಂಬತ್ತು ಜನ ಕನ್ಯೆಯರೂ ಇದೊಂದು ಅರೆಸುಟ್ಟ ಹೆಣ ಎಂದು ಜಮದಗ್ನಿಯನ್ನು ತಿರಸ್ಕರಿಸುತ್ತಾರೆ. ಕೊನೆಯ ಮಗಳು ಮಣ್ಣಲ್ಲಿ (ಧೂಳು) ಆಡುತ್ತಿದ್ದಳಂತೆ. ಆದುದರಿಂದ ಆವಳನ್ನು ರೇಣುಕೆ ಎಂದು ಹೆಸರಿಸಿ ಅವಳನ್ನೇ ಮದುವೆಯಾದ. ಈ ರೇಣುಕೆಗೆ ಇಂದ್ರರಾಮ ಮತ್ತು ಶ್ವೇತರಾಮ ಎಂದು ಇಬ್ಬರು ಮಕ್ಕಳು. ಇವರಲ್ಲಿ ಇಂದ್ರರಾಮನೇ ಪರಶುರಾಮ. ಒಮ್ಮೆ ರೇಣುಕೆಯ ಅಣ್ಣ ಅರಿಂಜಯ ಮುನಿ ತಂಗಿಯನ್ನು ಕಂಡುಹೋಗಲು ಬಂದು ಅವಳ ಮೇಲಿನ ವಾತ್ಸಲ್ಯ ದಿಂದಾಗಿ, ಬೇಡಿದ್ದನ್ನು ಕೊಡುವ 'ಕಾಮಧೇನು' ವಿದ್ಯೆ ಮತ್ತು ಮಂತ್ರಶಕ್ತಿ ಯುಳ್ಳ ಕೊಡಲಿಯನ್ನು ಕೊಟ್ಟುಹೋದನು.[3]

ಒಂದುದಿನ ಸಹಸ್ರಬಾಹು ತನ್ನ ಮಗ ಕೃತವೀರ್ಯನ ಜೊತೆಗೆ ತನ್ನ ಸೋದರ ಜಮದಗ್ನಿಯ ಆಶ್ರಮಕ್ಕೆ ಬಂದಾಗ ಜಮದಗ್ನಿ ನೀಡಿದ ಮೃಷ್ಟಾನ್ನ ಭೋಜನ ದಿಂದ ವಿಸ್ಮಿತನಾಗಿ ತನ್ನ ಚಿಕ್ಕಮ್ಮ ರೇಣುಕೆಯನ್ನು ಇದು ಹೇಗೆ ಸಾಧ್ಯವಾಯಿತೆಂದು ಕೇಳಿದನು. ಅದು ಕಾಮಧೇನು ವಿದ್ಯೆಯಿಂದ ಎಂದು ತಿಳಿದಾಗ ಅದು ತನಗೆ ಬೇಕೇ ಬೇಕು ಎಂದು ಹಟ ಹಿಡಿದ. ರೇಣುಕೆ ಪರಿಪರಿಯಿಂದ ಬೇಡವೆಂದರೂ ಕೇಳದೆ ಅಡ್ಡಬಂದ ಜಮದಗ್ನಿಯನ್ನು ಕೊಂದು ಆ 'ಕಾಮಧೇನು' ವನ್ನು ಕೊಂಡು ಹೋದ. ರೇಣುಕೆಯ ಮಕ್ಕಳು ಗಡ್ಡೆಗೆಣಸು ಸಂಗ್ರಹಿಸಿ ಮರಳಿದಾಗ ನಡೆದ ಘಟನೆಯನ್ನು ಕೇಳಿ ಕಂಡು ಕೆರಳಿ, ಅಯೋಧ್ಯೆಗೆ ಹೋಗಿ ಕೃತವೀರನ ಮೇಲೆರಗಿ, ಅವನ ತಂದೆ ಸಹಸ್ರಬಾಹುವನ್ನು ಕೊಂದು ಅವನ ವಂಶ ನಿರ್ಮೂಲನೆಗೆ ತೊಡಗಿ ದಾಗ ಕೃತವೀರ್ಯನ ಗರ್ಭವತಿಯಾಗಿದ್ದ ಅರಸಿ ಚಿತ್ರಮತಿ ತನ್ನ ಸೋದರ ಶಾಂಡಿಲ್ಯ ನಿಂದ ರಕ್ಷಿತಳಾಗಿ ಸುಬಂಧುಮುನಿಯ ಆರೈಕೆಯಲ್ಲಿದ್ದು ಗಂಡುಮಗನ ತಾಯಿ ಯಾಗುತ್ತಾಳೆ. ಅವನೇ ಸುಭೌಮ. ಇತ್ತ ರೇಣುಕೆಯ ಇಬ್ಬರು ಮಕ್ಕಳೂ ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ತಿರುಗಿ ಕ್ಷತ್ರಿಯರ ನಿರ್ಮೂಲ ಮಾಡಿ ಸಾರ್ವ ಭೌಮರಾಗಿ ಆಳತೊಡಗಿದರು. ಸುಭೌಮನಿಂದ ತನಗೆ ಮರಣ ಎಂದು ತಿಳಿದ ಪರಶುರಾಮ

3. ಗೋವಿಂದ ಪೈ. ಮೂರು ಉಪನ್ಯಾಸಗಳು, ಪು. 6.
'ಕಾಮಧೇನ್ವಭಿದಾನಂ ವಿದ್ಯಾಮೀಪ್ಸಿತಾರ್ಥ ಪ್ರದಾಯಿನೀಮ್ !
ತಸ್ಮೈವಿಶ್ರಾಣಯಾಂ ಚಕ್ರೇ ಸಮಂತಂ ಪರಶುಂ ಚ ಸ :

ಕ್ರೋಧತಪ್ತನಾಗಿ ಸುಭೌಮನ ಮೇಲೆ ಏರಿಹೋಗುತ್ತಾನೆ. ಸುಭೌಮ[4] ಎದುರು ಪರಶುರಾಮನ ಆಟ ನಡೆಯುವುದಿಲ್ಲ. ಆತನ ಸಹಸ್ರಾರು ಚಕ್ರದಿಂದ ಪರಶುರಾಮ ಹತನಾಗುತ್ತಾನೆ. ಜೈನಪುರಾಣದ ಈ ಕಥೆ ವೈದಿಕ ಪುರಾಣ ಕಥೆಗೆ ಭಿನ್ನವಾಗಿರುವುದು ಮೇಲುನೋಟಕ್ಕೇ ಸ್ಪಷ್ಟವಾಗಿದೆ.

ಶೈವಪುರಾಣ ಪರಂಪರೆಯಲ್ಲಿಯ ರೇಣುಕೆಯ ಕಥೆಯ ಘಟನಾವಳಿಗಳು ಹೀಗಿವೆ :

ಕೃತಯುಗದ ಕೊನೆ. ಕಾರ್ತವೀರ್ಯನೆಂಬ ಕ್ಷತ್ರಿಯ ದಾನವ ಭೂಲೋಕದಲ್ಲಿ ಅಹಂಕಾರದಿಂದ ಮೆರೆಯುತ್ತಿದ್ದು ಮುನಿಪುಂಗವರ ಎಲ್ಲ ಮಂಗಲಕಾರ್ಯಗಳಿಗೆ ಆತಂಕವೊಡ್ಡಿದ. ದೇವತೆಗಳೆಲ್ಲ ಕೂಡಿ ನಾರಾಯಣನ ಸಲಹೆಯಂತೆ ದಕ್ಷ ಪ್ರಜಾಪತಿಯ ಮಗಳು ಮತ್ತು ಎಲ್ಲ ದೇವತೆಗಳ ತಾಯಿ ಅದಿತಿಯಲ್ಲಿಗೆ ಬಂದು ತಮ್ಮ ಸಂಕಟ ತೋಡಿಕೊಳ್ಳುತ್ತಾರೆ. ಅದಿತಿ ತಪಂಗೈಯ್ದು ಪರಮೇಶ್ವರನನ್ನು ಒಲಿಸಿಕೊಳ್ಳಲು ಸಿದ್ಧಳಾಗುತ್ತಾಳೆ. ಎಲ್ಲ ದೇವತೆಗಳು–ರುದ್ರರು, ಸಿದ್ಧ, ಗಂಧರ್ವ ಉಡಗ, ವಿದ್ಯಾಧರ, ಮಹರ್ಷಿ ಮುಂತಾದವರು–ತಮ್ಮ ಶಕ್ತಿ, ತೇಜಗಳನ್ನು ಒಟ್ಟುಗೂಡಿಸಿ ಅದಿತಿಗೆ ಧಾರೆಯೆರೆದರು. ಅದಿತಿಯ ಪಂಚಾಗ್ನಿ ಮಧ್ಯದ ತಪಸ್ಸು ಮೆಚ್ಚಿದ ಶಿವನ ಅಭಯವಾಣಿ. ಆದರಂತೆ ಕಾಶ್ಮೀರದೇಶದ ಅಧಿಪತಿ ರೇಣುಕ ರಾಜನ ಪುತ್ರಕಾಮೇಷ್ಠಿಯಜ್ಞ ಕುಂಡದಿಂದ ಅದಿತಿಯೇ–ಅಯೋನಿಜೆಯಾಗಿ–ಜನಿಸುತ್ತಾಳೆ. ಅವಳೇ ಜಗದಂಬಾ ಏಕವೀರಾ, ರೇಣುಕಾ. ರೇಣುಕೆ ಪ್ರಾಪ್ತ ವಯಸ್ಕಳಾದ ಬಳಿಕ ಅವಳ ಮದುವೆಯ ವಿಚಾರ ಮಾಡಿದಾಗ ಅಗಸ್ತ್ಯಮುನಿಗಳ ಸೂಚನೆಯಂತೆ ರೇಣುಕರಾಜ ದಕ್ಷಿಣದ ಸಿದ್ಧಾಚಲಕ್ಕೆ ಪಯಣ ಬೆಳೆಸುತ್ತಾನೆ. ಈ ಸಿದ್ಧಾಚಲದಲ್ಲಿರುವ ರುಚಿಕಮುನಿ ಮತ್ತು ಸತ್ಯವತಿಯರ ಮಗ ಜಮದಗ್ನಿ[5]

---

4. ಜೈನಪುರಾಣಗಳಲ್ಲಿ ಹೇಳಲಾದ ಹನ್ನೆರಡು ಚಕ್ರವರ್ತಿಗಳಲ್ಲಿ ಒಬ್ಬ ಸುಬೌಮ. ಆತನ ಇನ್ನೊಂದು ಹೆಸರು ಕಾರ್ತವೀರ್ಯ, ಪಂಪ ಅರಿಕೇಸರಿ ಮತ್ತು ಪೌರಾಣಿಕ ಅರ್ಜುನನನ್ನು ಸಮೀಕರಿಸಿದಂತೆ ರನ್ನನೂ 1ನೆಯ ಕಾರ್ತವೀರ್ಯನನ್ನು ಪೌರಾಣಿಕ (ಸುಬೌಮ) ಕರ್ತವೀರ್ಯನಿಗೆ ಸಮೀಕರಿಸಿರುವಂತೆ ತೋರುತ್ತದೆ.

5. ಸಿದ್ಧಾಚಲ ಪ್ರದೇಶದ ಮಾರ್ಗದಲ್ಲಿ ಗೋದಾವರಿ ತೀರ, ಸಗರನಾಡು ಕೃಷ್ಣಾ ಮಲಾಪಹಾರೀ ಸಂಗಮ, ಅದರ ಮಧ್ಯದ ತುರನಾಡಿನ ರಾಜಧಾನಿ ತೋರಗಲ್ಲು. ಮುನಿವಲ್ಲಿ, ಮಲಾಪಹಾರೀ ನದಿ, ಇತ್ಯಾದಿ ನದಿ ಸ್ಥಳಗಳ ವಿವರವಿದೆ. ಅಲ್ಲಿಂದ ಅವರು ಬಂದದ್ದು ಸೊಗಲಮುನಿಯ ಆಶ್ರಮ. ಇದು ಪವಿತ್ರ ಸ್ಥಾನವಾಗಿದ್ದು ಇಲ್ಲಿ ಸುವರ್ಣಾಕ್ಷಲಿಂಗ್ದ ವೀರಭದ್ರ, ಭದ್ರಕಾಳಿ ಮತ್ತು ಪಾರ್ವತಿ–ಪರಮೇಶ್ವರರ ದೇವಸ್ಥಾನಗಳಿದ್ದ ವಿವರಣೆಯಿದೆ. ಜೊತೆಗೆ ಏಕನಾಥ-ಜೋಗಿನಾಥ, ಸಿದ್ಧ-ಸೋಮೇಶ್ವರ ಸಿದ್ಧ ಮುಂತಾದ ಸಿದ್ಧರ ಹೆಸರು ಉಲ್ಲೇಖಿತವಾಗಿವೆ.

ಸಿದ್ಧಾಚಲದಲ್ಲಿ ಜಮದಗ್ನಿಯ ಜೊತೆ ರೇಣುಕೆಯ ವಿವಾಹ. ನಾಲ್ಕು ಜನ ಮಕ್ಕಳನಂತರದ ಐದನೆಯವನೇ ಪರಶುರಾಮ–ಇವನು ಶ್ರೀಮನ್ನಾರಾಯಣನ ಅವತಾರ. ಈತ ಸಕಲ ವಿದ್ಯಾ ಪಾರಂಗತ. ಈತ ಗಜಾನನನಿಂದ 'ಪರಶು' ಪಡೆದ–ಈತನಿಗೆ ಪರಶುರಾಮನೆಂಬ ಅಭಿದಾನ. ರೇಣುಕೆ ಶುದ್ಧೋದಕ ತರಲು ಹೋದ ಕಾಲದಲ್ಲಿ ಚಿತ್ರರಥ ಗಂಧರ್ವನು ಪತ್ನಿಯರ ಕೂಡ ಜಲಕ್ರೀಡೆಯಾಡುವುದನ್ನು ಕಂಡು ಚಂಚಲಚಿತ್ತಳಾಗುತ್ತಾಳೆ. ವಿಲಂಬಕ್ಕೆ ಪತಿ ಮುನಿದು ಶಾಪವಿತ್ತು ಆಶ್ರಮದಿಂದ ಹೊರದೂಡುತ್ತಾನೆ. ಮೈಯೆಲ್ಲ ಕಪ್ಪಿಟ್ಟ ಇವಳು ಏಕನಾಥ ಜೋಗಿನಾಥರ ಕೃಪೆಯಿಂದ ಮೊದಲಿನ ರೂಪ ಹೊಂದುತ್ತಾಳೆ. ಮತ್ತೆ ಜಮದಗ್ನಿಯ ಹತ್ತಿರ ಬರುತ್ತಾಳೆ. ಕುಪಿತ ಜಮದಗ್ನಿಯು ಆಜ್ಞೆಯಂತೆ ಪರಶುರಾಮನಿಂದ ತಾಯಿಯ ಶಿರಚ್ಛೇದ- ಮತ್ತೆ ತಂದೆಯ ವರದಿಂದ ರೇಣುಕಾ ಮರುಹುಟ್ಟು ಪಡೆಯುವುದು. ಕಾರ್ತವೀರ್ಯನ ಬೇಟೆ, ರಾಮಶೃಂಗ ಪರ್ವತದ ಜಮದಗ್ನಿ ಆಶ್ರಮದಲ್ಲಿ ಭೂರಿ ಭೋಜನ ಆತಿಥ್ಯ. ಆದಕ್ಕೆ ಕಾರಣವಾದ ಧೇನು ಪ್ರಾಪ್ತಿಗಾಗಿ ಕಾರ್ತವೀರ್ಯನಿಂದ ಜಮದಗ್ನಿಯ ಹತ್ಯೆ. ಪರಶುರಾಮನಿಂದ ಕಾರ್ತವೀರ್ಯನ ನಾಶ. ಕ್ಷತ್ರಿಯ ಕುಲ ನಿರ್ಮೂಲನೆಗಾಗಿ ಇಪ್ಪತ್ತೊಂದು ಸಲ ಭೂಮಿಯನ್ನು ಸುತ್ತುವುದು. ಯಜ್ಞಮುಖದಿಂದ ಸಂಪಾದಿಸಿದ ಭೂಮಿಯನ್ನು ಕಶ್ಯಪನಿಗೆ ದಾನ ಮಾಡುತ್ತಾನೆ ಇತ್ಯಾದಿ.

ಸ್ಕಾಂದ ಪುರಾಣದ ಅನೇಕ ಸಂದರ್ಭಗಳಲ್ಲಿ ಜಮದಗ್ನಿ-ರೇಣುಕೆ ಮತ್ತು ಪರಶುರಾಮರ ಉಲ್ಲೇಖ ಬರುತ್ತದೆ. ಈ ಎಲ್ಲ ಆನುಷಂಗಿಕ ಉಲ್ಲೇಖಗಳು ಶಿವ ಪಾರಮ್ಯವನ್ನು ಮತ್ತು ಪಾರ್ವತಿಯ (ಶಕ್ತಿದೇವತೆ) ಘನಮಹಿಮೆಯನ್ನು ಸಾರುವ ಪ್ರಮುಖ ಗುರಿ ಹೊಂದಿದ್ದು ಪರಶುರಾಮಾವತಾರದ ಹಿನ್ನೆಲೆಯಲ್ಲಿ ಮಾತ್ರ ಮುಖ್ಯವಾಗಿ ಹೇಳುವಂತೆ ತೋರುತ್ತದೆ.

ಭೃಗುಮುನಿಯ ವಂಶದಲ್ಲಿ ಶ್ರೀಹರಿಯು ಪರಶುರಾಮನಾಗಿ ಜನಿಸಿ ಕೃತವೀರ್ಯನ ಮಗ ಕಾರ್ತವೀರ್ಯನ ಸಂಹಾರ ಮಾಡಿದನೆಂದೂ[6] ಕಾರ್ತವೀರ್ಯ

---

6. ಅ) 'ಭೃಗೂಣಾಮನ್ವಯೇಭೂತ್ವಾ ಕೃತವೀರ್ಯಾತ್ಮಜೋಹತಃ ಹಿತೋಽವ್ಯಸ್ಮಾನ್ಮಹಾ ವಿಷ್ಣೋ ತದ್ಭವಪರಿಪಾಲಯ' ಶ್ರೀ ಸ್ಕಾಂದ ಮಹಾಪುರಾಣಂ, ಅ ಎಂಟು ಪು. 91-92. ಅನುವಾದ ಮೋ. ಸ. ಬ್ರಹ್ಮಣ್ಯಶಾಸ್ತ್ರಿ. 1944.
ಆ) ಅದೇ, ಅ.ಆರು, ನಾಗರಖಂಡ, ಪರಶುರಾಮೋತ್ಪತ್ತಿ ವರ್ಣನಂ.
ಇ) ಅದೇ, ಅ.ಐದು, ಅವಂತ್ಯಖಂಡ.
ಈ) ಅದೇ, ತ್ರಿಪುರಾರಹಸ್ಯ. ಅನು. ಎಡತೊರೆ ಚಂದ್ರಶೇಖರಶಾಸ್ತ್ರಿ. 1946
ಉ) ನರಸಿಂಹ ಪುರಾಣ, ಸಂ. ಎರಡು, ಅಧ್ಯಾಯ. 46, ಅನು.ನಾ.ವಾ. ಪದ್ಮನಾಭ ಶಾಸ್ತ್ರಿ. 1949.

ಸುರಭಿಗಾಗಿ ಜಮದಗ್ನಿಯನ್ನು ಕೊಂದಾಗ ರೇಣುಕೆ ಇಪ್ಪತ್ತೊಂದು ಸಲ ಎದೆ ಎದೆ ಬಡಿದುಕೊಂಡು (ಹೊಟ್ಟೆ) ಅತ್ತುದಕ್ಕಾಗಿ ಪರಶುರಾಮ ಇಪ್ಪತ್ತೊಂದು ಸಲ ಭೂ ಪ್ರದಕ್ಷಿಣೆ ಮಾಡಿ ಕ್ಷತ್ರಿಯರನ್ನು ನಾಶ ಮಾಡಿದನೆಂಬ, ಕೆಲವು ಮೇಲೆ ಹೇಳಿದ ಪುರಾಣ ಕಥೆಗೆ ಪೋಷಕವಾದ ವಿವರಗಳು ದೊರಕುತ್ತವೆ.

ಶಿಷ್ಟಪದ ಪುರಾಣ ಕೃತಿ ಒಂದು ಸಿದ್ಧ–ಸ್ಥಿರ–ಸ್ವೀಕೃತ ವಸ್ತುವನ್ನೇ ಲಿಖಿತ ಪರಂಪರೆಯ ಮೂಲಕ ಹೇಳುತ್ತ ಬರುವುದರಿಂದ ಇವುಗಳಲ್ಲಿ ಯಾವುದೇ ಬಗೆಯ ಮೂಲಭೂತ ಬದಲಾವಣೆ ಕಂಡುಬರುವುದಿಲ್ಲ ಎಂದು ಭಾವಿಸಲಾಗುತ್ತದೆ. ಆದರೆ ಇಲ್ಲಿಯೂ ಒಂದೊಂದು ಮತ ಧರ್ಮದ ಹಿನ್ನೆಲೆಯಲ್ಲಿ ಅನೇಕ ಸಂಬಂಧಗಳು ವ್ಯತ್ಯಸ್ತಗೊಂಡಿರುವುದು ಕಾಣುತ್ತದೆ. ಒಂದುಕಡೆ ವಿಷ್ಣು ಪಾರಮ್ಯ, ಇನ್ನೊಂದು ಕಡೆ ಶಿವಪಾರಮ್ಯ, ಶಕ್ತಿ ಪಾರಮ್ಯ ; ಮತ್ತೊಂದೆಡೆ ಜೈನ ಧಾರ್ಮಿಕ ಸಂಗತಿ ಗಳು. ಈ ವಿಭಿನ್ನ ಸಂಗತಿಗಳ ಜಾಲದಿಂದ 'ಎಲ್ಲಮ್ಮ'ನನ್ನು ಬೇರ್ಪಡಿಸಿ ಗುರುತಿ ಸುವ ಒಂದು ವಿನಮ್ರ ಯತ್ನವೇ ಈ ಪ್ರಬಂಧದ ಗುರಿ.

ಪುರಾಣ–ಸ್ವರೂಪ, ಲಕ್ಷಣ

ರಾಚನಿಕ ದೃಷ್ಟಿಯಿಂದ ಪುರಾಣ ಒಂದು ಸಂಕೀರ್ಣ ವಸ್ತು. ಅನಾದಿ ಕಾಲದಿಂದ ಮೌಖಿಕ ಪರಂಪರೆಯ ಮೂಲಕ ಸಂವಹನಗೊಳ್ಳುತ್ತ ಬಂದ ಜೀವ ನಾನುಭವಗಳು ಅಮೂರ್ತ, ಅಮಾಯಿಕ ವಸ್ತು ಸಂಗತಿಗಳು ಒಂದು ಸ್ತರ; ಲಿಖಿತ ಪರಂಪರೆಯ–ಶಿಷ್ಟಪದ ಸಾಹಿತ್ಯದ–ನಿರ್ದಿಷ್ಟರೂಪ ವಸ್ತು ವಿನ್ಯಾಸ ಧಾರ್ಮಿಕ, ಆಧ್ಯಾತ್ಮಿಕ ಹಂಬಲ ಅಮಾಯಿಕ ಸಂಗತಿ–ಶಕ್ತಿಗಳ ವೈಭವೀಕರಣದ ಇನ್ನೊಂದು ಸ್ತರ; ಇವೆರಡೂ ಪುರಾಣ ರಚನೆಯಲ್ಲಿ ಬೆರೆತು ಅಪರಿಮಿತವಾಗಿ ಬೆಳೆದಿವೆ. ಆದುದರಿಂದ ಪುರಾಣಗಳನ್ನು ಕುರಿತ–ಅದರಲ್ಲೂ ಜನಪದ ರೂಢಿ ಪರಂಪರೆಗಳಲ್ಲಿ ಪರಿಚಲನೆಗೊಂಡ ಪೌರಾಣಿಕ ಅಂಶಗಳನ್ನು ಕುರಿತ ಅಧ್ಯಯನವನ್ನು ಒಂದು ಚೌಕಟ್ಟಿಗೆ ಅಳವಡಿಸುವುದು ತುಂಬ ಕ್ಲಿಷ್ಟ.

ಪುರಾಣವನ್ನು ಕೇಳುವುದರಿಂದ ಭವ್ಯಾತ್ಮರಿಗೆ ನಿರ್ಬಾಧ್ಯವಾದ ಅಭ್ಯು ದಯವುಳ್ಳ 'ಮೋಕ್ಷ ಲಕ್ಷ್ಮಿಯ ಸಮಾಗಮವಾಗುವುದು ; ಮುಕ್ತಿ ಪ್ರಾಪ್ತವಾಗು ವುದು[7] ಎನ್ನುವ ಶಿಷ್ಟಪದ ಪುರಾಣದ ಲಕ್ಷಣ ಎಲ್ಲಮ್ಮನನ್ನು ಕುರಿತ ವಿವೇಚನೆಗೆ ನೆರವಾಗುವುದಿಲ್ಲ. 'ಎಲ್ಲಮ್ಮ'ನನ್ನು ಕುರಿತ ಎಲ್ಲ ಹಂತದ ವಿವೇಚನೆಗೆ ನೆರವಾಗು

---

7 ಗುಣಭದ್ರ : ಮಹಾಪುರಾಣದ ಉತ್ತರ ಭಾಗ, ಪರ್ವ 48, ಶ್ಲೋ. 2, ಪು. 1. ಸಂ. ಶಾಂತಿರಾಜಶಾಸ್ತ್ರಿ 1981.
'ಪುರಾಣಂ ತಸ್ಯವಕ್ಷೇಹಂ ಮೋಕ್ಷಲಕ್ಷ್ಮಿ ಸಮಾಗಮಃ
ಶ್ರುತೇನಯೇನ ಭವ್ಯಾನಾಮವ್ಯಾಹತ ಮಹೋದಯಃ

ವುದು ಲೆವಿಸ್ಟ್ರಾಸ್‌ನಿಂದ ಪ್ರತಿಪಾದಿಸಲ್ಪಟ್ಟ 'ರಾಚನಿಕ ಪಂಥ'–ಸ್ಟ್ರಕ್ಚರಲಿಜಮ್‌-ದ ಧೋರಣೆ :

ರಾಚನಿಕ ಪಂಥದ ಧೋರಣೆಗಳ ಹಿನ್ನೆಲೆಯಲ್ಲಿ ಇಂಡೋ ಯುರೋಪಿಯನ್ ಪುರಾಣಗಳ ಅಧ್ಯಯನ ಮಾಡಿದ ಡುಮೇಜಿಲ್ ಎನ್ನುವ ವಿದ್ವಾಂಸನ ಕಾರ್ಯ ಅತ್ಯಂತ ಮಹತ್ವದ್ದಾಗಿದೆ. ಪುರಾಣದೇವತೆಗಳನ್ನು ಅವರ ಕ್ರಿಯೆ (ನಿಯೋಗ)ಗಳಿಂದ ಬೇರ್ಪಡಿಸಿ ಅವರಿಗೆ ಹೊರತಾದ ಇತರ ದೇವತೆಗಳನ್ನು ಸ್ವತಂತ್ರವಾಗಿ ವಿಶ್ಲೇಷಿಸುವ ಆತನ ವಿಧಾನ ಒಂದು ಬಹು ದೊಡ್ಡ ಕಾಣಿಕೆಯೆಂದು ಭಾವಿಸಲಾಗಿದೆ.[8]

ಲಭ್ಯವಿದ್ದ ಪುರಾಣ ಸಾಮಗ್ರಿಗಳನ್ನು ರಾಚನಿಕ ಪಂಥ, ಭಾಷಾ ವಿಜ್ಞಾನದ ವಿಶ್ಲೇಷಣೆಗೆ ಒಳಪಡಿಸುತ್ತದೆ. ರಾಚನಿಕ ಪಂಥದ ಪ್ರತಿಪಾದಕ ಲೇವಿಸ್ಟ್ರಾಸ್ "ವಿಭಿನ್ನ ಘಟಕಗಳಿಂದ ರಚನೆಗೊಂಡ ಭಾಷೆಯೊಂದರ 'ಸಂವಹನ'ವೇ ಪುರಾಣ"[9] ಎನ್ನುತ್ತಾನೆ. ಆದುದರಿಂದ ಪುರಾಣ ರಚನೆಯ ಅಂತರ್ಗತ ಘಟಕಗಳನ್ನು ಬಿಡಿಸಿದಾಗ ಪಾಠಾಂತರಗಳ ಮೂಲಕ ಅವುಗಳಲ್ಲಿರುವ ವೈರುಧ್ಯ ಸಾಮ್ಯಗಳನ್ನು ಗುರುತಿಸುವುದು ಸುಲಭ. ಏಕೆಂದರೆ ಲೆವಿಸ್ಟ್ರಾಸ್ ಹೇಳುವಂತೆ ಪೌರಾಣಿಕ ಆಲೋಚನೆ ಯಾವಾಗಲೂ ವೈರುಧ್ಯಗಳ ಅರಿವಿನಿಂದ ಅವುಗಳ ಪ್ರಗತಿಪರ ಮಧ್ಯಸ್ಥಿಕೆಯತ್ತ ಕಾರ್ಯ ಮಾಡುತ್ತದೆ.[10]

ಮೇಲೆ ಹೇಳಿದ ಶಿಷ್ಟಪದ ಪುರಾಣ ಕಥೆಗಳನ್ನು ಪಾಠ 1, 2, 3 ಎಂದು ಗುರುತಿಸಿ ಅವುಗಳ ಅಂತರ್ಗತ ಘಟಕಗಳನ್ನು ಒಡೆಯಲಾಗಿದೆ. 1ನೆಯ ಪಾಠದ ವ್ಯತ್ಯಾಸಗಳನ್ನು 2, 3ರಲ್ಲಿ ಅಕ್ಷರಗಳ ಮೂಲಕ ಸೂಚಿಸಲಾಗಿದೆ.

ಪಾಠ 1

(ಹರಿವಂಶ, 1–27, ವಾಯು ಪುರಾಣ 91, ಭಾಗವತ 9–15 ಮುಂತಾದವುಗಳಲ್ಲಿ ಉಕ್ತ).

---

8 'It is perhaps his greatest Contribution that he has separated the gods from their functions and shown that the latter can be analysed independently of the former.' 'Structuralism' ; Ed. Michael Lane, p. 173, 1970.

9 '...a myth is a Communication in a language composed of units.' ಅದೇ ಪು. 295.

10 ಅದೇ, ಪು. 175.

ಅ) ರೇಣುಕರಾಜ; ರೇಣುಕರಾಜನಿಗೆ ಪ್ರಸೇನಜಿತ, ಸುಷೇಣಮುನಿ ಇತ್ಯಾದಿ ಹೆಸರು.

ಆ) ರೇಣುಕರಾಜನ ಮಗಳು ರೇಣುಕಾ. ಕಮಲದಲ್ಲಿ ಜನಿಸಿದವಳು (ಪ್ರಸೇನಜಿತನ) ಸಾಕುಮಗಳು. ಕಾಮಾಲಿ ಈಕೆಯ ಇನ್ನೊಂದು ಹೆಸರು.

ಇ) ಭೃಗುವಂಶದ ಜಮದಗ್ನಿ, ಕಟ್ಟುನಿಟ್ಟಿನ ವ್ರತಾಚರಣೆಗೆ ಹೆಸರಾದವನು.

ಈ) ಜಮದಗ್ನಿಯ ಜೊತೆ ರೇಣುಕೆಯ ಮದುವೆ.

ಉ) ಐದು ಮಕ್ಕಳು –ಕೊನೆಯವನು ಪರಶುರಾಮ.

ಊ) ರೇಣುಕಾ, ನೀರು ತರಲು ಹೋಗುವುದು–ಜಲಕ್ರೀಡೆಯಲ್ಲಿ ತೊಡಗಿದ ಗಂಧರ್ವ ದಂಪತಿಗಳನ್ನು ಕಂಡು ಚಿತ್ತಚಾಂಚಲ್ಯ. ಮರಳಿ ಆಶ್ರಮಕ್ಕೆ ಬರಲು ವಿಲಂಬ.

ಋ) ಕುಪಿತ ಜಮದಗ್ನಿ ; ರೇಣುಕೆಯ ರುಂಡ ಚೆಂಡಾಡಲು ಮಕ್ಕಳಿಗೆ ಆಜ್ಞೆ; ಕೊನೆಯ ಮಗ ಪರಶುರಾಮ ತಂದೆಯ ಆಜ್ಞೆಗೆ ಶಿರಬಾಗಿ ತಾಯಿಯ ರುಂಡ ಚೆಂಡಾಡುತ್ತಾನೆ.

ೠ) ಮಗನ ಆಜ್ಞಾಪಾಲನೆಗೆ ಸುಪ್ರೀತ ಜಮದಗ್ನಿಯ ವರದಿಂದಲೇ ತಾಯಿ ಸೋದರರನ್ನು ಮರಳಿ ಜೀವಂತಗೊಳಿಸುತ್ತಾನೆ.

ಎ) ಸೂರ್ಯವಂಶದ ಕೃತವೀರ್ಯನ ಮಗ ಕಾರ್ತವೀರ್ಯ ದತ್ತಾತ್ರೇಯನ ಆರಾಧಕ. ಆತನಿಂದ ವರ ಪಡೆದ ಮಹಾವೀರ.

ಏ. ಕಾರ್ತವೀರ್ಯ ಸೈನ್ಯದೊಡನೆ ಬೇಟೆಗೆ ಹೊರಟು, ಜಮದಗ್ನಿಯ ಆಶ್ರಮಕ್ಕೆ ಬರುವುದು. ಬಂದವರಿಗೆಲ್ಲ - ಜಮದಗ್ನಿಯಿಂದ - ಸುಖ ಭೋಜನ, ಸತ್ಕಾರ ಕಾಮಧೇನುವಿನ ಕೃಪೆಯಿಂದಾಗಿ.

ಐ. ಮಹಿಮಾನ್ವಿತ ಕಾಮಧೇನುವನ್ನು ಕೊಂಡೊಯ್ಯಲು ಕಾರ್ತವೀರ್ಯನ ಪ್ರಯತ್ನ. ಒಪ್ಪದ ಜಮದಗ್ನಿಯನ್ನು ಕಾರ್ತವೀರ್ಯ ಕೊಲ್ಲುವುದು.

ಒ. ಕೆರಳಿದ ಪರಶುರಾಮನಿಂದ ಕಾರ್ತವೀರ್ಯನ ಕೊಲೆ-ಅವನ ರಾಜ್ಯ ನಿರ್ಮೂಲನ. ಪರಶುರಾಮ ಮಹಾವಿಷ್ಣುವಿನ ಆರನೆಯ ಅವತಾರ.

ಪಾಠ 2 :

(ಸ್ಕಾಂದಪುರಾಣ - ತ್ರಿಪುರಾ ರಹಸ್ಯ ಮುಂತಾದವುಗಳ ಕಥಾನಕದ ಅಂಶಗಳು)

ಅ-ಆ. ಕಾರ್ತವೀರ್ಯ ಕ್ಷತ್ರಿಯ 'ದಾನವ'ನ ಅಹಂಕಾರ-ಉಪಟಳ. ಎಲ್ಲ ದೇವತೆಗಳು ಅದಿತಿಯಲ್ಲಿ ಮೊರೆಯಿಡುತ್ತಾರೆ. ದಕ್ಷ ಪ್ರಜಾಪತಿಯ ಮಗಳು ಅದಿತಿ. ಎಲ್ಲ ದೇವತೆಗಳ ತಾಯಿ. ಈ ಅದಿತಿಯೇ ರೇಣುಕರಾಜನ ಪುತ್ರಕಾಮೇಷ್ಠಿ ಯಜ್ಞಕುಂಡದಲ್ಲಿ ಅಯೋನಿಜೆಯಾಗಿ ಮೂಡುತ್ತಾಳೆ. ಅವಳ ಹೆಸರು ಜಗದಂಬಾ, ಏಕವೀರಾ. ಅವಳೇ ರೇಣುಕೆ. ರೇಣುಕೆ ಪ್ರಾಪ್ತವಯಸ್ಕಳು. ಅಗಸ್ತ್ಯ ಮುನಿಗಳ ಸೂಚನೆಯಂತೆ ಸಿದ್ಧಾಚಲಕ್ಕೆ ರೇಣುಕರಾಜನ ಪ್ರಯಾಣ.

ಇ 2 ಸಿದ್ಧಾಚಲದ ರುಚಿಕಮುನಿ ಸತ್ಯವತಿಯರ ಮಗ ಜಮದಗ್ನಿ.

ಉ 2 ಶ್ರೀಮನ್ನಾರಾಯಣನ ಅವತಾರವೇ ಪರಶುರಾಮ. ಗಜಾನನನಿಂದ ಪರಶು ಪಡೆದಿರುತ್ತಾನೆ.

ಒ 2 ಕಾರ್ತವೀರ್ಯ ಜಮದಗ್ನಿಯನ್ನು ಕೊಂದಾಗ ರೇಣುಕಾ ಇಪ್ಪತ್ತೊಂದು ಸಲ ಎದೆ ಎದೆ ಬಡಿದುಕೊಂಡು ಅತ್ತುದಕ್ಕಾಗಿ, ಪರಶುರಾಮ ಅಷ್ಟು ಸಲ ಭೂಮಿಯನ್ನು ಸುತ್ತಿ ಕ್ಷತ್ರಿಯರ ಬೇಟೆಯಾಡಿ ಅವರ ನಿರ್ಮೂಲನ ಮಾಡಿದ್ದು ಮಹಾಯಜ್ಞ ಮಾಡಿ ಅದರ ಮೂಲಕ ಗಳಿಸಿದ (ರಾಜ್ಯ) ಭೂಮಿಯನ್ನು ಕಶ್ಯಪನಿಗೆ ದಾನ ಮಾಡುವುದು.

ಪಾಠ 3 :

(ಜೈನ ಪುರಾಣದ ಕಥೆಯ ಅಂಶಗಳು)

ಅ-ಆ 3 (ಕ್ರಿ.ಶ. 897ರಲ್ಲಿ ರಚಿತವಾದ ಗುಣಭದ್ರನ ಉತ್ತರ ಪುರಾಣ : ಪರ್ವ 65, ಶ್ಲೋ : 51-150).

ಕಾನ್ಯಕುಬ್ಜದ ಅರಸನ ತೊಂಬತ್ತೊಂಬತ್ತು ಮಕ್ಕಳಲ್ಲಿ ಕೊನೆಯವಳೇ ರೇಣುಕೆ. ಈಕೆ ಮಣ್ಣಲ್ಲಿ ಆಡುತ್ತಿದ್ದುದರಿಂದ ಈಕೆಯನ್ನು ಹೀಗೆ ಕರೆಯಲಾಯಿತು.

ಇ 3 ಇಕ್ಷ್ವಾಕುವಂಶದ ಸಹಸ್ರಬಾಹು. ಆತನ ಚಿಕ್ಕಪ್ಪ ಶತಬಿಂದು-ಪಾರತ ದೇಶದ ಅರಸನ ತಂಗಿ ಶ್ರೀಮತಿಯ ಜೊತೆ ಶತಬಿಂದು ಮದುವೆ-ಶತಬಿಂದುವಿನ ಮಗ ಜಮದಗ್ನಿ. ಇವನಿಗೆ ಬಾಲ್ಯದಲ್ಲಿ ಮಾತೃವಿಯೋಗ. ಪಂಚಾಗ್ನಿ ಮಧ್ಯೆ ತಪಸ್ಸು. ಅಪುತ್ರಸ್ಯ ಗತಿರ್ನಾಸ್ತಿ ಎಂದು ತಿಳಿದು ತಪಸ್ಸು ತೊರೆದು ಕಾನ್ಯಕುಬ್ಜಕ್ಕೆ ಕನ್ಯಾರ್ಥಿಯಾಗಿ ಬರುತ್ತಾನೆ.

ಈ 3 ಮಣ್ಣಲ್ಲಿ ಆಡುತ್ತಿದ್ದ ಕಾನ್ಯಕುಬ್ಜದ ಅರಸನ ಕೊನೆಯ ಮಗಳನ್ನು 'ರೇಣುಕಾ' ಎಂದು ಹೆಸರಿಸಿ ಅವಳನ್ನು ವರಿಸುತ್ತಾನೆ.

ಉ 3 ಇಬ್ಬರು ಮಕ್ಕಳು ಇಂದ್ರರಾಮ-ಶ್ವೇತರಾಮ. ಇಂದ್ರರಾಮನೇ ಪರಶುರಾಮ. ರೇಣುಕೆಯ ಅಣ್ಣ ಅರಿಂಜಯ ಮುನಿಯಿಂದ 'ಕಾಮಧೇನು' ವಿದ್ಯೆ, ಮಾಂತ್ರಿಕಪರಶುವಿನ ಕಾಣಿಕೆ.

ಎ-ಏ 3 ಸಹಸ್ರಬಾಹು ತನ್ನ ಮಗ ಕೃತವೀರ್ಯನ ಜೊತೆ ತನ್ನ ಸೋದರ ಜಮದಗ್ನಿಯ ಆಶ್ರಮಕ್ಕೆ ಬರುತ್ತಾನೆ. ತಕ್ಷಣ ಎಲ್ಲರಿಗೂ ಮೃಷ್ಟಾನ್ನ ಭೋಜನ. ಕೃತವೀರ್ಯನಿಗೆ ಚಿಕ್ಕಮ್ಮ ರೇಣುಕೆಯ ಮೂಲಕ ಧೇನು ವಿನ ಮಹಿಮೆಯ ಗುಟ್ಟು ತಿಳಿಯುವುದು.

ಐ 3 ಕೃತವೀರ್ಯ ಚಿಕ್ಕಮ್ಮನ ಮಾತನ್ನೂ ಕೇಳದೆ ಜಮದಗ್ನಿಯನ್ನು ಕೊಂದ ಧೇನುವನ್ನು ಒಯ್ಯುವುದು. ಗಡ್ಡೆ ಗೆಣಸು ಸಂಗ್ರಹಿಸಲು ಹೋದ ಮಕ್ಕಳು ಮರಳುವುದು ; ವಿಷಯ ತಿಳಿದು ಕೆರಳುವುದು.

ಒ 3 ಪರಶುರಾಮನಿಂದ ಸಹಸ್ರಬಾಹು ಮತ್ತು ಕೃತವೀರ್ಯನ ಕೊಲೆ-ಸರ್ವನಾಶ. ಕೃತವೀರ್ಯನ ಗರ್ಭವತಿ ಹೆಂಡತಿ ಚಿತ್ರಮತಿಗೆ ಸುಬಂಧು ಮುನಿಯ ಆಶ್ರಮದ ರಕ್ಷೆ. ಚಿತ್ರಮತಿಯಲ್ಲಿ ಜನಿಸುವ ಮಗ ಸುಭೌಮ. ಈತ ಜೈನ ಪುರಾಣೋಕ್ತ ಹನ್ನೆರಡು ಚಕ್ರವರ್ತಿಗಳಲ್ಲಿ ಒಬ್ಬ. ಈತನ ಮತ್ತೊಂದು ಹೆಸರು ಕಾರ್ತವೀರ್ಯ.

ಕೆಲವು ಹೆಚ್ಚಿನ ಸಂಗತಿಗಳು :

(ಇವು ಶೈವ ವೈಷ್ಣವ ಪುರಾಣಕ್ಕಿಂತ ಭಿನ್ನವಾಗಿರುವುದಕ್ಕೆ ಜೈನಧರ್ಮದ ಹಿನ್ನೆಲೆಯಿದೆ)

ಔ. ರೇಣುಕೆಯ ಮಕ್ಕಳಿಂದ ಇಪ್ಪತ್ತೊಂದು ಬಾರಿ ಪೃಥ್ವಿಯ ಅಲೆದಾಟ. ಕ್ಷತ್ರಿಯರ ಬೇಟೆ. ಇಬ್ಬರೂ ಸಾರ್ವಭೌಮರಾಗುವುದು. ಸುಭೌಮ ನಿಂದ (ಕಾರ್ತವೀರ್ಯ) ಪರಶುರಾಮನ ಹನನ.

ಮೇಲಿನ ಎಲ್ಲ ಘಟಕಗಳ ಪೃಥಕ್ಕರಣದಿಂದ ಕಂಡುಬರುವ ಮುಖ್ಯ ಸಂಗತಿಗಳು :

(ಅ) ಎಲ್ಲೂ ರೇಣುಕಾನೇ 'ಎಲ್ಲಮ್ಮ' ಎಂದು ಹೇಳಿಲ್ಲ : (ಕಮಲ ಜನನ : ಅಯೋನಿಜೆ, ಕಾನ್ಯಕುಬ್ಜದ ಅರಸನ ಮಗಳು).

(ಆ) (ಎಲ್ಲ ಪುರಾಣಗಳೂ ತಮ್ಮ ತಮ್ಮ ಮತಧರ್ಮದ ಶ್ರದ್ಧೆಗೆ ಅನು ಗುಣವಾಗಿ ರೇಣುಕೆಯ ಕಥೆಯನ್ನು ಬೆಳೆಸಿವೆ.) ರೇಣುಕೆ ಮದುವೆಯಾದ ಜಮದಗ್ನಿ ಒಮ್ಮೆ ಬ್ರಾಹ್ಮಣ, ಒಮ್ಮೆ ಶೈವ, ಮತ್ತೊಂದೆಡೆ ಜೈನ.

(ಇ) ಇಡೀ ಕಥೆಯಲ್ಲಿ ಕಂಡುಬರುವ ಮುಖ್ಯವ್ಯಕ್ತಿ-ಘಟನೆಗಳು :

ಜಮದಗ್ನಿ - ರೇಣುಕೆ ; ಪರಶುರಾಮ - ಕಾರ್ತವೀರ್ಯಾರ್ಜುನ. ರೇಣುಕೆಯ ಮೇಲಿನ ವ್ಯಭಿಚಾರದ ಆರೋಪ. ಪರಶುರಾಮನಿಂದ ತಾಯಿಯ ಕೊಲೆ ಮತ್ತು ಮರುಹುಟ್ಟು ; ಕಾಮಧೇನು-ಪರಶುರಾಮನಿಂದ ಕ್ಷತ್ರಿಯರ ಮೇಲಿನ ಯುದ್ಧ-ಸಂಹಾರ.

(ಈ) ಜೈನ ಪರಂಪರೆಯಂತೆ ಎಲ್ಲಮ್ಮ ಕ್ಷತ್ರಿಯ ಕೃತವೀರ್ಯನ ಚಿಕ್ಕಮ್ಮ : ಅವನ ಮಗ ಸುಬಂಧು (ಕಾರ್ತವೀರ್ಯ)ವಿಗೆ ಅಜ್ಜಿಯಾಗಿಯೂ ಕಾಣುವುದು. ಒಟ್ಟಾರೆ ರೇಣುಕೆಯನ್ನು ಕುರಿತ ಈ ಕತೆಯ ಮೂರು ಮತಗಳನ್ನು ಆಧರಿಸಿದ ಸಂಗತಿಗಳಲ್ಲಿ ಪರಸ್ಪರ ಕೆಲವು ವೈರುಧ್ಯಗಳು ಸ್ಪಷ್ಟವಾಗಿವೆ.

ಇದೇ ಹಂತದಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ : ರೇಣುಕೆಯ ಹೆಸರಿನಲ್ಲಿ ಎಲ್ಲೂ ದೇವಾಲಯಗಳಿಲ್ಲದಿರುವುದು ಮತ್ತು ಎಲ್ಲಮ್ಮನ ಹೆಸರಿನ ಗುಡಿಗಳು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶದ ಗಡಿಭಾಗಗಳಲ್ಲೂ ಕಂಡುಬರುವುದು.

ಬೃಹತ್ ಪರಂಪರೆಯ ಶಿಷ್ಟಪದ ಪುರಾಣ ಮತ್ತು ಸಣ್ಣ ಪರಂಪರೆಯ ಜನಪದ ಕಥನಗಳಲ್ಲಿ ಪರಸ್ಪರ ಆದಾನಪ್ರದಾನ ನಡೆಯುತ್ತಿದ್ದು, ಶಿಷ್ಟಪರಂಪರೆ, ಜನಪದ ಪರಂಪರೆಗಳ ಮೇಲೆ ಗಾಢವಾದ ಮತ್ತು ವ್ಯಾಪಕವಾದ ಪ್ರಭಾವಗಳನ್ನು ಬೀರುತ್ತಿರುತ್ತದೆ. 'ಸಣ್ಣ ಪರಂಪರೆ'ಯೆಂದು ಹೇಳಬಹುದಾದ ಅನೇಕ ಜನಪದದ ಸ್ಥಳೀಯ 'ಸಾಂಸ್ಕೃತಿಕ ವೀರ'ರ ವ್ಯಕ್ತಿ, ಸಂಗತಿ, ಘಟನೆಗಳ ಮೇಲೆ ಶಿಷ್ಟಪದ ಪುರಾಣದ ಪ್ರಭಾವೀ ವ್ಯಕ್ತಿಗಳು ಹೇರಲ್ಪಡುತ್ತವೆ. ಜನಪದ ಐತಿಹ್ಯ ಪೌರಾಣಿಕ ಹಿನ್ನೆಲೆಯ ಚೆದುರಿದ ಕಥಾನಕಗಳ ಕೀಲುಗಳಲ್ಲಿ ಶಿಷ್ಟಪದ ಪುರಾಣದ ದೇವತೆಗಳು ತುಂಬಿ ನಿಲ್ಲುತ್ತಾರೆ. ಈ ಕ್ರಿಯೆಯನ್ನು ಅಪ್ರಜ್ಞಾಪೂರ್ವಕವಾಗಿ ಜನಪದವೃಂದ ಸ್ವೀಕರಿಸಿದಾಗ ಸ್ಥಳೀಯ ಪ್ರಾಚೀನ ದೇವತೆಗಳು ಉಚ್ಚಾಟನೆಗೊಂಡು, ಬೃಹತ್ ಪರಂಪರೆಯ ದೇವತೆಗಳು ಸ್ಥಾಪಿತಗೊಳ್ಳುತ್ತಾರೆ ; ಅಥವಾ ಸಮೀಕರಣಗೊಳ್ಳುತ್ತಾರೆ. ಶಿಷ್ಟಪದ ಪುರಾಣಗಳ ದೇವತೆ (ಆದಿತಿರೂಪದ ಏಕವೀರಾ ಆದಿಶಕ್ತಿ) 'ರೇಣುಕೆಯರು' ಸ್ಥಳೀಯ ದೇವತೆ 'ಎಲ್ಲಮ್ಮ'ನ ಕಥೆಯ ಕೀಲುಗಳಲ್ಲಿ ತುಂಬಿ ಆಕೆಯ ಜೊತೆಗೆ ಸಮೀಕರಣಗೊಂಡಿದ್ದಾರೆ. ಆದುದರಿಂದ ಪುರಾಣಗಳ ರೇಣುಕೆಯೇ ಬೇರೆ, ಏಳುಕೊಳ್ಳದ 'ಎಲ್ಲಮ್ಮ'ನೇ ಬೇರೆಯಾಗಿರುವುದು ಹೆಚ್ಚು ಸಂಭವನೀಯ.

ರೇಣುಕಾದೇವಿಯ ಬಗೆಗೆ ಇಷ್ಟೆಲ್ಲ ಚರ್ಚೆ ಮಾಡಿದಮೇಲೂ ರೇಣುಕೆಯೇ ಎಲ್ಲಮ್ಮ ಎಂದು ಆಳವಾಗಿ ಬೇರೂರಿದ ನಂಬಿಕೆಗೆ ಇರುವ ಪ್ರಬಲ ಕಾರಣವೊಂದನ್ನು

ಸ್ಪಷ್ಟಪಡಿಸಬೇಕು. ಶಿಷ್ಟಪದದಿಂದ ಬಂದ 'ರೇಣುಕೆಯೋ ಎಲ್ಲಮ್ಮ' ಎನ್ನುವ ಮಾತನ್ನು ಜನಪದರು ಸ್ವೀಕರಿಸಿ ಎರಡೂ ಹೆಸರನ್ನು ಸಮೀಕರಿಸಿ ಸ್ಥಿರೀಕರಿಸಿರುವುದು ಮತ್ತು ಸ್ಥಳೀಯ 'ದೇವತಾಸ್ವರೂಪ' ಹೊಂದಿದ 'ಎಲ್ಲಮ್ಮ' ಎನ್ನುವ ವ್ಯಕ್ತಿಯ –ಜೀವನದ ಕೆಲವು ಘಟನೆಗಳಲ್ಲಿ ಇದ್ದಿರಬಹುದಾದ ಸಾಮ್ಯಗಳನ್ನು ಪ್ರಶ್ನಾತೀತ ವಾಗಿ ಒಪ್ಪಿಕೊಂಡು ಹಾಡುತ್ತ ಬಂದಿರುವುದು. ಜನಪದ ಹಾಡುಗಳ ಕಥಾನಕಗಳನ್ನು ವಿವೇಚನೆಗೆ ಎತ್ತಿಕೊಳ್ಳುವ ಮೊದಲು ಎಲ್ಲಮ್ಮನ ಜೀವನದಲ್ಲಿ ತೊಡಗಿಕೊಂಡಿರುವ ಕೆಲವು ಐತಿಹಾಸಿಕ ಸಂಗತಿಗಳ ವಿಶ್ಲೇಷಣೆ ಮಾಡುವುದು ಅಗತ್ಯ.

ಐತಿಹಾಸಿಕ ಸಂಗತಿಗಳ ವಿವೇಚನೆ

ಕಾರ್ತವೀರ್ಯ : ಕುಂತಲದೇಶದ ಒಂದು ಭಾಗವಾಗಿದ್ದ ಕುಹುಂಡಿ 3,000 ಪ್ರಾಂತವನ್ನು ಸೌಂದತ್ತಿಯ ರಟ್ಟರು ಸುಮಾರು ಮುನ್ನೂರು ವರ್ಷ (ಕ್ರಿ.ಶ. 930 ರಿಂದ ಕ್ರಿ.ಶ. 1230ರ ವರೆಗೆ) ಆಳಿದರು.[11] ಈ ಆಳರಸರಲ್ಲಿ ನಾಲ್ಕು ಜನರ ಹೆಸರು 'ಕಾರ್ತವೀರ್ಯ' ಎಂದಿದೆ. ಕ್ರಿ.ಶ. 960ರಲ್ಲಿ ರಾಷ್ಟ್ರಕೂಟ ತೈಲನ ಸಾಮಂತ ನಾಗಿದ್ದ ಮೊದಲನೆಯ ಕಾರ್ತವೀರ್ಯ ; ಕ್ರಿ.ಶ. 1087ರಲ್ಲಿ ವಿಕ್ರಮನ ಸಾಮಂತ ನಾಗಿದ್ದ ಎರಡನೆಯ ಕಾರ್ತವೀರ್ಯ ; ಕ್ರಿ.ಶ. 1170ರ ಅವಧಿಯಲ್ಲಿ ಕಲಚುರ್ಯರ ಸೋವಿದೇವನ ಸಾಮಂತನಾಗಿದ್ದ ಮೂರನೆಯ ಕಾರ್ತವೀರ್ಯ ಮತ್ತು 'ಪರಮಾಧಿ ಕಾರವುಳ್ಳ ಸ್ವತಂತ್ರ' ಸಾಮ್ರಾಟನಾಗಿ ಕ್ರಿ.ಶ. 1204ರಲ್ಲಿ ಆಳಿದ ನಾಲ್ಕನೆಯ ಕಾರ್ತವೀರ್ಯ. ಈ ನಾಲ್ವರಲ್ಲಿ ಎಲ್ಲಮ್ಮನ ಸ್ಥಳಪುರಾಣಗಳಲ್ಲಿ ತೊಡಗಿಕೊಂಡವನು ಕ್ರಿ.ಶ. 960ರಲ್ಲಿ ಆಳಿದ ಮೊದಲನೆಯ ಕಾರ್ತವೀರ್ಯನೆಂದೇ ತೋರುತ್ತದೆ. 'ಪುರಾಣದ ಕಥೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸತ್ಯದ ಕಣಗಳನ್ನು ಕಾಣ ಬಹುದಾದರೂ ಇತಿಹಾಸದ ರಚನೆಯಲ್ಲಾಗಲಿ, ವ್ಯಾಖ್ಯಾನದಲ್ಲಾಗಲಿ ಅವು ಸಂಪೂರ್ಣ ವಿಶ್ವಾಸಾರ್ಹವಾಗಲಾರವು'[12] ಎನ್ನುವ ಅಭಿಪ್ರಾಯ ಗಮನಾರ್ಹ. ವೈದಿಕ ಪುರಾಣದ ಕಾರ್ತವೀರ್ಯಾರ್ಜುನ, ಜೈನಪುರಾಣದಲ್ಲಿ 'ಕೃತವೀರ್ಯ' ಅಥವಾ ಕಾರ್ತವೀರ್ಯನಾಗಿ ಸೇರಿಕೊಂಡಿರುವುದು ಸ್ಪಷ್ಟವಿದೆ. ಮೂಲ ಜಮದಗ್ನಿ ಬ್ರಾಹ್ಮಣ ; ಜೈನ ಪುರಾಣದ ಜಮದಗ್ನಿ ಕ್ಷತ್ರಿಯ ; ಮಗ ಪರಶುರಾಮನೂ ಕ್ಷತ್ರಿಯ. ವೈದಿಕ ಪುರಾಣದಲ್ಲಿ ಕಾಮಧೇನುವನ್ನು ಎಳೆದೊಯ್ದಾತ ಸಹಸ್ರಾರ್ಜುನ ನೆಂಬ ಕಾರ್ತವೀರ್ಯ : 'ದತ್ತಾತ್ರೇಯ ಪ್ರಸಾದನ ರಾಜಾ ಬಾಹು ಸಹಸ್ರವಾನ್'.

ಇದರ ಐತಿಹಾಸಿಕತೆಯನ್ನು ಚರ್ಚಿಸಿದ ನಾರಾಯಣಗೌಡ, ಎಲ್ಲಮ್ಮನನ್ನು ಕಾರ್ತವೀರ್ಯನ ಸಮೀಪದ ಬಂಧುವೆಂದು ಭಾವಿಸಿ ಈಕೆಯ ಮಗ ಯಾವುದೋ ಕಾರಣಕ್ಕಾಗಿ ರಟ್ಟರ ಕಾರ್ತವೀರ್ಯನೊಬ್ಬನನ್ನು ಬಗ್ಗು ಬಡಿದಿರಬೇಕು...ಜನತೆಗೆ

11 ಕರ್ನಾಟಕದ ಪರಂಪರೆ, ಸಂಪುಟ 1, ಪು. 363-65, 1971.

12 ಕರ್ನಾಟಕದ ಪರಂಪರೆ, ಸಂಪುಟ 1, ಪು. 111.

ಶಿಷ್ಟಪದ ಪುರಾಣದ ಕಾರ್ತವೀರ್ಯಾರ್ಜುನನನ್ನು ಕೊಂದ ಪರಶುರಾಮನನ್ನೇ ಕಂಡಂತಾಗಿರಬೇಕು' ಇತ್ಯಾದಿ ಊಹೆ, ಚರ್ಚೆ ಮಾಡಿ 'ರಟ್ಟರ ಕಾರ್ತವೀರ್ಯನ ಸಂಹಾರದ ಕಾರಣದಿಂದ ಎಲ್ಲಮ್ಮ ರೇಣುಕೆಯಾಗಿ, ಅವಳ ಮಗ ಪರಶುರಾಮನಾಗಿ, ಅವಳ ಗಂಡ ಜಮದಗ್ನಿಯಾಗಿ ಪರಿವರ್ತನೆ ಹೊಂದಬೇಕಾಯಿತು' ಎಂದು ಹೇಳುತ್ತಲೇ 'ಈ ಎಲ್ಲಾ ಕಾರಣಗಳಿಂದ ಎಲ್ಲಮ್ಮ ಶಿಷ್ಟ ಪುರಾಣಗಳ ರೇಣುಕೆಯಾಗಿರದೆ ಶುದ್ಧ ಜನಪದ ದೇವತೆಯಾಗಿದ್ದು ಶಿಷ್ಟ ಪ್ರಭಾವಕ್ಕೆ ಒಳಗಾದವಳೆಂದು ಹೇಳಬಹುದು' ಎನ್ನುತ್ತಾರೆ. ಎಲ್ಲಮ್ಮನ ಮಗ ರಾಮ ಕಾರ್ತವೀರ್ಯನೊಬ್ಬನನ್ನು ಕೊಂದುದಕ್ಕೆ ಐತಿಹಾಸಿಕ ಆಧಾರಗಳೇ ಇಲ್ಲದಿರುವುದರಿಂದ ಆ ಮಾತು ಊಹೆಯಲ್ಲಿಯೇ ಬಿದ್ದು ಹೋಗುತ್ತದೆ. ಇಷ್ಟೇ ಇತಿಹಾಸವೂ ಪುರಾಣದಂತೆ 'ಶುದ್ಧ ಜನಪದ ದೇವತೆ'ಯ ಕಥೆಯ ಮೇಲೆ ನುಗ್ಗಿ ಸಮೀಕೃತಗೊಂಡಿದೆ. ವೈದಿಕ ಪುರಾಣದ ಕಾರ್ತವೀರ್ಯಾರ್ಜುನ, ಜೈನ ಪುರಾಣದ ಕಾರ್ತವೀರ್ಯಾರ್ಜುನ ಮತ್ತು ಈ ಐತಿಹಾಸಿಕ ಕಾರ್ತವೀರ್ಯಾರ್ಜುನ ಇವರೆಲ್ಲರೂ ಭಿನ್ನ ಭಿನ್ನ ವ್ಯಕ್ತಿಗಳಾಗಿದ್ದು ಅವರಲ್ಲಿರುವ ನಾಮಸಾದೃಶ್ಯ ಕೇವಲ ಒಂದು ಆಕಸ್ಮಿಕ.[13]

ಆದುದರಿಂದ (ಎಲ್ಲಮ್ಮನಿಗೂ) ಎಲ್ಲಮ್ಮನ ಕಥೆಗೂ ಈ ಕಾರ್ತವೀರ್ಯಾರ್ಜುನರಿಗೂ ಏನೂ ಸಂಬಂಧವಿಲ್ಲ. ಇರುವುದಾದರೆ ಕೇವಲ ಪರಂಪರಾ ಸ್ವೀಕೃತಿ ಮಾತ್ರ.

ಸುವರ್ಣಾಕ್ಷಿ ದೇವತೀರ್ಥ :

ಮೊದಲನೆಯ ಕಾರ್ತವೀರ್ಯಾರ್ಜುನನ ಆಡಳಿತ ಕಕ್ಷೆಯಲ್ಲಿದ್ದ ಸೋಲ ಕ್ಷೇತ್ರದ 'ಸುವರ್ಣಾಕ್ಷಿದೇವತೀರ್ಥ' ಮತ್ತು ಪುರಾಣೋಕ್ತ 'ಸುವರ್ಣಾಕ್ಷಿಲಿಂಗ' ಕುತೂಹಲಕಾರಿಯಾಗಿವೆ. ಕ್ರಿ.ಶ. 980ರ ಸೊಗಲ 16ರಲ್ಲಿ 'ಸೋಲ' ಸೊಗಲ ಕ್ಷೇತ್ರದ ಉಲ್ಲೇಖ ಸೊಲಗ ಗ್ರಾಮದ ಶಾಸನದಲ್ಲಿ ದೊರೆಯುತ್ತದೆ. ಅಂಕೇಶ್ವರ ಇತ್ಯಾದಿ ದೇವಾಲಯಗಳು ಇತರತ್ರ ಉಲ್ಲೇಖಿತಗೊಂಡಿದ್ದು ಒಂದು ಕಡೆಯೂ ಎಲ್ಲಮ್ಮ 'ರೇಣುಕಾ' 'ಪದ್ಮಾವತಿ' ಹೆಸರಿನ ಯಾವುದೇ ದೇವಾಲಯದ ಉಲ್ಲೇಖ ಸಿಕ್ಕುವುದಿಲ್ಲ. ಸ್ಕಾಂದ ಪುರಾಣದಲ್ಲಿ 'ಸಿದ್ಧೇಶ್ವರ ಮಹಾಲಿಂಗ' ಉಕ್ತವಾಗಿದ್ದು, ಸುವರ್ಣಾಕ್ಷಿ ಹೆಸರಿನ ದೇವಾಲಯವೊಂದರ ಉಲ್ಲೇಖವೂ ಇದೆಯೆಂದು ಹೇಳಲಾಗಿದೆ.[14] ಸೊಗಲ

---

13 ಜೈನ ಕವಿಗಳಲ್ಲಿ ಕೆಲವರಾದರೂ ತಮ್ಮ ಧಾರ್ಮಿಕ ಹಿನ್ನೆಲೆಯಿಂದ ವೈದಿಕ ಅಥವಾ ಇತರ ಪರಂಪರೆಯ ಪುರಾಣ, ಕಾವ್ಯಗಳನ್ನು ರಚಿಸುವಾಗ ಮೂಲ ಸಂಗತಿಗಳನ್ನು ತಮ್ಮ ಉದ್ದೇಶಕ್ಕನುಗುಣವಾಗಿ ವ್ಯತ್ಯಸ್ತಗೊಳಿಸುವುದನ್ನು ಕಾಣುತ್ತೇವೆ. ಇಲ್ಲಿ ಪರಶುರಾಮನೇ ಕಾರ್ತವೀರ್ಯಾರ್ಜುನನಿಂದ ಹತನಾಗುವುದು ಈ ದೃಷ್ಟಿಯಿಂದಲೇ.

14. ......ಶ್ರೀ ಸೊಗಲ ಮುನಿಗಳು ತಮ್ಮಾಶ್ರಮ ಮಾಡಿಕೊಂಡಿರುವರು. ಆ ಪವಿತ್ರ ಸ್ಥಾನದಲ್ಲಿ ಸುವರ್ಣಾಕ್ಷಿಲಿಂಗ. ಶ್ರೀ ವೀರಭದ್ರ ದೇವಸ್ಥಾನಗಳಿದ್ದು...' ಶ್ರೀ ಸಿದ್ಧಾಂತಿ ಶಿವಬಸವಶಾಸ್ತ್ರಿ : ಶ್ರೀ ರೇಣುಕಾ ಮಹಾತ್ಮೆ, ಪು. 39.

ಗ್ರಾಮದ ಶಾಸನದಲ್ಲಿ 'ಸೂರ್ಯಗ್ರಹಣ ನಿಮಿತ್ತದೊಳ್ಮಸ್ನೆಯುಂ ಸೋಲ ಮೂವದಿಂಬರ್ಗಂ ಧನಗರ ಕಂಚಿಯಬ್ಬೆ ಸ್ಥಾನ ಭೂಮಿಯಂ ಕೊಟ್ಟು ಸುವರ್ಣಾಕ್ಷಿ ದೇವತೀರ್ಥದಲ್ ತಪಂಗೆಯ್ವ ತಪೋಧನರಾಹಾರದಾನಕ್ಕೆ ತ್ರಿಭುವನ ಪಂಡಿತರ ಕಾಲಂಕರ್ಚಿ ಬಿಟ್ಟ ಕಮ್ಮ (ಐನೂರು)' ಎಂದು ವಿವರಿಸಲಾಗಿದೆ.

ಇಲ್ಲಿಯ 'ಸೋಲ' ಸೊಗಲ. ಈ ಪ್ರದೇಶದ ಬೆಳವಾಡಿಯ ಧನಗರ ಕರಿಯಂ ಕೇತಿಮಯ್ಯನ ಹೆಂಡತಿ ಕಂಚಿಯಬ್ಬೆ ಸುವರ್ಣಾಕ್ಷಿ ದೇವತೀರ್ಥದಲ್ಲಿ ತಪಸ್ಸು ಮಾಡುತ್ತಿದ್ದ ಮೂವತ್ತು ತಪೋಧನರಿಗಾಗಿ ಭೂಮಿಯನ್ನು ದಾನ ಮಾಡಿರುವುದು ಸ್ಪಷ್ಟ. ಪೌರಾಣಿಕ ಕಾಲದ ಶೈವ ಹಿನ್ನೆಲೆಯ ಸುವರ್ಣಾಕ್ಷಿ ದೇವಾಲಯಕ್ಕೂ ಮತ್ತು ಈ ಶಾಸನದಲ್ಲಿ ಉಕ್ತವಾಗಿರುವ 'ಸುವರ್ಣಾಕ್ಷಿ ದೇವತೀರ್ಥ'ಕ್ಕೂ ಸಂಬಂಧ ಕಲ್ಪಿಸುವುದು ಸಾಧ್ಯವಾದೀತೇ? ಅಥವಾ ಈ ಪ್ರದೇಶದಲ್ಲಿ ಅಂದು ಇದ್ದ ಐತಿಹಾಸಿಕ 'ಸುವರ್ಣಾಕ್ಷಿ ದೇವತೀರ್ಥ'ವೇ ಇಂದಿನ ಎಲ್ಲಮ್ಮನ ಕ್ಷೇತ್ರವೇ ? ಸುವರ್ಣಾಕ್ಷಿ ದೇವ ತೀರ್ಥಕ್ಕೆ ದಾನ ಮಾಡಿರಬೇಕಾದರೆ ಅದೊಂದು ಪ್ರತಿಷ್ಠಿತ ಕ್ಷೇತ್ರವಾಗಿದ್ದುದು ಸ್ಪಷ್ಟ. ಆದರೆ 'ಸುವರ್ಣಾಕ್ಷಿ ದೇವತೀರ್ಥ' ಎನ್ನುವ ಹೆಸರಿನ ಬೇರೊಂದು ದೇವಾಲಯ ಇಲ್ಲ ಎಂದಾದರೆ ಆಗ ಶಾಸನೋಕ್ತ 'ಸುವರ್ಣಾಕ್ಷಿ ದೇವತೀರ್ಥ'ವೇ ಕಾಲಾನಂತರದಲ್ಲಿ ಎಲ್ಲಮ್ಮನ ದೇವಾಲಯವೆಂದು ಕರೆಯಲ್ಪಟ್ಟಿರುವುದು ಸಾಧ್ಯ.[15] ಒಂದು ವೇಳೆ ಇದು ಜೈನ ದೇವತೆಯ ಗುಡಿಯೇ ಆಗಿದ್ದಿದ್ದರೆ ರಟ್ಟರ ಕಾಲದ ಶಾಸನ ಗಳಲ್ಲಿ ಖಂಡಿತ ಅದು ಉಕ್ತವಾಗಬಹುದಿತ್ತು.

ಪ್ರಾದೇಶಿಕ–ಭೌಗೋಲಿಕ ತತ್ವದ ಹಿನ್ನೆಲೆಯಲ್ಲಿ ಪುರಾಣೋಕ್ತ ಕೆಲವು ಸಂಗತಿ ಗಳಿಗೂ ಶಾಸನೋಕ್ತ ತಪೋಧನರಿಗೂ ಒಂದು ಸಂಬಂಧ ಏರ್ಪಡುವಹಾಗೆ ಕಾಣು ತ್ತದೆ. ಸ್ಕಾಂದ ಪುರಾಣದ ಆವಂತ್ಯಖಂಡದಲ್ಲಿ (ಸ್ಕಾ.ಪು.ಆ.ಖಂ. 5, ಪು. 87) ಸಿದ್ಧೇಶ್ವರ ಮಹಾಲಿಂಗದ ಉಲ್ಲೇಖ ಬರುತ್ತದೆ. ಇಲ್ಲಿ ವಾಸವಾಗಿರುತ್ತಿದ್ದ ಕೆಲವು ಸಿದ್ಧರ ಸಾಧನೆಗಳ ವಿವರಗಳಲ್ಲಿ ಅಂಜನ ಘಟಿಕಾಸಿದ್ಧಿ, ಖಡ್ಗಸಿದ್ಧಿ, ಮಾಂತ್ರಿಕ ಪಾದುಕೆ, ಚಿಂತಾಮಣಿ ಇತ್ಯಾದಿಗಳು ಹೇಳಲ್ಪಟ್ಟಿವೆ. ಪುರಾಣೋಕ್ತ 'ಸಿದ್ಧೇಶ್ವರ ಮಹಾಲಿಂಗ'ವನ್ನು ನಾವು ಗುರುತಿಸುವುದು ಸಾಧ್ಯವಾಗದೆ ಹೋದರೂ ಶೈವ ಸಿದ್ಧರ ಸಾಧನಾ ಕ್ಷೇತ್ರವಾಗಿದ್ದ ಈ ಪ್ರದೇಶದಲ್ಲಿ ಒಂದು ಶಕ್ತಿದೇವತೆಯ

---

15. ಪಾ.ಭೀ. ದೇಸಾಯಿ, ಬೆಟಗೇರಿ ಕೃಷ್ಣಶರ್ಮ ಮುಂತಾದವರು ಊಹಿಸಿದಂತೆ ಈ ದೇವಾಲಯದಲ್ಲಿ 'ಯಕ್ಷಿ'ಯ ಶಿಲ್ಪವಿದ್ದು ಅದು ಒಂದು ಕಾಲಕ್ಕೆ ಜೈನದೇವತೆಯ ಗುಡಿಯಾಗಿರಬೇಕು ಇತ್ಯಾದಿಗೆ ಹೇಳಬಹುದಾದ ಒಂದು ಸಮಾಧಾನವೆಂದರೆ ಈ ಪ್ರದೇಶವನ್ನು 300 ವರ್ಷ ಆಳಿದ ರಟ್ಟ ದೊರೆಗಳ ಕಾಲಾವಧಿಯಲ್ಲಿ ಇಂಥ ಒಂದು ಶಿಲ್ಪವನ್ನು ಆ ಮೊದಲಿದ್ದ ದೇವಾಲಯದಲ್ಲಿ ಕೆತ್ತಿರಬೇಕು–ಕಡೆದಿರಬೇಕು ಎನ್ನುವುದು; ಅಷ್ಟೇ.

ದೇವಾಲಯವಿದ್ದು ಅದು ತಪೋಧನರ ಕೇಂದ್ರವಾಗಿದ್ದುದು ಅಸಂಭವವೇನಲ್ಲ. ಈ ದೃಷ್ಟಿಯಿಂದ ಶಾಸನೋಕ್ತ 'ಸುವರ್ಣಾಕ್ಷಿ ದೇವತೀರ್ಥ' ಒಂದು ಶಕ್ತಿದೇವತೆಯ ಕ್ಷೇತ್ರವಾಗಿತ್ತೆಂದು ಊಹಿಸಬಹುದಾಗಿದೆ. ಪಾರ್ವತಿಯ ಅಪರಾವತಾರವೆಂದು ಭಾವಿಸಲಾದ ಎಲ್ಲಮ್ಮ ದೇವತೆ ಈ ದೇವಾಲಯದ 'ಸುವರ್ಣಾಕ್ಷಿ' ದೇವತೆಯ ಜೊತೆ ಸಮೀಕರಣಗೊಂಡು ಕಾಲಾನಂತರದಲ್ಲಿ ವಿಳುಕೊಳ್ಳದ ಎಲ್ಲಮ್ಮನ ಕ್ಷೇತ್ರವಾಗಿ ನೆಲೆನಿಂತಂತೆ ತೋರುತ್ತದೆ.

ಎಲ್ಲಮ್ಮನ ಪೌರಾಣಿಕ ಕಥಾನಕದಲ್ಲಿ ತೊಡಗಿರುವ ಇನ್ನು ಕೆಲವು ಐತಿಹಾಸಿಕ ವ್ಯಕ್ತಿಗಳೆಂದರೆ : ಒರಂಗಲ್ಲಿನ ಪ್ರತಾಪರುದ್ರನೆಂದು ಭಾವಿಸಲಾದ ಒರಗಲ್ಲು ಪ್ರತಾಪ ರುದ್ರ, ಕಲ್ಯಾಣ ಮಾದರ ಚೆನ್ನಜ್ಜ ಮತ್ತು ಏಕನಾಥ ಜೋಗನಾಥ.

ಈ ಎಲ್ಲ ಸಂಗತಿಗಳು ಜನಪದ ಹಾಡುಗಳಲ್ಲಿ ಮಾತ್ರ ಬರುವುದರಿಂದ ಮೊದಲು ಅವುಗಳ ಬಿಡಿ ಬಿಡಿ ಘಟಕಗಳನ್ನು ಗುರುತಿಸಿ ಬಳಿಕ ಅವುಗಳ ವಿವೇಚನೆ ಮಾಡಲಾಗಿದೆ.

ಜನಪದ ಹಾಡುಗಳಲ್ಲಿ ಎಲ್ಲಮ್ಮನ ಕಥೆ

ಎಲ್ಲಮ್ಮನನ್ನು ಕುರಿತು ಜನಪದ ಹಾಡುಗಳಲ್ಲಿ ಬಿಡಿಬಿಡಿಯಾದ ಘಟನೆಗಳು ಮಾತ್ರ ದೊರಕುತ್ತವೆ. 'ಮಲೆಯಮಾದೇಶ್ವರ'ದಂತ ಜನಪದ ಸುದೀರ್ಘ ಕೃತಿ ಎಲ್ಲಮ್ಮನನ್ನು ಕುರಿತು ಇಂದಿಗೂ ದೊರಕಿಲ್ಲ. ಈಗ ದೊರಕುವ ಬಿಡಿ ಸಂಗತಿ ಗಳನ್ನು ಎಲ್ಲಮ್ಮನ ಜನಪದ ಪುರಾಣ ಎಂದು ಖಚಿತವಾಗಿ ಹೇಳಲು ಬರುವಂತಿಲ್ಲ. ಸವದತ್ತಿ ಪ್ರದೇಶದಿಂದ ಹಿಡಿದು ಕರ್ನಾಟಕದ ಅನೇಕ ಭಾಗಗಳವರೆಗೂ ಹಬ್ಬಿ ಕೊಂಡಿರುವ ಎಲ್ಲಮ್ಮ ದೇವತೆಯ ಬಗೆಗೆ ಹುಟ್ಟಿಕೊಂಡ ಹಾಡು ಕೇವಲ ಐತಿಹ್ಯಗಳ ಮಟ್ಟಕ್ಕೇ ನಿಲ್ಲುತ್ತಿದ್ದು ಆ ರೂಪದ ಹಾಡುಗಳು ಹತ್ತಾರು ಕಡೆ ಚೆದುರಿ ಹೋಗಿರು ವುದರಿಂದ ಇದು ಹೀಗೆ ಎಂದು ಹೇಳಲು ಬಾರದಷ್ಟು ಘಟನಾವಳಿಗಳು–ರಾಮಾಯಣ, ಮಹಾಭಾರತ, ಶಿವಪುರಾಣ ಇತ್ಯಾದಿ ಅನೇಕ ಶಿಷ್ಟಪದ ಕೃತಿಗಳ ವ್ಯಕ್ತಿಸಂಗತಿಗಳು– ಒಂದರೊಳಗೊಂದು ಹೆಣೆದುಕೊಂಡುಬಿಟ್ಟಿವೆ. ಅಲ್ಲದೆ ಜೋಗತಿ ಜೋಗಪ್ಪಗಳು ಒಂದು ರೀತಿಯಲ್ಲಿ ಅಲೆಮಾರಿಗಳಾಗಿದ್ದು, ಚೌಡಿಕೆಯ ವೃತ್ತಿಗಾಯಕರೂ ಇವರಲ್ಲಿ ಸೇರಿಕೊಂಡಿರುವುದರಿಂದ ಪರಂಪರಾನುಗತವಾಗಿ ಬಂದ ರೇಣುಕೆಯ ಕಥೆ ಅಥವಾ ಇಂಥ ಯಾವುದೇ ಪೌರಾಣಿಕ ಕಥೆ ವೃತ್ತಿಗಾಯಕರ ವಾದ್ಯವನ್ನೇರಿದಾಗ ಬೆಳೆಯುವ ರೀತಿ ತುಂಬ ಆಕರ್ಷಕವೇನೋ ನಿಜ. ಆದರೆ ಇಲ್ಲಿ ಗಮನಿಸುವ ಸಂಗತಿ 'ಕೆಲವು ಜನಪ್ರಿಯ ಆಶಯಗಳು ಹೇಗೆ ಅಪ್ರಜ್ಞಾಪೂರ್ವಕವಾಗಿ ಇಂಥ ಕಥಾ ಚೌಕಟ್ಟಿನಲ್ಲಿ ಸೇರಿಕೊಂಡು ಮುಖ್ಯ ಕಥೆಯೊಡನೆ ಸಾವಯವ ಸಂಬಂಧವನ್ನು ಸಾಧಿಸಿಕೊಳ್ಳು

ತ್ರವೆ'[16] ಎನ್ನುವುದು. ಆದುದರಿಂದ ಇಲ್ಲಿ ದೊರಕುವುದು ಪೌರಾಣಿಕ ಸ್ವರೂಪದ ಸಂಗತಿಗಳೇ ಹೊರತು ಒಂದು ಕ್ರಮೋಕ್ತ ಪುರಾಣ ಅಲ್ಲ.

ಸವದತ್ತಿ ಸುತ್ತಮುತ್ತಣ ಜೋಗತಿಯರ ಜನಪದ ಹಾಡುಗಳಲ್ಲಿ ಕಾಣುವ ಎಲ್ಲಮ್ಮನ ಪುರಾಣ ಸದೃಶ ಕಥೆ ಹೀಗಿವೆ:[17]

ಕಥೆ – ಅ :

ಶಕ್ತಿಯ ಅವತಾರವಾದ ಈಕೆ ಜಗದಂಬ ; ಮಾಯಕಾರ್ತಿ ; ಕರಿಯಲ್ಲ. ಕಾಶ್ಮೀರದ ರೇಣುಕರಾಜನ ಮಗಳು ರೇಣುಕೆ. ತಪಸ್ವಿ ಜಮದಗ್ನಿಯ ರೂಪ, ತಪಶ್ಶಕ್ತಿಗೆ ಮೆಚ್ಚಿ 'ಕರಿರೇಣುಕ' ಅವನನ್ನೇ ಮದುವೆಯಾಗುವುದಾಗಿ ಹಟ ಹಿಡಿಯುತ್ತಾಳೆ. ಇವಳ ಆಸೆಗೆ ಬಳಗದವರು ಒಪ್ಪಲಿಲ್ಲ. ಒಮ್ಮೆ ಸಮುದ್ರ ಸ್ನಾನದ ಸಮಯದಲ್ಲಿ ರೇಣುಕೆಯ ಮುಡಿ ಮೈಗಳ ಗಂಧ – ದವನ, ಪುನುಗು, ಮರುಗ ಎಲ್ಲ ಕೂಡಿಕೊಂಡು – ನೀರಲ್ಲಿ ತೇಲುತ್ತ ಜಳಕ ಮಾಡುತ್ತಿದ್ದ ಜಮದಗ್ನಿ ಯಲ್ಲಿಗೆ ತೇಲಿ ಬಂತು. ಜಮದಗ್ನಿಯ ಮೈ ಬೆವರು ರೇಣುಕೆಗೆ ತಗುಲಿತು. ಅಂತೂ ಇಬ್ಬರೂ ಕೂಡಿಕೊಂಡರು. ರೇಣುಕಾ ಗರ್ಭವತಿ. ಇವಳನ್ನು ಜಮದಗ್ನಿ ವ್ರತಕ್ಕೆ ಭಂಗ ತಂದಳೆಂದು ಹೊರದೂಡಿದ. ತಿರಸ್ಕೃತಳಾದ ರೇಣುಕಾ ಗುಡ್ಡ ಕೊಳ್ಳಗಳಲ್ಲಿ ಅಲೆದಾಡುತ್ತ ಕಂಗೆಟ್ಟಾಗ ಜೋಗುಳ ಬಾವಿ ಸತ್ಯೆವ್ವ ಆಸರೆ ಕೊಟ್ಟಳು. ರೇಣುಕೆಗೆ ಹೆರಿಗೆಯಾಯಿತು. ಮಗ ಪರಶುರಾಮ ಒಳ್ಳೆ ತೇಜಸ್ವಿಯಾಗಿ ಬೆಳೆದ. ಪರಶುರಾಮನನ್ನು ಜನ 'ಹಾದರಕ್ಕೆ ಹುಟ್ಟಿದವ' ಎಂದು ಮೂದಲಿಸಿದರು. ಪರಶುರಾಮ ತನ್ನ ತಂದೆಯ ಹೆಸರು ತಿಳಿದುಕೊಳ್ಳಬಯಸುತ್ತಾನೆ. ರೇಣುಕಾ ತಾಯಿ – ಅದರ ಗುಟ್ಟು ಬಿಟ್ಟುಕೊಡುವುದಿಲ್ಲ. ಪರಶುರಾಮ ಸಿಟ್ಟಿಗೆದ್ದು ತಾಯಿಯ ಹಾಲೂ ಕುಡಿಯುವುದಿಲ್ಲ. ತಾಯಿಯ ನಡತೆಯನ್ನು ಶಂಕಿಸಿ 'ಹಾದರಗಿತ್ತಿಯ ಹಾಲು ಹಾದಿಗಿ ಚೆಲ್ಲವ್ವ' ಎನ್ನುತ್ತಾನೆ. ತಾಯಿ ಎಷ್ಟು ಪರಿಯಿಂದ 'ನಿನ್ನ ತಂದೆಯನ್ನು ಹುಲಿ ತಿಂದಿತು' ಇತ್ಯಾದಿ ಹೇಳಿದರೂ ಕೇಳದೆ ಅವಳನ್ನ 'ಅಗವಾಲಿ, ದಿಗವಾಲಿ' ಎಂದೆಲ್ಲ ಬಾಯಿಗೆ ಬಂದಂತೆ ಬಯ್ಯುತ್ತಾನೆ. ಎಳೆದು ಕಂಬಕ್ಕೆ ಕಟ್ಟುತ್ತಾನೆ. ತನ್ನ ಮಾತನ್ನು ನಂಬದ ಎಲ್ಲಮ್ಮ 'ಹೊಟ್ಟೆಲಿ ಹುಟ್ಟಿದ ವೈರಿ, ಬೆನ್ನಲ್ಲಿ ಬಿದ್ದಿದ ವೈರಿ, ನನಗೊಬ್ಬ ವೈರ್ಯವ್ವ ಮಗರಾಮ' ಎಂದು ದುಃಖಿಸುತ್ತ 'ತಾಯಿಯೋ ಪಾರ್ವತಿ, ತಂದೆಯೋ ಶಿವ. ನಾನು ನಿನ್ನನ್ನು ಹಡೆಯಲಿಕ್ಕ ಪಟ್ಟ ಪಾಡನ್ನು ತಿಳಿದುಕೊಳ್ಳಬೇಕಾದರೆ ಹಾದಿಯ ಮಾತಂಗಿ, ಜೋಗುಳಬಾವಿ ಸತ್ಯವ್ವ ಇವರನ್ನು ಕೇಳು' ಎಂದರೂ ನಂಬದ ರಾಮ ತಾಯಿಗೆ ಅಪಮಾನ ಮಾಡುತ್ತಾನೆ. ಅವನ ಕಣ್ಣು ಹೋಗುತ್ತವೆ ಎಲ್ಲಮ್ಮ

16. ಜೀ. ಶಂ. ಪ. : 'ಕರುಣೆ ಕಣ್ಣ ತೆರೆಯ' (ಚೌಡಿಕೆ ಸಂಪ್ರದಾಯದ ಕತೆಗಳು). 1974 (ಪು. 13.)

17. ಎಂ. ಎಸ್. ಸುಂಕಾಪುರ, ಜೋಗತಿ ಹಾಡು, 1977

ಶಿವನ ಹತ್ತಿರ ಹೋಗಿ ಶಿವನ ಕೃಪೆಯಿಂದ ಮತ್ತೆ ಮಗನಿಗೆ ಕಣ್ಣು ಬರುವಂತೆ ಮಾಡುತ್ತಾಳೆ. ರಾಮನಿಗೆ ತನ್ನ ತಪ್ಪಿನ ಅರಿವಾಗುತ್ತದೆ. 'ತಾಯಿ ಪಾದದ ಮ್ಯಾಲೆ ಬಿದ್ದ ರಾಮಣ್ಣ ತಾಯಿ ಪಾದದ ಮ್ಯಾಲ. ಬಿದ್ದು ತಾ ಅಳುತ್ತಾನೆ, ನಿನ್ನ ಮೈಮಾ ನನಗ ತಿಳಿದಿಲ್ಲ ಹಡದವ್ವಾ' ಎಂದು ತಾಯಿಯ ಜೊತೆ ಎಳುಕೊಳ್ಳದಲ್ಲಿ ಬಂದು ತಾಯಿಯ ಹೆಸರಿಂದ 'ಉಧೋ ಉಧೋ' ಎಂದು ಹಾಡಿ ಪೂಜಿಸುತ್ತಾನೆ.

ಕಥೆ – ಆ:

ಇನ್ನೊಂದು ಕಥೆಯಲ್ಲಿ ಕೆಲವು ಭಿನ್ನವಾದ ಸಂಗತಿಗಳಿವೆ. ಜಮದಗ್ನಿ ಎಲ್ಲಮ್ಮನನ್ನು ಮದುವೆಯಾದ ಕೆಲವು ದಿನಗಳ ಬಳಿಕ ಹೆಚ್ಚಿನ ತಪಸ್ಸಿದ್ಧಿಗಾಗಿ ಬಸಿರಿಯಾಗಿದ್ದ ಹೆಂಡತಿಯನ್ನು ಬಿಟ್ಟು ಒಂದು ಗುಪ್ತಸ್ಥಳಕ್ಕೆ ಹೋಗುತ್ತಾನೆ. ಎಲ್ಲಮ್ಮನಿಗೆ ಈಗ ಯಾರ ಆಸರೆಯೂ ಇಲ್ಲ. ಗಂಡನ ವಿಷಯ ಇತರರಿಗೆ ಹೇಳದಂತೆ ಆತನಿಂದ ಕಟ್ಟಪ್ಪಣೆ. ಜಮದಗ್ನಿಯ ಪ್ರತಿಮೆಯೊಂದನ್ನು ಮಾಡಿ ಅದನ್ನೇ ನಂಬಿ ಆರಾಧಿಸುತ್ತ ಕುಳಿತಳು. ಇವಳಿಗೆ ಈ ಸಂಕಟ ಕಾಲದಲ್ಲಿ ಆಶ್ರಯ ನೀಡಿದವಳು ಸತ್ಯವ್ವ. ಎಲ್ಲಮ್ಮನ ಮಗ ಪರಶುರಾಮ ದೊಡ್ಡವನಾದ ಬಳಿಕ ತನ್ನ ತಂದೆಯ ಬಗೆಗೆ ಪ್ರಶ್ನಿಸುತ್ತಾನೆ. ಅದಕ್ಕೆ ಎಲ್ಲಮ್ಮ ತನ್ನ ಗಂಡ ಸತ್ತುಹೋದನೆಂದೂ ಅಲ್ಲಿದ್ದ ವಿಗ್ರಹವೇ ಅದರ ಪ್ರತೀಕವೆಂದೂ ಹೇಳಿದಳು. ಅವನು ಸತ್ತಿರುವುದಾದರೆ ನೀನು ಬಳೆ ಇಟ್ಟುಕೊಳ್ಳಕೂಡದು ಇತ್ಯಾದಿ ವಿವರಿಸಿದ. ಅಂದು ಮಾರ್ಗಶಿರ ಶುದ್ಧ ಹೊಸ್ತಿಲ ಹುಣ್ಣಿವೆ ಅಂದೇ ಎಲ್ಲಮ್ಮ ಬಳೆ ತೆಗೆದುಹಾಕಿದಳು. ಅದು 'ರಂಡಿಹುಣ್ಣಿವಿ'. ಮುಂದೆ ಜಮದಗ್ನಿ ತಾನೇ ತಾನಾಗಿ ಎಲ್ಲಮ್ಮನ ಹತ್ತಿರ ಬಂದ. ಇದನ್ನು ಕೇಳಿದ ಅವಳ ಅಣ್ಣ ಗೊಡಚಿಯ ವೀರಣ್ಣ ತನ್ನ ತಂಗಿಗೆ ಉಡುಗೊರೆ ಕುಂಕುಮ ಬಳೆ ಕಳಿಸಿದ ಧರಿಸಿದ ಎಲ್ಲಮ್ಮ ಪುನಃ ಮುತ್ತೈದೆಯಾದಳು, ಅಂದು ಮಾಘ ಶುದ್ಧ ಭಾರತಹುಣ್ಣಿವಿ. ಅದು ಮುತ್ತೈದೆ ಹುಣ್ಣಿವಿ.

ಓರುಗಲ್ಲಿನ ಪ್ರತಾಪರುದ್ರ, ಬುಕ್ಕಾಪುರದ 'ಮಾದ್ಯಾ' ಉಗರಗೊಳ್ಳದ ಒಬ್ಬ ರೈತ, ಮಾಲಗಾರ ನಾಗಸೆಟ್ಟಿ ಮುಂತಾದ ವ್ಯಕ್ತಿಗಳ ಸುತ್ತ ಎಲ್ಲಮ್ಮನ ಪವಾಡಗಳ ನಿರೂಪಿತವಾಗಿರುವುದನ್ನು ಕೆಲವು ಜನಪದ ಹಾಡುಗಳಲ್ಲಿ ಕಾಣುತ್ತೇವೆ.

'ಕರುಣೆ ಕಣ್ಣತೆರೆಯ' ಮತ್ತು 'ಚೌಡಿಕೆ ಕಾವ್ಯ' ಎಂದು ಪ್ರಕಟವಾಗಿರುವ ಜನಪದ ಕಥನ ಗೀತೆಗಳು ಎಲ್ಲಮ್ಮನನ್ನು ಕುರಿತ ಇನ್ನು ಕೆಲವು ಭಿನ್ನ ಸಂಗತಿಗಳನ್ನು ಹೇಳುತ್ತವೆ [18]

---

18 ಜೀ.ಶಂ.ಪ , 1974 ; ನಂ. ನಾರಾಯಣಗೌಡ, 1974.

ಕಥೆ–೩

ಎಲ್ಲಮ್ಮ ಜಗಜ್ಜನನಿ. ಏಳು ಸಮುದ್ರದಾಚೆಯ ಕರಿಯ ಹುತ್ತದ
ಏಳ್ಕೋವೆಯೊಳಗಿಂದ ತಾನೇ ಮೂಡಿ ನಿಂತಳು. ಮೂರು ಗುಡ್ಡ, ನಡುವೆ
ಗಿರಿಜಾಮುನಿ ಅರಸನ ಅರಮನೆ. ಮಕ್ಕಳಿಲ್ಲದೆ ಕೊರಗು. ಎಲ್ಲಮ್ಮ ಇವನನ್ನು
ಪರಿಪರಿಯಾಗಿ ಪರೀಕ್ಷೆಗೆ ಒಡ್ಡಿ ಕಾಡಿಸಿ, ಮೂರು ದಿನ ಬೊಂಬೆಯಾಗುವುದು,
ಮುದ್ದಿಸಪೋದಾಗ ಏಳುಹೆಡೆ ಸರ್ಪವಾಗುವುದು, ಹುಡುಗಿಯಾಗಿ ಬಂದು ಆ
ಅರಸು ದಂಪತಿಗಳನ್ನು ಅರಮನೆಗೆ ಮರಳಿ ಕಳಿಸುವುದು, ಅರಸರ ಸಂಪತ್ತು ಸರ್ವ
ನಾಶವಾಗುವುದು, ಒಬ್ಬ ಶಿವಭಕ್ತ ಇವರಿಗೆ ನೀಡುವ ಆಸರೆ, ರಾಣಿಯ ನಿಷ್ಠೆ
ಸಂಕಷ್ಟಗಳಿಗೆ ಮರುಗುವುದು ಇತ್ಯಾದಿ—ಆವರಿಗೇ ಮಗಳಾಗಿ ಜನಿಸುತ್ತಾಳೆ.
ಅವಳೇ ಎಲ್ಲಮ್ಮ. ಅವಳು ಪ್ರಾಪ್ತವಯಸ್ಕಳಾದಳು. ಶೈವ ಪರಂಪರೆಯ
ಜಮದಗ್ನಿ, ಒಮ್ಮೆ ಹೊಳೆಯಲ್ಲಿ ಸ್ನಾನ ಮಾಡುವಾಗ ಇವಳ ನೀಳ್ಗೂದಲ-ಜಡೆ
ಕಂಡು ಮೋಹಗೊಂಡು ಅವಳನ್ನು ಮದುವೆಯಾಗಬಯಸುತ್ತಾನೆ. ಎಲ್ಲಮ್ಮ
ಕೆಲವು ಶರತ್ತು ಒಡ್ಡುತ್ತಾಳೆ : ಏಳು ಸಮುದ್ರ ದಾಟಿ ಇರುವ ಕರಿ ಹುತ್ತ ದಾಟಿ
ಇರುವ ಗಂಗೆಯ ನೀರನ್ನು ತರಬೇಕು–ಅದು ನೆರವೇರಿದಾಗ ಎಲ್ಲಮ್ಮ ಮದುವೆಗೆ
ಸಿದ್ಧಳಾದಳು. ಅಕ್ಕಿಕಾಳು ಹಾಕುವ ಕಾಲದಲ್ಲಿ ಎಲ್ಲಮ್ಮ ತನ್ನ ಎಡಗೈಯನ್ನು
ಜಮದಗ್ನಿಯ ಮಂಡೆಯ ಮೇಲೆ ಇಡುವಳು. ಜಮದಗ್ನಿ ಏಳು ವರುಷದ
ಬಾಲಕನಾಗಿ ಬಿಡುತ್ತಾನೆ. ಎಲ್ಲಮ್ಮ ಮಾಯಕಾರ್ತಿ. ಸಿಟ್ಟಿಗೆದ್ದ ಜಮದಗ್ನಿ
ಯನ್ನು ಎಲ್ಲಮ್ಮನ ತಂದೆ ಗಿರಿರಾಜಮುನಿ ಸಮಾಧಾನ ಪಡಿಸುತ್ತಾನೆ.
ವನಿಕೆಯಿಂದ ನಾರು ಹಿಂಜಿ ತೆಗೆಯುವುದು, ಕಾಯ್ದ ಉಕ್ಕಿನ ಹಂಚಿನ ಮೇಲೆ ತಲೆ
ಊರಿ ನಿಲ್ಲುವುದು–ಅದರಿಂದ ಎಲ್ಲಮ್ಮನ ಮಲ್ಲಿಗೆ ಹೂ ಕೂಡ ಬಾಡುವುದಿಲ್ಲ ; ಕೆಂಡ
ಹೊಂಡದಲ್ಲಿ ನಡೆಯುವುದು–ಇತ್ಯಾದಿ. ಎಲ್ಲಮ್ಮ ಬೂದಿಯಾದಾಗ ಅದನ್ನು
ಹೊಳೆಯಲ್ಲಿ ಬಿಡಲು ಹೋದಾಗ 'ಏಕನಾತವೊ ಜೋಗಿನಾತವೊ' ಧ್ವನಿ ಕೇಳುತ್ತದೆ.
ಜಮದಗ್ನಿ ನೋಡು ನೋಡುತ್ತಿರುವಂತೆ ಎಲ್ಲಮ್ಮ ಗಂಗೆಯಾಗಿ ಜಮದಗ್ನಿಯ
ಜಡೆಯ ಮೂಲಕ ಹರಿದು ಅವನ ಪಾದದ ಮೇಲೆ ಮೂರು ಹನಿಯಾಗಿ ಬೀಳು
ತ್ತಾಳೆ. ಎಲ್ಲಮ್ಮ ಸೋಲುವುದಿಲ್ಲ. ಎಲ್ಲಮ್ಮನ 'ಹತ್ತು ಕೈ, ಹದಿನಾರು ಭುಜ,
ಭುಗಿಲೆನ್ನುವ ಉರಿಗಣ್ಣು, ಕೈಯೆಲ್ಲ ಉರಿನಾಲಗೆ ಕೆನ್ನಾಲಿಗೆ ಚಾಚಿ'–ರುದ್ರ ಭಯಂ
ಕರ ರೂಪ ಕಂಡ ಜಮದಗ್ನಿ ಅವಳಿಗೆ ಶರಣಾಗತನಾಗಿ ಬೇಕಾದ ಹಾಗೆ ಇರಲು ಹೇಳು
ತ್ತಾನೆ. ತಪಸ್ಸು ಮಾಡಲು ಹೋಗುತ್ತಾನೆ. ಕೆಲ ಕಾಲದ ನಂತರ ಮತ್ತೆ ಬಂದು
ದಾಂಪತ್ಯ ಜೀವನ ನಡೆಸುತ್ತಾನೆ.

ಒಮ್ಮೆ ಎಲ್ಲಮ್ಮನ ಅಣ್ಣನಾದ ಕಾರ್ತವೀರ್ಯಾರ್ಜುನ ಆಶ್ರಮಕ್ಕೆ ಬಂದಾಗ
ಆತನ ಪರಿವಾರಕ್ಕೆ ದೊರಕಿದ ಅದ್ಭುತ ಆತಿಥ್ಯಕ್ಕೆ ಕಾರಣವಾದ ಕಾಮಧೇನುವಿಗಾಗಿ

ಭಾವನಾದ ಜಮದಗ್ನಿಯನ್ನು ಕಾಡುತ್ತಾನೆ. ತಂಗಿ ಎಲ್ಲಮ್ಮನನ್ನೂ ಪೀಡಿಸುತ್ತಾನೆ. ಕೊನೆಗೆ ಕಾರ್ತವೀರ್ಯ ಜಮದಗ್ನಿಯನ್ನು ಕೊಂದರೂ ಕಾಮಧೇನು ಅವನಿಗೆ ದಕ್ಕುವುದಿಲ್ಲ; ಮಾಯವಾಗಿ ಬಿಡುತ್ತದೆ. ಕೈಲಾಸದಲ್ಲಿ ಶಿವನ ಕರುಣೆಯಿಂದ ಜಮದಗ್ನಿ ನಂಜುಂಡನ ಅವತಾರವಾಗಿ ನಂಜನಗೂಡಿನಲ್ಲಿ ಮೂಡುತ್ತಾನೆ.

ಭೂಮಿಯಲ್ಲಿರುವ ಎಲ್ಲಮ್ಮ ಈಗ ಬಸುರಿ-ವಿಧವೆ. ದಿಕ್ಕಿಲ್ಲದ ತಂಗಿಯ ಆರೈಕೆಗೆ ಸೂಲಗಿತ್ತಿ ವೇಷದ ಗೂಢಚಾರನೊಬ್ಬನನ್ನು ಕಾರ್ತವೀರ್ಯ-ಗಂಡು ಹುಟ್ಟಿದರೆ ತಕ್ಷಣ ಮುಗಿಸಿ ಬಿಡುವ ಸೂಚನೆಯೊಡನೆ-ಕಳಿಸುತ್ತಾನೆ. ತಾಯಿ ಹೊಟ್ಟೆಯಲ್ಲಿದ್ದ ಕೂಸಿಗೆ ಇದು ಗೊತ್ತಾಗುತ್ತದೆ. ಪರಶುವಿನ ಜೊತೆಗೇ ಹುಟ್ಟಿದ ಪರಶುರಾಮನೇ 'ಸೂಲಗಿತ್ತಿಯನ್ನು' ಕೊಂದುಹಾಕುತ್ತಾನೆ. ದೊಡ್ಡವನಾದ ರಾಮ, ತನ್ನ ತಂದೆಯ ಹೆಸರು ತಿಳಿಯಬಯಸುತ್ತಾನೆ. ತನ್ನ ಅಣ್ಣನ ವಂಶವೇ ನಿರ್ಮೂಲವಾದೀತೆನ್ನುವ ಭಯದಿಂದ ಎಲ್ಲಮ್ಮ ಹೇಳುವುದಿಲ್ಲ. ಪರಶುರಾಮ ಕೋಪದಿಂದ ತಾಯಿಯ ಕತ್ತನ್ನೇ ಕತ್ತರಿಸುತ್ತಾನೆ. ಕಡಿದಂತೆಲ್ಲ ಎಲ್ಲಮ್ಮನ ರುಂಡ ಬೆಳೆ ಬೆಳೆಯುತ್ತ ಹೋಗುತ್ತದೆ. ಪರಶುರಾಮ ಸೋತು ನಿಲ್ಲುತ್ತಾನೆ. ಆಗ ರೇಣುಕಾ 'ಅಪ್ಪಾ ನನ್ನನ್ನ ಸಿಟ್ನಿಂದ ಕಡಿಯಪ್ಪ' ಅಂದಾಗ ಪರಶುರಾಮ 'ಈ ಭೂಮಿ ಮೇಲೆ ಬಿದ್ದಂತ ಶಿರವು ವೇಣೀ ದೇವ್ತೆಗಳಾದ ಮಾರಮ್ಮ ಮಸಿಯಮ್ಮ ಅಂತರಗಟ್ಟಮ್ಮ ಚಿಕ್ಕಮ್ಮ ದೊಡ್ಡಮ್ಮ ಇಂಥ ಹೆಣ್ ದೇವ್ತೆಗಳಾದೊ' ಅನ್ನುತ್ತಾನೆ. ಇಲ್ಲಿಂದ ಈ ಕಥೆ ಶುದ್ಧ ಜನಪದ ಕಥೆಯ ರೀತಿಯಲ್ಲೇ ಮುಂದುವರೆಯುತ್ತದೆ.

'ನನ್ನ ಗಂಡನ ಹೆಸರು ಹೇಳ್ತೀನಿ' ಆದರೆ ಅವರ ವಂಶದಲ್ಲಿ ಕೊನೇ ಪಕ್ಷ ಸೂಳೆಗೊಬ್ರನಾದ್ರೂ ಬುಡ್ತೀನಿ ಅಂದ್ರೆ ಮಾತ್ರಾ ಹೇಳ್ತೀನಿ.[19] ಎಂದ ರೇಣುಕಾಳ ಮಾತಿಗೆ ಪರಶುರಾಮ ಒಪ್ಪಿದಾಗ ಎಲ್ಲ ವಿವರ ಹೇಳುತ್ತಾಳೆ. 'ಅಮ್ಮ ಇಷ್ಟ ಮಾತೇಳದ್ಕೆ ಇಷ್ಟ್ ಸುಳ್ಳೇಳಿದೆಯಮ್ಮ' 'ನಮ್ಮ ತಂದೆ ಕೊಲ್ಸಿದ ಮಾಯ್ಯಾಗ್ತೆ ನೀನು' ಎಂದು ಸಾಣೇಕಾರ ಪುಟ್ಟಣ್ಣನ ಹತ್ತಿರ ಹೋಗುತ್ತಾನೆ. ಸಾಣೆಗೆ ಬೇಕಾದ ನೀರು ಅದಕ್ಕೂ ಹಲವಾರು ಶರತ್ತು ಪೂರೈಸಿ ಕಾರ್ತವೀರ್ಯನನ್ನು ಕೊಲ್ಲಲು ಬರುತ್ತಾನೆ. ಅವನ ಒಂದು ಹನಿ ರಕ್ತ ನೆಲಕ್ಕೆ ಬಿದ್ದರೆ ಏಳ್ಕೋಟಿ ದಂಡು ಬೆಳೆಯುತ್ತದೆ. ಅಂತೂ ರಾಮುಗಂಡುಗೊಡ್ಲಿ, ಕಾರ್ತ್ವೀರ್ಯನ ಶಿರಾ ತಗೀತು. ಅದನ್ನೇ ಕಂಚಿನ ಚೌಡಿಕೆ ಮಾಡ್ದ. ಪಚ್ಚೀ ಕಿತ್ತು ಮುಚ್ಚಳ ಮಾಡ್ದ. ಕಳ್ಳ ಕಿತ್ತು ತಂತಿ ಮಾಡ್ದ. ತೋಳ್ನ ದಂಡ್ಗೆ ಮಾಡ್ದ. ಕಿರುಬೆರಳನ್ನ ಕಿತ್ತಿ ನುಡಿಸೋ ಕಡ್ಡಿ ಮಾಡ್ದ. ಮತ್ತೆ ತಾಯಿ ಹತ್ತಿರ ಬರುತ್ತಾನೆ. ಅವಳ ಅಣ್ಣನ ಕತ್ತು ಹುಗಿದ

---

19. ಸಂ. ನಾರಾಯಣಗೌಡ : ಚೌಡಿಕೆ ಕಾವ್ಯಗಳು, ಪು. 82.

ಜಾಗದಲ್ಲಿ ಜಳಕ ಮಾಡುವಂತೆ ಅವಳನ್ನು ಒತ್ತಾಯಿಸುತ್ತಾನೆ. ಎಲ್ಲಮ್ಮ ಕಲ್ಯಾಣ ಪಟ್ಟಣಕ್ಕೆ ಬಂದು ಮಾದಿಗರ ಚೆನ್ನಪ್ಪಜ್ಜನ ಬಾವಿಯೊಳಗೆ ಅಡಗುತ್ತಾಳೆ. ರಾಮು ಅವಳ ಬೆನ್ನು ಹತ್ತಿ ಅಲ್ಲಿಗೂ ಬಂದು ಅಡಗಿದ ಜಾಗದಿಂದ ಅವಳನ್ನೆಳೆದು ಅವಳನ್ನು ಕೊಲ್ಲುತ್ತಾನೆ. ಕೊನೆಗೆ 'ತಾಯೀನ ಕೊಂದ ಪಾಪಿ ನಾನು' ಎಂದು ಪಶ್ಚಾತ್ತಾಪ ದಿಂದ ಅವಳ ರುಂಡವನ್ನು 'ಅಪರಂಜಿ ವಲ್ಲಿಯಲ್ಲಿ ಮುಚ್ಕೊಂಡು' ವಿಜಯನಗರಕ್ಕೆ ಬಂದು ಎಲ್ಲ ಬಗೆಯ ಪುಷ್ಪ ತಂದು ಸಿರದ ಮೇಲೆ ವರಿಸಿ, ತನ್ನಲ್ಲಿದ್ದ ಎಲ್ಲ ಬಾಣ ಗಳಿಗೂ ತನ್ನನ್ನು ಕೊಲ್ಲುವಂತೆ ಕೇಳಿಕೊಳ್ಳುತ್ತಾನೆ. ಇನ್ನೇನು ರಾಮು ಬಾಣ ಅವನನ್ನು ಹೊಡೀಬೇಕು—ಆ ಕ್ಷಣದಲ್ಲಿ ಮತ್ತೆ ಪ್ರತ್ಯಕ್ಷಳಾಗಿ ಮಗನನ್ನು ತಬ್ಬಿ ಕೊಂಡು 'ಯಪ್ಪ, ಹಾಲನ್ನೇ ಕುಡಿಬಾರೊ ನನ್ನೀಮಗನೆ ; ಜೋಗವನಾಡಿ ಬಂದೇನೋ ; ಹೀಗೆ ತಾಯಿ ಮಗಾ ಒಂದಾಗುತ್ತಾರೆ. ಎಲ್ಲಮ್ಮ 'ಉಚ್ಚಂಗಿ ಬೆಟ್ಟದಲ್ಲಿ' ನಿಂತಾಳೆ. ಇಲ್ಲಿಗೆ ಮಂಗಳ.

ಇನ್ನು ಒರುಗಲ್ಲಿನ ಪ್ರತಾಪರುದ್ರನೆಂದು ಹೇಳಲಾದ ವ್ಯಕ್ತಿಯೊಬ್ಬನೂ ರೇಣುಕೆಯ ಈ ಕಥೆಯಲ್ಲಿ ತೊಡಗಿಕೊಂಡಿದ್ದಾನೆ. 'ರುದ್ರ' ಹುಟ್ಟುವುದು ಒಬ್ಬ ಮುದುಕಿಗೆ – ಶಿವನ ಕರುಣೆಯಿಂದ ದೊರೆತ ಕುಂಬಳ ಬೀಜ – ಕುಂಬಳಕಾಯಿ ಯಲ್ಲಿ. ಈ ರುದ್ರ ಶೈವ. ಇವನಿಗೆ ಎಲ್ಲ ವಸ್ತುಗಳಿಗೂ – ಹಿಟ್ಟಿನ ಕೋಲು ಸೊಪ್ಪು, ಹಸೇಕಲ್ಲು, ಗುಂಡ್ಕಲ್ಲು, ಗುಂಗೀಹುಳ, ನೊಣ – ಲಿಂಗ ಕಟ್ಟುವ ಆತುರ. ಇವ ಎಲ್ಲಮ್ಮನ ಚೆಲುವಿಗೆ ಮನಸೋತು ಕಳಿಸಿದ ಪತ್ರ - ಅದಕ್ಕೆ ಅವನನ್ನು ಸಂಹರಿಸಲು ಹೊರಟ ಎಲ್ಲಮ್ಮ – ಜೊತೆಯಾಗಿ ತಂಗಿ ಮಾತಂಗಿ, ಹೇಡ ಮಾರುವ ದಾನಾರಿಗೌಡ ಮಾತಂಗಿಗೆ ಮನ ಸೋಲುವುದು, ಲಿಂಗಧಾರಿಯಲ್ಲದ ಈಕೆಯನ್ನು ಹೊಡೆಸುವುದು, ಎಲ್ಲಮ್ಮ ಅವನನ್ನು ಕಾಡುವುದು, ಅವನ ತಮ್ಮ 'ಬಡೆಲ್ಲಿಗೌಡ'. ಬಡ ಎಲ್ಲಗೌಡ ಮಾತಂಗಿಯ ಸತ್ಕಾರ ಮಾಡುವುದು, ಅವನಿಗೆ ಸಿರಿಸಂಪತ್ತಿನ ಸುರಿಮಳೆ.

'ರುದ್ರ'ನ ನಾಡು ಹೊಕ್ಕ ಎಲ್ಲಮ್ಮ ಅವನು ಸ್ಥಾಪಿಸಿದ ಎಲ್ಲ ಲಿಂಗಗಳನ್ನು ಕಿತ್ತುಹಾಕಿಸಿ ರುದ್ರನಿಗೆ ಅನೇಕ ಬಗೆಯ ಹುಣ್ಣು - ನಾಲಗೆ ನತ್ತುರಿ ಹುಣ್ಣು, ಕಂಕ್ಳಗೆ ಸಂಕ್ದಾಳ ಹುಣ್ಣು, ಎದೆಗೆ ಎದುಗಾಸಿ, ಪಕ್ಕೆ ಪಚ್ಚಿಹುಣ್ಣು ಉಂಟುಮಾಡು ತ್ತಾಳೆ. ಬಾಧೆ ತಾಳದ ರುದ್ರ ಮುದುಕಿಯ ರೂಪದಲ್ಲಿದ್ದ ಎಲ್ಲಮ್ಮನನ್ನು ಕಳಿಸಿ ಆಕೆಯ ಆಜ್ಞೆಗೆ ತಲೆಬಾಗಿ ಲಿಂಗಗಳನ್ನು ಕಿತ್ತಿಹಾಕಿ ತಲೆಯಮೇಲೆ ಸಿಂದಿಗಡಿಗೆ, ಬಾಯಲ್ಲಿ ಮಾಂಸ ಕಚ್ಚಿ ಓರ್ಗಲ್ಲಿನ ಬೀದಿ ಮೆರವಣಿಗೆಯಲ್ಲಿ ಬರುತ್ತಾನೆ. ಒಂದು ಕಲ್ಬಾವಿ ಹತ್ರ ಬಂದಾಗ ರುದ್ರ (ತಾನು ಸ್ಥಾಪಿಸಿದ) 'ನೂರೊಂದು ಲಿಂಗಾಗಳ್ನ' 'ಬಾವೀ ಒಳೀಕೆ ಕಿತ್ ಕಿತ್ತು ಎಸ್ದು, ಅಮ್ಮಯ್ಯ ಮಾತಾ ನಾ ನೀವತ್ಲಿಂದ ನಿನ್ ಸೇವೆ ಮಾಡ್ತೀನಮ್ಮ' ನಿನ್ನ ಮಹಿಮೆ ಗೊತ್ತಿರಲಿಲ್ಲ. ತಪ್ಪು ಮಾಡಿಬಿಟ್ಟೆ ಎಂದು

ಪರಿಪರಿಯಾಗಿ ಪಶ್ಚಾತ್ತಾಪದಿಂದ ಬೇಡಿಕೊಂಡಾಗ ಅವನನ್ನು ಕರೆದುಕೊಂಡು ಉಚ್ಚಂಗಿ ಬೆಟ್ಟಕ್ಕೆ ಬಂದು, 'ರುದ್ರನನ್ನು ಏಳು ಸುತ್ತು ಸುತ್ತಿಸಿ, ವರ್ಷಕ್ಕೊಂದು ಸಲ ಬಂದು ಪೂಜೆ ಸಲ್ಲಿಸಿ ಹೋಗು ಅಂದಳು. ರುದ್ರಾ 'ಭಾಷೆ ಕೊಟ್ಟ.' 'ರೇಣ್ಕಾದೇವಿ ಭಾಷೆ ತಕ್ಕೊಂಡು ಉಚ್ಚಂಗಿ ಬೆಟ್ದ್‌ವ್ಯಾಲಿ ನೆಲೆಗೊಂಡ್ಲು'. ಇದರ ಜೊತೆಗೆ ಅನೇಕ ಪವಾಡಗಳು ಬಿಡಿಬಿಡಿಯಾಗಿ ದೊರೆಯುತ್ತಿದ್ದು ಅವು ಎಲ್ಲಮ್ಮನ ಕಥೆಯನ್ನು ಸಂಪೂರ್ಣವಾಗಿ ಹೇಳುವಲ್ಲಿ ಸಫಲವಾಗಿಲ್ಲ. ಏಕೆಂದರೆ ಈ ಪವಾಡಗಳು ಎಲ್ಲಮ್ಮನ ದೈವೀಶಕ್ತಿಯ ನಿದರ್ಶನಗಳಾಗಿ ಮೂಡಿಬಂದಿರುವುದು ಮತ್ತು ಸ್ಥಳೀಯ ಜನಪದರು ತಮಗೆ ತಿಳಿದ ಸಂಗತಿಗಳ ಸುತ್ತ ತಲೆ ತಲಾಂತರ ಹೆಣೆದುಕೊಂಡ 'ಮಹಿಮೆ'ಗಳಾಗಿ ಬೆಳೆದು ಬಂದಿರುವುದು. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಗಮನಿಸಬಹುದು.

ಕಥೆ – ಈ :

ಉಗುರಗೊಳ್ಳದ ಶ್ರೀಮಂತ ಲಿಂಗವಂತ ರೈತ. ಆತನ ಚೆಲುವೆ ಮಗಳು ಎಲ್ಲವ್ವ. ಅವಳು ವಯಸ್ಸಿಗೆ ಬಂದಾಗ ತೊನ್ನುರೋಗ ಕಾಣಿಸಿಕೊಂಡಿತು. ಯಾರೂ ಮದುವೆಯಾಗಲು ಒಪ್ಪಲಿಲ್ಲ. ತಂದೆಗೆ ತುಂಬ ದುಃಖ. ಉಗುರುಗೊಳ್ಳದ ಹತ್ತಿರವೇ ಇರುವ ಗುಡ್ಡಗಳಲ್ಲಿರುವ ಏಕಯ್ಯ ಜೋಗಯ್ಯ ಸಿದ್ಧಪುರುಷರು. ಜೋಗಿಗಳು ವಾಸವಾಗಿದ್ದ ಕೊಳ್ಳದ ಬಾವಿ – ಜೋಗಿ ಕೊಳ್ಳದ ಬಾವಿ. ಅಲ್ಲಿಯೇ ಇರುವವರು. ಶ್ರೀಮಂತ ರೈತನ ಕನಸಿನಲ್ಲಿ ಕಾಣಿಸಿಕೊಂಡ ಈ ಸಿದ್ಧರು ತಾವು ಹಾಕಿಕೊಂಡಿರುವ ಕಿಚ್ಚಿನ ಕುಂಡದ ಬೂದಿ ಮೈಗೆ ಹಚ್ಚಿಕೊಂಡರೆ ಅವಳ ರೋಗ ಮಾಯವಾಗುವುದೆಂದು ಹೇಳಿದರು. ತಂದೆ ಮಗಳನ್ನು ಕಳಿಸಿಕೊಟ್ಟ. ಸಿದ್ಧರನ್ನು ಹುಡುಕಿ ಅಲೆದ ಎಲ್ಲವ್ವ ಕೊನೆಗೆ ಒಂದು ಮಾವಿನ ಮರದ ಮೇಲಿದ್ದ ಸಿದ್ಧರ ಪಾದುಕೆಯ ನೀರು ಎಲ್ಲವ್ವನ ಮೇಲೆ ಬಿದ್ದ ತಕ್ಷಣ ಅವಳ ತೊನ್ನು ಮಾಯವಾಗಿ ಮೈ ನಿಂಬೆಯ ಹಣ್ಣಿನ ಬಣ್ಣಕ್ಕೆ ತಿರುಗಿತು. ಎಲ್ಲವ್ವ 'ಏಕಯ್ಯ ಜೋಗಯ್ಯ' ಎಂದು ಜಪಿಸುತ್ತ ಕುಳಿತಳು. ಸಿದ್ಧರು ಮೆಚ್ಚಿ ಪ್ರತ್ಯಕ್ಷರಾಗಿ ತಮ್ಮ ಎಲ್ಲ ವಿದ್ಯೆ, ಸಿದ್ಧಿಗಳನ್ನು ಅವಳಿಗೆ ಹೇಳಿಕೊಟ್ಟರು. ಮತ್ತು ಎಲ್ಲಮ್ಮನು ಪಾರ್ವತಿಯ ಅಂಶವೆಂದು ತಮ್ಮ ದಿವ್ಯದೃಷ್ಟಿಯಿಂದ ಅರಿತ ಸಿದ್ಧರು ಆಕೆಗೆ ಪಂಚಾಕ್ಷರಿ ಮಂತ್ರ ಬೋಧೆ ಮಾಡಿ ನೀ ಮಾಯಕಾರ್ತಿ ಭಕ್ತರು 'ಜಗ' ಹೊತ್ತು ಕುಣಿಯುತ್ತ ನಿನ್ನ ಸೇವೆ ಮಾಡಲಿ' ಎಂದು ಆಶೀರ್ವದಿಸಿ ಮಾಯವಾದರು. ಎಲ್ಲವ್ವ ಸತ್ತ ಮೇಲೆಯೂ ಭಕ್ತರು 'ಮಾಯಕಾರ್ತಿ' 'ಉದ ಉದೋ' ಎಂದು 'ಜಗ' ಹೊತ್ತು ಹಾಡಿ ಸೇವೆ ಮಾಡುತ್ತಾರೆ.

ಇದರಂತೆ ಮಡಿವಾಳರ ಎಲ್ಲಪ್ಪನ ಸತ್ವ ಪರೀಕ್ಷೆ, ಬಡವಿ ಸಂಗವ್ವನ ಭಕ್ತಿ, ದೊಡ್ಡ ಎಲ್ಲೇಗೌಡನ ಗರ್ವಭಂಗ, ಚಿಕ್ಕ ಎಲ್ಲೇಗೌಡನಿಗೆ ಅನುಗ್ರಹ, ಸಿರಿವಂತೆ

ಸಂಗಮ್ಮ, ಬಂಕಾಪುರದ ಮಾದ್ಯಾನನ್ನು ಜೋಗತಿ ಮಾಡಿದ್ದು, ಮಾತಂಗಿಯ ಮೇಲಿನ ಕರುಣೆ–ಹೀಗೆ ಹತ್ತಾರು ಚಿಕ್ಕಪುಟ್ಟ ಜನಪದ ಉಪಕಥೆಗಳು ಇಂದಿಗೂ ಮೌಖಿಕ ಪರಂಪರೆಯಲ್ಲಿ ಉಳಿದುಬಂದಿದೆ.

ಈ ಎಲ್ಲ ಕಥೆಗಳು ಜನಪದ ಕಥೆಗಳ ಅನೇಕ ರಾಚನಿಕ ಸಂಗತಿಗಳನ್ನು ಒಳಗೊಂಡಿವೆ. ಜನಪದ ಕಥೆಗಳ 'ಆಶಯ'ಗಳು ಈ ಬಗೆಯ ಕಥೆಗಳಲ್ಲಿ ಬೇರೊಂದು ರೂಪ ಪಡೆಯುವ ಕಾರಣವನ್ನು ಈ ಹಂತದಲ್ಲಿ ಸ್ಪಷ್ಟಪಡಿಸಿಕೊಳ್ಳುವುದು ಮುಖ್ಯ, ಜನಪದ ಕಥೆಯು ಅಮಾಯುಕ, ಅದ್ಭುತ, ಅತಿಮಾನುಷ, ಅಮಾನುಷ ಇತ್ಯಾದಿ ಸಂಗತಿಗಳ ಪಾತ್ರರೂಪದ ಆಶಯಗಳು, ವಸ್ತುರೂಪದ ಆಶಯಗಳು, ಮತ್ತು ಆಚರಣೆ ರೂಪದ ಆಶಯಗಳು ಸ್ಥಳಿಯ 'ಸಾಂಸ್ಕೃತಿಕ ವೀರರ' ಜೀವನ ಚರಿತ್ರೆಯಲ್ಲಿ ಸೇರಿಕೊಂಡಾಗ ಕಾಲಾನಂತರದಲ್ಲಿ ಅಂಥ ವ್ಯಕ್ತಿಗಳ ಸುತ್ತೂ ಐತಿಹ್ಯಗಳು, ದಂತಕಥೆಗಳು ಹುಟ್ಟಿಕೊಳ್ಳುತ್ತವೆ. ಆದಿಮಕಾಲದ 'ಸಾಂಸ್ಕೃತಿಕ ವೀರರು' ಐತಿಹ್ಯವೀರ'ರಾಗುತ್ತಾರೆ. ಇಂಥ ವ್ಯಕ್ತಿಗಳು ಅವರ ಜೀವನದ ಪರಾಕ್ರಮ ಸಂಘರ್ಷಕರ ಘಟನೆಗಳು--ಲಿಖಿತ ಪರಂಪರೆಯ—ಶಿಷ್ಟಪದ ಪ್ರಭಾವಕ್ಕೆ ಒಳಗಾಗಿ ಬಿಡಿಬಿಡಿಯಾದ ಅದ್ಭುತ ವಿಸ್ಮಯಕಾರಿ ಅಗೋಚರ ಸಂಗತಿಗಳಾಗಿ ಪರಿವರ್ತನೆಗೊಳ್ಳುತ್ತವೆ. ಅವೇ ಕ್ರಮೋಕ್ತ ಕಥೆಯ ರೂಪಧಾರಣೆ ಮಾಡಿ ಪುರಾಣೀಕರಣಗೊಂಡಾಗ ಅಲ್ಲಿ ಪವಾಡಗಳಾಗುತ್ತವೆ. ಇಲ್ಲಿ ಗಮನಿಸುವ ಸಂಗತಿಯೆಂದರೆ ಜನಪದ ಕಥೆಗಳ 'ಆಶಯಶ'ಗಳೇ 'ಪುರಾಣ'ಗಳಲ್ಲಿ 'ಪವಾಡ'ಗಳಾಗುವುದು. ಜನಪದ ಕಥೆಗಳ 'ಆಶಯಗಳು' ಎಷ್ಟು ಪ್ರಬಲವಾಗಿರುತ್ತವೆಂದರೆ ಅವು ಐತಿಹಾಸಿಕ ವ್ಯಕ್ತಿಗಳ ಬದುಕಿನಲ್ಲೂ, ಪವಾಡಗಳಾಗಿ ಸೇರಿಕೊಳ್ಳುತ್ತವೆ.[20] ಒಂದು ರಾಚನಿಕ ಚೌಕಟ್ಟಿಗೆ ಒದಗಿಸುವುದು ಸುಲಭವಲ್ಲ ; ಆದರೆ ಅದರ ಒಂದು ಸ್ಥೂಲರೂಪದ ಹಿನ್ನೆಲೆಯನ್ನು ಗುರುತಿಸಿದರೆ ಉಳಿದ ವೈರುಧ್ಯಗಳ ವಿವೇಚನೆಗೆ ಅನುಕೂಲವಾಗುತ್ತದೆ. ಮೇಲೆ ಉಲ್ಲೇಖಿಸಿದ ಕಥನಗಳ ಪಾಠಾಂತರಗಳಲ್ಲಿ 'ಅ' ಕಥೆಯ ಸ್ಥೂಲಾಂಶಗಳನ್ನು ಹೀಗೆ ಪಟ್ಟಿ ಮಾಡಬಹುದು :

ಅ. 1. ಕಾಶ್ಮೀರದ ರೇಣುಕರಾಜನ ಮಗಳು ರೇಣುಕ : ಜಗದಂಬ, 'ಕರಿಯಲ್ಲ' ಶಕ್ತಿಯ ಅವತಾರ.

2. ಜಮದಗ್ನಿಯ ರೂಪಕ್ಕೆ ಮೆಚ್ಚಿ ಅವನನ್ನೇ ಮದುವೆಯಾಗುವುದಾಗಿ ಹಟ ತೊಡುತ್ತಾಳೆ. ಬಳಗದವರು ಒಪ್ಪುವುದಿಲ್ಲ.

3. ರೇಣುಕಾ ಮತ್ತು ಜಮದಗ್ನಿಯರು ಬೇರೆ ಬೇರೆ ದಡದಲ್ಲಿ ಹೋಗಿ ಸಮುದ್ರಸ್ನಾನ. ರೇಣುಕೆಯ ಮೈಗಂಧ ತೇಲಿ ಬರುವುದು

---

20. ಹನ್ನೆರಡನೆಯ ಶತಮಾನದ ಅನೇಕ ಶಿವಶರಣರು, ನಂತರದ ದಾಸಾದಿಗಳು ಇವರ ಸುತ್ತೂ ಹೆಣೆದ ಅನೇಕ 'ಪವಾಡ'ಗಳನ್ನು ಗಮನಿಸಬಹುದು.

ಜಮದಗ್ನಿಯ ವೈ ಜೆವರು ರೇಣುಕೆಗೆ ತಗಂಲುವುದು– ಇಬ್ಬರೂ ಕೂಡಿಕೊಳ್ಳುತ್ತಾರೆ.

4. ರೇಣುಕೆ ಗರ್ಭವತಿ : ವ್ರತಭಂಗದ ಆರೋಪ.
5. ಜಮದಗ್ನಿ ರೇಣುಕೆಯನ್ನು ಹೊರದೂಡುತ್ತಾನೆ.
6. ಪತಿಯಿಂದ ತಿರಸ್ಕೃತಳಾದ ರೇಣುಕೆಗೆ ಜೋಗುಳ ಬಾವಿ ಸತ್ಯವ್ವನ ಆಸರೆ.
7. ಪರಶುರಾಮನ ಜನನ.
8. ತಂದೆಯ ಹೆಸರು ತಿಳಿಯದ ಪರಶುರಾಮ ತಾಯಿಯ ನಡತೆಯನ್ನು ಶಂಕಿಸುವುದು. 'ಹಾದರಗಿತ್ತಿ' ಇತ್ಯಾದಿ ಬೈಗಳು, ಕಂಬಕ್ಕೆ ತಾಯಿಯನ್ನು ಎಳೆದು ಕಟ್ಟುವುದು.
9. ರೇಣುಕೆ, ಹಾದಿಯ ಮಾತಂಗಿ, ಜೋಗುಳಬಾವಿ ಸತ್ಯವ್ವನನ್ನು ಕೇಳೆಂದು ಹೇಳುವುದು.
10. ತಾಯಿಯನ್ನು ಪೀಡಿಸಿದ ರಾಮನ ಕಣ್ಣು ಹೋಗುವುದು.
11. (ಎಲ್ಲಮ್ಮ) ರೇಣುಕೆ ಮಗನ ಕಣ್ಣಿಗಾಗಿ ಶಿವನ ಹತ್ತಿರ ಹೋಗಿ ಕೃಪೆ ಯಾಚಿಸುವುದು.
12. ರಾಮನಿಗೆ ಕಣ್ಣು ಬರುವುದು : ಪಶ್ಚಾತ್ತಾಪದಿಂದ ತಾಯಿಯ ಮೇಲೆ ಬಿದ್ದು ಅಳುವುದು 'ಉಧೋ ಉಧೋ' ಎಂದು ಹಾಡಿ ತಾಯಿಯನ್ನು ಪೂಜಿಸುವುದು.

ಕಥೆ-ಆ

5. ಆ. ಹೆಚ್ಚಿನ ತಪಸ್ಸಿದ್ಧಿಗಾಗಿ, ಬಸಿರಿಯಾಗಿದ್ದ ಹೆಂಡತಿ ಎಲ್ಲಮ್ಮನನ್ನು ಬಿಟ್ಟು ಜಮದಗ್ನಿ ಗುಪ್ತ ಸ್ಥಳಕ್ಕೆ ಹೋಗುವುದು. ತನ್ನ ವಿಷಯ ಇತರರಿಗೆ ಹೇಳದಂತೆ ಕಟ್ಟಪ್ಪಣೆ. ಎಲ್ಲಮ್ಮ ಜಮದಗ್ನಿಯ ಪ್ರತಿಮೆ ಮಾಡಿ ಪೂಜೆ ಮಾಡುತ್ತಿರುವುದು.

8. ಆ. ಗಂಡ ಸತ್ತನೆಂದು ಹೇಳುವುದು. ಎಲ್ಲಮ್ಮ ರಂಡಿಯಾಗುವುದು. ಜಮದಗ್ನಿ ತಾನೇ ಮತ್ತೆ ಮರಳಿ ಬರುವುದು. ಅಣ್ಣ, ಗೊಡಚಿಯ ವೀರಣ್ಣ 'ರಂಡಿ' ಯಾಗಿದ್ದ ಎಲ್ಲಮ್ಮನಿಗೆ ಕುಂಕುಮ ಬಳೆ ಕಳಿಸುವುದು ಎಲ್ಲಮ್ಮ ಮುತ್ತೈದೆಯಾಗುವುದು.

ಕಥೆ–೯

1. ೯ 'ಏಳ್ಕೋವೆಯಿಂದ ತಾನೇ ಮೂಡಿನಿಂತಳು ಎಲ್ಲಮ್ಮ: ಜಮದಗ್ನಿ (ಗಿರಿರಾಜಮುನಿ ಅಥವಾ) ಗಿರಿಜಾಮುನಿ ಜನಕುದೇವಿಯರಿಗೆ ಮಗಳಾಗಿ ಹುಟ್ಟುವುದು.

2. ೯. ಶೈವ ಪರಂಪರೆಯ ಜಮದಗ್ನಿ ಎಲ್ಲಮ್ಮನ ಸೀಳ್ನೂಗದಲಿಗೆ ಮೋಹಿತವಾಗಿ ತಾನೇ ಅವಳನ್ನು ಮದುವೆಯಾಗಬಯಸುವುದು.

3. ೯. ಎಲ್ಲಮ್ಮನಿಟ್ಟ ಕೆಲವು ಶರತ್ತು. ಮದುವೆಗೆ ಒಪ್ಪಿಗೆ. ತಲೆಯ ಮೇಲೆ ಅವಳಿಟ್ಟ ಹಸ್ತದಿಂದ ಜಮದಗ್ನಿ ಏಳು ವರ್ಷದ ಬಾಲಕನಾಗುವುದು. ಮಾವನಿಂದ ಜಮದಗ್ನಿಯ ಕೋಪ ಶಮನ. ವಿವಾಹ. ಜಮದಗ್ನಿ ಎಲ್ಲಮ್ಮನನ್ನು ಪರೀಕ್ಷೆಗೆ ಒಳಪಡಿಸುವುದು. ಅವಳ ರುದ್ರ ಭಯಂಕರ ರೂಪ. ಅವಳಿಗೆ ಜಮದಗ್ನಿ ಶರಣಾಗತನಾಗುವುದು.

ಈ ಮೇಲಿನ ಘಟಕಗಳಲ್ಲದೆ ಜನಪದರ ರೂಢಿಯಲ್ಲಿರುವ ಕೆಲವು ಹಾಡುಗಳಲ್ಲಿ ಬಿಡಿ ಬಿಡಿಯಾಗಿ ದೊರಕುವ ಇನ್ನು ಕೆಲವು ಅಧಿಕ ಸಂಗತಿಗಳ ಘಟಕಗಳನ್ನು ಆ ಪಾಠದ 12 ನೆಯ ಅಂಕಿಯಿಂದ ಮುಂದಿನ 13, 14 ಇತ್ಯಾದಿ ಅಂಕಿಗಳ ಮೂಲಕ ಸೂಚಿಸಲಾಗಿದೆ.

13. ಎಲ್ಲಮ್ಮನ ಅಣ್ಣ ಕಾರ್ತವೀರ್ಯ.

14. ಜಮದಗ್ನಿಯ ಆಶ್ರಮಕ್ಕೆ ಬರುತ್ತಾನೆ. ಊಟೋಪಚಾರಕ್ಕೆ ಕಾರಣವಾದ ಕಾಮಧೇನುವಿಗಾಗಿ ಕಾರ್ತವೀರ್ಯ ಜಮದಗ್ನಿಯನ್ನು ಕೊಲ್ಲುತ್ತಾನೆ.

15. ಸೂಲಗಿತ್ತಿ ವೇಷದ ಗೂಢಚಾರ ಎಲ್ಲಮ್ಮನ ಹೆರಿಗೆಗಾಗಿ ಅವಳ ಅಣ್ಣ ಕಾರ್ತವೀರ್ಯನ ಸೂಚನೆಯಂತೆ ಬರುವುದು. ಹೊಟ್ಟೆಯಲ್ಲಿದ್ದ ಪರಶುರಾಮ ಸೂಲಗಿತ್ತಿಯನ್ನು ಕೊಲ್ಲುವುದು.

16. ತಂದೆಯ ಹೆಸರು ಹೇಳದ ತಾಯಿ ಎಲ್ಲಮ್ಮನನ್ನು ರಾಮ ಕೊಡಲಿಯಿಂದ ಕಡಿಯುವುದು. ಅವಳ ರುಂಡ ಕಡಿದಂತೆಲ್ಲ ಬೆಳೆಯುವುದು. ಕೊನೆಗೆ ವಿವರಿಸಿ ಹೇಳುವುದು.

17. ಪರಶುರಾಮ ಕಾರ್ತವೀರ್ಯನನ್ನು ಕೊಂದು ಅವನ ಶಿರವನ್ನೆ ಕಂಚಿನ ಚೌಡಿಕೆ ಮಾಡಿಕೊಳ್ಳುವುದು.

18. ಅಣ್ಣನನ್ನು ಹುಗಿದ ಸ್ಥಳದಲ್ಲೇ ಸ್ನಾನ ಮಾಡುವಂತೆ ಎಲ್ಲಮ್ಮನನ್ನು ರಾಮ ಒತ್ತಾಯಿಸುವುದು.

19. ಎಲ್ಲಮ್ಮ ಕಲ್ಯಾಣ ಪಟ್ಟಣದ ಮಾದಿಗರ ಚೆನ್ನಪ್ಪಜ್ಜನ ಬಾವಿಯಲ್ಲಿ ಅಡಗುವುದು.

20. ರಾಮನಿಂದ ತಾಯಿಯ ಕೊಲೆ – ಪಶ್ಚಾತ್ತಾಪ.

21. ತಾಯಿಯ ರುಂಡ ವಿಜಯನಗರಕ್ಕೆ ತಂದು ಪೂಜಿಸಿ, ಆತ್ಮಹತ್ಯೆಗೆ ತೊಡಗುವುದು.

ಈ ಕೆಲವು ಘಟಕಗಳಲ್ಲದೆ ಮತ್ತೆ ಕೆಲವು ಶಿಷ್ಟಪದ ಪುರಾಣಕ್ಕಿಂತ ಭಿನ್ನವಾದ ಮತ್ತು ಮೇಲಿನ ಜನಪದ ಕಥಾನಕಗಳಲ್ಲಿ ದೊರೆಯುವ ಸಂಗತಿಗಳು ಗಮನಾರ್ಹವಾಗಿವೆ.

22. ಎಲ್ಲಮ್ಮ ಬಂಜೆಯಾಗಿದ್ದು ಎಲ್ಲರ ತಿರಸ್ಕಾರಕ್ಕೆ ಒಳಗಾಗಿರುವುದು.

23. ಶಿವನ ಕರುಣೆಯಿಂದ ಫಲಪ್ರಾಪ್ತಿ.

24. ಎಲ್ಲಮ್ಮ ನೀರು ತರಲು ತಡವಾದುದಕ್ಕೆ, ಚಿತ್ತಚಾಂಚಲ್ಯಕ್ಕೆ ಕಾರಣ ನದಿಯಲ್ಲಿ ಆಡುತ್ತಿದ್ದ ಜೋಡು ಮೀನ.

25. ಎಲ್ಲಮ್ಮ ಬಸಿರಿಯಾದಾಗ ಆಸರೆ ಕೊಟ್ಟು ಬಾಣಂತನ ಮಾಡಿದವರು ಮಾತಂಗಿ, ಸತ್ಯವ್ವ.

26. ಕೂಸು ರಾಮನನ್ನು ಹೊಟ್ಟೆವ್ಯಾಲ ಕಟ್ಟಿಕೊಂಡು ಸಿದ್ಧರ ಮನೆಯಲ್ಲಿ (ಮುನಸ್ಸೂರು ಸಿದ್ಧರು?) ದುಡಿದು ಉಪಜೀವಿಸುವುದು.

27. ಬಂಕಾಪುರದ 'ಮಾದ್ಯಾ' ಎಲ್ಲಮ್ಮನನ್ನು 'ಮಂಚ'ಕ್ಕೆ ಕರೆದಾಗ ಅವನನ್ನು ಸೀರಿ ಉಡಿಸಿ ಜೋಗತಿ ಮಾಡುವುದು

28. ಮಾಲಗಾರ ನಾಗಶೆಟ್ಟಿಗೆ ಬಗೆ ಬಗೆ ಹುಣ್ಣುರೋಗ ಬರುವಂತೆ ಮಾಡುವುದು.

ವೈರುಧ್ಯ : ಸ್ವೀಕರಣ–ಸ್ಥಿರೀಕರಣ

ಈ ಮೇಲಿನ ಎಲ್ಲ ಘಟಕಗಳ ಸಮೀಕ್ಷೆಯಿಂದ ಒಂದು ಮಾತು ಮೇಲು ನೋಟಕ್ಕೇ ಕಾಣುವಂಥದು: ಶಿಷ್ಟಪದ ಪುರಾಣಗಳು ಅಪ್ಪಿತಪ್ಪಿಯೂ ಹೇಳದ 'ಎಲ್ಲಮ್ಮನ' ಹೆಸರನ್ನು ಜನಪದರು ಶಿಷ್ಟಪದ ಪುರಾಣ ಕಥನಗಳ 'ರೇಣುಕಾ' ಹೆಸರಿನೊಂದಿಗೆ ಸಮೀಕರಣ ಮಾಡಿರುವುದು.

ಪರಂಪರಾಗತ ಶಿಷ್ಟಪದ ಪುರಾಣ ಮತ್ತು ಜನಪದ ಕಥಾನಕಗಳ ಪೌರಾಣಿಕ ಸಂಗತಿಗಳು ಅನೇಕ ವೈರುಧ್ಯಗಳ ನಡುವೆಯೂ ಯಾವುದೋ ಒಂದು ಹಂತದಲ್ಲಿ ಸಮೀಕರಣಗೊಳ್ಳುವುದಕ್ಕೆ ಮತ್ತೊಂದು ವಾಸ್ತವ ಕಾರಣವಿದೆ.

ಪ್ರಾದಿಮ ಕಾಲದಿಂದ ಬೆಳೆದುಬಂದ ಮಾನವ ಜನಾಂಗಗಳ ವಿವಿಧ ಘಟ್ಟ ಗಳಲ್ಲಿ ಎಲ್ಲಮ್ಮನಿಗೆ ಸಂಬಂಧಿಸಿದಂತೆ ಪಾಲ್ಗೊಳ್ಳುವ ಕುಲಗಳು : ಬ್ರಾಹ್ಮಣ, ಕ್ಷತ್ರಿಯ, ಶೈವ ಲಿಂಗಮತ, ಮತ್ತು ಮಾದಿಗ ಕುಲ–ಒಮ್ಮೆ ಶೈವ ವಿರೋಧಿಯಾಗಿ, ಸ್ವತಂತ್ರ ಶಕ್ತಿದೇವತೆಯಾಗಿ, ಒಮ್ಮೆ ಕ್ಷತ್ರಿಯ ಕುಲದ ಕನ್ಯೆಯಾಗಿ, ಹೀಗೆ ಅನೇಕ ವೈರುಧ್ಯಗಳ ಮಧ್ಯೆ ಎಲ್ಲಮ್ಮನ ಜನಪದ ಕಥಾನಕಗಳು ಮುಂದುವರೆದಿವೆ. ಈ ವೈರುಧ್ಯಗಳೇ ರಾಜನಿಕ ಪಂಥದಲ್ಲಿ ಹೇಳಲಾದ 'ಸ್ಲಾಟ್ಸ್' ಕಂಡಿ ಅಥವಾ ಸೀಳು ಗಳೆಂದು ಹೇಳಬಹುದು. ಇಂಥ ಸೀಳುಗಳಿರುವೆಡೆಯಲ್ಲೆಲ್ಲ ಶಿಷ್ಟಪದ ಪರಂಪರೆ ಹೊಕ್ಕು ನಿಲ್ಲುತ್ತದೆ. ಮತ್ತು ಈ ಭಿನ್ನ ಭಿನ್ನ ಮತಗಳು ಜೊತೆ ಜೊತೆಗೆ 'ನೆರೆ ಹೊರೆಯವರಾಗಿ' ಬಾಳುತ್ತ ಬಂದಂತೆಲ್ಲ ಸ್ಥಳೀಯ 'ಎಲ್ಲಮ್ಮ' ಬೃಹತ್ ಪರಂಪರೆಯ ರೇಣುಕೆಯ ಜೊತೆ ಸಮೀಕರಣಗೊಂಡದ್ದು ಅಥವಾ ಬೃಹತ್ ಪರಂಪರೆಯ ಶಿಷ್ಟಪದ, ಸ್ಥಳೀಯ 'ಎಲ್ಲಮ್ಮ' ದೇವತೆಯ ಸ್ಥಾನವನ್ನು ಆಕ್ರಮಿ ಸಿದ್ದು ಮತ್ತು ಜನಪದರು ಈ ಎಲ್ಲ ವೈರುಧ್ಯಗಳ ಮಧ್ಯೆಯೂ ಈ 'ಉಚ್ಚಾಟನೆ' ಅಥವಾ ಸಮೀಕರಣವನ್ನು ಸ್ವೀಕರಿಸಿದ್ದು ಏಕಕಾಲಕ್ಕೆ ತಮಾಷೆಯಾಗಿ ಕಂಡರೂ ವಾಸ್ತವ ಸತ್ಯವಾಗಿ ಪರಿಣಮಿಸಿದೆ.[21] ಅನೇಕ ಋಷಿಮುನಿಗಳು ಮೂಲತಃ ನಿಮ್ನ ವರ್ಗದಿಂದಲೇ ಬಂದಿದ್ದು ಅವರನ್ನು ಶಿಷ್ಟಪದ ಸಮಾಜ ಉನ್ನತ ಮನ್ನಣೆಯಿಂದ ಸ್ವೀಕರಿಸಿರುವ ಹೇರಳ ಉದಾಹರಣೆಗಳನ್ನು ಶರಣರ ವಚನಗಳಲ್ಲಿ ಕಾಣಬಹುದು.

ಒರುಗಲ್ಲ ಪ್ರತಾಪರುದ್ರ–"ರುದ್ರ"

ಒರುಗಲ್ಲಿನ ಪ್ರತಾಪರುದ್ರನೆಂನು ಹೇಳಲಾದ ಒಬ್ಬ ವ್ಯಕ್ತಿ ಎಲ್ಲಮ್ಮನನ್ನು ಕುರಿತ ಜನಪದ ಕಥಾನಕಗಳಲ್ಲಿ ಸೇರಿಕೊಂಡಿದ್ದಾನೆ. ಅಥವಾ ಸೇರಿಸಲ್ಪಟ್ಟಿದ್ದಾನೆ. ಶಿಷ್ಟಪದ ಪುರಾಣಗಳಲ್ಲಿ ಎಲ್ಲಿಯೂ ಈತನ ಉಲ್ಲೇಖ ಬರುವುದಿಲ್ಲ. ಶತಮಾನದಲ್ಲಿ ಆಗಿಹೋದ ಪ್ರತಾಪರುದ್ರ ಕಾಕತೀಯ ಮನೆತನದ ಒಬ್ಬ ಪ್ರಬಲ ಅರಸು. ಎಲ್ಲಮ್ಮನನ್ನು ಐತಿಹಾಸಿಕವಾಗಿ 'ಜತ್ತಕ್ಕ' ಎಂದು ಕರೆದಿರುವ[22] ಶಾಸನದ ಕಾಲ ಕ್ರಿ ಶ. 1514 ಮತ್ತು 10ನೆಯ ಶತಮಾನದಿಂದ ಸುಮಾರು 300 ವರ್ಷ ಆಳಿದ ಕಾರ್ತ ವೀರ್ಯರಿಗೂ ಮತ್ತು ಈ 'ಜತ್ತಕ್ಕ' ಎನ್ನುವ ಜೈನದೇವತೆಯ ವಿಗ್ರಹ ಅಥವಾ

21 ನಿಮ್ನವರ್ಗದ ಅಥವಾ ತಮ್ಮ ಅಂತಸ್ತಿನವನಲ್ಲದ ಒಬ್ಬ ವ್ಯಕ್ತಿ ಪ್ರತಿಷ್ಠಿತನಾಗಿ ಮನ್ನಣೆ ಪಡೆದಾಗ ಪ್ರತಿಷ್ಠಿತ ಅಥವಾ ಉನ್ನತ ವರ್ಗದ ಜನ ಅವನನ್ನೂ ತಮ್ಮಲ್ಲಿ ಸೆಳೆದುಕೊಳ್ಳುವ ಅಥವಾ ಸಮೀಕರಿಸಿಕೊಳ್ಳುವ ಹಾಗೆ.

22 ಬಿ. ಎಂ. ಬಸಪ್ಪ : ಗ್ರಾಮಾಂತರಗಳಲ್ಲಿ ಶಕ್ತಿದೇವತೆಯ ಪೂಜೆ : ಜಾ. ಜಗತ್ತು ಪು. 35, ಡಿಸೆಂಬರ್ 83. ದಿ. ಬೆಟಗೇರಿ ಕೃಷ್ಣಶರ್ಮ, ಶಂ. ಬಾ. ಜೋಶಿ ಮುಂತಾದವರು ಕ್ರಿ.ಶ. 1514ರ ಶಾಸನವೊಂದರಲ್ಲಿ ಇರುವ 'ಜತ್ತಕ್ಕ' ಜೈನದೇವತೆ ಯಕ್ಷಿಯ ವಿಗ್ರಹ ವೆಂದು ಕರೆಯುತ್ತಾರೆ.

ವಾಯುವ್ಯದೇವತೆಗೆ ಸಂಬಂಧವಿಲ್ಲದಿರುವುದನ್ನು ಗಮನಿಸಿದ್ದೇವೆ. ಸವದತ್ತಿಯ ಈ ಕ್ಷೇತ್ರ ಒರುಂಗಲ್ಲಿಗೆ ಸುಮಾರು......... ಕಿ.ಮಿ. ಅಂತರದಲ್ಲಿದೆ. ಒರುಂಗಲ್ಲಿನಲ್ಲಿ ಸುತ್ತಮುತ್ತ ಸಂಕಾಲಮ್ಮ, ಮಾರಮ್ಮ ಇತ್ಯಾದಿ ಸ್ಥಳೀಯ ದೇವತೆಗಳಿದ್ದಾರೆಯೇ ಹೊರತು ಎಲ್ಲಮ್ಮನ ಹೆಸರಿನ ಯಾವ ದೇವತೆಯ ಗುಡಿ ಕಂಡು ಬರುವುದಿಲ್ಲ. ಪ್ರತಾಪರುದ್ರನ ಜೀವನದಲ್ಲಿ ಎಲ್ಲಮ್ಮನ ಪ್ರವೇಶ ಕುರಿತು 'ಯಾವುದೋ ಒಂದು ಮಹತ್ವಪೂರ್ಣವಾದ ಐತಿಹಾಸಿಕ ಘಟನೆ ಕಾರಣವಾಗಿರಬಹುದು' ಎಂದು ಹೇಳುತ್ತ ದಿಲ್ಲಿ ಬಾದಶಹ, ಉಲುಘಖಾನ, ಗಯಾಸುದ್ದೀನ್ ತುಘಲಕ್ ಅವರ ಅಪಾರ ಸೈನ್ಯ, ವಿಜಯ, ಪರಾಜಯ, ಪ್ರತಾಪರುದ್ರನಿಗೆ ಎಲ್ಲಮ್ಮನ ಗುಡ್ಡದ ಆಶ್ರಯ ಇತ್ಯಾದಿ ಸಂಗತಿಗಳನ್ನು ಕೆದಕಿ ಆತನ ಸ್ತ್ರೀ ವೇಷ, ಆತ್ಮಹತ್ಯೆ ಹೀಗೆ ಎಲ್ಲ ಗೋಜಲುಗಳನ್ನು ಗಂಟುಗೂಳಿಸಿ 'ಅದೇನೇ ಇರಲಿ' ಎಂದು ಮುಂತಾಗಿ ಹೇಳಿ 'ಮಹಾರಾಷ್ಟ್ರೀಯರಿಗೂ ಆಂಧ್ರೀಯರಿಗೂ ಕನ್ನಡನಾಡಿನ ವೀರ ಮಹಿಳೆಎಲ್ಲಮ್ಮನಿಂದ ಅಪಾರ ನೆರವು ದೊರಕಿರಬಹುದು' ಎಂದು ವಿವರಿಸಿ, ಎಲ್ಲಮ್ಮ ಪ್ರತಾಪರುದ್ರನ ಸಮಕಾಲೀನಳಾಗುತ್ತಾಳೆ' ಎಂದೆಲ್ಲ ಮುಂತಾಗಿ ಎಲ್ಲಮ್ಮ 12–13ನೆಯ ಶತಮಾನದಲ್ಲಿ ಬದುಕಿದ್ದವಳೆಂದು ತೀರ್ಮಾನಿಸುತ್ತಾರೆ. (ನಂ. ನಾರಾಯಣಗೌಡ: ಚೌಡಿಕೆ ಕಾವ್ಯಗಳು, ಪು. xxxix).

ಎಲ್ಲಮ್ಮ ಧಾರ್ಮಿಕ ಹಿರಿಮೆಯಿಂದ ಪ್ರಸಿದ್ಧಳೇ ಹೊರತು ಚಾರಿತ್ರಿಕ ಘಟನೆಗಳ ಆಧಾರದ ಮೇಲಲ್ಲ. ಪ್ರತಾಪರುದ್ರನಂಥ ಪ್ರಬಲ ಅರಸನಿಗೆ ಆಶ್ರಯವನ್ನೇ ನೀಡಿದ್ದುದಾಗಿದ್ದರೆ ಶಾಸನಗಳಲ್ಲಿ ಖಂಡಿತ ಅವಳಿಗೆ ಸ್ಥಾನ ದೊರಕುತ್ತಿತ್ತು. ಕಾಕತೀಯ ಶಾಸನಗಳಲ್ಲಂತೂ ಇಂಥ ಮಹತ್ವದ ಸಂಗತಿ ಉಲ್ಲೇಖಿತವಾಗಬಹುದಿತ್ತು. ಆದರೆ ಇಂಥ ಯಾವುದೇ ಒಂದೂ ಚಾರಿತ್ರಿಕ ದಾಖಲೆ ದೊರೆಯುವುದಿಲ್ಲ. ಆದರೆ ಪ್ರತಾಪರುದ್ರನ ಕಥೆ ಎಲ್ಲಮ್ಮನ ಕಥೆಯಲ್ಲಿ ಸೇರಿಕೊಂಡಿರುವುದಕ್ಕೆ ಇರಬಹುದಾದ ಒಂದು ಗಮನಾರ್ಹ ಅಂಶ ಕಾಕತೀಯ ಮನೆತನದ ರುದ್ರಮಹಾದೇವಿ ಎನ್ನುವ ರಾಣಿ ಗಂಡುವೇಷ ಹಾಕಿಕೊಂಡು ಆಳಿದ್ದು. ಎಲ್ಲಮ್ಮನ ಕೆಲವು ಜೋಗತಿಯರು ಗಂಡುವೇಷ ಹಾಕಿ ಬದುಕುವುದನ್ನು ವಿರಳವಾಗಿಯಾದರೂ ಕಾಣಬಹುದಾಗಿದೆ. ಎಲ್ಲಮ್ಮನ ಚರಿತ್ರೆಯಲ್ಲಿ ಒರಂಗಲ್ಲು ಪ್ರತಾಪರುದ್ರನದೆಂದು ಹೇಳಲಾದ ವಿಭಿನ್ನಾಂಶ ಬಂದು ಸೇರಿರುವುದಕ್ಕೆ ಇನ್ನೊಂದು ಕಾರಣವನ್ನೂ ಹೇಳಬಹುದು : ಬ್ರಹ್ಮಶಿವನ ಕಾವ್ಯದಲ್ಲಿ ಒಂದು ಪದ್ಯ ಹೀಗೆ ಬರುತ್ತದೆ :

> ಗಂಡುಡೆಯುಡಿವವರ್ಪೆಣ್ಣಂ
> ಗಂಡುಮನೋದಿಂದೆ ಪೆಣ್ಣುಡೆಯುಡಿವ
> ರ್ಗಂಡದೆ ಶಿರಿವರ್ಕುತ್ತಂ
> ಗೊಂಡು ಬರ್ದುಂಕಿದೊಡೆ ದೇವಿ ಕಾದಳೆನ್ನುತ್ತುಂ (ಪ. 212)

ಈ ಪದ್ಯದಲ್ಲಿ ಉಲ್ಲೇಖಿತರಾದ ಗಂಡುಡುಗೆಯುಡುವ ಹೆಣ್ಣು, ಮತ್ತು ಹೆಣ್ಣುಡೆ ಯುಡುವ ಗಂಡು ಜೋಗವ್ವ ಜೋಗಪ್ಪ ಎನ್ನುವುದು ಸ್ಪಷ್ಟ. ಇವರು ಒಟ್ಟಾಗಿ ಅಲೆಯುವುದು, ಇಂದಿಗೂ ಕಾಣುವ ಸಂಗತಿ.

ಕಾಕತೀಯ ವಂಶದ ರಾಣಿ ರುದ್ರಮಹಾದೇವಿ ಗಂಡುವೇಷ ಹಾಕಿ ಪುರುಷನ ಹೆಸರಿನಲ್ಲಿಯೇ ರಾಜ್ಯಭಾರ ಮಾಡಿದ್ದು ಒಂದು ಐತಿಹಾಸಿಕ ಸತ್ಯ. ಅಲೆಮಾರಿ ಗಳಾಗಿದ್ದ ಅಂದಿನ ವೃತ್ತಿಗಾಯಕರಿಗೆ ಇಂಥ ಒಂದು ಸಂಗತಿ ಚೋದ್ಯವಾಗಿ ಕಂಡು ಅದು ಎಲ್ಲಮ್ಮನ ಭಕ್ತರ ಮತ್ತು ಎಲ್ಲಮ್ಮನ ಕಥನಗಳಲ್ಲಿ ನುಸುಳಿಕೊಂಡಿರುವುದು ಹೆಚ್ಚು ಸಂಭವನೀಯ. (ಈ ಸಾಧ್ಯತೆಗಳ ಹಿನ್ನೆಲೆಯಲ್ಲಿ ಈ ತೊಡಕಿನ ವಿಶ್ಲೇಷಣೆ ಯನ್ನು ನನಗೆ ಎತ್ತಿತೋರಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರು). ಇನ್ನು ಕೆಲವು ಸಂಗತಿಗಳು ಎಲ್ಲಮ್ಮನ ಕಥಾನಕದಲ್ಲಿ ಸೇರಿಕೊಂಡುದಕ್ಕೆ ಜನಪದ ಕಥಾನಕ ಗಳಿಗೇ ಮೊರೆಹೋಗಬೇಕಾಗುತ್ತದೆ.

ಶಿವಶರಣೆ ಅಜ್ಜಮ್ಮ ಬೆಳೆದ ಕುಂಬಳಕಾಯಿಯ ಒಂದು ಹೋಳಿನಲ್ಲಿ ರುದ್ರ ಹುಟ್ಟಿದನಂತೆ. ಸವದತ್ತಿಯ ಜೋಗಪ್ಪ ಜೋಗತಿಯರ ಹಾಡುಗಳಲ್ಲಿ ಮಾಲಗಾರ ಸೆಟ್ಟಿ, ಬಂಕಾಪುರ ಮಾದ್ಯಾ ಇತ್ಯಾದಿ ವ್ಯಕ್ತಿಗಳನ್ನು ಎಲ್ಲಮ್ಮ ಬಗ್ಗುಬಡಿದ ಸಂಗತಿ ಬರುತ್ತದೆ. ಒರಗಲ್ಲರುದ್ರನಿಗೂ ಎಲ್ಲಮ್ಮನಿಗೂ ಇರುವ ಸಂಬಂಧ–ಎಲ್ಲಮ್ಮ ಕಡುಚೆಲುವೆ. ಆಕೆಯನ್ನು ಈತ ಮದುವೆಯಾಗಬಯಸುತ್ತಾನೆ, ಅಥವಾ ತನ್ನ ವಶ ಮಾಡಿಕೊಳ್ಳಬಯಸುತ್ತಾನೆ. ಒರಗಲ್ಲರುದ್ರನ 'ಸೈನ್ಯ' ಅಥವಾ ಜನ ಉಚ್ಚಂಗಿ ದುರ್ಗಕ್ಕೆ ಬರುತ್ತಾರೆ. ಅವನು ಬರೆದಿರುವ 'ವಾಲೆ' ತೋರಿಸುತ್ತಾರೆ. ಎಲ್ಲಮ್ಮ ವೇಷಾಂತರ ಮಾಡಿಕೊಂಡು 'ಮುದಿಕಿ'ಯಾಗಿ ಅಥವಾ ಕೊಲ್ಲಾಪುರ (ಧಾರವಾಡದ) ಕೊರವಂಜಿಯಾಗಿ ಅವನಲ್ಲಿಗೆ ಹೋಗಿ ಅವನಿಗೆ ಬಂದಿರುವ ರೋಗ ಹುಣ್ಣುಗಳು ಕಳೆದು ಅವನ ಸೊಕ್ಕು ಮುರಿಯುತ್ತಾಳೆ. ರುದ್ರ ಶರಣಾಗತನಾಗುತ್ತಾನೆ. ತೊರಗಲ್ಲಿನ ಮಾಲಗಾರ ಶೆಟ್ಟಿಗೂ ಬಗೆಬಗೆಯ ಹುಣ್ಣು ಹುಟ್ಟಿದ್ದು ಎಲ್ಲಮ್ಮ ಅವನನ್ನು ಕರುಣಿಸುತ್ತಾಳೆ. ಬಂಕಾಪುರದ 'ಮಾದ್ಯಾ' ಯಲ್ಲಮ್ಮನನ್ನು ತನ್ನ ಮಂಚಕ್ಕೆ ಕರೆದಾಗ ಅವನನ್ನು ಸರ್ವನಾಶ ಮಾಡಿ ಎಳೆದೆಳೆದು ಹೊಡೆದು ಅವನ ಬಟ್ಟೆ ಬಿಚ್ಚಿಸಿ ಅವನಿಗೆ ಸೀರಿ ಉಡಿಸಿ ಬಳಿ ತೊಡಿಸಿ 'ಜಗ' ಹೊರಿಸಿ ಕುಣಿಸಿ ಜೋಗಪ್ಪ ನನ್ನಾಗಿ ಮಾಡುತ್ತಾಳೆ. ಎಲ್ಲಮ್ಮ ದೇವಸ್ಥಾನ ಪ್ರಕಟಿಸಿದ ರೇಣುಕಾ ಮಹಾತ್ಮೆ ಗ್ರಂಥದಲ್ಲಿ ಸ್ಥಳನಾಮಗಳನ್ನು ವಿವರಿಸುವಾಗ 'ಒರಗಲ್ಲು' ಎನ್ನುವುದಕ್ಕೆ 'ತೊರಗಲ್ಲು' ಎಂದು ಹೇಳಲಾಗಿದೆ. ಮಾಲಗಾರಸೆಟ್ಟಿ ತೊರಗಲ್ಲಿನವನೇ ಆದ ಪಕ್ಷದಲ್ಲಿ ತೊರಗಲ್ಲಿನ ಈ ಸೆಟ್ಟಿಯ ಹೆಸರು 'ರುದ್ರ' ಎಂದಿದ್ದು ಈ 'ತೊರೆಗಲ್ಲರುದ್ರ' ಮಾಲಗಾರಸೆಟ್ಟಿಯ ಹುಣ್ಣು ಕಳೆದ ಮತ್ತು ಬಂಕಾಪುರದ 'ಮಾದ್ಯಾ'ನ ಸೊಕ್ಕು ಮುರಿದ ಎರಡೂ ಘಟಕಗಳು ಸೇರಿಗೊಂಡು ಯಾವುದೋ ಒಂದು ಹಂತದಲ್ಲಿ ಐತಿಹಾಸಿಕ ವ್ಯಕ್ತಿ

ಒರಗಲ್ಲ ಪ್ರತಾಪರುದ್ರ ಸ್ಥಳೀಯ ಕಥೆಗಳ ಈ ಕಂಡಿಗಳಲ್ಲಿ ಧುಮುಕಿ ಸ್ಥಳೀಯ ತೊರಗಲ್ಲು ಒರಗಲ್ಲಾಗಿ, ಮಾಲಗಾರ–'ರುದ್ರ'–ಸೆಟ್ಟಿ ಮತ್ತು 'ಮಾದ್ಯಾ' ಪ್ರತಾಪ ರುದ್ರನಾಗಿ ಪರಿವರ್ತನೆಗೊಂಡು ವೃತ್ತಿಗಾಯಕರ–ಎಲ್ಲಮ್ಮನ ಭಕ್ತರ ಹಾಡುಗಳ ಆಳಕ್ಕೆ ಇಳಿದುಹೋಗಿರುವ ಸಾಧ್ಯತೆಯೇ ಹೆಚ್ಚು.[23] (ಈ ಸಂಗತಿಯನ್ನು ಈಗಾಗಲೇ ಸ್ಥೂಲವಾಗಿ ಡಾ. ಪಾಟೀಲ ಸೂಚ್ಯವಾಗಿ ಹೇಳಿದ್ದಾರೆ). ಆದುದರಿಂದ ಇತಿಹಾಸದ ಕಾಕತೀಯ ಪ್ರತಾಪರುದ್ರನಿಗೂ, ಎಲ್ಲಮ್ಮನಿಗೂ ಯಾವ ಸಂಬಂಧವೂ ಇಲ್ಲ. ಚಾರಿತ್ರಿಕ ಪ್ರತಾಪರುದ್ರನಿಗೂ ಮತ್ತು ಎಲ್ಲಮ್ಮನಿಗೂ ಸಂಬಂಧ ಕಲ್ಪಿತ ವಾಗಿರುವುದಂ ಕೇವಲ ಆಕಸ್ಮಿಕ ಮತ್ತು ಅನುಷಂಗಿಕವಾಗಿದ್ದು ಆಕೆ 'ವೀರಮಹಿಳೆ' ಇತ್ಯಾದಿ ಮಾತು ಅಪ್ರಸ್ತುತವಾಗುತ್ತವೆ. ತನ್ನ ಬುಡಕಟ್ಟನ್ನು ರಕ್ಷಿಸಿದ...ಇತ್ಯಾದಿ ದೃಷ್ಟಿಯಿಂದ ಮಾತ್ರ ಆಕೆ ಸಾಂಸ್ಕೃತಿಕ ವೀರ ಮಹಿಳೆ.

ಚೆನ್ನಜ್ಜ — ಮಾತಂಗಿ — ಎಲ್ಲಮ್ಮ

ಜನಪದ ಕಥೆಗಳಲ್ಲಿ ಎಲ್ಲಮ್ಮ ಕಲ್ಯಾಣದ ಮಾದಾರ ಚೆನ್ನಜ್ಜನಲ್ಲಿಗೂ ಹೋಗುತ್ತಾಳೆ. ಎಲ್ಲಮ್ಮನ ಹೆರಿಗೆ ಕಾಲದಲ್ಲಿ ಆಶ್ರಯ ನೀಡಿದ ಸತ್ಯವ್ವ ಮತ್ತು ಮಾತಂಗಿಯರಲ್ಲಿ ಮಾತಂಗಿ ಎಲ್ಲಮ್ಮನ ಸೇವಕಿಯೆಂದೊ ಅಥವಾ ಅವಳ ತಂಗಿ ಯೆಂದೋ ಭಾವಿಸಲಾಗುತ್ತದೆ. ಎಲ್ಲಮ್ಮನ ರುಂಡ ಕಡಿದಾಗ ಮಾತಂಗಿಯ ರುಂಡವೂ ಕತ್ತರಿಸಿ ಬಿದ್ದು ರಾಮನ – ತಪ್ಪಿನಿಂದಾಗಿ – ಮರಳಿ ಜೀವಂತ ಗೊಳಿಸಿದಾಗ, ತಲೆ ಅದಲುಬದಲಾದುವಂತೆ. ಆಗ ಮಾದಿಗ ಮಾತಂಗಿ ಶಾಕಾಹಾರ ಎಲ್ಲಮ್ಮ ಮಾಂಸಾಹಾರ ಬೇಡಿದರಂತೆ.[24] ಕಲ್ಯಾಣದ ಮಾದಾರ ಚೆನ್ನಜ್ಜನಲ್ಲಿಗೆ ಎಲ್ಲಮ್ಮ ಹೋಗುವ ಸಂಗತಿಯಿಂದಾಗಿ ಆಕೆಯ ಮಾತಂಗಿ ಕುಲದ ಸಂಬಂಧ ಸೂಚಿತವಾಗುತ್ತಿದೆಯೇ ಹೊರತು ಐತಿಹಾಸಿಕ ಘಟನೆಯಾಗಿ ಗಟ್ಟಿಗೊಳ್ಳುವುದಿಲ್ಲ.

---

23 ... ಇದರಲ್ಲಿನ ಮೂಲ ಸ್ರೋತವು ಸಾಂಪ್ರದಾಯಿಕ ಬುಡಕಟ್ಟಿನಿಂದ ಬಂದುದೇ ಆಗಿದ್ದು ಜನಪದ ಸಮಾಜದ್ದೇ ಆಗಿದೆ. ಅ. ವಿ. ಪಾಟೀಲ : ಕರ್ನಾಟಕ ಭಾರತಿ, ಪು. 150, ಜನಪದ ಸಾಹಿತ್ಯದಲ್ಲಿ ಎಲ್ಲಮ್ಮನ ಸಂಪ್ರದಾಯದ ಸುಳುಹುಗಳು'.
ತೆಲುಗು ಜನಪದ ವೀರಗಾಥಗಳಲ್ಲಿ ಕನ್ಯಕಮ್ಮ, ಕಾಮಮ್ಮ, ಸನ್ಯಾಸಮ್ಮ, ಎರುಕಮ್ಮ, ಸಾಸೂಲು ಚಿನ್ನಮ್ಮ, ವೀರರಾಜಮ್ಮ, ತಿರುವತಮ್ಮ, ರಾವುಲಮ್ಮ, ಈಡಿಗದೇವಮ್ಮ, ರತ್ನಕೊಮಾರುಡುಕಥ, ಮಲ್ಲಿಕದೇವಮ್ಮಕಥ, ಇತ್ಯಾದಿ 'ಅಸ್ಪಷ್ಟ' ಚಾರಿತ್ರಿಕ ಮತ್ತು ಪೌರಾಣಿಕ ಗೀತಗಳಲ್ಲಿ ಯಾವುದಾದರೂ ಒಂದರಲ್ಲಿ 'ರುದ್ರ' ಮತ್ತು 'ಎಲ್ಲಮ್ಮ'ನಿಗೆ ಸಂಬಂಧಪಟ್ಟ ಕಥಾನಕವಿದೆಯೋ ಗುರುತಿಸಬೇಕು. ಆಗ ಒಂದು ಹೊಸ ಜಾಡು ದೊರೆಯಬಹುದು. ತಂಗಿರಾಲ ವೇಂಕಟಸುಬ್ಬರಾವು : 'ತೆಲುಗು ವೀರಗಾಥೆಗಳು' 3, ಸಾಧನೆ, ಪು. 12, ಸಂ. 1, ಸಂಚಿಕೆ 4, 1972.

24 ಚಂದ್ರಶೇಖರ ಕಂಬಾರ : ಸವದತ್ತಿ ಎಲ್ಲಮ್ಮ, ಐ.ಬಿ.ಎಚ್. ಪ್ರಕಾಶನ, ಪು. 9-10.

ಎಲ್ಲಮ್ಮ 'ಒರಗಲ್ಲಿ'ಗೆ ಹೊರಟಾಗ ಅವಳ ಜೊತೆ ಮಾತಂಗಿ ಹೊರಡುವುದು, ಅವಳು ಲಿಂಗವಂತ ದಾನಾರಿಗೌಡನ ಸೊಕ್ಕು ಮುರಿಯುವುದು, ರುದ್ರನ ಲಿಂಗಗಳನ್ನು ಎಲ್ಲಮ್ಮ ಕಿತ್ತಿಹಾಕಿಸುವುದು, ಇವೆಲ್ಲ ಎಲ್ಲಮ್ಮನ ಶೈವ ವೈರುಧ್ಯದ ಸಂಗತಿಗಳ ನಿದರ್ಶನಗಳಾಗಿದ್ದು ಎಲ್ಲಮ್ಮ ಅಚ್ಚ ದ್ರಾವಿಡ ವರ್ಗದ ಶೈವಕ್ಕಿಂತ ಅನ್ಯವಾದ ವೃಂದಕ್ಕೆ ಸಂಬಂಧಪಟ್ಟಿರುವ ಸಾಧ್ಯತೆಯನ್ನೇ ಸೂಚಿಸುತ್ತವೆ. ಎಲ್ಲಮ್ಮನ ಈ ಕ್ಷೇತ್ರದಲ್ಲಿ ಮಾತಂಗಿಯ ಗುಡಿಯೂ ಇರುವುದು ಇವರಿಬ್ಬರ ಗಾಢ ಸಂಬಂಧದ ಸಾಕ್ಷಿಯಾಗಿದೆ.

ಏಕಯ್ಯ — ಜೋಗಯ್ಯ — ಎಲ್ಲಮ್ಮ

ಎಲ್ಲಮ್ಮನ ಗುಡಿಗೆ ಹತ್ತಿರ ಇರುವ ಎಣ್ಣೆಹೊಂಡದ ಬಲಗಡೆಗೆ ಮುಂದೆ ಮಾತಂಗಿ ಗುಡಿಯ ಹಾದಿಯಲ್ಲಿರುವ ಭೈರವೇಶ್ವರ ಮಠವಿದ್ದು ಅಲ್ಲಿ ಏಕಯ್ಯ ಜೋಗಯ್ಯ ಗೋರಕನಾಥರ ವಿಗ್ರಹಗಳೂ ಇರುವುದನ್ನು ಗುರುತಿಸಲಾಗಿದೆ. ಶಾಕ್ತಪಂಥ ಪ್ರಬಲವಾಗಿದ್ದು, ಅದರಲ್ಲಿ ಕಾಪಾಲಿಕರ ಪರಂಪರೆಯ 'ಬಾರಾನಾಥ' ಪಂಥವೊಂದು ಏರ್ಪಟ್ಟು ಭಾರತದ ವಿಭಿನ್ನ ಪ್ರದೇಶಗಳಲ್ಲಿ ಇವರು ಅಲೆದದ್ದು ಐತಿಹಾಸಿಕ ಸತ್ಯವಾಗಿದೆ.[25] ಉತ್ತರದಿಂದ ದಕ್ಷಿಣಕ್ಕೆ ಪ್ರಸರಣಗೊಂಡ ನಾಥ ಸಂಪ್ರದಾಯದ ಸಿದ್ಧರು 'ಸಿದ್ಧಾಚಲ' ವೆಂಬ, ಪೌರಾಣಿಕವಾಗಿ 'ಸಿದ್ಧನಕೊಳ್ಳ' ವೆಂದು ಇಂದಿಗೂ ಕರೆಯಲ್ಪಡುವ ಈ ಪ್ರದೇಶದಲ್ಲಿ ವಾಸವಾಗಿದ್ದು ಅವರು ಅನೇಕ ಸಿದ್ಧಿಗಳನ್ನು ಪಡೆದ ಪ್ರಭಾವಶಾಲಿ ವ್ಯಕ್ತಿಗಳಾಗಿದ್ದರು. ಇಲ್ಲಿ ವಾಸವಾಗಿದ್ದ ಅನೇಕ ಸಿದ್ಧರಲ್ಲಿ 'ಏಕನಾಥ ಜೋಗಿನಾಥ'ರಿಬ್ಬರು ಕುಷ್ಟರೋಗ ಪೀಡಿತಳಾದ ಮತ್ತು ತಮ್ಮ ಆಶ್ರಯಕ್ಕೆ ಬಂದ ಎಲ್ಲಮ್ಮನಿಗೆ ಆಶ್ರಯ ನೀಡಿ, ಆಕೆಯ ಸೇವೆಗೆ, ನಿಷ್ಠೆಗೆ ಮೆಚ್ಚಿ ಆಕೆಯ ರೋಗ ಕಳೆದಿರಬೇಕು. ಅವರ ಮಹಿಮೆಯನ್ನೇ ಏಕಯ್ಯ ಜೋಗಯ್ಯ ಎಂದು ಹಾಡುತ್ತ ಎಲ್ಲಮ್ಮ ಅವರ ಕೃಪೆಗೆ ಪಾತ್ರಳಾಗಿರಬೇಕು. ಅವರಿಂದ ಅನೇಕ ಸಿದ್ಧಿ ಶಕ್ತಿಗಳ ಸಂಪಾದಿಸಿದ ಎಲ್ಲಮ್ಮ ಕಾಲಾನುಕ್ರಮದಲ್ಲಿ ಶಕ್ತಿದೇವತೆಯಾಗಿ ಮೆರೆದಿರಬೇಕು – ಅಲ್ಲಿ ಮೊದಲೇ ಇದ್ದಿರಬಹುದಾದ ದೇವಾಲಯವೊಂದರಲ್ಲಿ ಸಮೀಕರಣಗೊಂಡಿರಬೇಕು – ಅಥವಾ ಭಕ್ತರಿಂದ ಒಂದು ದೇವಾಲಯವೇ ನಿರ್ಮಾಣಗೊಂಡಿರಬೇಕು. ನಾಥಪಂಥ, ಶಾಕ್ತ ಪಂಥಗಳ ಸಂಘರ್ಷಣೆ ಮತ್ತು ಏಕನಾಥ ಜೋಗಿನಾಥರ ಕಾಲನಿರ್ಣಯವಾದರೆ ಅದೇ ಎಲ್ಲಮ್ಮನ ಕಾಲನಿರ್ಣಯಕ್ಕೆ ಒಂದು ಕೈದೀಪವಾದೀತು.

---

25 ಅಲ್ಲಮಪ್ರಭು ಮತ್ತು ಗೋರಕನಾಥರ ಪ್ರಸಂಗವನ್ನು ಸ್ಮರಿಸಿಕೊಳ್ಳಬಹುದು. 'ಗೋರಖನಾಥ ಸಂಪ್ರದಾಯ ಉತ್ತರದ ಕ್ಷತ್ರಿಯರಿಂದ ದಕ್ಷಿಣಕ್ಕೆ ಪ್ರಸಾರವಾಯಿತೆಂದೂ ಕದ್ರಿ, ಮಂಗಳೂರು, ಬಟ್ವಾ, ಅಲ್ಲಾವರ, ಹಂಡಿ ಬಡಗನಾಥ ಚುಂಚನಗಿರಿ ಇತ್ಯಾದಿ' ಈ ಪಂಥದ ಮಠಗಳೆಂದು ಹೇಳಲಾಗಿದೆ. ನಂ. ನಾರಾಯಣಗೌಡ : ಚೌಡಿಕೆ ಕಾವ್ಯಗಳು, ಪು. XXX

ರೇಣುಕಾ – ಯಕ್ಷಿಣಿ – ಜತ್ತಕ್ಕ – ಎಲ್ಲಮ್ಮ

ಇನ್ನು 'ರೇಣುಕೆ' 'ಯಕ್ಷಿಣಿ'ಯೆಂದೂ ಈ ಯಕ್ಷಿಣಿ ಪದವೇ 'ಎಲ್ಲಮ್ಮ' ನಾಗಿ ಪರಿವರ್ತನೆಗೊಂಡಿತೆಂದೂ ಚರ್ಚಿಸಲಾಗಿದೆ.[26]

ಎಲ್ಲಮ್ಮ ಎಲ್ಲೆಯ ಅಮ್ಮ ಆದ್ದರಿಂದ ಎಲ್ಲಮ್ಮ ಎಂದು ಹೇಳಬೇಕಾಗುತ್ತದೆ. ಜಗದಂಬಾ ಇತ್ಯಾದಿ ಶಬ್ದಗಳೊಡನೆ ಸಂಸ್ಕೃತೀಕರಿಸಿ ಮೂಲಾರ್ಥವನ್ನು ತಿಣುಕುವುದು ಸರಿಯೇ ? ಎಂದು ಪ್ರಶ್ನಿಸಿದ ನಾರಾಯಣಗೌಡರು 'ಯಕ್ಷಿಣಿ' ಯಿಂದ 'ಎಲ್ಲಮ್ಮ' ಶಬ್ದ ಸಿದ್ಧಿಸಿತೆಂದು[27] ತೋರಿಸುವುದಕ್ಕಾಗಿ ಮಾಡಿರುವುದೂ ಅದೇ.

'ಜಗದಂಬಾ' ಇತ್ಯಾದಿ ಶಬ್ದಗಳೊಡನೆ ಸಂಸ್ಕೃತೀಕರಿಸಿ ತಿಣುಕುವುದು ಖಂಡಿತ ತಪ್ಪು. ಹಾಗಾದರೆ 'ಯಕ್ಷಿಣಿ' ಶಬ್ದವನ್ನು ಹಿಡಿದು ತಿಣುಕುವುದೇಕೆ ? 'ಯಕ್ಷಗಾನ' 'ಎಕ್ಕಲಗಾಣ' ಪಾದರೂಪವನ್ನು ನೆನಪಿಗೆ ತಂದುಕೊಂಡು, ಯಕ್ಷಿಣಿ – ಯಕ್ಷಿಣಮ್ಮ – ಎಕ್ಕಲಮ್ಮ – ಎಕ್ಲಮ್ಮ – ಎಲ್ಲಮ್ಮ ಎಂದು ಎಲ್ಲಮ್ಮ ಶಬ್ದ ಸಿದ್ಧಿಸಿತೆಂದು ಹೇಳುತ್ತಾರೆ. ಈ ನಡುವೆ ಯಕ್ಷಿಣಿ ಜಕ್ಕಿಣಿ ಜತ್ತಕ್ಕ ಎನ್ನುವಲ್ಲಿಯ 'ಜಕ್ಕಿಣಿ' ಅಥವಾ 'ಜತ್ತಕ್ಕ' ಶಬ್ದಗಳು ಅವರ ದೃಷ್ಟಿಯಿಂದ ನಡುವೇ ಕಳಚಿಕೊಂಡುಹೋಗಿವೆ. ಆದುದರಿಂದ ಅವರ ಈ 'ಸಿದ್ಧಿಸಿದ ಶಬ್ದ' ಊಹೆಯಾಗಿಯೇ ಉಳಿಯುತ್ತದೆ. ಜನಪದ ಹಾಡುಗಳಲ್ಲಿ ದಾನಾಲಿಗೌಡ, ಸಿರ್ವಾಣಿಗೌಡ, ತಮ್ಮಣ್ಣಗೌಡ, ಬಾಡೆಲ್ಲಿ ಗೌಡ, ಚಿಕ್ಕಲ್ಲಿಗೌಡ, ದೊಡ್ಡೆಲ್ಲಿಗೌಡ, ಮಲ್ಲೇಯುಗೌಡ —

> ಯಮ್ಮ ಯಲ್ಲಾರ ಬಾಯಲ್ಲು
> 'ಎಲ್ಲಿ' ಶಬುದವಮ್ಮಾ ರಾಮರಾಮ
> 'ಎಲ್ಲಮ್ಮ' ರಾಮರಾಮ ಎಂದೋ, 'ಶರಿಯೆಲ್ಲ' ಎಂದೋ

ಹೇಳಲಾಗಿದೆ. ಕಲ್ಲಮ್ಮ, ಕಲ್ಲಪ್ಪ, ದೊಡ್ಡಪ್ಪ, ಇತ್ಯಾದಿ ಶಬ್ದಗಳು ಅಚ್ಚಕನ್ನಡದ ಸಿದ್ಧಶಬ್ದಗಳು. ಹಾಗೆ ಎಲ್ಲಮ್ಮ ಎನ್ನುವುದು ಅನ್ಯಭಾಷಾ ಶಬ್ದದ ಮೂಲದಿಂದ ಸಾಧಿಸಿದ ಶಬ್ದವಲ್ಲ; ಕನ್ನಡ ಜನಪದ ನುಡಿಯ ಸಹಜ ನಿಷ್ಪನ್ನ ಶಬ್ದ. ಎಲ್ಲಮ್ಮ ಹೆಸರಿನ ವ್ಯಕ್ತಿ ದೇವತೆಯಾಗಿ ಅರ್ಚನೆಗಳಲ್ಲಿ, ಆರಾಧನೆಗಳಲ್ಲಿ ತೊಡಗಿದಾಗ ಆಕೆ ಎಲ್ಲೆಯ ಅಮ್ಮ ಎನ್ನುವುದೊ, 'ಎಲ್ಲರ ಅಮ್ಮ' ಎನ್ನುವುದೋ ಆ ಜನಪದ ನಿಷ್ಪನ್ನ ಶಬ್ದ ಪಡೆದುಕೊಳ್ಳುವ ಅರ್ಥವ್ಯಾಪ್ತಿ, ಧ್ವನಿಯ ಸಂಕೇತ ಅಷ್ಟೆ. ಎಲ್ಲಮ್ಮನ ಆರಾಧನಾ ಪರಂಪರೆ ವಿಭಿನ್ನ ಪ್ರದೇಶಗಳಿಗೆ ಹರಡಿದಾಗ ‹ಉರ್ಗಂಟಿ

---

26 ನಂ. ನಾರಾಯಣ ಗೌಡ ಚಾಡಿಕ ಕಾವ್ಯಗಳು, ಪು. xxxv

27 ಅದೇ, ಪು. xxxiv-v

ಎಲ್ಲಮ್ಮ' ತಂಗಿ, ಕಂಬಾದ ಮುಸಿಯುಮ್ಮ, ಮುಳ್ಕಟ್ಟಿ ಈರಣಗುಚ್ಚಮ್ಮ, ಕೊತ್ತೂರು ಎಲ್ಲಮ್ಮ, ಭವಾನಿ ಎಲ್ಲಮ್ಮ, ಗುತ್ತೆಲ್ಲಮ್ಮ, ಚಂದ್ರಗುತ್ತೆಲ್ಲಮ್ಮ ಇತ್ಯಾದಿ ಸ್ಥಳೀಕರಣಗೊಂಡ ಹೆಸರುಗಳೂ ಅದರಲ್ಲಿ ಸೇರಿಕೊಳ್ಳುತ್ತವೆ.

ಇನ್ನು ಎಲ್ಲಮ್ಮನಿಗೆ ಒಬ್ಬ ಅಣ್ಣ ಇದ್ದು ಅವನ ಹೆಸರು ಈರಣ್ಣ ಎಂದು ಹೇಳಲಾಗಿದೆ. 'ಗೊಡಚಿಯ ಈರಣ್ಣ' ಎಂದು ಜನಪದರು ಕರೆಯುವ ಈ ಪ್ರದೇಶದ ಕ್ಷೇತ್ರ ಶಿಷ್ಟಪದ ಪುರಾಣದ ವೀರಭದ್ರನದು, ಎಲ್ಲಮ್ಮನಂತೆಯೇ ವ್ಯಾಪ್ತಿಯನ್ನು ಪಡೆದ ಇನ್ನೊಂದು ದೇವತಾಶಕ್ತಿ ವೀರಣ್ಣ—ವೀರಭದ್ರ ವೀರಣ್ಣ ಒಬ್ಬ ಸ್ಥಳೀಯ ಸಾಂಸ್ಕೃತಿಕ ವೀರನಾಗಿದ್ದು ಶಿಷ್ಟಪದ ವೀರಭದ್ರನಲ್ಲಿ ಸಮೀಕರಣಗೊಂಡುದಕ್ಕೆ ಆಧಾರಗಳಿಲ್ಲ. ಗೊಡಚಿ ಸವದತ್ತಿಗೇನೂ ಅಷ್ಟೊಂದು ದೂರ ಅಲ್ಲ. ಈರಣ್ಣ ಎನ್ನುವ ಒಬ್ಬ ಅಣ್ಣ ಎಲ್ಲಮ್ಮನಿಗೆ ಇದ್ದಿರಬಹುದಾದರೆ–ಆರ್ಯ–ದ್ರಾವಿಡ ಮಿಶ್ರ ಸಂಸ್ಕೃತಿಯ ಸಂದರ್ಭದ ಎಲ್ಲಮ್ಮನ ಸಂಘರ್ಷಮಯ ಬದುಕಿನಲ್ಲಿ ಈರಣ ನ ಪಾತ್ರ ಪಾಲ್ಗೊಂಡಿದ್ದು ಜೈನ ಮತ್ತು ಜನಪದ ಪರಂಪರೆಯ ಎಲ್ಲಮ್ಮನ ಅಣ್ಣ 'ಕಾರ್ತವೀರ್ಯ' ಈ ಈರಣ್ಣನ ಹೆಸರನ್ನು ಆಕ್ರಮಿಸಿ ಜನಪದ ಕಥಾನಕದಲ್ಲಿ ಕಾರ್ತವೀರ್ಯ ಮಾತ್ರ ಉಳಿದನೇ ? ಎಲ್ಲದೂ ಸಂದೇಹಾಸ್ಪದವಾಗಿಯೇ ಇದೆ. ಇಷ್ಟಿದ್ದರೂ ಎಲ್ಲಮ್ಮನ ಒಂದು ಅತಿದುರ್ಬಲವೆಂದು ಕಾಣಬಹುದಾದ ಅನೇಕ ಪ್ರಶ್ನೆಗಳನ್ನು ದುತ್ತೆಂದು ನಿಲ್ಲಿಸುವ ಒಂದು ಸ್ಥೂಲ ಜೀವನದ ಚಿತ್ರವನ್ನು ಹೀಗೆ ರೇಖಿಸಬಹುದು :

ಅ) ಸೂಗಲ ಪ್ರದೇಶದ ಊರೊಂದರ ಬ್ರಾಹ್ಮಣೇತರ ಕುಲಗುಂಪಿನಲ್ಲಿ ಹುಟ್ಟಿದ ಎಲ್ಲಮ್ಮ–ತುಂಬ ಚೆಲುವೆಯಾಗಿರಲೂಬಹುದು–ಬಾಲ್ಯದಿಂದಲೇ ರೋಗಪೀಡಿತಳಾದಳು.

ಆ) ಸೊಗಲ ಕ್ಷೇತ್ರದಲ್ಲಿದ್ದಿರಬಹುದಾದ ಶಕ್ತಿದೇವತೆಯ ಭಕ್ತರಾಗಿದ್ದ ಆಕೆಯ ತಂದೆ ತಾಯಿಗಳು ದೇವತೆಯ ಸೇವೆಗೆ ತಮ್ಮ ಮಗಳನ್ನು ಇಟ್ಟರು. ಅದೇ ದೇವಾಲಯದ ಸಿದ್ಧರಲ್ಲಿ ಎಕ್ಕಯ್ಯ ಜೋಗಯ್ಯ ಈ ಬಾಲಿಕೆಯ ಮೇಲೆ ಕೃಪೆ ತೋರಿ ಗಿಡಮೂಲಿಕೆ ಇತ್ಯಾದಿಗಳ ಮೂಲಕ ಅವಳ ರೋಗವನ್ನು ಕಳೆದರು.

ಇ) ಕಾಲಾನಂತರದಲ್ಲಿ ಆಕೆ ಇದೇ ಕ್ಷೇತ್ರದಲ್ಲಿ ಅಧ್ಯಯನಕ್ಕಾಗಿ ಉತ್ತರದ ಕಡೆಯಿಂದ ಬಂದು ಇಲ್ಲಿಯೇ ನೆಲೆನಿಂತ ಒಬ್ಬ ಉಚ್ಚ ವರ್ಣದ–ಬ್ರಾಹ್ಮಣನಾಗಿರಲೂ ಸಾಧ್ಯ—ವ್ಯಕ್ತಿಯಿಂದ ಆಕರ್ಷಿತಳಾದಳು.

ಈ) ಈ (ಬ್ರಾಹ್ಮಣ) ವ್ಯಕ್ತಿಯೂ ಇವಳಿಂದ ಆಕರ್ಷಿತನಾದನು.

ಉ) ಮದುವೆಯಾಯಿತು. ಕಾಲಾನಂತರ ಇವಳಲ್ಲಿ ಪುನಃ ಕುಷ್ಠರೋಗ ಕಾಣಿಸಿತು. ಗಂಡನಿಂದ ತಿರಸ್ಕೃತಳಾದಳು.[28] ವ್ಯಭಿಚಾರದ ಆರೋಪವನ್ನೂ ಹೊತ್ತ ಇವಳು ಆಗ ಗರ್ಭಿಣಿ.

ಊ) ಕುಷ್ಠರೋಗಕ್ಕೆ ತುತ್ತಾದ ಇವಳನ್ನು ಯಾರೂ ತಮ್ಮ ಹತ್ತಿರ ಇಟ್ಟುಕೊಳ್ಳಲಿಲ್ಲ. ಜೋಗಿಗಳ ಬಾವಿ 'ಜೋಗಳ ಬಾವಿ' ಹತ್ತಿರದ ಸತ್ಯಕ್ಕ ಮಾತಂಗಿ ಆಸರೆ ಕೊಟ್ಟರು. ಅಕ್ಕತಂಗಿಯರಾದರು. ಮತ್ತೆ ರೋಗ ವಾಸಿಯಾಗುತ್ತದೆ. ಸಿದ್ಧರಲ್ಲಿ ಸೇವೆ ಮಾಡಿಕೊಂಡಿರುತ್ತಾಳೆ. ಗಂಡನ ಪತ್ತೆಯಿಲ್ಲ.

ಋ) ಮಗ ಹುಟ್ಟುತ್ತಾನೆ. ರಾಮ ದೊಡ್ಡವನಾದ ಮೇಲೆ ತಂದೆಯ ಹೆಸರಿಗಾಗಿ ಪೀಡಿಸುತ್ತಾನೆ. ಪತ್ತೆಯಿಲ್ಲದಂತೆ ಹೋದ ತನ್ನ ಗಂಡನ ವಿಷಯ ಹೇಳಿದರೂ ಮಗ ನಂಬುವುದಿಲ್ಲ, ಕಾಡಿಸುತ್ತಾನೆ.

ೠ) ಮುಂದೆ ಆಕಸ್ಮಾತ್ ಬಂದ ಎಲ್ಲಮ್ಮನ ಗಂಡ ಅವಳನ್ನು ತಿರಸ್ಕಾರದಿಂದ ಕಂಡು ರಾಮುನಿಗೆ ಅವಳ ಅಪರಾಧಕ್ಕಾಗಿ ಅವಳನ್ನು ಕೊಲ್ಲಲು ಹೇಳಿ ಮತ್ತೆ ಹೋಗುತ್ತಾನೆ.

ಎ) ಸತ್ಯಕ್ಕ ಮಾತಂಗಿ, ಸಿದ್ಧರಿಂದ ತಾಯಿಯ ಹಿರಿಮೆಯನ್ನು ಅರಿತ ರಾಮ ತಾಯಿಯನ್ನು ಕೊಲ್ಲುವುದಿಲ್ಲ. ಸಿದ್ಧರ ಸೇವೆಯಲ್ಲಿದ್ದ ಎಲ್ಲಮ್ಮ ಅವರ ಕೃಪೆಯಿಂದ ಮಹಿಮಾಶಾಲಿಯಾಗುತ್ತಾಳೆ. ಸಿದ್ಧಿಗಳನ್ನು ಹೊಂದಿ ಪ್ರಭಾವಿ ವ್ಯಕ್ತಿಯಾಗುತ್ತಾಳೆ. ಜನ ಈಕೆಯನ್ನು ದೇವಾಂಶ ಸಂಭೂತಳೆಂದು ಭಾವಿಸುತ್ತಾರೆ. ಪ್ರಬಲನಾದ ಮಗ ರಾಮನೂ ಈಕೆಯ ಜೊತೆ ನಿಲ್ಲುತ್ತಾನೆ. ಈಕೆಯ ಪ್ರಭಾವ ಬೆಳೆಯುತ್ತ ಹೋಗುತ್ತದೆ. ದೇವತೆಯ ಸೇವೆ ಕೈಕೊಂಡ ಬೇರೆ ಬೇರೆ ಊರುಗಳಿಗೆ ಹೋದಾಗ ಎಲ್ಲಮ್ಮನನ್ನು ಕಾಮುಕದೃಷ್ಟಿಯಿಂದ ನೋಡುತ್ತಾರೆ. ಅವರನ್ನೆಲ್ಲ ತನ್ನ ಶಕ್ತಿ ಮಹಿಮೆಗಳಿಂದ ಬಗ್ಗುಬಡಿಯುತ್ತಾಳೆ. ಮತ್ತೆ ಮತ್ತೆ ಅವಳ ಪ್ರಭಾವ ವ್ಯಾಪಕವಾಗುತ್ತ ಹೋಗುತ್ತದೆ. ನಿಮ್ನ ವರ್ಗದ ವಿವಿಧ ಜನಪದ ವೃಂದಗಳಲ್ಲಿ 'ತಾಯಿ' ಎಲ್ಲರ 'ಅಮ್ಮ' ಎನ್ನುವ ಭಾವನೆ. ವಿವಿಧ ವರ್ಗದ ಜನರಿಗೆ ಆಕೆ ಆಶ್ರಯದಾತೆಯಾಗುತ್ತಾಳೆ. ನಿರಾಶ್ರಿತರು, ವಿವಿಧ ವರ್ಗದ ಜನ ಈಕೆಯ ಭಕ್ತರಾಗುತ್ತಾರೆ. ತನ್ನ ಜೀವಿತ ಕಾಲದಲ್ಲಿಯೇ ಎಳೂಕೊಳ್ಳದಲ್ಲಿದ್ದು ಎಳುಕೊಳ್ಳದೆಲ್ಲಮ್ಮನಾಗಿ

---

೧. ಎಲ್ಲಮ್ಮ ಕ್ಷೇತ್ರಗಳೆಲ್ಲ ಆಕೆಯ ಹೆಸರಿನಿಂದ ಪ್ರಸಿದ್ಧಿಯಾಗಿವೆಯೆಂದು ಹೇಳುತ್ತ ಮಾತಂಗಿಯೊಡನೆ ಆಕೆಯ ಸಂಬಂಧ ಸವದತ್ತಿಯಲ್ಲಿ ಸ್ಪರ್ಶವಾಗಿರುವುದು ಗುರುತಿಸಿ 'ಮಾತಂಗಿಯ ಸಂಪ್ರದಾಯ ಹೇಳುವ ಇವಳು ಪತಿ ಪರಾಯಣೆಯಾದ ಸಾಧ್ವಿಯಾಗುವುದು ಅಸಂಭವವಾಗಿದೆ ಎನ್ನಬೇಕು' ಎಂದು ವಿವರಿಸಲಾಗಿದೆ. ಇದು ತುಂಬ ಕ್ರೂರವಾದ, ಸತ್ಯಕ್ಕೆ ಹೊರತಾದ ಮಾತು. (ಅ. ವಿ. ಪಾಟೀಲ : ಕ. ಭಾ. ಪು. ೧೪೫, ಅ – ನ. ೧೯೮೧).

ಪ್ರಸಿದ್ಧಿ ಪಡೆಯುತ್ತಾಳೆ. ದೇವತೆಯೆನ್ನುವ ಭಕ್ತಿ ಧಾರ್ಮಿಕ ಭಾವನೆಗಳು ಬೆಳೆಯುತ್ತದೆ. ದೇವರಿಗೆ ಬಿಡುತ್ತಿದ್ದ ಅನೇಕ ಪಾತ್ರದ,ದೇವದಾಸಿ ಜನರೂ ಬಂದು ಈಕೆಯ ಅರ್ಚನೆಯಲ್ಲಿ ಪಾಲುಗೊಂಡು ಕುಣಿದರು–ಹಾಡಿದರು. ಜೋಗಪ್ಪ ಜೋಗವ್ವ ಎಂದು ಕರೆಯಲ್ಪಟ್ಟರು. ಎಲ್ಲಮ್ಮ ಶಕ್ತಿಯ ಅವತಾರ ಎನ್ನುವ ಶ್ರದ್ಧೆ ಬೇರೂರಿತು. ಕಾಲಾನಂತರದಲ್ಲಿ ಎಲ್ಲಮ್ಮ ವಾಸವಾಗಿದ್ದ ಶಕ್ತಿದೇವತೆಯ ಕ್ಷೇತ್ರ ಎಲ್ಲಮ್ಮ ದೇವತೆಯ ಕ್ಷೇತ್ರವಾಯಿತು.

ಮಾತೃಪೂಜೆ ಶಕ್ತಿದೇವತೆಯ ಪರಿಕಲ್ಪನೆ, ಪರಂಪರೆ. ಏಳುಕೊಳ್ಳದ ಎಲ್ಲಮ್ಮ ಕ್ಷೇತ್ರದ ಸಂಸ್ಥೀಕರಣದಲ್ಲಿ ಪಾತ್ರವಹಿಸಿದ ಬಗೆ. ಮಿತ್ರ ಸಂಸ್ಕೃತಿಗಳ ಸ್ವರೂಪ ರಚನೆ, ಲಭ್ಯ ಸಾಮಗ್ರಿಯಲ್ಲಿ ದೊರೆಯುವ ಅನೇಕ ವೈರುಧ್ಯಗಳು–ಸಾಂಸ್ಕೃತಿಕ ದಾಳಿ, ನಿರಾಕರಣೆ, ಸ್ವೀಕರಣ, ಸ್ಥಿರೀಕರಣದ ವಿವಿಧ ಹಂತಗಳು[29] ಹೀಗೆ ತಲಸ್ಪರ್ಶಿಯಾದ ವಿವಿಧ ಆಯಾಮಗಳನ್ನು ಧ್ರುವೀಕರಿಸುವ ಒಂದು ಸಂಶೋಧನೆ ಇನ್ನುಮುಂದೆ ನಡೆಯಬೇಕಾಗಿರುವ ಕಾರ್ಯ. 'ಎಲ್ಲಮ್ಮ ಮಾಯಕಾರ್ತಿ' ಆಕೆ ಯಾರ ಕೈಗೂ ಸಿಗುವುದಿಲ್ಲವಂತೆ.

ಈ ಚಿಂತನ ಮಂಥನಗಳಿಗೆ ಪ್ರೇರಣೆ ? ಆ 'ಮಾಯಕಾರ್ತಿ'ಯದೇ.

---

29. ಈ ಎಲ್ಲ ಅಂಶಗಳನ್ನು ಸೂಚಿಸುವ ಒಂದು ರಾಚನಿಕ ಪಟ್ಟಿಯನ್ನು ಕೊಡಲಾಗಿದೆ.

'ಅಲ್' ಪ್ರತ್ಯಯ

ಉಪ್ಪಂಗಳ ರಾಮಭಟ್ಟ

ಅ, ಇ, ಉ ಎಂಬ ಸ್ವರಾಕ್ಷರಗಳಿಂದ ಅವನು ಇವನು ಉವನು ಮೊದಲಾದ ಸರ್ವನಾಮಗಳಂತೆ ಅಲ್ಲಿ ಇಲ್ಲಿ ಉಲ್ಲಿ ಎಂಬ ಸ್ಥಳವಾಚಕಗಳೂ ರೂಪುಗೊಂಡಿರಬೇಕು. ಅದು ಇದು ಉದು ಗೆ ಆ, ಈ, ಊ ಆದೇಶಗಳನ್ನು ವ್ಯಾಕರಣದಲ್ಲಿ ಹೇಳಿದೆ.[1] ಹಳಗನ್ನಡದಲ್ಲಿದ್ದ 'ಉದು' ಹೊಸಗನ್ನಡದಲ್ಲಿ ಕಡಿಮೆಯಾಗಿದೆ. 'ಹೇಳುವುದು' 'ಮಾಡುವುದು' ಎಂಬಂತಹ ಕಡೆಗಳಲ್ಲಿ ಉಳಿದುಕೊಂಡಿದೆ. ತುಳುವಿನಲ್ಲಿ ಅದಕ್ಕೆ ಸಂವಾದಿಯಾಗಿ 'ಉಂಡ್' ಇದೆ. 'ಉಲ್ಲಿ' ಎಂಬ ಸ್ಥಳವಾಚಕ ಹಳಗನ್ನಡದಲ್ಲಾಗಲೀ ಹೊಸಗನ್ನಡದಲ್ಲಾಗಲೀ ಕಂಡು ಬರುವುದಿಲ್ಲ. "ಪೂರ್ವದ ಹಳಗನ್ನಡದಲ್ಲಿರುವ 'ಉಳ್' ಎಂಬುದು ಕಣ್ಮರೆಯಾಗಿರುವ 'ಉಲ್' ಆಗಿರಬೇಕು"[2] ಎಂದು ದಿ. ಪ್ರೊ. ಮರಿಯಪ್ಪಭಟ್ಟರು ಊಹಿಸಿರುವುದು ಚಿಂತನೀಯ. 'ಉಳ್' ಎಂಬುದೇ ಧ್ವನಿ ಪರಿವರ್ತನೆಯಿಂದ 'ಒಳ್' ಆಗಿ ಸಪ್ತಮೀವಿಭಕ್ತಿ ಪ್ರತ್ಯಯವಾಗಿ ಹಳಗನ್ನಡದಲ್ಲಿ ಬಳಕೆಯಾಯಿತು. ಸ್ಥಳವಾಚಕವಾದ 'ಒಳ್' ಮತ್ತು 'ಅಲ್ಲಿ' ಹಳಗನ್ನಡದಲ್ಲಿ ಸಮಾನವಾಗಿ ಸಪ್ತಮೀವಿಭಕ್ತಿ ಪ್ರತ್ಯಯಗಳಾಗಿ ಬಳಕೆಯಾದುವು.[3] ದಿಗ್ವಾಚಕದಲ್ಲೂ 'ಅಲ್' ಪ್ರಯೋಗವಾಗುತ್ತದೆ. ಉದಾ– ಮೂಡಲ್, ತೆಂಕಲ್ ಇತ್ಯಾದಿ. 'ಅಲ್' ಸ್ಥಳವಾಚಕವಾದುದರಿಂದಲೇ ದಿಗ್ವಾಚಕದೊಂದಿಗೆ ಸೇರುವುದು ಮತ್ತು ಸಪ್ತಮೀ ಪ್ರತ್ಯಯವಾಗುವುದು. ಹಳಗನ್ನಡದಿಂದೀಚೆಗೆ 'ಅಲ್ಲಿ' ಎಂಬುದೇ ಹೆಚ್ಚು ಹೆಚ್ಚಾಗಿ ಸಪ್ತಮೀ ಪ್ರತ್ಯಯವಾಗಿ ಬಳಕೆಯಾದಂತೆ 'ಒಳ್' ಕಣ್ಮರೆಯಾಯಿತು. 'ಒಳ್'ಗೆ 'ಉಳ್' ಮೂಲವಾದಂತೆ 'ಅಲ್ಲಿ'ಗೆ 'ಅಲ್' ಮೂಲರೂಪವಿರಬಹುದೆನಿಸುತ್ತದೆ. "ಕತ್ತುರಿಯಲ್ ಬರೆದಂತಪ್ಪ ವಿಕ್ರಾಂತ ತುಂಗನ ವಿರಾಸೆಗಳ್" ಎಂಬ ಪಂಪಭಾರತದ ಪ್ರಯೋಗದಲ್ಲಿ (ದ್ವಿತೀಯಾಶ್ವಾಸ, ಪುಟ 48) 'ಅಲ್' ಎಂಬುದು 'ಅಲ್ಲಿ'ಯ ಸ್ಥಾನದಲ್ಲೇ ಬಂದಿದೆ. ದಿಗ್ವಾಚಕದಲ್ಲಿ ಬರುವ 'ಅಣ್'[4] (ಉದಾ— ಮೂಡಣ, ತೆಂಕಣ) ಬಹುಶಃ 'ಅಲ್' ಎಂಬುದರ ರೂಪಾಂತರವೆನಿಸುತ್ತದೆ.

'ಅಲ್' ಎಂಬುದರ ರೂಪಾಂತರವಾದ 'ಅಲ್ಲಿ' ಸಪ್ತಮೀಪ್ರತ್ಯಯವಾದರೆ ಇನ್ನು ಹಲವೆಡೆಯಲ್ಲಿ ಅವರ ಪ್ರಯೋಗವೈವಿಧ್ಯ ಕುತೂಹಲಕರವಾಗಿದೆ.

ಸತಿ ಸಪ್ತಮೀ ಪ್ರತ್ಯಯವಾಗಿ 'ಅಲ್'–ಕನ್ನಡದ ಸತಿಸಪ್ತಮೀ ಪ್ರಯೋಗವು ಸಂಸ್ಕೃತದ ಆ ಪ್ರಯೋಗಕ್ಕೆ ಸಮಾನವಲ್ಲವಾದರೂ ಅದನ್ನು ಹೋಲುವುದರಿಂದ ಕೇಶಿರಾಜನು ಆ ಹೆಸರನ್ನೇ ಪ್ರಯೋಗಿಸಿದ್ದಾನೆ. ಉಳಿದ ವೈಯಾಕರಣರು ಆ ಹೆಸರನ್ನು ಬಳಸಿಲ್ಲ. ಕರ್ಣಾಟಕ ಶಬ್ದಾನುಶಾಸನಕಾರನು ಅದರ ಪ್ರಯೋಗವನ್ನು ವಿವರಿಸಿದ್ದರೂ ಆ ಹೆಸರನ್ನು ಹೇಳಿಲ್ಲ.

ಕೇಶಿರಾಜನು ಸತಿಸಪ್ತಮೀ ಪ್ರತ್ಯಯವಾದ 'ಎ' ಕಾರದ ಸ್ಥಾನದಲ್ಲಿ ಇನೆಗಂ, ಉಮಂ, ಅನ್ನಂ, ಅನ್ನೆಗಂ, ಇನಂ, ಅಲೊಡಂ, ಅಲೊಡನೆ ಎಂಬವು ಬರುತ್ತವೆ[5] ಎಂದಿದ್ದಾನೆ. ಶಬ್ದಾನುಶಾಸನದಲ್ಲೂ ಇದೇ ವಿಚಾರವಿದೆ.[6] ಕೇಶಿರಾಜನು "ಕೆಲವರು ಸತಿಸಪ್ತಮಿಯಲ್ಲಿ 'ಅಲ್' ಮಾತ್ರ ಪ್ರಯೋಗಿಸುತ್ತಾರೆ, ಚದುರರು ಅದನ್ನು ಮೆಚ್ಚರು 'ಅಲೊಡಂ' ಎಂದರೇ ಶುದ್ಧ"[7] ಎಂದು ವಿಧಿಸಿದ್ದಾನೆ. ಶಬ್ದಾನುಶಾಸನ ಕಾರನು 'ಅಲ್' ಎಂಬುದನ್ನೂ ಸ್ವೀಕರಿಸಿದ್ದಾನೆ. ಈ ವಿಷಯದಲ್ಲಿ ಇವರಿಬ್ಬರಲ್ಲಿ ಮತಭೇದ ತೋರುತ್ತದೆ. ಇದಕ್ಕೆ ಕಾರಣವಿಷ್ಟೆ. ಕೇಶಿರಾಜನ ಮತ್ತು ಹಿಂದಿನ ಕಾಲದಲ್ಲಿ 'ಅಲೊಡಂ' ಪ್ರಯೋಗವೇ ಹೆಚ್ಚಾಗಿದ್ದು ಮತ್ತೆ 'ಅಲ್' ಪ್ರಯೋಗ ತೊಡಗಿರಬೇಕು. ಮಾತ್ರವಲ್ಲದೆ 'ಅಲ್' ಎಂಬುದಕ್ಕೆ ನಿಷೇಧಾದಿ ಬೇರೆ ಅರ್ಥ ಗಳೂ ಇರುವುದರಿಂದ ಸಂಶಯ ಬಾರದಂತೆ ಅವನು ಹಾಗೆ ವಿಧಿಸಿರಬೇಕು. ಆದರೆ ಶಬ್ದಾನುಶಾಸನಕಾರನ ಕಾಲಕ್ಕಾಗುವಾಗ, ಮುಂದಿನ ಮೂರು ಶತಮಾನಗಳಲ್ಲಿ 'ಅಲ್' ಎಂಬುದೇ ರೂಢವಾದುದರಿಂದ ಅವನು ಅದನ್ನೂ ಸ್ವೀಕರಿಸಿದನು. ಕೇಶಿರಾಜನು ತಪ್ಪೆಂದ ಪ್ರಯೋಗ, ಮುಂದೆ ಹೊಸಗನ್ನಡದಲ್ಲೂ ಸರಿಯೆನಿಸಿದುದನ್ನು ನೋಡಿದರೆ ಆಗಲೇ ಆ ಪರಿವರ್ತನೆ ತೊಡಗಿತ್ತೆಂಬುದು ಸ್ಪಷ್ಟ. ಸತಿಸಪ್ತಮಿಯ ಉಳಿದೆಲ್ಲಾ ಪ್ರತ್ಯಯಗಳೂ ಮೂಲೆಪಾಲಾಗಿ 'ಅಲ್' ಒಂದೇ ಹೊಸಗನ್ನಡದಲ್ಲಿ 'ಅಲು' ವಾಗಿ ನೆಲೆನಿಂತಿತು. ಉದಾ–ಗಾಯಕನು ಹಾಡಲು ಅರಸನು ಮೆಚ್ಚಿದನು. ಭಿನ್ನಕರ್ತೃತ್ವವಿರುವಲ್ಲಿ ಮಾತ್ರ ಅಲ್–ಅಲು (ಅಲೊಡಂ) ಸತಿಸಪ್ತಮಿಯಾಗುತ್ತದೆ. ಒಂದೇ ಮೂಲದವಾದ ಅಲ್, ಅಲ್ಲಿ ಎರಡು ಭಿನ್ನ ಪರಿಸರಗಳಲ್ಲಿ ಸೇರಿಕೊಂಡುವು. 'ಅಲ್' ಧಾತುವಿನೊಂದಿಗೆ ಸೇರಿ ಅವ್ಯಯವಾಗಿ ಸತಿಸಪ್ತಮಿ ಅರ್ಥವನ್ನು ಕೊಟ್ಟಿತು. 'ಅಲ್ಲಿ' ನಾಮವಾಚಕಗಳೊಡನೆ ಸೇರಿ ಸಪ್ತಮೀ ಪ್ರತ್ಯಯವಾಯಿತು.

'ಅಲ್' ಎಂಬುದರ ಇತರ ಪ್ರಯೋಗವೈವಿಧ್ಯವನ್ನು ಕೇಶಿರಾಜನು ವಿವರಿಸಿದ್ದಾನೆ–ಪ್ರತಿಷೇಧವಿಧಿ, ಪ್ರಯೋಜನವಸ್ತ್ವಾಶ್ರಿತಹೇತುಕ್ರಿಯೆ, ಕ್ರಿಯೆಯು ಬೇರೊಂದು ಕ್ರಿಯೆಯ ಫಲವಾಗಿ ಬರುವಲ್ಲಿ ಅಲ್ ಬರುತ್ತದೆ.[8] ಪ್ರತಿಷೇಧ–ಉಸಿರಲಿಂ, ಪುಗಲ್.

ಪ್ರಯೋಜನವಸ್ತ್ವಾಶ್ರಿತ ಹೇತುಕ್ರಿಯೆ – ಬಿಡದೀಯಲ್ ತಕ್ಕ ಸಂಪತ್ತಿ. ಕ್ರಿಯೆಯು ಬೇರೊಂದು ಕ್ರಿಯೆಯ ಫಲವಾಗಿರುವಲ್ಲಿ – ಗೆಲಲ್ ಬಗೆದಂ. 'ಅಲ್'

ಎಂಬುದಕ್ಕೆ ಪ್ರತಿಷೇಧವಲ್ಲದಲ್ಲಿ ಕೆಲವೊಮ್ಮೆ 'ಕೆ'ಕಾರ ಬರುತ್ತದೆ.೨ – ನುಡಿಯಲ್ಕೆ ಬಲ್ಲಂ. ಕೆಲವೊಮ್ಮೆ 'ಅಲ್'ನ 'ಲ್' ಕಾರಕ್ಕೆ ಲೋಪ — ತರಲ್ವೇಳ್ — ತರವೇಳ್. ಹೊಸಗನ್ನಡದಲ್ಲಿ 'ನುಡಿಯಲ್ಕೆ' ಎಂಬುದು ಮಧ್ಯಸ್ವರಾಗಮದಿಂದ 'ನುಡಿಯಲಿಕ್ಕೆ' ಎಂದಾಗುತ್ತದೆ. 'ಕೆ' ಬಾರದಿದ್ದರೆ ಅಲ್ — ಅಲು — ನುಡಿಯಲು ಎಂದಾಗುತ್ತದೆ. 'ಲ್' ಕಾರ ಲೋಪವಾಗುವುದೂ ಹೊಸಗನ್ನಡದಲ್ಲಿದೆ. ತರಲು ಹೇಳು — ತರಹೇಳು, ಮಾಡಲು ಬೇಡ — ಮಾಡಬೇಡ.

'ಅಲ್' ಪ್ರತ್ಯಯ ಸೇರಿದ ಕೃದಂತಾವ್ಯಯಕ್ಕೆ 'ಕೆ' ಎಂಬ ನಾಮವಿಭಕ್ತಿ ಪ್ರತ್ಯಯ ಹತ್ತುವುದಾದರೂ ಹೇಗೆ ? ಉಳಿದ ವಿಭಕ್ತಿಪ್ರತ್ಯಯಗಳೇಕೆ ಹತ್ತುವುದಿಲ್ಲ ? ಕನ್ನಡದಲ್ಲಿ ಅವ್ಯಯಗಳೆನಿಸಿದ ಕೆಲವು ಶಬ್ದಗಳಿಗೆ ವಿಭಕ್ತಿಪ್ರತ್ಯಯ ಸೇರುವುದು ಅಪೂರ್ವವಲ್ಲ. ಉದಾ – ಆಗಿಂದ, ಈಗಿಂದ, ಮೆಲ್ಲನೆಯ. ನುಡಿಯಲ್ಕೆ ಮಾಡಲ್ಕೆ ಎಂಬಲ್ಲೂ ಹೀಗೆಯೇ ಆಗುತ್ತದೆನ್ನಬಹುದೇ ?

ಕೃದಂತನಾಮವಾಗಿಸಲು 'ಅಲ್'—ಧಾತುವನ್ನು ನಾಮವಾಗಿಸಲು 'ಅಲ್' ಸೇರುತ್ತದೆನ್ನಬಹುದು. ಕನ್ನಡದಲ್ಲಿ, ಇತರ ದ್ರಾವಿಡ ಭಾಷೆಗಳಲ್ಲೂ ಧಾತುವಿಗೆ ಅಲ್, ಲ್, ಸೇರಿ ಕೃದಂತನಾಮವಾಗುವುದು, ಅದಕ್ಕೆ ನಾಮ ವಿಭಕ್ತಿಪ್ರತ್ಯಯಗಳು ಸೇರುವುದು ರೂಢಿಯಲ್ಲಿದೆ. ಇದನ್ನು ಕೃದಂತನಾಮ, ಕೃಲ್ಲಿಂಗ ಅಥವಾ ಕೃನ್ನಾಮವೆಂದು ಕನ್ನಡ ವೈಯಾಕರಣರು ಗುರುತಿಸಲಿಲ್ಲ. ಉದಾ-ಸುಯ್-ಸುಯ್ಯಲ್ ಉಯ್ ಉಯ್ಯಲ್, ಉಯ್ಯಾಲೆ, ಕುಯ್–ಕುಯ್ಯಲ್, ಕೊಯ್ಲು, ಪೊಯ್–ಪೊಯ್ಯಲ್, ಪೊಯ್ಲು (ಹುಯಿಲು), ಸಿಡಿ–ಸಿಡಿಲ್, ಮುಗಿ–ಮುಗಿಲ್, ಮಡಿ–ಮಡಲ್, ಕಾ–ಕಾವಲ್, ಇಂಥವು ನಾಮಪ್ರಕೃತಿಗಳೆನಿಸಿ ವಿಭಕ್ತಿ ಪ್ರತ್ಯಯಗಳನ್ನು ಪಡೆಯುತ್ತವೆ. ಉದಾ-ಕಾವಲನ್ನು, ಕಾವಲಿಂದ, ಕಾವಲಿಗೆ ಇತ್ಯಾದಿ. ತುಳುವಿನಲ್ಲೂ ಇಂತಹ ಶಬ್ದ ಪ್ರಯೋಗವಿದೆ. ಕೆಲವೊಮ್ಮೆ 'ಅಲ್'-ಎಲ್ ಆಗುತ್ತದೆ. ಕಾವೆಲ್ (ಕಾವಲು) ಒಕ್ಕೆಲ್ (ಒಕ್ಕಲು), ಚುಳ್ಕೆಲ್ (ಹೊಲೆಯರಲ್ಲಿ, ಮದುವೆ) ತೆಡಿಲ್ (ಸಿಡಿಲು) ಮುಗಲ್ (ಮುಗಿಲು), ಮಲಯಾಳದಲ್ಲಿ ತುಳ್ಳಲ್ (ಕುಣಿತ) ನೊಕ್ಕಲ್ (ನೋಡುವಿಕೆ) ಮೊದಲಾದ ಕೃದಂತನಾಮಗಳಾಗುತ್ತವೆ. ಹೀಗೆ 'ಅಲ್' ಪ್ರತ್ಯಯ ಸೇರಿಸುವ ಕ್ರಮ ಮತ್ತೆಮತ್ತೆ ಕಡಿಮೆಯಾಗಿ ಕೇವಲ ಕೆಲವೆಡೆ ಮಾತ್ರ ಕನ್ನಡದಲ್ಲಿ ಉಳಿದುಕೊಂಡಂತೆ ತೋರುತ್ತದೆ. "ಅಲ್ಲಿಗೆ ಹೋಗಲು ಆಗದು" ಎಂದರೆ ಅಲ್ಲಿಗೆ ಹೋಗುವುದು ಆಗದು ಎಂದು ತಿಳಿಯಬೇಕು. ಹವ್ಯಕ ಕನ್ನಡದಲ್ಲಿ ಧಾತುವಿಗೆ ಆಣ (ಅಲ್ ಎಂಬುದಕ್ಕೆ ಸಂವಾದಿ.) ಸೇರಿ ಕೃನ್ನಾಮವಾಗುತ್ತದೆ–ಹೋಗಾಣ (ಹೋಗುವಿಕೆ), ಬರಾಣ (ಬರುವಿಕೆ), ನೋಡಾಣ (ನೋಡುವಿಕೆ). ಹೊಸಗನ್ನಡದಲ್ಲಿ ಈ 'ಆಣ'ದ ಬದಲು 'ಒಣ' ಸೇರುತ್ತದೆ. ಹೋಗೋಣ, ಬರೋಣ, ಇತ್ತೀಚಿಗೆ ಹೋಗುವ, ಬರುವ ಎಂಬ ಭವಿಷತ್‌ಕ್ರಿಯಾರ್ಥದಲ್ಲಿ ಈ ಪ್ರಯೋಗವಾಗುತ್ತದೆ.

ಕ್ರಿಯಾರ್ಥದ ಅಲ್– ಗೆಲಲ್ ಬಗೆದಂ, ನಿಷೇಧಾರ್ಥದ ಅಲ್–ಬಸಮಂ ಪುಗಲ್ ಇವು ಮೇಲ್ನೋಟಕ್ಕೆ ಏಕರೂಪದಲ್ಲಿರುವುದರಿಂದ ಸಂದೇಹಕ್ಕೆ ಅವಕಾಶವಾಗಬಹುದು. ಆದ್ದರಿಂದಲೇ ಹೊಸಗನ್ನಡದಲ್ಲಿ ನಿಷೇಧಾರ್ಥದ ಈ 'ಅಲ್' ಪ್ರಯೋಗ ಕಣ್ಮರೆಯಾಗಿ ಬೇರೆ ವಿಧಾನಗಳು ಬಳಕೆಯಾಗಿರಬೇಕು–ಹೋಗಬಾರದು, ನೋಡಕೂಡದು, ಮಾಡಬೇಡ, ಹೋಗುವುದಲ್ಲ, ಇತ್ಯಾದಿ. ನಿಷೇಧದಲ್ಲಿ 'ಅಲ್ಲ' ಎಂಬ ರೂಪ ಮಾತ್ರ ಪ್ರಯೋಗದಲ್ಲಿದ್ದು 'ಅಲ್'ನ್ನು ಕೈಬಿಡಲಾಗಿದೆ. ಕುಂದಾಪುರ ಕನ್ನಡದಲ್ಲಿ 'ಅಲ್'–'ಅಳೆ' ಆಗುತ್ತದೆ. ಉದಾ : ಹೋಗಳೆ (ಹೋಗದಿರು) ಬೇತಳೆ (ಇಡಬೇಡ). ಹವ್ಯಕ ಕನ್ನಡದಲ್ಲಿ ಕ್ರಿಯಾರ್ಥದ 'ಅಲ್' ಅಲೆ (ಅಳೆ, ಳೆ) ಎಂಬಂತೆ ಪ್ರಯೋಗವಾಗುತ್ತದೆ. ಉದಾ–ನೋಡಲೆ (ನೋಡ್ಳೆ. ನೋಡಲು), ಮಾಡಲೆ (ಮಾಡ್ಳೆ, ಮಾಡಲು) ತುಳುವಿನಲ್ಲಿ 'ಅಲ್' ಎಂಬುದಕ್ಕೆ ಸಂವಾದಿಯಾಗಿ ಅರ, ಆರ, ಬರುತ್ತದೆ–ಪೋಯಾರ (ಹೋಗಲು), ಬರಿಯಾರ (ಬರಲು). ಕೆಲವೊಮ್ಮೆ ಕನ್ನಡದ 'ಅಲ್'ಗೆ 'ಕೆ' ಸೇರುವಂತೆ ತುಳುವಿನಲ್ಲಿ 'ಗ್' ಸೇರುತ್ತದೆ. ಉದಾ–ಪೋಯರೆಗ್ (ಹೋಗಲಿಕ್ಕೆ), ಬರಿಯರೆಗ್ (ಬರಲಿಕ್ಕೆ).

ಕರ್ಮ ಪ್ರಯೋಗದಲ್ಲಿ 'ಅಲ್'– ದ್ರಾವಿಡ ಭಾಷೆಗಳಲ್ಲಿ, ಕನ್ನಡದಲ್ಲಿ ಕರ್ಮಣಿ ಪ್ರಯೋಗವಿಲ್ಲವೆಂದು ಆಧುನಿಕ ಭಾಷಾ ಶಾಸ್ತ್ರಜ್ಞರು ತೀರ್ಮಾನಿಸಿದ್ದಾರೆ. ಶಬ್ದಮಣಿ ದರ್ಪಣದಲ್ಲಿ ಕರ್ಮಣಿ ಪ್ರಯೋಗವನ್ನು ಹೇಳುವ 'ಅನುಕ್ತ ಸೂತ್ರ' ಮುಂದಿನ ಸೇರ್ಪಡೆ. ಅದಕ್ಕಿಂತ ಈಚಿನ ವ್ಯಾಕರಣವಾದ ಭಟ್ಟಾಕಳಂಕನ ಕರ್ಣಾಟಕ ಶಬ್ದಾನುಶಾಸನದಲ್ಲಿ ಕರ್ಮಣಿ ಪ್ರಯೋಗವನ್ನು ಹೇಳಿದೆ. (ಸೂ. 443. 530). ಕೇಶಿರಾಜನು ಅವನ ಶಬ್ದಮಣಿ ದರ್ಪಣದಲ್ಲಿ "ಪೇಟಿಲ್ಪಡೆಗುಂ" ಎಂದು ನಾಲ್ಕು ಸಲ ಪ್ರಯೋಗಿಸಿದ್ದಾನೆ.[10] ಪೇಟ್ + ಅಲ್ + ಪಡೆಗುಂ–ಕರ್ಮಣಿಯಂತೆ ತೋರಿದರೂ ಆ ಪ್ರಯೋಗವಲ್ಲ. 'ಪೇಟಿಲ್ಪಡೆ' ಎಂದಲ್ಲದೆ ಈಗಿನಂತೆ 'ಪೇಳಲ್ಪಡು' ಎಂದವನು ಪ್ರಯೋಗಿಸಿಲ್ಲ. ಕರ್ಮಣಿಯ ಪ್ರತ್ಯೇಕತೆಯನ್ನು ತೋರಿಸಲು 'ಪಡೆ' ಎಂಬು 'ಪಡು' ಎಂದು ಬದಲಾಗಿರಬೇಕು. 'ಪ್ರಯೋಗಿಸೆ ಪಡೆಗುಂ' (ಸೂ. 120, ಪುಟ 133), 'ತಿಳಿಯಲ್ ಬರ್ಪುದು' (ಸೂ. 229, 220) 'ಪೇಟಿಲ್ಪಡೆ' ಇವು ಒಂದೇ ರೀತಿಯ ಪ್ರಯೋಗಗಳು. ಎ, ಅಲ್ ಪ್ರತ್ಯಯಗಳಿರುವುದರಿಂದ ಸತಿಸಪ್ತಮೀ ಪ್ರಯೋಗಗಳಂತೆ ತೋರುತ್ತವೆ. ಆದರೆ ಇಲ್ಲಿ ಭಿನ್ನ ಕರ್ತೃತ್ವವಿಲ್ಲದ್ದರಿಂದ ಹಾಗನ್ನುವುದು ಸಮಂಜಸವೆನಿಸದು. ಇಲ್ಲಿ "ಗೆಲಲ್ ಬಗೆದಂ" ಎಂಬಂತೆ ಕ್ರಿಯಾರ್ಥದ 'ಅಲ್' ಎನ್ನಬೇಕಾಗುತ್ತದೆ. ಅಂದರೆ ಪೇಳಲ್ಪಡೆಗುಂ–ಹೇಳುವಿಕೆಯನ್ನು ಪಡೆಯುವುದು. 'ಪೇಳ್' ಧಾತುವಿಗೆ 'ಅಲ್' ಪ್ರತ್ಯಯ ಸೇರಿ ಅದು ಕೃದಂತನಾಮವಾಯಿತು. ಹೀಗೆಯೇ ತಿಳಿಯಲ್ ಬರ್ಪುದು–ತಿಳಿಯುವಿಕೆ ಬರುವುದು ಎಂದರ್ಥ.

ಮೇಲಿನ ವಿವೇಚನೆಯಿಂದ 'ಅಲ್' ಪ್ರತ್ಯಯವು ಸಪ್ತಮಿ, ಸತಿಸಪ್ತಮಿ, ಕೃನ್ನಾಮ, ನಿಷೇಧ, ಅನ್ಯಕ್ರಿಯಾಫಲ (ಕ್ರಿಯಾರ್ಥ) ಮತ್ತು ಕರ್ಮಣಿ ಅರ್ಥಗಳಲ್ಲಿ ಪ್ರಯೋಗವಾಗುತ್ತದೆ. "ಅಲ್ಲಿ" ಸ್ವತಂತ್ರ ಅರ್ಥದಲ್ಲಿ ಸ್ಥಳವಾಚಕವಾಗಿಯೂ ಇದೆ.

ಟಿಪ್ಪಣಿಗಳು

1 ಶಬ್ದಮಣಿ ದರ್ಪಣ, ಸಂ. ಡಿ. ಎಲ್. ನರಸಿಂಹಚಾರ್, ಶಾರದ ಮಂದಿರ, ಮೈಸೂರು. ಸೂತ್ರ 180, ಪುಟ 180

2 ಸಪ್ತಮೀ ವಿಭಕ್ತಿ, ಎಂ. ಮರಿಯಪ್ಪ ಭಟ್ಟ, ಪ್ರಬುದ್ಧ ಕರ್ಣಾಟಕ, 29-1, 1947, ಪುಟ 121.

3 ಶಬ್ದಮಣಿ ದರ್ಪಣ, ಸೂತ್ರ 129 ಪುಟ 140

4 ಶಬ್ದಮಣಿ ದರ್ಪಣ, ಸೂತ್ರ 120 ಪುಟ 133
ಕರ್ನಾಟಕ ಶಬ್ದಾನುಶಾಸನ, ಭಟ್ಟಾಕಳಂಕ, ಸೂತ್ರ 421 ಪುಟ 264
ಕರ್ನಾಟಕ ಭಾಷಾ ಭೂಷಣ, ನಾಗವರ್ಮ, ಸೂತ್ರ 56 ಪುಟ 27

5 ಶಬ್ದಮಣಿ ದರ್ಪಣ, ಸೂತ್ರ 257 ಪುಟ 250

6 ಕರ್ನಾಟಕ ಶಬ್ದಾನುಶಾಸನ, ಸೂತ್ರ 592 ಪುಟ 358

7 ಶಬ್ದಮಣಿ ದರ್ಪಣ, ಸೂತ್ರ 260 ಪುಟ 252

8 ಶಬ್ದಮಣಿ ದರ್ಪಣ, ಸೂತ್ರ 245 ಪುಟ 237

9 ಶಬ್ದಮಣಿ ದರ್ಪಣ, ಸೂತ್ರ 246 ಪುಟ 238
ಕರ್ನಾಟಕ ಶಬ್ದಾನುಶಾಸನ, ಸೂತ್ರ 591

10 ಶಬ್ದಮಣಿ ದರ್ಪಣ, ಸೂತ್ರ 11 ಪುಟ 38 ಸೂತ್ರ 19 ಪುಟ 42
ಸೂತ್ರ 61 ಪುಟ 75
ಸೂತ್ರ 139 ಪುಟ 149

ಕೇಶಿರಾಜ ಡಣಾಯಕರ ಕಂದ

(ಸಂ) ಎಸ್. ಶಿವಣ್ಣ

ಕೊಂಡಗುಳಿ ಕೇಶಿರಾಜ (ಕ್ರಿ.ಶ 12ನೆಯ ಶತಮಾನದ ಪೂರ್ವಾರ್ಧ)ನ 111 ಅಪ್ರಕಟಿತ ಕಂದಗಳನ್ನು ಪರಿಷ್ಕರಿಸಿ ಕೊಡಲಾಗಿದೆ. ಈ ಕಂದಗಳ ಪರಿಷ್ಕರಣಕ್ಕೆ ಮೂಲಭೂತವಾಗಿ ವಚನ ವಾಙ್ಮಯ ಭಾಂಡಾರದಲ್ಲಿನ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ) ಕ್ರಮಾಂಕ 1413 ನೆಯ (ಗರಿ–108-129) ಓಲೆ ಪ್ರತಿಯನ್ನು ಆಧರಿಸಲಾಗಿದೆ. ಪ್ರತಿಯಲ್ಲಿನ ಪದ್ಯ ಸಂಖ್ಯೆಗಳನ್ನೇ ಇಲ್ಲೂ ಕೊಟ್ಟಿದೆ. ಪ್ರತಿಯನ್ನು ಉಪಯೋಗಿಸಿಕೊಳ್ಳಲು ಒಪ್ಪಿದ ಡಾ॥ ಎಂ. ಎಂ. ಕಲಬುರ್ಗಿ ಅವರಿಗೆ ವಂದನೆಗಳು.

ಭವವಾಗದೊಡದು ಸುಖವೇ
ಭವವಡಗಿದೊಡಭವ ನಿಮ್ಮೊಳನುಭವವುಂಟೇ
ಭವ ಭವ ಭವಾಂತರ [ದಿ] ಸಂ
ಭವಿಸಂ ಗಡಾ ನಿಮ್ಮೊಳಗೆ ದಾಸೀಭಾವಂ ೬

ನಿಮಗೆಱಗದ ನರಪಶುವಿನೊ
ಳೆನಗೆಂತುಂ ನೋಟ ಕೂಟ ನುಡಿಗಡಣಂಗಳು
ಮನದೊಳಿನಿಸಾದೊಡಂ ಕೇ
ಳ್ಜನಿಯಿಸದಿರ್ಕಭವ ಜನ್ಮ ಜನ್ಮಾಂತರದೊ [ಳ್] ೭

ಮೈವೆಚ್ಚುಗೆ ಶಿವಪದವಂ
ಕೈ$_{\text{ಗ}}$ವೆಚ್ಚುಗ್ಗೆ ಶಿವನಪೂಜೆಯೋಜೆಯನೋಲವಿಂ
ಬಾ[ಯ್ವೆ]ಚ್ಚುಗೆ ಶಿವಮಂತ್ರವೆ
ಸುಯ್ವೆಚ್ಚುಗೆ ಶಿವಷಡಾಕ್ಷರಂಗಳ ಬಳಿಯೊ[ಳ್] ೮

ಈತನ ಜೀವನ, ಕೃತಿಗಳಿಗೆ ಸಂಬಂಧಿಸಿದಂತೆ ಎಂ. ಎಂ. ಕಲಬುರ್ಗಿ ಅವರಿಂದ ಸಂಪಾದಿತವಾಗಿ ಹುಬ್ಬಳ್ಳಿ, ಮೂರುಸಾವಿರಮಠದಿಂದ 1978 ರಲ್ಲಿ ಪ್ರಕಟವಾಗಿರುವ "ಕೊಂಡಗುಳಿ ಕೇಶಿರಾಜನ ಕೃತಿಗಳು" ಎಂಬ ಕೃತಿ ನೋಡಿ.

ಮೇಲಿನ ಕೃತಿಯಲ್ಲಿರದ ಕೊಂಡಗುಳಿ ಕೇಶಿರಾಜ ಕೃತ 'ಅಳಲಾಷ್ಟಕ' ಎಂಬ 'ಅಷ್ಟಕ'ವೊಂದು ಅಚ್ಚಾಗಿದೆ. [ಸಂ.] ಎಸ್. ಶಿವಣ್ಣ, ಬಿ. ಬಿ. ಬಿರಾದಾರ, ಬಸವಪಥ, 6. 6, 1984, 26–8.

1. ಯಿವೆ. 2. ಳು

ಶ್ರುತಿಯುಱಿಯದೆ ಮತಿಯುಱಿಯದೆ
ಅತಿ ಪರವ [ಶಿ]ಭೂತನಾಗಿ ಶಿವಪೂಜೆಯೊಳಂ
ಮತಿವಿಕಳನಾಗಿ ಲಿಂಗದ
ಗತಿಮತಿಯೊಳ³[ಳ್ದು ಮು³] ಸುಖವದೆಂದಾದಪುದೋ ೧೨

ಅಡಿಗಡಿಗೆ ರೋಮತತಿಗಳು
[ಜ]ಡೆಗಟ್ಟಲು ಹರುಷವಡರಿ ಕುಣಿಕುಣಿದಾಡುತೆ
ಮೃಡ ನಿಮ್ಮ ಪೂಜೆ ಮಾಡುವ
ಪಡಗರವೊಲ[ವೆ]ನ್ನೊಳಗಲದೆಂದಾದಪುದೋ ೨೧

ಮುಗ್ಗುತೆ ಮುಂದು[ಂ]ಗಾಣದೆ
ಹಿಗ್ಗುತಾನಂದವೆತ್ತು[ಂ] ಕುಣಿ ಕುಣಿದಾಡುತೆ
ಭರ್ಗ ನಿಮ್ಮಂಘ್ರಿಯರ್ಚಿಪ
ಸುಗ್ಗಿಯ ಪರವಶದ ಸುಖವದೆಂದಾದಪುದೋ ೨೨

ಷಡುರುಚಿ ರಸಾಯನಂಗಳ
ಬಡಿಸಿದ ದಿವ್ಯಾನ್ನ ಶಾಕಪಾಕಾದಿಗಳೊಳ್
ತುಡುಗುಣಿತನವಂ ಮಾಡದೆ
ಮೃಡ ನಿಮಗರ್ಪಿಸುವ ಸುಖವದೆಂದಾದಪುದೋ ೨೩

ದೆಸೆದೆಸೆಗೆ ಪರಿವ ಮನಮಂ
ವಶಗೊಳಿಸಿ ನಿಜಾಂಘ್ರಿಯಲ್ಲಿಯೇ ನಿಂದಱಿಯದೆ
ಪಶುಪತಿಧರ ನಿಮ್ಮಂಘ್ರಿಯಂ
ಪೊಸೆದರ್ಚಿಪ ಪರಮಸುಖವದೆಂದಾದಪುದೋ ೨೪

ನಿಮ್ಮ ನಿಜ ದಿವ್ಯಮೂರ್ತಿಯು
ಎನ್ನಯ ಮನವಾರೆ ನೋಡಿ ಕಣ್ಮನ ದಣಿಯದೆ
ಪನ್ನಗಭೂಷಣ ನಿಮ್ಮಂ
ಚೆನ್ನಾಗಿಱೆ ಪೂಜಿಪಕ್ಕಱೆಂದಾದಪುದೋ ೨೫

ಸವಿನಯದ ಭಕ್ತಿರಸದಿಂ
ಸುವಿಚಾರಂ ಚಿತ್ತಸುಖದೊಳೋಲಾಡಿಸುತಂ
ಶಿವ ನಿಮ್ಮ ದಿವ್ಯ ಚರಣವ
ನೆವೆಯಲುಗದೆ ನೋಳ್ಪ ಸುಖವದೆಂದಾದಪುದೋ ೨೬

---

3. ಲುವ

ಥಳಥಳನೆ ಸುರಿವ ಕಣ್ಬನಿ
ಪೊಳೆವೋಱುವ ರೋಮರಾಜಿ ಗದ್ಗದದಿಂದಂ
ಎಳೆವೆಱೆಯ ಸೂಡಿದಭವನ
ಕಳವಳಿಸುವ ಪರಮಸುಖವದೆಂದಾದಪುದೋ ೨೭

ಕಂಗೊಳಿಸಿ ಕಂಪುವಡೆದಿಹ
ಪೊಂಗೇದಗೆಯಲರಿನಿಂದ ಲವಲವಿಸುತ್ತಿಹ
ಮಂಗಲೆಯ ಪ್ರಾಣವಲ್ಲಭ
ನಂಘ್ರಿಯ ಪೂಜಿಸುವ ಸುಖವದೆಂದಾದಪುದೋ ೨೮

ಬಿಡದಡರಿ ನೋಡುವಾ ಮನ
ದೆಡೆಯುಡುಗದೆ ನೋಡಿ ನೋಡಿ ಲಿಂಗದ ಚರಣವ
ಪಿಡಿದು ಬಿಡಲಾರದಾರ್ಥಂ
ಪೊಡಲೊಳ್ಪೂಣ್ದಿರ್ಪ ಸುಖವದೆಂದಾದಪುದೋ ೨೯

ಇಟ್ಟಣಿಸಿ ಬೆಳೆದ ಪರ್ವತ
ದೊಟ್ಟಿಲ ತಪ್ಪಲೊಳು ಕೂತು ಕಂಬನಿಯುಱೆಯದೆ
ಖಟ್ವಾಂಗಧರನ ಮೂರ್ತಿಯ
ನಿಟ್ಟಿಸಿ ನೋಳ್ಪೆಱಿನ್ನೊಳೆಂದಾದಪುದೊಕ್ಕ ೩೦

ಎಡವಿಡದೆ ಎನ್ನೊಳಿನಿತುಂ
ಸಡಗರದಿಂ ಪರಿವ ನದಿತೀರದೊಳು ಕುಳ್ಳಿ
ರ್ದುಡುಪತಿಧರ ನಿಮ್ಮಂ ಎಡೆ
ವಿಡದರ್ಚಿಪ ಸುಖದ ಸೊಬಗದೆಂದಾದಪುದೋ ೩೧

ಕರಕಮಲದೊಳಗೆ ಬೆಳಗುವ
ನಿರುಪಮ ಮೂರ್ತಿಯನೆ ಕಂಡು ತನುಮನವೆರಡುಂ
ಉರಿಕೊಂಡ ಕರ್ಪೂರದವೊಲು
ಕರಗಿ ಸದಾನಂದದಿಂದಯೆಂದಿರ್ಪೆನೋ ೪೯

ಹಲವು ಬಹು ದುಃಖಜಾಲವ
ಕೆಲಕೊತ್ತಿಯೆ ನಿಮ್ಮ ಮೇಲಣಾರ್ಥರಿ 'ಮಿಗೆ ನಾಂ
ಮಲರಹಿತ ನಿಮ್ಮನರ್ಚಿಸಿ
ಉಲುಹಡಗಿ [ದ] ವೃಕ್ಷದಂತೆಯೆಂದಿರ್ಪೆನೋ ೫೦

ಅಳಿ ಸೋಂಕದರಳ್ಗಳಿಂದ
ಥಳಥಳಿಸುವ ಲಿಂಗದೇವರಂಘ್ರಿಯು ಪೂಜಿಸಿ
ಕಳೆದು ಬಹುದುಃಖಜಾಲವ
ನಳನಳಿಸುತ್ತ್ರಕ್ಕಜಿಂದಯೆಂದಿರ್ದಪೆನೋ ೫೧

ಅಡದು ಗಡ ಘಟ ಉಲಿದೆ
ದ್ಬಾಡಮು ಗಡ ಲಿಂಗ ಜಂಗಮಕ್ಕಾನಾಡಂ
ಮಾಡದು ಗಡ ಶಿವಪೂಜೆಯು
ಮಾಡದೊಡೀತನುವಾನೊಯಿದು ಸುಡುವೆಗಡಭವಾ ೮೫

ಬೀಗದು ಗಡ ಬಿಕ್ಕದು ಗಡ
ತೇಗದು ಗಡ ಸವಿದು ಸವಿದು ಭಕ್ತ್ಯಾಮೃತಮಂ
ನೀಗದು ಗಡ ಸಂಸಾರೋ
ದ್ಯೋಗವನೀ ತನುವನೊಯಿದು ಸುಡುವೆಗಡಭವಾ ೮೬

ಉಬ್ಬದು ಗಡ ನಲಿ ನಲಿ [ನಲಿ]
ದಬ್ಬರಿಸಿ ಶಿವಾನುಭಾವದಾ ಸವಿ ಸುಖಮಂ
ಕೊಬ್ಬಿ ಕೊನದಾಡಿ ದುರಿತವ
ನೆಬ್ಬಟ್ಟದ ತನುವನೊಯಿದು ಸುಡುವೆಗಡಭವಾ ೮೭

ನೀರಡಿಸಿ ಪರಿವ ನದಿಯಂ
ದೂರ ದೂರದಲಿ ಕಂಡು ಮುಳುಗುವ ತೆಱದಿಂ
ಮಾರಮದಹರನ ಸೇವನೆ
ಗೋರಂತಾಂ ತೃಷಕನಂತೆ ಮುಳುಗಲ್ವೇಡಾ ೯೨

ಎಲೆ ನಾಲಗೆ ಕೇಳ್ನಿನ್ನಂ
ಮಲಹರನಂ ಭಜಿಸಲೆಂದು ವದನಾಂಬುಜದೊಳು
ತಳೆದಿರ್ದನ್ನೈಸೆ ಹಲವಂ
ಗಳಹಿದಡಾಂ ಬೇರುವೆರಸಿ ಕೀಳದೆ ಮಾಣೆಂ ೯೩

ನಾಲಗೆ ಕೇಳ್ಪರಸುಂದೆಗೆ
ಪಳುಮೊಳಕ್ಕುದ್ದವಹುದು ಜಪವೆಂದೆನೆ ತಾ
ಗೋನಾಳಿ ಜಿಹ್ವೆ ವಿಡುಕದು
ಕಾಳುಮಾ[ನ] ನಾನೇನೆಂಬೆ ಗಿರಿಜಾರಮಣಾ ೯೪

ಭ್ರಷ್ಟ ನೀಂ ಗಳಹದಿರು ಕಂ
ಗೊಟ್ಟುಂ ತಲೆಗೊಟ್ಟು ಲಿಂಗಡಿಂಗರರಾದರೞ
ವಿಟ್ಟಣ್ಣನು ಬೊಮ್ಮಣ್ಣನು
ಕೊಟ್ಟುದ ನೀ ದಿಟ್ಟ ಮಣಿಯಬಿರ್ದುದನಱಿಯಾ ೯೮

ಮಂತ್ರವನೆ ಮಱೆದು ಕಯ್ಯೋ-
ಳಂತ್ರದ ಪರಿಯಾಯುವಳಿದು ಅಭವನ ಸೊದೆಯೆ
ಜಂತ್ರದ ರೂಹಿನ ತೆಱದಿಂ
ಯಂತ್ರಾಯುಕ ಶರಣೆನುತ್ತಲೆಂದಿರ್ದಪೆನೋ ೯೯

ಲಿಂಗದೊಳು ನೋಟ ನಗೆ ನುಡಿ
ಪಿಂಗದೆ ಭಕ್ತ್ಯಂಗನೆಯೊಳು ಬೇಟಂ ಕೂಡಿಂ
ಜಂಗಮದೊಳಗಣ ಮಾಟಂ
ಸಂಗಂ ದೊರಕೊ[ಳ್ಗೆ] ಜನ್ಮ ಜನ್ಮಾಂತರದೊಳ್ ೧೦೦

ಮನಸಿಜಹರನಂ ಪೂಜಿಪ
ಮನುಜನ ಮನೆ ವಾರಣಾಸಿ ಶಿವಪೂಜೆಯೊಳಾಂ
ಮನವೊಲಿದು ಮಾಡದಾತನ
ಮನೆ ತಾಂ ವೈತರಣಿಯದುವೆ ಕುಂಭೀಪಾಕಂ ೧೦೭

ಮರ್ದುಂಡು ಕುತ್ತುಗೊಂಬರೆ
ಮರ್ದಂ ಮತ್ತುಣಲದೇಕೆ ಮಾಡಿದ ಫಲಮಂ
ಪೀರ್ದು [ಂ] ಮ [ತ್ತಾ] ಬಾಳ್ವಡೆ
ಪೊರ್ದಲದೇಕಭವ ನಿಮ್ಮ ಚರಣಾಂಬುಜಮಂ ೧೦೮

ಎಡಹಿದರೇಱಿ[ತ] ಕುದುರೆಯ
ಮಿಡಿಯಂ ಪಱಿಹೊಯಿವರೇ ಸದಾಶಿವ ಕೇಳ್ವೆ
ಮೃಡಭಕ್ತರ್ಜಡನಾದಡೆ
ನಡಸೂದೇ ನಿಮ್ಮ ಮಹಿಮೆ ಪರಮಪ್ರಭುವೇ ೧೦೯

ಶಿವ ನಿಮ್ಮ ನೆನಹು ಮಾತ್ರದಿ
ಭವ ಪಱಿವುದು ಸುಕೃತವಹುದುಯೇನಚ್ಚರಿಯೋ
ಶಿವ ನಿಮ್ಮ ನೆನೆ[ಯ]ದವರಿಗೆ
ಭವಪಱಿವುದೆ ಸುಕೃತವಹುದೆ ಕಾಮಧ್ವಂಸೀ ೧೧೧

ಶ್ರುತಿನಿಕರ ಪೊಗಳಿ ಕಾಣವು
ಅತಿಶಯ ನಿಮ್ಮಂಘ್ರಿಯುಗವ ನಾನೆಂತಱಿವೆ [ಂ]
ನುತ ಪುಣ್ಯಕೀರ್ತಿ ಭಕ್ತರ
ಗತಿ ಮತಿ ಪಾಲಿಸೂದೆನ್ನ ಪಾವಕಧರನೇ ೧೧೧

ವೇದಕ್ಕತೀತನೆನಿಸುವ
ಮಹಾದೇವರಿಗೊಡೆಯನಪ್ಪ ಪಾರ್ವತಿಯರಸನ
ಪಾದವನೆ ಪೂಜೆ ಮಾಡುವ
ವೇದನೆ ದೊರಕೊಳ್ಗೆ ಜನ್ಮ ಜನ್ಮಾಂತರದೊ[ಳ್] ೧೧೨

ಪ್ರೀತಿವೆತ್ತಕ್ಕಱಿಂದಂ
ಸಾತ್ವಿಕ [ದಾ] ಭಕ್ತಿರಸದೊಳೋಲಾಡುತ್ತಂ
ಭೂತೇಶ ನಿಮ್ಮ ಪೂಜೆಯ
ಯಾತನೆ ದೊರಕೊಳ್ಗೆ ಜನ್ಮ ಜನ್ಮಾಂತರದೊ[ಳ್] ೧೧೩

ಹರವರಿಯ ಹರುಷದಿಂದಂ
ಸುರಿವಾನಂದಾಶ್ರು ಜಲದಿ ಮುಳುಂಗಾಡುತ್ತಂ
ಪುರಹರ ನಿಮ್ಮಂ ಪೂಜಿಪ
ಉರುತರ ಸುಖವೆನ್ನೊಳೆಂದು ನೆಲೆಗೊಂಡಪ್ಪುದೋ ೧೧೪

ಗಜಬಜೆಯನುಳಿದು ಮೋಕ್ಷದ
ನಿಜ ಸುಖ ನಿರ್ವಾಣದಲ್ಲಿ ನಿರ್ಮಲದಿಂದಂ
ಗಜಚರ್ಮಧರನೆ ನಿಮ್ಮುವ
ಭಜಿಸುವ ಸುಖವೆನ್ನೊಳೆಂದು ನೆಲೆಗೊಂಡಪ್ಪುದೋ ೧೧೫

ಬಾಲ ಯೌವ್ವನದಿ ಕೆಲದಿನ
ಮೇಲಱಿಯದೆ ವೃದ್ಧನಾಗಿ ಬಾಳ್ವೆಸು ಕೆಲದಿನ
ಕಾಲನವರೊಯ್ಯ ಬಂದರೆ
ಮೇಲಾವುದು ಬುದ್ಧಿಯೆನಗೆ ಗಿರಿಜಾರಮಣಾ ೧೧೬

ಮನ ನಿಮ್ಮ ನೆನೆಯಲಱಿಯದೆ
ಜಿನುಗುತ್ತಿದೆ ಹಲವು ದೆಸೆಗೆ ಹರಿದಾಡುತ್ತಿದೆ
ಘನ ಮಹಿಮ ನಿಮ್ಮ ನೆನವೊಡೆ
ಮನ ನಿಲ್ಲದು ಏವೆನಯ್ಯ ಗಿರಿಜಾರಮಣಾ ೧೧೭

ದುರಿತಾಬ್ಧಿ ವಡಬನೆನಿಸುವ
ವರ ಪಂಚಾಕ್ಷರಿಯ ಜಪಿಸಿ ಭವ ಬಂಧನಮಂ
ಪರಿಹರಿಸು ನಿಮ್ಮ ಸಾರಿದೆ
ಕರುಣಾಂಬುಧಿ ಕಾಯೊಯೆನ್ನ ಗಿರಿಜಾರಮಣಾ ೧೧೮

ನಿಟಿಲಾಂಬಕ ನಿಮ್ಮೊಳ್ಮನ
ನಟಿಸದೆ ದುರ್ವಿಷಯದಲ್ಲಿ ಹಱಿದಾಡುವ ಉ
ತ್ಕಟದ ದುರ್ಮನ[ಕೆ] ಮೋಕ್ಷದ
ತಟವಾವುದುಂಪೇಕ್ಷಿಸೆನಗೆ ಗಿರಿಜಾರಮಣಾ ೧೧೯

ಮನ್ಮಥನ ವೈರಿಯಂಘ್ರಿಯ
ಸನ್ಮತದಿಂ ಪೂಜೆಮಾಡಿ ದಣಿವಱಿಯಂದೆ ತಾಂ
ಮನ್ಮಥನ ಬಾಧೆಗಣ್ಮುವ
ಉನ್ಮತ್ತರಿಗಹುದೆ ಮುಕ್ತಿ ಗಿರಿಜಾರಮಣಾ ೧೨೦

ಆರುವನು ಕಾಣೆನಭ[ವಾ]
ಸಾರಿದೆ ನಿಮ್ಮಂಘ್ರಿಯುಗವ ಕೃಪೆಯಿಂದೆನ್ನಂ
ಮಾರಹರ ನಿಮ್ಮ ಕರುಣದ
ಸಾರವನೆಱೆದೆನ್ನ ಸಲಹು ಗಿರಿಜಾರಮಣಾ ೧೨೧

ಅಜ ಹರಿಗಳಱಿಸಿ ಕಾಣದ
ನಿಜಮೂರ್ತಿಯಂ ಚರಣಯುಗವ ಸದ್ಭಕ್ತಿಯೊಳಂ
ಭಜಿಸಿ ಭವದೂರನಾಗದೆ
ಕುಜನಪ್ರಿಯ[1] [ನಾಗಲೇಕೆ][1] ಗಿರಿಜಾರಮಣಾ ೧೨೨

ಕುಡಿವರಿವ ಕೂರ್ಮೆಯಿಂದಂ
ಅಡಿಗಡಿಗಾನಂದವೆತ್ತು ನಲಿನಲಿದಾಡುತೆ
ಮೃಡ ನಿಮ್ಮ ಪೂಜೆ ಮಾಡದ
ಕಡುಪಾತ[2][ಕಿ ನಾನಯ್ಯಾ][2] ಗಿರಿಜಾರಮಣಾ ೧೨೩

ನಿಮ್ಮ ಮಹಿಮೆಯನು ಪೊಗಳುವ
ರೆನ್ನಳವೇ ಮಿಕ್ಕ ದೇವ ದಾನವರಳವೇ
ಪನ್ನಗಭೂಷಣ ಕೃಪೆಯಿಂ
ನಿಮ್ಮೊಲವಿತ್ತೆನ್ನ ಸಲಹು ಗಿರಿಜಾರಮಣಾ ೧೨೪

---

1. ನಗಲಯ್ಯ. 2. ಕ ನಾನಲಯ್ಯ

ಆರೊಡನೆ ಅಳಲಿ ಬಳಲುವೆ
ಆರವನೆಂದಾರಿಗುಸುರ್ವೆ ನೆಱೆ ಮಾರಹರ
ಕಾರುಣ್ಯಮೂರ್ತಿ ನೀವಿರ
ಲಾರಿಗೆ ಪೇಳ್ದಪೆನು ಕಾಯ ಗಿರಿಜಾರಮಣಾ ೧೨೫

ಉರ್ವಿಯೊಳು ಪುಟ್ಟಿ ಮನುಜರು
ದುರ್ವಿಷಯದಿ ಹಲವು ದೆಸೆಗೆ ಹರಿದಾಡುತ್ತಿಹ
ಗರ್ವಿ ಮಾನವರಿಗಹುದೆಯು
ಪೂರ್ವವಲಾ ನಿಮ್ಮ ಮಹಿಮೆ ಗಿರಿಜಾರಮಣಾ ೧೨೬

ಮತಿಗೆಟ್ಟು ಮುಂದುಗಾಣದೆ
ಧೃತಿಗೆಟ್ಟು ದುರಾಸೆಯಿಂದ ಪರರಂ ಪೊಗಳುವ
ಮತಿಹೀನ ದುಶ್ಚರಿತ್ರಗೆ
ಮತವಾವುದುಂಪೇಕ್ಷಿಸೆನಗೆ ಗಿರಿಜಾರಮಣಾ ೧೨೭

ಕ್ಷಣಕೊಮ್ಮೆ ಕಂದಿ ಕುಂದುತೆ
ಕ್ಷಣಕೊಮ್ಮೆ ಸುಖಾನುಭಾವದಿಂದುಣ್ಮುತ್ತುಂ
ಬಣಗುತನದಿಂದ ಬಾಳ್ವೀ
ಕ್ಷಣಿಕಮನಕ್ಕೇವೆನಯ್ಯ ಗಿರಿಜಾರಮಣಾ ೧೨೮

ಶರಣಾರ್ಥಿ ಪೂರ್ಣ ಚಂದ್ರಾ
ಶರಣಜನೋಪವನ ಚೈತ್ರಾ ಪಾಲಿಪುದೆನ್ನಂ
ಶರಣಾರ್ಥಿ ಕಲ್ಪವೃಕ್ಷವೆ
ಕರುಣಿಸು ಸದ್ಭಕ್ತಿ ಯ [ನೆ]ನಗೆ ಗಿರಿಜಾರಮಣಾ ೧೨೯

ಎಲೆ ಮಗನೆ ಬಾರೆನುತ್ತುಂ
ತಲೆದಡವಿ ಕೃಪಾಬ್ಧಿ ಯೊಳಗೆ ಓಲಾಡಿಸುತಂ
ಸಲೆ ಎನ್ನ ಕಾಯದಿರ್ದಡೆ
ಗೆಲವಹುದೇ ನಿಮ್ಮ ಮಾಯೆ ಗಿರಿಜಾರಮಣಾ ೧೩೦

ಇರುಳುಂ ಪಗಲುಂ ಶರಿರವ
ಭರವಸದಿಂ ಸಂತವಿಡುವೆನಲ್ಲದೆ ನಿಮ್ಮಂ
ಸ್ಮರಿಸುವ ಚಿಂತನೆಯೆನ್ನೊಳು
ದೊರಕೊಳ್ಳದು ಏವೆನಯ್ಯ ಗಿರಿಜಾರಮಣಾ ೧೩೧

ನೀನೆ ನಿಧಿ ನೀನೆ ಮಂತ್ರಂ
ನೀ। [ನರ್ಚ][1]ನೆ ನೀನೆ ಭಕ್ತಿ ನೀನುಪದೇಶವು
ನೀನಱಿವು ನೀನ್ನೆ ಸಿದ್ಧಿಯು
ನೀನೆ ಗಡಾ ಈಶ ನೋಡು ನಡೆಯುಂ ನುಡಿಯುಂ ೧೩೩

ನೀನೆ ಗುರು ನೀನೆ ತಂದೆಯು
ನೀನಾಳ್ದಂ ನೀನೆ ಜನನಿ ನೀನೆ ಜಗಂಗಳ್
ನೀನೆ ಸಖಿ ನೀ[ನೆ] ಸಹಾಯಂ
ನೀನಲ್ಲದೆ ಪೆಱತನಱಿಯೆನಾಶ್ರಿತ ಸುಲಭಾ ೧೩೪

ಚಿಂತಿಸುತಿರೆ ಸಂತಾಪದೆ
ನಿಂತಿರಲುಂ ತಾನೆ ಹೊತ್ತು ಹೋದಪುದೀಗಳ್
ಚಿಂತಾಯುಕ ನೀಂದವೆ ಮನ
ಸಂತೈಸುದು ಏವೇನೇವೆನಘವಿಧ್ವಂಸೀ ೧೩೫

ಆಸರದಿರು ಆಲಸದಿ[ರು]
ಬೇಸರದಿರು ಬೆಂಬಿಡದೆ ಬಿಡದೆ ನೀನೊಬ್ಬನು
ಲೇಸಾಗಿ ಹೊರವೆನೆಂಬೀ
ಆಸೆಯುನೆನಗೆಂತುತೋರ್ಪೆಯಗಜಾರಮಣಾ ೧೩೬

ಎನ್ನಯಂ ಮಹಿಮೆಯು ಸಾರಂ
ಎನ್ನಯ ಸಂಸಾರ ಜನನವೆಂಬರಭಾರಂ
ಮುನ್ನಾದುದು ಮುನ್ನಾದುದ
ಇನ್ನುಂ ನಾನೆಂತು ಸೈರಿಪೆಂ ಬೆಸಸಭವಾ ೧೩೭

ಎಂತೆಂತು ನಿಮ್ಮನರ್ಚಿಪೆ
ಎಂತೆಂತು ಪಲುಂಬಿ ಕೆಡದು [ಂ] ಪಂಬಲಿಸುಂವೆ ನಾಂ
ಎಂತೆಱಗುವೆನಲ್ಲದೆ ನಾ
ನೆಂತುಟು ಗಡ ಮನವನೊಯಿದು ಸುಡುವೆಗಡಭವಾ ೧೩೮

ನಿಲ್ಲದು ಗಡಭವಪದದೊಳು
ಸಲ್ಲದುಂ ಗಡಮನವದಾವದೆಸೆಗಂ ಎನ್ನಂ
ತೊಲ್ಲದು ಗಡ ಭಾವಿಸಲುಂ
ಕಲ್ಲೆರ್ದೆಯಾನೆಂತು ಬದುಕುವೆಂ ಬೆಸಸಭವಾ ೧೩೯

1 ನಾಕ್ಷ

ಅಲಸುವದಾಗುಳಿಸುವದು
ಮ್ಮಳಿಸೂದೊಮ್ಮೊಮ್ಮೆ ಬೇಸಱಾಸಱುವುದು ಸಂ
ಕಲಿಸೂದೀ ಮನ ನಿಮ್ಮೊಳು
[1][ಒಳಗೊ][1]ಳ್ವದನಾಶ್ರಿತೈಕವತ್ಸಲ ದ[ಯೆ]ಯಿಂ ೧೪೦

ಮದಗಜದ ಮಱಿಯನಕ್ಕಟ
ಕುದುರೆಯ ಮೊಲೆಯೂಡಿ ಸಲಹಲಕ್ಕುಮೆ ಮುದದಿಂ
ವಿಧಿತೇಶ ನಿಮ್ಮ ಭಕ್ತರ
ವಿಧಿಯುಕ್ತರಿಗೇಕೆ ಹಂಗು ಮಾಡಿದಿರಭವಾ ೧೪೧

ಹುರುಳಿಲ್ಲದ ಸಂಸಾರವ
ಸ್ಥಿರವೆಂದೆನುತಲ್ಲಿಯಿಪ್ಪ ಮನ್ಮನದಿಂದಂ
ನುರುಳಾಗಿರ್ದಹೆ ನಿನ್ನಂ
ನಿರುತದಿ ನಂಬಿದೆನುಮೇಶ ಕರುಣದಿ ನೋಡಾ ೧೪೨

ಪಕ್ಕಂ ಬೊಯಿದಾ ಚಿಕ್ಕಟು
ಪಕ್ಕಿಯವೊಲು ದೆಸೆಗೆ ಬಾಯ ಬಿಡುತಿರ್ದಪೆ ನೀ
ನಿಕ್ಕಯ್ಯ ಭಕ್ತಿ ಕುಟುಕಂ
ರಕ್ಷಿಸಿ ಸಲಹಯ್ಯ ತಂದೆ ಚಂದ್ರಾಭರಣಾ ೧೪೩

ಉಂಡಿಗೆಪಶು ನಾನಾಗಿಯೆ
ಗುಂಡಿಯ ಸಂಸಾರದಗಳೊಳಾಳುತ್ತೈದೆನೆ
ಕಂಡು ಕಡೆಗಣಿಸಲೇಕೈ
ಕುಂಡಿಲ ಪಿಡಿದೆತ್ತು ನಿನ್ನ ನಿಜಕರಯುಗಳದಿ ೧೪೪

ಅಱಿಯಮೆಯುಂ ಪೊಲ್ಲಮೆಯುಂ
ಮಱವೆಯನೆಂತಲ್ಲಿ ತಪ್ಪುವಿಡಿಯದೆ ಶಿವ ನೀಂ
ಪೊಱಗಿಕ್ಕ ಕಾಯ್ವುದೆನ್ನಂ
ಮಱೆಯೊಕ್ಕಂ ತ್ರಿಭುವನ [ಪತಿ] ಶರ[ಣೆ]ನೆ ನಿನ್ನಂ ೧೪೫

ನೀನೆ ಶರಣೆಂದು ನಂಬಿದೆ
ನೀವಲ್ಲದೆ ಪೆಱತನಱಿಯೆ ನಿಮ್ಮಂ ಮುನ್ನಂ
ನೀನೆ ಗತಿ ನೀನೆ ಮತಿಯೆಂ
ದಾನಿಪ್ಪೆನುಮೇಶ ಕರಣ ಕರುಣಿಸಿ ನೋಡಾ ೧೪೬

---

1 ಕೊ

ನಿನ್ನಿಚ್ಛೆಮಾತ್ರದೊಳಗಿ
ಪ್ಪನುವ[ಂ] ನಿನ್ನಿಚ್ಛೆಯಲ್ಲಿ ಪ್ರೇರಿಸುತ್ತಿರ್ಪ
ಬಿನ್ನಣವನೆನಗೆ ಕರುಣಿಸಿ
ನಿನ್ನನೆ ಮಱೆದೆನ್ನ ಕಾಯ್ವುದಘ ವಿಧ್ವಂಸೀ ೧೪೭

ಎನ್ನೊಳು ಸದ್ಗುಣವುಳ್ಳೊಡೆ
ನಿನ್ನುವನಾಶ್ರೈಸಲೇಕೆ ಸಕಲದ ಗುಣವುಂ
ಎನ್ನೊಳು ನೆಲಸಿಹ ಕಾರಣ
ನಿನ್ನಂ ಮಱವೊಕ್ಕೆನೀಶ ಕರುಣಿಸಿ ನೋಡಾ ೧೪೮

ಎನ್ನಂತೆ ಧೂರ್ತನಾವಂ
ಎನ್ನಂತತಿ ದೇವ ನಿಮ್ಮಂ ಕುಡಿತೆಯು ನೀರಂ (?)
ಬಿನ್ನವಿಪನವಗೆ ದಯೆಯುಂ
ನಿನ್ನಯ ಭಕ್ತಿಯನೆ ಕೊಟ್ಟು ಸುಖಮಾಡೆನ್ನಂ ೧೪೯

ಎಂದು ನಿನಗಾರು ಇಲ್ಲೆಲೆ
ಕಂದನೆ ಬಾರೆಂದು ತೆಗದು ತಕ್ಕೈಸಿ ಮನಂ
ಗುಂದದಿರು ನಿನ್ನ ಸಲಹುವೆ
ಯೆಂದೆನ್ನೊಡನೆಂದು ನುಡಿವೆ ಪರಮಪ್ರಭುವೇ ೧೫೦

ಓರಂತೆ ಮಱುಗಿ ಬಂಧನ
ಕಾರಣವಳಿ ಮೋಹದಿಂದ ನಿನ್ನಯ ತೊತ್ತೆಂ
ದಾರೈದು ಭಕ್ತಜನ ವಿ
ಸ್ತಾರಕ ನೀನೆನ್ನನೀಶ ಕರುಣಿಸಿ ನೋಡಾ ೧೫೧

ಶರಣೆಂಬ ವಚನವೆನ್ನದು
ಶರಣಾಗತ ರಕ್ಷನೆಂಬ ನುಡಿ ನಿನಗೆಂದುಂ
ಬಿರುದಾಗಿ ಮೆಱವುದದಱಿಂ
ಪರಿಹರಿಸಿಯೆ ಕಾಯ್ವುದೆನ್ನನಗಚಾರಮಣಾ ೧೫೨

ಉತ್ತಮ ಗುಣವೆನಗುಳ್ಳೊಡೆ
ಭೃತ್ಯನು ನಿನಗಾಗಲೇಕೆ ಚಂದ್ರಾಭರಣಾ
ಎತ್ತಮು ಮಹೋದ್ದದಾಮನ (?)
ಕರ್ತೃತ್ವಂಮೆಂದು ದೇವ ಸುಖಮಾಡೆನ್ನಾ ೧೫೩

ಇಂದು ಕೃತಕೃತ್ಯನಾದೆನು
ಇಂದು ಕರಂ ಧನ್ಯನಾದೆ ಪಲದಿನ ಕಾಲ
ಕ್ಕಿಂದೆನ್ನ ಜನ್ಮ ಸಫಲ ಪು
ರಂದರಪತಿಯೆನ್ನ ಕೈಗೆ ಬಿಜಯಂಗೆಯ್ಯೆ[ಲ್] ೧೫೪

ಶಂಕರನ ರೂಪು ಹೃದಯದೊ
ಳಂಕುರ ಪಲ್ಲವಿತವಾಗಿ ಪರುಷಾಮೃತದಿಂ
ತೇಂಕಾಡಲೆಂದು ಫಲವನ
ವಂಕುರಿಸುತ ಕಲ್ಪತರುವಿನಂತಿರವೇಡಾ ೧೫೬

ನೆಱ ತನಗೆ ಮಾಡಿ ಕೊಂಬಡೆ
ಕಱಕಂಠನ ಕಯ್ಯ ಮುರುಳೆ ಅಲವರಿಸೂದೇ
ಕಱುಗಡಸಿದ ಎಳೆಗಂತಿಯು
ಮಱುಗಡಸಿದ ಹುಲ್ಲೆಯಂತೆ ಮಱುಗಲ್ವೇಡಾ ೧೫೬

ಮನವುಂ ಸೋಹವ ಮಾಡದೆ
ಮನಸಿಜಮರ್ಧನನ ಪದ ಪಯೋಜದ್ವಯಮಂ
ಕನಸಿನೊಳಂ ನೆನೆವಂತಿರೆ
ಮನವ ನಿಮ್ಮಲ್ಲಿಯಿರಿಸೆ ಪ್ರೇರಿಸಲ್ವೇಡಾ ೧೫೮

ಪೊಸತೆನಿಪ ಭಕ್ತಿ ನಿಚಯದ
ಪಸರಿಸಿ [ವಿ] ಗ-ಣಿಸಿ ಪೊಣ್ಮ [ವ] ಪುಳಕಿಕ್ಕೇಮನ
ವಶವಾಗಿ ಲಜ್ಜೆಯಱಿಯದೆ
ಶಶಿಮೌಲಿಯ ಬೆನ್ನನೇದು ಜಡದಿರವೇಡಾ ೧೫೯

ನಡೆವೆಡೆಯೊಳು ನುಡಿವಡೆಯೊಳು
ಕೊಡುವೆಡೆಯೊಳು ನೋಡುತಿಪ್ಪ ಪಟ್ಟರ್ಪೆಡೆಯೊಳು
ಮೃಡ ಶರಣು ಶರಣು ಶರಣೆಂ
ದೆಡವಱಿಯದ [ಸುಖ] ದುಃಖವದೆಂದಾದಪ್ಪುದೋ ೧೬೦

ನ[1][ಡಗಂಪೊಡಲ]। ಪೊಗಳುವೆನೋ
ಕುಡಿವೆನೊ ಹಾಳಾಹಳದ ವಿಷ[ಮು]ಮಂ ಕ್ಷಣದಿಂ
ಸುಡುವೆನೊ ಮದ್ದೇಹವನೆ
ನ್ನೊಡೆಯನನ್ನಿಮ್ಮೊಲವು ಸಾರ್ದು ಮುಟ್ಟದ ಪದದೊಳ್ ೧೬೧

---

1. ಡುಗಡಲ ನೋಡಿ.

ನಡೆವೆಡೆಯೊಳು ನುಡಿವೆಡೆಯೊಳು
ನುಡಿಯಂದೆ ಶಿವಲಿಂಗ ತಂದೆಯನುಭವದಿಂದಂ
ನಡೆ ನುಡಿ ಮನವೊಂದಾಗಿರ
ಲೆಡವಱಿಯದೆ ನೆನವ ಸುಖವದೆಂದಾದಪುದೋ ೧೬೩

ಅರ್ಥವನೆ ಬಿಟ್ಟು ಮಂನದೊಳ್
ಮೂರ್ತಿಯನಳವಡಿಸಿ ಶಿವಪದಾಬ್ಜದ ರಜಮಂ
ಕೀರ್ತಿಸುವುದೊಂದು ಭಕ್ತಿಯಂ
ಕೂರ್ತೀವುದು ಶಂಭು ಜನ್ಮಜನ್ಮಾಂತರದೊಳ್ ೧೬೪

ಬಳಸಿದರ್ಾನಪಟಮಂ (?)
ತಳದೊಳಗಂ ತೊಳಗಿ ಬೆಳಗಿ ಧವಳಿಸಿ ನೇತ್ರಾ
ವಳಿಯೆನಿಪ ದಿವ್ಯವಸ್ತ್ರವ
ನಲಿದೀಶಂಗೀವ ಸುಖವದೆಂದಾದಪುದೋ ೧೬೫

ಭಾವಂ ಮುಸುಕಿದೊಗಸುದಿನ (?) -
ಹಾವಸೆಗಳನುಳಿದಂ ಮನದ ಸದ್ವಾಸನೆಯಂ
ತೀವಿದ ಗಂಧವನಾ ಮಹಾ
ದೇವಂಗೊಲಿದೀವ ಸುಖವದೆಂದಾದಪುದೋ ೧೬೬

ಅಕ್ಷಯಪದವ [ನ]ಳಿದುಳಿದು
ಪೇಕ್ಷೆಯನತಿಗಳೆದು ಮೋಕ್ಷವ[ನೆ] ಮಾಱಿದ ಪಂ
ಚಾಕ್ಷ[ರಿ] ನಿಜ ನಿಧಿ ಕಱಿಗೊಂ
ಡಕ್ಷತೆಯಂ ತ್ರಿಯಂಕ್ಷಗೀವುದೆಂದಾದಪುದೋ ೧೬೭

ಉತ್ಕಟದೊಳಷ್ಟದಳದಿ ಚ
ಮತ್ಕಾರದಿ ಹರಿವ ಮನವ ನಿಲಿಸುತ್ತಾಹಾ
ಹೃತ್ಕಮಲದೆಸಳ ಹೂವಂ
ಮತ್ಕಾಂತ[ಂ]ಗೀವ ಸುಖವದೆಂದಾದಪುದೋ ೧೬೮

ದುರ್ಗುಣಮಂ ದುರ್ಗಂಧಮಂ
ನೆರ್ಬಿಸಿಯೋ ಸ್ವಾನುಭಾವ ಪರಿಮಳವೆಸವೀ
ಗುಗ್ಗುಳ ಧೂಪ ವಾಸನೆ[ಯ]
ಭರ್ಗ[ಂ]ಗೊಲಿದೀವ ಸುಖವದೆಂದಾದಪುದೋ ೧೬೯

ಒಳಗಿಡಿದಂಥವುನೆಬ್ಬಿಸಿ
ತೊಳಗುವ ಸುಜ್ಞಾನ ಜ್ಯೋತಿಯುಂ ಪರತರಗೈ
ದೊಲವಿನೊ [ಳುಪ್ಪಾ] ರತಿಯುಂ
ನಲಿದೀಶಂಗೀವ ಸುಖವದೆಂದಾದಪುದೋ ೧೭೦

*ಸೇರಿರ್ದ ಕ್ಷುಧೆಯುಂ (?)
ಸಾರಿಸಿ ನಿಜದಱಿವಿನಮೃತ ಸೈರಣೆಯಿಂದಂ
ಪೂರೈಸೀಶನ ಭಕ್ತಿಯೊ
ಳಾರೋಗಣೆಯೊವಸುಖವದೆಂದಾದಪುದೋ ೧೭೧

ಆಲಸ್ಯವನತಿ ಕ್ಲೇಶವ
ನೋಲೈಸುವ ಪರಮ ಪದದ ಸುಖಮುಖದಿಂದಂ
ಲೀಲೆಯೊಳೀಶಗೆ ಕರ್ಪುರ
ವೀಳೆಯವಂ ಕೊಡುವ ಸುಖವದೆಂದಾದಪುದೋ ೧೭೨

ಕಂಗಳರೆಮುಗಿದು ಕರಣ ಕು
ಳಂ ಹಾರೈಸಿ ಮನವುಮುಲ್ಲಾಸದೊಳಿರೆ ಸ
ರ್ವಾಂಗಂ ಓಂಮಿಡಿ ಕರತಳ
ಕಂಗೈಸುವ ಲಿಂಗ ಸಂಗವೆಂದಾದಪುದೋ ೧೭೩

ಅಡಗಿದ ಮದ ಉಡುಗಿದ ತನು
ಕಡುನಿದ್ರೆಯೊಳಿಪ್ಪ ದೇಹದಱಿವುಂ ಮಱವುಂ
ತೊಡರಿ[ಂ] ನಿಜೈಕ್ಯ ಭಾವದೊ
ಳೊಡಗೂಡುವ ಪರಮಸುಖವದೆಂದಾದಪುದೋ ೧೭೪

ನೆತ್ತಿಗೆಳೊಡೆವನ್ನಕ್ಕಂ
ಮಸ್ತಕ ಬಿರಿವನ್ನ ಬಿಡದೆ ಶಿವ ಶಿವಯೆನುತಂ
ಹೃತ್ಕಮಲವಲರ್ದು ಕಂಪಿಸಿ
ಉತ್ತಮ ಶಿವಮೂರ್ತಿ ಶಿವನೊಳೆಂದಾದಪುದೋ ೧೭೫

ಶಿವನೊಲವೆ ಧ್ಯಾನವಾಗಿಯೆ
ಶಿವನನುಭವ ಸುಖದ ಸುಖವೆ ಜಪವಾಗಿಯೆ ತಾಂ
ಶಿವನ ನೆಱಿವಿಡಿದು ಬದುಕುವ
ಶಿವಶರಣರಸಂಗವೆನಗದೆಂದಾದಪುದೋ ೧೭೬

* ಛಂದೋಭಂಗವಾಗಿದೆ.

ಲಿಂಗಮಯಂ ಸಕಲಜಗಂ
ಲಿಂಗಮಯಂ ಸ್ಥಾವರಾದಿ ಜಂಗಮವೆಲ್ಲಂ
ಲಿಂಗಮಯವಾಗಿ ತೋರ್ಪ ಬೆ
ಡಂಗಿಸ ಕಂಡೊಳಲಸುಖವದೆಂದಾದಪುದೋ ೧೮೧

ಕ್ಷಣಗಡಿಕನ ಕಡುಗತ್ತಿಯ
ಎಣಿಕೆಗೆ ಅಯಿದಾಱು ಕೋಟಿ ಶ್ರವಮ ಕಡಿಯಲು
ಕ್ಷಣಪರುಷ ಮುಟೆ ಲೋಹದ
ಗುಣ ಕೆಡುವುದು ಘೋದ್ಯವೇನು [ಶಿವ] ಶಿವಯೆನ್ನಾ ೧೮೨

ಮುನ್ನ ಕಡುದುಃಖಿಯಾದೊಡೆ
ತನ್ನಂತಿರೆ ಪೆಱರ ಬಗೆವ ತ್ರಿಜಗದೆ ಮಹಿ
ಮೋನ್ನತ ಪರಮಸುಖ [ದ] ಸಂ
ಪನ್ನನೆ ನೀನೆತ್ತ ಬಲ್ಲೆ ದುಃಖವನಭವಾ ೧೮೩

ಅಳ್ಳಿರ್ದೆಯಾಗಿ ಮೋಹದ
ಬಳ್ಳಿಯೊಳು ತೊಡರ್ದು ಬಿದ್ದು ನೊಂದಪೆನೀಶಾ
ಕೊಳ್ಳಿಯ ನಡುವಣ ಪುಳುವಿನ
ತಲ್ಲ [ಣ] ವೆನಗಾಯ್ತು ತೆಗದು ರಕ್ಷಿಪುದಭವಾ ೧೮೪

ಎಂದಿರ್ದಿದನೇ ಬೇಡುವೆ
ನಿಂದುಂಥರ ನಿಮ್ಮ [ಂ ಅ] ಱಿಯದಾತ್ಮದ್ರೋಹನೊ
ಳೊಂದುನಿಮಿಷಾರ್ಧನವನೊಳ
ಗೆಂದುಂ ನುಡಿಗಡಣಮಾಗದಿರ್ಕೆಗಡಭವಾ ೧೮೫

ಜನನ ಮರಣಾದಿ ದುಃಖವ
ನನುಭವಿಸಿದಲ್ಲದಱಿಯ್ರೆ ದುಃಖಂಗಳ ನೀಂ
ಜನನ ಮರಣಾದಿ ವಿರಹಿತ
ಅನುಪಮ ಸುಖಿಯೆತ್ತ ಬಲ್ಲೆ ದುಃಖವನಭವಾ ೧೮೬

ಅಱಿತುಂ ಡಿಂಗರಿಗನೊ [ಳಗ]
ನಱಸುವರೇ ದೇವ ಎನ್ನ ಗುಣವವಗುಣಮಂ
ಪೊಱಗಿಕ್ಕಿ ನಿಮ್ಮ ಮಹಿಮೆಯ
ಮೆಱೆವುದು ಸರ್ವೇಶ ಬೇಱೆ ಗತಿ ಮತಿಯುಂಟೇ ೧೮೭

ಇರುಳು ಪಗಲುಂ ಶರೀರವ
ಬರವಸದಿಂ ಸಂತವಿಡುವೆ ನಲ್ಲ[ದೆ] ನಿಮ್ಮಂ
ಸ್ಮರಿಯಿಸುವ ಚಿತ್ತವೆನ್ನೊಳು
ದೊರಕೊಂಡಿರದೇಪೆನೇವೆನಗಜಾರಮಣಾ ೧೯೦

ಭೂದಾನವನ್ನದಾನಂ
ಗೋದಾನ ಸುವರ್ಣದಾನ ಮಹಿ[ಪಾ]ದಾನಂ
ವೇದ ನಾಲ್ಕರ ದಾನಕೆ
ವೇಧಿಸೆ ಶಿವಯೆಂಬುದಕ್ಕೆ ಸರಿಯಾದಪ್ಪುದೇ ೧೯೧

ಸಕ[ಲ ನ]ದಿ ತೀರ್ಥ ಸ್ನಾನಂ
ಸಕಲಕ್ರೀ ಪಂಚಯಜ್ಞ ಪಾರಾಯಣವುಂ
ಸಕಲ ಹವಿ ಹೋಮ ನೇಮಂ
ಸಕಲಕ್ಕಂ ಮಿಗಿಲು [ನೆ]ಜಿಯುದಾಜಕ್ಕರಮುಂ ೧೯೨

ಸೊಡರಿಂಗಂ ಕತ್ತಲೆಗಂ
ಗಡ ಸೊಗಯಿಪ್ಪುದೇ ದಿಟಮೀ ಭಕ್ತನ ಮನದೊಳು
ವ್ಯಡನಡೆಗೊಂಡೋರಂತಿ[ರೆ]
ಪರಮಾತೇಕನ್ಯಭಾವವಿರಲಜಿದಪ್ಪುದೇ ೧೯೩

ತಲೆ ಬಿರಿಯಹೊಯ್ದು ಗಳಹುವ
ಕಲಹಕ್ಕಾ ಮೊಳವ ನಿಮಿರ್ದುದನ್ನಯ ನಾಲಗೆ
ಹೊಲೆ ಹುಸಿವುದು ನಿಮ್ಮಯ ಸ್ತುತಿ
ಗಲಸೂದಿನ್ನೆಂತು ಬಾಳ್ವೆನಗಜಾರಮಣಾ ೧೯೪

ಸ್ಮರನಶರದಿಂದಲೆಸೆವಡೆ
ದುರೆ[ಬ]ಂದಾ ವಿರಹಿಯೆಡೆಯ ತಾಗಿದ ತೆಜದಿಂ
ಪರಮತದ ಭೀತಿ ವೇಧಿಸಿ
ನಿರುಪಮ ರಣರಣಕವೆನಗದೆಂದಾದಪ್ಪುದೋ ೧೯೯

ಕುಸುಮಶರಾರಿಯೆ ನಿನ್ನೊಂ
ದೆಸೆವ ಗುಣಂಗಳೊಳು ಎನ್ನ ತನುವಿನಲಿನ್ನೊಂ
ದೆಸೆಯುಂ ಕಾಣದೆ ಸುಳಿ ಸುಳಿ
ವಸಮಾಕ್ಷನನಡರಿ ನೋಡುತೆಂದಿರ್ದಪೆನೋ ೨೦೩

ಲಿಂಗವನೆ ನೆನೆವ ಧ್ಯಾನಂ
ಹಿಂಗದೆ ಮನ ವಚನ [ಕಾಯ ನೋಟದೊ][1]ಳೆಲ್ಲಂ
ಲಿಂಗಮಯುವಾಗಿ ತೋರ್ಪ ಬೆ
ಡಂಗಿನ ಕಂದೊಳಲಸುಖಿಪರ್ದಾದಪುದೋ ೨೦೪

ಮಂತ್ರಕ್ಕೆ ಮುಖ್ಯವೆನಿಸಿತು
ತಂತ್ರಕ್ಕಂ ತಾನೆಯ್ಯದೆ ಭೂಷಣವೆನಿಸಿತು
ಯಂತ್ರಂಗಳನುದ್ಧರಿಪುದು
ಸಂತತ ಶಿವಗಣದ ನೊಸಲೊಳೆಸೆವ ತ್ರಿಪುಂಡ್ರಂ ೨೧೧

ಆವೆಡೆಯೊಳಾವ ತೇಜದಿಂ
ಆವುದನಾವರಿಸುತಿರ್ಪುದಂ ಪೇಳಲೊಡಂ
ತಾವದನೆ ಬಿಡದವೋಲು ಮ
ತ್ತಾವಗ ಶಿವಯೆಸ್ನೊಳೆಂದು ನೆಲೆಗೊಂಡಪನೋ ೨೧೩

ಕೇಶಿರಾಜ ದಣಾಯಕರ ಕಂದದ ಅಕಾರಾದಿ

ಅಕ್ಷಯಪದ ೧೬೭
ಅಜಹರಿಗಳಜಿಸಿ ೧೨೨
ಅಡಗಿದ ಮದ ೧೭೬
ಅಡಿಗಡಿಗೆ ರೋಮಮ ೨೧
ಅರ್ಥವನೆ ಬಿಟ್ಟು ೧೬೩
ಅಱಿತುಂ ಡಿಂಗರಿಗ ೧೮೯
ಅಱಿಯುಮೆಯಃಂ ೧೪೫
ಅಲಸುವ ೧೪೦
ಅಳಿ ಸೋಂಕದ ೫೧
ಅಳ್ಳಿರ್ದೆಯಾಗಿ ೧೮೫
ಆಡದು ಗಡ ೮೫
ಆರುವನು ಕಾಣೆ ೧೨೧
ಆರೊಡನೆ ಅಳಲಿ ೧೨೫
ಆಲಸ್ಯವ ೧೭೨

1 ನೋಟಕ್ಕೆಣೆಯೆ

ಆವೆಡೆಯೊಳಾವ ೨೧೩
ಆಸರದಿರು ೧೩೬
ಇಟ್ಟಣಿಸಿ ೩೦
ಇರುಳುಂ ಪಗಲು ೧೩೨
ಇರುಳಂ ಪಗಲು ೧೯೦
ಇಂದು ಕೃತಕೃತ್ಯನಾ ೧೫೪
ಉತ್ಕಟದೊಳಪ್ಪ ೧೬೮
ಉತ್ತಮಗುಣ ೧೫೩
ಉಬ್ಬಿದು ಗಡ ೮೭
ಉರ್ವಿಯೊಳು ೧೨೬
ಉಂಡಿಗೆಪಶು ೧೪೪
ಎಡವಿಡದೆ ೩೧
ಎಡಹಿದರೇ ೧೦೯
ಎನ್ನಂತೆ ಧೂರ್ತ ೧೪೯
ಎನ್ನಯ ಮಹಿಮೆ ೧೩೭
ಎನ್ನೊಳು ಸದ್ಗುಣ ೧೪೮
ಎಲೆ ನಾಲಗೆ ೯೩
ಎಲೆ ಮಗನೆ ೧೩೦
ಎಂತೆಂತು ನಿಮ್ಮ ೧೩೮
ಎಂದಿರ್ದಿದನೇ ೧೮೬
ಎಂದು ನಿನಗಾರು ೧೫೦
ಒಳಗಿಡಿದ ೧೭೦
ಓರಂತೆ ಮಱುಗಿ ೧೫೧
ಕರಕಮಲ ೪೯
ಕಂಗಳರೆಮುಗಿದು ೧೭೫
ಕಂಗೊಳಿಸಿ ೨೮
ಕ್ಷಣಕೊಮ್ಮೆ ೧೨೮
ಕ್ಷಣಗಡಿಕನ ೧೮೩
ಕುಡಿವರಿವ ೧೨೩
ಕುಸುಮ-ಶರಾರಿಯೆ ೨೦೩
ಗಜಬಜೆಯಂ ೧೧೫
ಚಿಂತಿಸುತಿರೆ ೧೩೫

ಜನನ ಮರಣಾದಿ ೧೮೭
ತಲೆಬಿರಿಯು ಹೊಯ್ದು ೧೯೫
ಥಳಥಳನೆ ೨೭
ದುರ್ಗುಣವಂ ೧೬೯
ದುರಿತಾಬ್ಧಿ ೧೧೮
ದೆಸೆದೆಸೆಗೆ ೨೪
ನಡುಗಡಲ ೧೬೧
ನಡೆವೆಡೆಯೊಳು...ಕೊಡುವೆಡೆ ೧೬೦
ನಡೆವೆಡೆಯೊಳು...ನುಡಿಯದೆ ೧೬೨
ನಾಲಗೆ ಕೇಳ್ವರ ೯೪
ನಿಟಿಲಾಂಬಕ ೧೧೯
ನಿನ್ನಿಚ್ಛೆಮಾತ್ರ ೧೪೭
ನಿಮಗೆಱಗ ೬
ನಿಮ್ಮನಿಜ ೨೫
ನಿಮ್ಮ ಮಹಿಮೆಯು ೧೨೪
ನಿಲ್ಲದು ಗಡ ೧೩೯
ನೀನೆ ಗುರು ೧೩೪
ನೀನೆ ನಿಧಿ ೧೩೩
ನೀನೆ ಶರಣೆಂದು ೧೪೬
ನೀರಡಿಸಿ ೯೨
ನೆತ್ತಿಗಳೊಡೆವನ್ನ ೧೭೭
ನೆಱೆ ತನಗೆ ೧೫೭
ಪಕ್ಕಂಬೊಯಿಂದಾ ೧೪೩
ಪ್ರೀತಿವೆತ್ತ ೧೧೩
ಪೊಸತೆನಿಪ ೧೫೯
ಬಳಸಿದರ್ ೧೬೫
ಬಾಲ ಯೌವನ ೧೧೬
ಬಿಡದಡರಿ ೨೯
ಬೀಗದು ಗಡ ೮೬
ಭವವಾಗ ೫
ಭ್ರಷ್ಟ ನೀಂ ೯೮
ಭಾವಂ ಮಂಸುಕೆ ೧೬೬

ಭೂದಾನವನ್ನದಾನಂ ೧೯೧
ಮತಿಗೆಟ್ಟು ೧೨೭
ಮದಗಜದ ೧೪೧
ಮದುರ್ಗಂಡು ೧೦೮
ಮನ್ಮಥನವೈರಿ ೧೨೦
ಮನನಿಮ್ಮ ೧೧೭
ಮನವುಂ ಸೋಹವ ೧೫೮
ಮನಸಿಜಹರ ೧೦೭
ಮಂತ್ರಕ್ಕೆ ಮುಖ್ಯ ೨೧೧
ಮಂತ್ರವನೆ ೯೯
ಮುಂಗ್ಗುತೆ ೨೨
ಮುನ್ನ ಕಡುದುಃಖಿ ೧೮೪
ಮೈವೆಚ್ಚುಗೆ ೮
ಲಿಂಗದೊಳು ನೋಟ ೧೦೦
ಲಿಂಗಮಯ ೧೮೧
ಲಿಂಗವ[ನೆ] ನೆನೆವ ೨೦೪
ವೇದಕ್ಕತೀತ ೧೧೨
ಶರಣಾರ್ಥಿ ೧೨೫
ಶರಣೆಂಬ ವಚನ ೧೫೨
ಶಂಕರನ ರೂಪು ೧೫೬
ಶಿವನಿಮ್ಮ ನೆನಹು ೧೧೦
ಶಿವನೋಟವೆ ಧ್ಯಾನಂ ೧೭೯
ಶ್ರುತಿನಿಕರ ೧೧೧
ಶ್ರುತಿಯುಚಿಯದೆ ೧೭
ಷಡುರುಚಿ ೨೩
ಸಕಲ ನದಿ ತೀರ್ಥ ೧೯೨
ಸವಿನಯದ ೨೬
ಸ್ಮರಸ ಶರ ೧೯೯
ಸೇರಿರ್ದಕ್ಷುಧೆ ೧೭೧
ಸೊಡರಿಂಗಂ ೧೯೩
ಹರವರಿಯು ೧೧೪
ಹಲವು ಬಹು ೫೦
ಹುರುಳಿಲ್ಲದ ೧೪೨

ಮಂಥನ

ಚಂದ್ರಮನ ಗಣಿತ ವಿಳಾಸ : ಒಂದು ವಿವರಣೆ

ಕವಿಚರಿತೆಕಾರರಾದ ಶ್ರೀ ಆರ್. ನರಸಿಂಹಾರ್ಯರು, ಚಂದ್ರಮನ ಕಾಲವನ್ನು ಸರಿಯಾಗಿಯೇ ನಿರ್ಧರಿಸಿದ್ದರೂ (1650 AD), ಆತನ ಕೃತಿ 'ಗಣಿತಸಾರ'ವೆಂದು ಬರೆದುಕೊಂಡಿದ್ದಾರೆ.[1] ಆದರೆ ಚಂದ್ರಮನ ಗಣಿತ ಕೃತಿ 'ಗಣಿತಸಾರ'ವಾಗಿರದೇ "ಗಣಿತ ವಿಳಾಸ" ವೆಂದು ಈಗ ಲಭ್ಯವಿರುವ ಅನೇಕ ಹಸ್ತಪ್ರತಿಗಳಿಂದ ತಿಳಿದು ಬರುತ್ತದೆ. ಅನಂತರ ಗಣಿತ ವಿಳಾಸ ಹಸ್ತಪ್ರತಿಯ ಪರಿಶೀಲನೆಗೈದವರಲ್ಲಿ ಮೊದಲಿಗರೆಂದು ಹೇಳಬಹುದಾದ ಶ್ರೀ ಎಸ್. ಶಿವಣ್ಣನವರೂ ಸಹ ಈ ಕೃತಿಯನ್ನು ಗಣಿತಸಾರವೆಂದೇ ಕರೆದಿದ್ದಾರೆ.[2] ಆದರೆ ಚಂದ್ರಮನ ಈ ಗಣಿತ ಕೃತಿಯ ಹೆಸರು ಗಣಿತಸಾರವಾಗಿರದೆ 'ಗಣಿತವಿಳಾಸ'ವೆಂದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿದ ಹಸ್ತಪ್ರತಿಯ ಪರಿಶೀಲನೆಯಿಂದಲೇ ತಿಳಿಯಬಹುದಾಗಿದೆ.

ಆರ್. ನರಸಿಂಹಾಚಾರ್ಯರು ಈ ಕೃತಿಯನ್ನು ಗಣಿತಸಾರವೆಂದು ಕರೆಯಲು ಆಂತರಿಕ ವಿಷಯಗಳೇ ಕಾರಣವಾಗಿವೆ. ಮಹಾವೀರಾಚಾರ್ಯರ ಗಣಿತಸಾರ ಸಂಗ್ರಹದಲ್ಲಿಯ ಪ್ರಾರಂಭದ ಮಂಗಲಾಚರಣ ಪದ್ಯದೊಡನೆ ಕೃತಿಪ್ರಾರಂಭ. ವಾಗುವದು, ಬಹುಶಃ ಈ ತಪ್ಪು ಕಲ್ಪನೆಗೆ ಅವಕಾಶ ಮಾಡಿಕೊಟ್ಟಿರಬೇಕು ಅಲಂಘ್ಯಂ ತ್ರಿಜಗತ್ಸಾರಂ ಯಸ್ಯಾನಂತ ಚತುಷ್ಟಯಂ ಜಿನೇಂದ್ರಾಯ ಮಹಾವೀರಾಯ ತಾಯಿನೆ ॥ ೧ ॥[3]...ಎನ್ನುವ ಮಂಗಲಾಚರಣದ ನಾಲ್ಕು ಶ್ಲೋಕಗಳನ್ನು ಯಥಾವತ್ತಾಗಿ ಇಲ್ಲಿ ಎತ್ತಿಕೊಳ್ಳಲಾಗಿದೆ. ಈ ಹಸ್ತಪ್ರತಿಯಲ್ಲಿ ಗಣಿತಸಾರ ವೆಂದು ಎಲ್ಲಿಯೂ ನಮೂದಿಸಲ್ಪಟ್ಟಿಲ್ಲ. ಅಲ್ಲದೇ ಮಂಗಲಾಚರಣದ ಮೇಲಿನ ಶ್ಲೋಕಗಳ ಪೂರ್ವದಲ್ಲಿ "ಗಣಿತ ವಿಳಾಸ"ವೆಂದು ಕೃತಿಯ ಹೆಸರನ್ನು ನಮೂದಿಸಲಾಗಿದೆ.

ಆರ್. ನರಸಿಂಹಾಚಾರ್ಯರು ಯಾವ ಹಸ್ತಪ್ರತಿಯನ್ನು ಪರಿಶೀಲಿಸಿದ್ದಾರೆನ್ನುವದು ತಿಳಿಯುವದಿಲ್ಲ. ಅವರು ಪರಿಶೀಲಿಸಿದ ಹಸ್ತಪ್ರತಿಯಲ್ಲಿ ಗಣಿತಸಾರವೆಂಬ ಕೃತಿಯ ಹೆಸರನ್ನು ಬರೆಯಲ್ಪಟ್ಟಿದ್ದರೂ ಅದು ಬಹುಶಃ ಲಿಪಿಕಾರರ ತಪ್ಪಿನಿಂದಾಗಿರಬೇಕೆನಿಸುತ್ತದೆ. 'ಪ್ರಣಿತಃ ಪ್ರಣಿಸಸ್ಯೌಘೊ ನಿರೀತಿರ್ನಿರವಗ್ರಹಃ । ಶ್ರೀ ಮತಾಮೋಘವರ್ಷೇಣ ಯೇನ ಸ್ವೇಷ್ಟಹಿತೈಷಿಣಾ'ಯೆನ್ನುವ ಅಮೋಘವರ್ಷನ ಸ್ತುತಿ ರೂಪದ ಈ ಪದ್ಯದ ಪರಿಶೀಲನೆಯಿಂದ, ಲಿಪಿಕಾರರಾಗಲಿ ಅಥವಾ ಆರ್ ನರಸಿಂಹಾಚಾರ್ಯರಾಗಲಿ, ಈ ಕೃತಿಯನ್ನು ಗಣಿತಸಾರವೆಂದು ಪರಿಭಾವಿಸಿರಬಹುದಾಗಿದೆ.

ಆದರೆ ನಾನು ಪರಿಶೀಲಿಸಿದ ಚಂದ್ರಮನ ಯಾವುದೇ ಕೃತಿಯಲ್ಲಿಯೂ ಗಣಿತಸಾರವೆಂದು ಕರೆದುಕೊಂಡಿರುವ ಹಸ್ತಪ್ರತಿಯನ್ನು ನೋಡಿದಂತಿಲ್ಲ. ಅಲ್ಲದೇ ಚಂದ್ರಮನ ಕಾವ್ಯನಾಮ ಗಣಿತ ವಿಳಾಸವೆಂದಿದ್ದು, ಕೆಲವರು[4] ಈ ಕೃತಿಯನ್ನು ರಾಜಾದಿತ್ಯನ ತಲೆಗೆ ಕಟ್ಟಿದ್ದಾರೆ. ಮೂಡಬಿದಿರೆಯ ಜೈನಮಠದಲ್ಲಿರುವ[5] ಅಪೂರ್ಣ ಕೃತಿ ಗಣಿತ ಸಂಗ್ರಹ ರಾಜಾದಿತ್ಯ ಗಣಿತವೆಂದು ಬರೆಯಲಾಗಿದೆ. ಒಂಬತ್ತು ಪತ್ರಗಳ ಈ ಕೃತಿಯಲ್ಲಿ ರಾಜಾದಿತ್ಯನ ವ್ಯವಹಾರ ಗಣಿತದಿಂದಾಯ್ದ ಎರಡು ಪದ್ಯಗಳನ್ನು ಬಿಟ್ಟರೆ ಉಳಿದ ಭಾಗ ಗಣಿತ ವಿಳಾಸಕ್ಕೆ ಸೇರಿದ್ದಾಗಿದೆ.

ಮೂಡಬಿದಿರೆಯ ಬೈಕಣ ತಿಕಾರಿ ಜೈನ ಬಸದಿಯಲ್ಲಿ[6] ಲಭ್ಯವಿರುವ ಇನ್ನೊಂದು ಅಪೂರ್ಣ ಕೃತಿ ಗಣಿತ – ವಿಳಾಸ, ಇದೂ ಸಹ ರಾಜಾದಿತ್ಯನ ಕೃತಿಯೆಂದು ಗ್ರಂಥದ ಪ್ರಥಮ ಪತ್ರದ ಮೇಲೆಯೇ ಬರೆಯಲಾಗಿದೆ. ಕೇವಲ ಹದಿನಾರು ಪತ್ರಗಳ ಈ ಅಪೂರ್ಣ ಕೃತಿ ಚಂದ್ರಮನ ಗಣಿತವಿಳಾಸವೆಂದು ಗ್ರಂಥ ಪರಿಶೀಲನೆಯಿಂದ ತಿಳಿಯಬಹುದಾಗಿದೆ. ಅಲ್ಲದೇ ಕಾರ್ಕಳ ಜೈನಮಠದಲ್ಲಿರುವ ಮೂರು ಗಣಿತ ಕೃತಿಗಳ ಹೆಸರುಗಳೂ ಗಣಿತವಿಳಾಸವೆಂದಿದ್ದು, ಈ ಮೂರು ಕೃತಿಗಳೂ ರಾಜಾದಿತ್ಯಕೃತವೆಂದು ಪರಿಭಾವಿಸಲಿಕ್ಕೆ ಮುಖ್ಯ ಕಾರಣ, ಕಾವ್ಯನಾಮ ಗಣಿತವಿಳಾಸ. ಗಣಿತ ವಿಳಾಸವೆನ್ನುವ ಕಾವ್ಯ ನಾಮ, ರಾಜಾದಿತ್ಯ, ಚಂದ್ರಮ ಮತ್ತು ಆತನ ಸಮಕಾಲೀನ ಗಣಿತಜ್ಞ ಭಾಸ್ಕರ, ಈ ಮೂರು ಜನರನ್ನು ನಿರ್ದೇಶಿಸುತ್ತಿದ್ದರೂ, ಗಣಿತ ವಿಳಾಸ ಕೃತಿ ಮಾತ್ರ ಚಂದ್ರಮನದಾಗಿದೆ. ಇತ್ತೀಚಿನ ಸಂಶೋಧನೆಯ ಪ್ರಕಾರ[7] ಚಂದ್ರಮ ಈಗಿನ ಮೂಡಬಿದಿರೆಯ ಸಮೀಪದ ಅಳಿಯೂರಿನವನೆಂದು ತಿಳಿದು ಬಂದಿದೆ.

ವಿ. ಪಿ. ಕೋರಗಲ್

ಅಡಿ ಟಿಪ್ಪಣಿಗಳು

1. ಕರ್ನಾಟಕ ಕವಿಚರಿತೆ. ಸಂ. 2 ಪು. 338
2. ಚಂದ್ರಮನ ಕಾಲ ವಿಚಾರ ಮತ್ತು ಗಣಿತಸಾರ ಪರಿಚಯ : ಎಸ್. ಶಿವಣ್ಣ ಸಾಧನೆ ಸಂಪುಟ–9 ಸಂಚಿಕೆ–2 ಪು. 146
3. "ಗಣಿತ ವಿಳಾಸ" ಹಸ್ತಪ್ರತಿ, ಬೆಂಗಳೂರು ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರ, ಪತ್ರ ಸಂಖ್ಯೆ 41-1
4. ಹಸ್ತಪ್ರತಿ ಸೂಚಿ : ಭುಜಬಲಿಶಾಸ್ತ್ರಿ
5. ಈಗ ಹಸ್ತಪ್ರತಿ ಮೂಡಬಿದಿರೆಯ 'ರಮಾರಮಣಿ' ಸಂಶೋಧನ ಕೇಂದ್ರಕ್ಕೆ ಸೇರಿದೆ.
6. ಈಗ ಈ ಹಸ್ತಪ್ರತಿ ಬಿ. ಸರಸ್ವತಿ, ಜೈನ ಬಸದಿರೋಡ ಮೂಡಬಿದಿರೆ. ಇವರ ಬಳಿಯಲ್ಲಿದೆ.
7. ಚಂದ್ರಮ : ಶ್ರೀ ಉಮಾನಾಥ ಶೆಣೈ : ವಿವೇಕಾಭ್ಯುದಯ : 44–2ಪು. 55

ಈ ಸಂಚಿಕೆಯ ಲೇಖಕರು

ವೇಣುಗೋಪಾಲ ಸೊರಬ
86 (27), ಆಜಾದ್‌ನಗರ
ಕನಕಪುರ
ಬೆಂಗಳೂರು–562 117

ಎಚ್. ಎಸ್. ಅನಂತನಾರಾಯಣ
ಪ್ರೊಫೆಸರ್, ಡಿಪಾರ್ಟ್‌ಮೆಂಟ್ ಆಫ್ ಲಿಂಗ್ವಿಸ್ಟಿಕ್ಸ್
ಉಸ್ಮಾನಿಯಾ ಯೂನಿವರ್ಸಿಟಿ
ಹೈದರಾಬಾದ್–560007

ಎಂ. ಚಿದಾನಂದ ಮೂರ್ತಿ
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂ.ವಿ.ವಿ., ಬೆಂಗಳೂರು–560 056

ಚಂದ್ರಶೇಖರ ವಿ. ನಂಗಲಿ
ಅಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಗುಬ್ಬಿ, ತುಮಕೂರು ಜಿಲ್ಲೆ

ಎಸ್. ಕೃಷ್ಣಭಟ್ಟ
577, 2ನೇ ಕ್ರಾಸು
ಹನುಮಂತನಗರ
ಬೆಂಗಳೂರು-560 019

ದಿ. ಸುಧಾ ಎಂ. ಮನಸೂರ
C/o ಶ್ರೀನಿವಾಸ ಹಾವನೂರ
ಮುಖ್ಯಸ್ಥರು, ಕನ್ನಡ ವಿಭಾಗ
ವಿದ್ಯಾನಗರಂ, ಬಾಂಬೆ ವಿಶ್ವವಿದ್ಯಾಲಯ
ಬಾಂಬೆ–4000 98

ಬಿ. ರಾಜಶೇಖರಪ್ಪ
ಕನ್ನಡ ವಿಭಾಗ
ಸರ್ಕಾರಿ ವಿಜ್ಞಾನ ಕಾಲೇಜು
ಚಿತ್ರದುರ್ಗ –577 501

ಎಂ. ಮಾಧವ ಪೈ
ಶ್ರೀ ಮಲ್ಲಿಕಾರ್ಜುನ ನಿಲಯ
6ನೇ ಅಡ್ಡ ರಸ್ತೆ, ರವೀಂದ್ರನಗರ
ಶಿವಮೊಗ್ಗ–571 201

ದೇವೇಂದ್ರ ಕುಮಾರ ಹಕಾರಿ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ–58000 3

ಉಪ್ಪಂಗಳ ರಾಮಭಟ್ಟ
ಮುಖ್ಯಸ್ಥರು, ಕನ್ನಡ ವಿಭಾಗ
ಎಂ.ಜಿ.ಎಂ. ಕಾಲೇಜು
ಉಡುಪಿ

ಎಸ್. ಶಿವಣ್ಣ
ಸಂಪಾದಕರು, ಹಸ್ತಪ್ರತಿ ವಿಭಾಗ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560 056

ವಿ. ಸಿ. ಕೋರಗಲ್
ಗಣಿತ ವಿಭಾಗ
ಜಿ. ಐ. ಬಾಗೇವಾಡಿ ಕಾಲೇಜು
ನಿಪ್ಪಾಣಿ

ಎಚ್. ಎಚ್. ಗಂಗಾಧರಾಚಾರ್
ಇಂಟರ್ನಲ್ ಟ್ರಾಫಿಕ್ ಇಲಾಖೆ
ವಿ.ಐ.ಪಿ.ಎಲ್
ಭದ್ರಾವತಿ-577-301

FORM IV **SADHANE**

(See Rule 8) Quarterly

1.	Place of publication	Jnana Bharathi, Bangalore University, Bangalore-560056
2.	Periodicity of its publication	Quarterly
3.	Printer's name Whether citizen of India? If foreigner, state the country of origin	Dr. K. Marulasiddappa Indian
	Address	Director, Prasaranga, Bangalore University, Bangalore-560056
4.	Publisher's name Whether citizen of India? If foreigner, state the country of origin	Dr. K. Marulasiddappa. Indian
	Address	Director, Prasaranga, Bangalore University, Bangalore-560056
5.	Editor's name Whether citizen of India? If foreigner, state the country of origin	Dr. G. S. Shivarudrappa Indian
	Address	Director, Kannada Adyana Kendra Bangalore University, Bangalore-560056
6.	Names and addresses of individuals who own the newspapers and partners or shareholders holding more than one per cent of the total capital.	Bangalore University, Bangalore-560056

I, Dr. K. Marulasiddappa, hereby declare that the particulars given above are true to the best of my knowledge and belief.

(Sd.)— K. Marulasiddappa
Signature of Publisher

ನಮ್ಮ ನಿಯತಕಾಲಿಕಗಳು

ಸೃಜನಾತ್ಮಕ ಮತ್ತು ಸಂಶೋಧನಾತ್ಮಕ ಹಾಗೂ ಜನಪ್ರಿಯ ಬರಹಗಳಿಂದ ಕೂಡಿದ ಸಾಹಿತ್ಯಕ, ಮಾನವಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳಿಗೆ ಮೀಸಲಾದ

ಸಾಧನೆ
ಕನ್ನಡ ತ್ರೈಮಾಸಿಕ
ವಾರ್ಷಿಕ ಚಂದಾ 8–00 ರೂ.
(ವಿದ್ಯಾರ್ಥಿಗಳಿಗೆ) 5–00 ರೂ.
ಆಜೀವ ಚಂದಾ ಹಣ 100–00 ರೂ.
ಗಳನ್ನು ಎರಡು ಕಂತುಗಳಲ್ಲಿ ಒಂದು ವರ್ಷದ ಅವಧಿಯಲ್ಲಿ ಪಾವತಿ ಮಾಡಬಹುದು.

ವಿಜ್ಞಾನ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ವಿದ್ಯಾ ಭಾರತಿ
ಇಂಗ್ಲಿಷ್ ಅರ್ಧವಾರ್ಷಿಕ
ವಾರ್ಷಿಕ ಚಂದಾ 10–00 ರೂ.

ಜನಪ್ರಿಯ ವಿಜ್ಞಾನ
ಕನ್ನಡದ ಏಕೈಕ ವಿಜ್ಞಾನ ಮಾಸಿಕ
ವಾರ್ಷಿಕ ಚಂದಾ 12–00 ರೂ.
(ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ 6–00 ರೂ.

ವಿವರಗಳಿಗೆ ವ್ಯವಹರಿಸಿ :

ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560 056